Regd. No. M. 361 ನವಯುಗ 6-1-1949

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ

ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.



ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೧೯

NAVAYUGA WEEKLY, UDIPI, S. K.

FOUNDER: Hon'ble Mr. A. B. SHETTY, Health Minister, Govt. of Madras.

Vol. 29 No. 19

1948ರ ಆಗುಹೋಗುಗಳು

1948ರ ಪ್ರಭವ ತಿಂಗಳು ಮುಗಿಯುತ್ತಿದೆನ್ನುವಾಗಲೇ-30 ಜನವರಿ 1948 ರಲ್ಲಿ-ಸ್ವತಂತ್ರ ಭಾರತವು ತನ್ನ 'ಬಾಪು'ವನ್ನು ಕಳೆದುಕೊಂಡಿದ್ದಿತು; ಜನವರಿ ಸ್ವರಂಧದಿಂದಲೂ ಜಾತೀಯತಾ ಸೌಹಾರ್ದತೆಯ ಉಪದೇಶ, ಉಪವಾಸಗಳ ಫಲ ಮಗ್ಗರಿದ್ದು ರಾಷ್ಟ್ರದ ಲಕ್ಷ್ಯವನ್ನು ತನ್ನ ಕಡೆಗೆಳೆದಿದ್ದ ಗಾಂಧಿಜೀ ಜನವರಿ ಅಂತ್ಯದಲ್ಲಿ ಆ ಕಾರ್ಯಕ್ಕಾಗಿ ಆತ್ಮಾರ್ಪಣೆ ಮಾಡಿ ಆ ಮೇಲಿನ ಇಡೀ ವರುಷವನ್ನೇ ಸಂಪೂರ್ಣವಾಗಿ ತನ್ನದನ್ನಾಗಿ ಮಾಡಿಕೊಂಡರು.

1948ರಲ್ಲೇ ಪಾಕಿಸ್ತಾನವೂ ತನ್ನ ಜನಕನನ್ನು ಕಳಕೊಂಡಿತು. ಅದರ ನಿರ್ಮಾಪಕ,ಅದರ ಗಾಯದೇ ಅಯೂವರ್, ಮಿ. ,ಮಹಮ್ಮದಾಲಿ ಜಿನ್ನರು ಲೋಕಬಿಟ್ಟರು. ತತ್ಪರಿಣಾಮವಾಗಿ ಭಾರತಕ್ಕೊದಗಿದ ಅನಾಥತ್ವವೇ ಪಾಕಿಸ್ತಾನಕ್ಕೂ ಒದಗಿತು.

1947 ಭಾರತಕ್ಕೆ ಸ್ವಾತಂತ್ರ್ಯವನ್ನೂ ಸ್ವತಂತ್ರ ಪಾಕಿಸ್ತಾನ ನಿರ್ಮಾಣವನ್ನೂ ಮಾಡಿದ್ದರೆ ಅದರ ಜಿನ್ನರ್ಲೇ ಬಂದ1948 ಇವರೆಡರ ನಿರ್ಮಾಣಕರ್ತರನ್ನೂ ಒಲಿಗೊಂಡಿತು.

ನಿಮ್ಮ ಆಯ್ಕೆ
ಪ್ರಭಾತ
ಚಾ ಮತ್ತು ಕಾಫಿ
ಅರಿನಿದ
ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd
COONOOR R. S (Nilgiris)

ಕಾಶ್ಮೀರದ ಪೋರಂಟವು 1948 ಇಡೀ ವರುಷವೂ ಭಾರತ ಸರಕಾರದ ಲಕ್ಷ್ಯವನ್ನೆಳೆದಿದ್ದಿತು. ಅಲ್ಲಿಯ ಹೋರಾಟದಲ್ಲಿ ವಿಶೇಷ ರೀತಿಯ ಧೈರ್ಯ ಸಾಹಸಗಳನ್ನು ಪ್ರದರ್ಶಿಸುವ ಮತ್ತು ತಾತ್ಕಾಲಿಕ ಸೋಲು ಗೆಲುವಿನ ಉಯ್ಯಾಲೆಯಾಡುವ ಹಾಗೂ ಬ್ರಿಗೇಡಿಯರ್ ಉಸ್ಮಾನ್‌ರಂಶಹ ಯೋಧ ನುಷಂಡರನ್ನು ಮತ್ತಿತರ ಧೀರ ಯೋಧರನ್ನು ಬಲಿ ಕೊಡುವ ಸನ್ನಿವೇಶಗಳು ಭಾರತಕ್ಕೊದಗಿದ್ದುವು. ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು ನೇಮಿಸಿದ್ದ 'ಕಾಶ್ಮೀರ ಸಮಿತಿ' ಯು ಇಲ್ಲಿ ಸಂಚರಿಸಿ, ಇತ್ಯರ್ಥೆಯವಲೊಡನೆ ಮಧ್ಯಸ್ಥಿಕೆ ನಡೆಸಿ ಹೋದುದು ಕಳದ ವರುಷದಲ್ಲಿ.

ಕಳದ ವರುಷದ ಸೆಪ್ಟೆಂಬರಿನ ವರೆಗಿನ ಅವಧಿಯ ರಾಜಕೀಯ ಪಂಡಿತುಗಳ ಪೈಕಿ ಹೈದರಾಬಾದ್ ಸಂಧಾನ ಮಾತುಕತೆಗಳೇ ಮುಖ್ಯವಿದ್ದುವು ರಜ್ವೀ ಮತ್ತು ರಜಕಾರರ ಅವಸಾನ ಕಾಲದ ಭೈರವಾವತಾರ ಪ್ರದರ್ಶನದ ಅವಧಿ ಇದಾಗಿತ್ತು. ಸೆಪ್ಟೆಂಬರ್ ಮಧ್ಯದ ಒಂದು ವಾರವೆಂಬುದು ಹಿಂದೀ ಸೈನಿಕರ ಪ್ರಚಂಡತಾ ಸಪ್ತಾಹ ಆ ಮೇಲಿನ ಅವಧಿಯು ಹೈದರಾಬಾದ್ ಸೈನಿಕಾಡಳತೆಯ ಅಂಕ. ಅಂತೂ ಇಡೀ 1948ರ ಆಕರ್ಷಣವಾಗಿದ್ದುವೆಂದರೆ ಹೈದರಾಬಾದ್ ದೃಶ್ಯ. ಕಳದ ವರುಷ ಭಾರತೀಯರ ಪಾಲಿಗೆ ಭಾರತ ಸರ್ಕಾರವು ದೊರಕಿಸಿಕೊಂಡ ಮುಖ್ಯ ವಿಜಯ ಹೈದರಾಬಾದಿನದು.

ಆಶ್ರಿತ ಸಂಸ್ಥಾನಗಳಲ್ಲಿ ಕೆಲವನ್ನು 'ಮಂಡಲೀ ರಾಜ್ಯಭಾರ'ಗಳೊಳಗೆ ಸೂಡಿ ಕಟ್ಟಿಸುವ-ಸಣ್ಣ ಸಂಸ್ಥಾನಗಳನ್ನು ನೆರೆಯ ಪ್ರಾಂತ್ಯಗಳೊಳಗೆ ಸೇರಿಸಿಬಿಡುವ-ಕೆಲಸ ಹೆಚ್ಚಾಗಿ ನಡೆದು ಮುಗಿದುದು 1948 ರಲ್ಲಿ.

ಜಾತೀಯ ಗೊಂದಲಗಳಗಾಹುತಿಯಾದವರ ಸ್ಥಾಪನೆ ಮತ್ತು ರಕ್ಷಣಾ ವ್ಯವಸ್ಥೆಗಳು ಕಳದ ವರುಷ ಸಂಗಮವಾಗಿ ನಡೆದುವು.

1947ರಲ್ಲಿ ಇದ್ದ ಜಾತೀಯತಾ ಗಲಭೆಗಳು 1948ರಲ್ಲಿ ಭಾರತನಲ್ಲಿರಲಿಲ್ಲ; ಜನವರಿಯ ಅಂತ್ಯದಲ್ಲಿ ಜಾತೀಯತಾ ಉರಿಯೊಮ್ಮೆಗೇ ನಂದಿಹೋಗಿ,ತಾವದರಳಿಂದವಾಗಿದ್ದುದಕ್ಕಾಗಿ ಜನ ಪಶ್ಚಾತ್ತಾಪಪಡಲಾರಂಭಿಸಿದ್ದರು. ಆರ್.ಯಸ್.ಯಸ್.ನವರು, ಎಡೆಯಿಲ್ಲದೆ ಕ್ಷುಬ್ಧಗೊಂಡ ವಾತಾವರಣವನ್ನು ಭಾರತದ ಸರಕಾರಗಳು ಬ್ಲೂಫೈನೀಯ ರೀತಿಯಿಂದ ಹತೋಟಿಗೆ ತಂದುಕೊಳ್ಳಲು ಶಕ್ತವಾದುದೂ ಆಳುವವರಿಗಷ್ಟೇ ಅಲ್ಲ,ಜನತೆಗೆ ಆಗಲಭೆಗಳುಬೇಡವಾಗಿವೆ ಎಂದು ಖಚಿತವಾದುದೂ ಗಮನಾರ್ಹ ಸಂಗತಿ.

ಘಾಷಾವಾರು ಸ್ವಾತಂತ್ರ್ಯ ರಚನೆಯು ಪ್ರಶ್ನೆಯ ಪರಿಶೀಲನೆಗಾಗಿ 'ದಾರ್ ಕಮಿತಿ' ನೇಮಕಗೊಂಡುದು-ಅದು ತನ್ನ ಪಾಲಿನ ಕಾರ್ಯಗಳನ್ನು ಮಾಡಿ ಘಾಷಾವಾರು ಭಾಗಗಳವರನ್ನು ಕೆರಳಿಸುವ ಪರಿಯೊಸ್ಪಿಸಿದುದು-ಕಳದ ವರುಷದಲ್ಲಾದ ಮತ್ತೊಂದು ಮುಖ್ಯ ಘಟನೆ.

ಪಂಡಿತ ನೆಹರುಗಳು ಲಂಡನ್ನಿಗೆ ಹೋಗಿ ಅಲ್ಲಿಯೂ ಪ್ಯಾರಿಸಿನಲ್ಲಿಯೂ ಪಡೆದ ಗೌರವ, ಮಾಡಿದ ಕಾರ್ಯಗಳು ಕಳದ ವರುಷ ಭಾರತಕ್ಕೆ ಕೀರ್ತಿ ತಂದವುಗಳಲ್ಲಿ ಮುಖ್ಯ ವಿದೇಶಗಳ ರಾಯಭಾರಿಗಳ ಕಾರ್ಯಗಳೂ -ವಿದೇಶಗಳೊಡನಾದ ವ್ಯಾಪಾರ, ಆರ್ಥಿಕ, ಸಂಬಂಧಿಕ ಒಪ್ಪಂದಗಳೂ ಮಹತ್ವವುಳ್ಳವುಗಳೇ.

ಪಾಕಿಸ್ತಾನದಂತಹ ಸಂತೋಷರದು ಸ್ಪೋಟನೆಯ ಗಾಳಿ ಸೋಂಕದಂತೆ ಮಾಡಿ ನ್ಯಾಯುಬದ್ಧ ಬಲ ಪ್ರಯೋಗ ಮಾಡುವುದು ಕೇಗೆಂಬುದನ್ನು ಹೈದರಾಬಾದಿನ ವಿಷಯದಲ್ಲಿ-ಮೈಮೇಲೆ ಬಂದ ಆಪತ್ತನ್ನು ತಡೆಗಟ್ಟಿ ನಿಲ್ಲುವುದು ಹೇಗೆಂಬುದನ್ನು ಕಾಶ್ಮೀರದಲ್ಲಿ-ಒಳಗಿನ ಅಘಾತ ಮತ್ತು ಆಡ್ಡಾದಿಡ್ಡಿಗಳನ್ನು ಕ್ರಮಬದ್ಧ ಸರಿಪಡಿಸಿಕೊಳ್ಳುವುದು ಹೇಗೆಂಬುದನ್ನು ಆಜಾದ್ ಪಾಕಿಸ್ತಾನದ ನಿರ್ಮಾಣ ಮತ್ತು ಆರ್ಥಿಕ ಯೋಜನೆಯಲ್ಲಿ—ಒಳಾಂಡೋಲನಗಳನ್ನು ನಿರ್ಮೂಲಿಸಿಕೊಳ್ಳುವುದು ಹೇಗೆಂಬುದನ್ನು ಕಮ್ಯೂನಿಸ್ಟ್, ಆರ್. ಯಸ್ ಯಸ್. ನಂಥವರ ದಮನದಲ್ಲಿ-ಶ್ರಮಜೀವಿಗಳಿಗೇನು ಬೇಕೆಂಬುದನ್ನು ಕೆಲವು ಮುಖ್ಯರಾಷ್ಟ್ರಗಳ ತೀರ್ಮಾನದಲ್ಲಿ-ಭಾರತ ಸರಕಾರಗಳು ಕಳದ ವರುಷ ಕಲಿತುಕೊಂಡವು. ಸರಕಾ

[ನಂತರ ಪುಟ ನೋಡಿ]

ವಿಮೆಮಾಡಲಿಕ್ಕೆ ಯಾ ಪ್ರತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಮುಖ್ಯ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

1948ರ ಕಡೆಗೆ—

(ವ್ಯಂಕಟೇಶ್ವರ ಬೆನಗಲ್, ಎಂ. ಎ.

ಈ ವರುಷದ ಭಾರತ ಆಯ ವ್ಯಯ ಪಟ್ಟಿಯಲ್ಲಿ-ಸ್ವಾತಂತ್ರ್ಯಪ್ರಾಪ್ತಿಸಂತರದ ಪ್ರಥಮ ವಾರ್ಷಿಕ 'ಬಜೆಟ್' ಹಾಗೂ ಕೊರತೆಯುಳ್ಳ 'ಬಜೆಟ್'ಗಳ ಅನುಕ್ರಮಣಿಕೆಯಲ್ಲಿ ಹತ್ತನೆಯದಾದ ಬಜೆಟ್‌ನಲ್ಲಿ-ಪ್ರಚಲಿತ ತೆರಿಗೆಗಳ ಪರಿಮಾಣ ರೀತ್ಯಾ ಉತ್ಪನ್ನ ರೂ. 230.52 ಕೋಟಿಗಳೂ ಆ ಉತ್ಪನ್ನದ ಮೇಲೆ ಬೀಳುವ ವ್ಯಯ ರೂ. 257.37 ಕೋಟಿಗಳೂ ಕಂಡುಬಂದಿವೆ. ರಕ್ಷಣಾ ಮಾತ್ರಗಳಿಗಾಗಿ ರೂ. 121.08 ಕೋಟಿಗಳು-ಆಹಾರ ಸಹಾಯ ಧನ ರೂ. 19.91 ಕೋಟಿಗಳು-ನಿರಾಶ್ರಿತರ ರಕ್ಷಣೆ ಮತ್ತು ಪುನರ್ವ್ಯವಸ್ಥೆಗಳಿಗಾಗಿ ರೂ. 10 04 ಕೋಟಿಗಳ ಖರ್ಚು ತಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಹೀಗೆ ಕಡಿಮೆ ಬೀಳುವ ರೂ. 26.85 ಕೋಟಿಗಳು ಸಾದಾ ರೀತಿಯ ಕರಕಂದಾಯ ಕ್ರಮಗಳು ಪುನರ್ದುರಸ್ತಿ ಪಟ್ಟಿಯ ಮೂಲಕ ರೂ. 1 09ಕ್ಕೆ ತಗ್ಗಿಸಲ್ಪಡಲಿವೆ. ಇಂತಹ ಹೊಸ ಸೂಚನೆಗಳ ಪೈಕಿ ಕೆಲವೆಂದರೆ-ಉದ್ದಿಮೇ ಲಾಭಗಳ ಮೇಲಿನ ಕರವನ್ನು ಸಾಕಷ್ಟು ತಗ್ಗಿಸಿದುದು; ಉದ್ಯೋಗಗಳ ರಕ್ಷಣಾ ದೃಷ್ಟಿಯಿಂದ 'ಸುಪರ್ ಟೇಕ್ಸ್'ನ ಮಿತಿಯನ್ನು ಹೆಚ್ಚಿಸಿದುದು; ಕಂಪೆನಿಗಳ ಮೇಲಿನ ತೆರಿಗೆಯನ್ನು ತಗ್ಗಿಸಿದುದು; ಕೇಂದ್ರದ ಕೆಲವು ಸುಂಕ ತೆರಿಗೆಗಳನ್ನು ಹೆಚ್ಚಿಸಿದುದು. ಅಂತೂ ಮೊತ್ತದಲ್ಲಿ ಈ ಆಯವ್ಯಯ ಪಟ್ಟಿಯು ಜರ್ಥಿಕ ಮಂದಗಾಮಿಯಿದೆ; ತುಲನಾತ್ಮಕವಾಗಿ ಹೇಳುವುದಾದರೆ ಹಿಂದಿನ ವರುಷದ ಸಮತಾಪಾದಿ ಬಜೆಟಿನ ಮರ್ಜಿ ಬಿಟ್ಟು ದೂರ ಹೋಗಿದೆ.

48–49ರ ಪ್ರಾಂತಿಕ ಆಯ ವ್ಯಯಗಳು

ಪ್ರಾಂತಿಕ ಆಯವ್ಯಯಗಳು ಈ ಕೆಳಗಿನಂತಿವೆ:-ಮದ್ರಾಸ್ ಪ್ರಾಂತ್ಯದ ಉತ್ಪತ್ತಿ 50.32 ಕೋಟಿ ರೂಪಾಯಿಗಳು; ವ್ಯಯ 55.94 ಕೋಟಿ; ಕೊರತೆ 5.62 ಕೋಟಿ. ಸಂಯುಕ್ತ ಪ್ರಾಂತ್ಯ 45.87 (ಉ.); 50.57 (ವ್ಯ.); 4.70 (ಕೊ.); ಬೊಂಬಾಯಿ 41.38 (ಉ); 44.02 (ವ್ಯ) 2.64 (ಕೊ). ಪಶ್ಚಿಮ ಬಂಗಾಳ 31.18 (ಉ); 31.96 (ವ್ಯ); 0.78 (ಕೊ). ಬಿಹಾರ್ 21.57 (ಉ); 200.09 (ವ್ಯ); 1.48 (ಉಳಿತಾಯ. ಉಳಿತಾಯದ ಪ್ರಾಂತ್ಯ ಇದೊಂದೆ). ಮಧ್ಯ ಪ್ರಾಂತ್ಯ ಮತ್ತು ಬೆರಾರ್ 15.29 (ಉ); 15.74 (ವ್ಯ); 0.45 (ಕೊ.) ಅಸ್ಸಾಮ್ 13.12 (ಉ); 14.61 (ವ್ಯ); 1.49 (ಕೊ). ಪೂರ್ವ ಪಂಜಾಬು 11.13 (ಉ); 17.62 (ವ್ಯ); 6.69 (ಕೊ). ಒರಿಸ್ಸಾ 6.28 (ಉ); 7.51 (ವ್ಯ); 1.23 (ಕೊ). ಪ್ರಾಂತಿಕ ಆಯವ್ಯಯ ಪಟ್ಟಿಗಳ ನವೀನಾಂಶಗಳೆಂದರೆ ಪೋಲೀಸ್ ಮತ್ತು ನಾಗರಿಕಾಡಳಿತೆಯ ನೆಚ್ಚಾಧಿಕ್ಯ; ಸರಕಾರೀ ನೌಕರರ ಸಂಬಳ ಪಟ್ಟಿಯಲ್ಲಾಗಿರುವ ಹೆಚ್ಚಳ ಮತ್ತು ರಾಷ್ಟ್ರ ರಚನಾ ಕಾರ್ಯಗಳ ಅಧಿಕ ವ್ಯಯಗಳು. ಈ ಪೈಕಿ ವಿಭಜನೆ ಪಡೆದ ಪ್ರಾಂತ್ಯಗಳಲ್ಲಿ ಮುಖ್ಯತಃ ನಿರಾಶ್ರಿತರ ರಕ್ಷಣೆ ಮತ್ತು ಪುನರ್ವ್ಯವಸ್ಥೆಯ ವ್ಯಯಗಳವೆ. ಹೊಸ ಕಂದಾಯಗಳನ್ನು ಹೇರುವ ಭಾಗದಲ್ಲಿ ಸೇಲ್ಸ್ ಟೇಕ್ಸನ್ನು ಹೆಚ್ಚಿಸುವ, ವಿನೋದ ವಿಹಾರಗಳ ಮೇಲೆ ವಿಶೇಷ ತೆರಿಗೆ ಹೊರಿಸುವ, ಪೆಟ್ರೋಲಿನ ಕರ ಹೆಚ್ಚಿಸುವ ಹಾಗೂ ಕೆಲವೆಡೆ ಜುಗಾರಿಗಳ ಮೇಲೆ ತೆರಿಗೆ ಹಾಕುವ ಮನೋವೃತ್ತಿಯೇ ಸರ್ವಸಾಮಾನ್ಯವಾಗಿದೆ. ಸಂಯುಕ್ತ ಪ್ರಾಂತ್ಯದ ಭಂಡಾರ ಭರ್ತಿಗೆ ಹೊಸ ತಾಗಿ ಸೇರಿಕೊಂಡ ವಿಧಾನಗಳೆಂದರೆ ಒಂದು ಸಾಮಾನ್ಯ ವಾರಾಟ ಕಂದಾಯ ಮತ್ತು ಬೇಸಾಯಾದಾಯ ತೆರಿಗೆ. ಇಂತೆಯೇ ಬೊಂಬಾಯಿ ಪ್ರಾಂತ್ಯದ ಮಟ್ಟಿಗೆ ಹತ್ತಿ ಮಾರ್ಕೆಟುಗಳ ಮೇಲಿನ ತೆರಿಗೆಗಳು. 1945ನೇ ಮಾರ್ಚ 17ರಲ್ಲಿ ಜಾರಿಗೆ ತಂದ 'ರಿವೆನ್ಯೂ ಪಿತರಣಾ ಆಜ್ಞೆ'ಯು ಸರಕಾರ್ಯಾರ್ಥವಾಗಿರುವುದಾದರೂ, ಅದರ ಮೂಲಕ ಕೇಂದ್ರ ಪ್ರಾಂತ್ಯಗಳ ಸಂಬಂಧದ 'ನೇಮಯರ್ ಎವಾರ್ಡ್' ಪುನರ್ವಿಮರ್ಶಿಸಲ್ಪಟ್ಟ ಪರಿಣಾಮವಾಗಿ ಪ್ರಾಂತಿಕ ಸರಕಾರಗಳ ಹಣಕಾಸಿನ ಸ್ಥಿತಿಯಲ್ಲಿ ವಿಶೇಷ ಬದಲಾವಣೆಗಳಾಗಬೇಕಾಯಿತು; ಕೆಲವಾನಾರು ಬೇಸಾಯದ ಪ್ರಾಂತ್ಯಗಳಿಗೆ ದೊರಕತಕ್ಕ ನಾರು ಆಥವಾ ನಾರುಗಳ ಉತ್ಪನ್ನಗಳ ಮೇಲಿನ ರಫ್ತು ತೆರಿಗೆಯ ಪಾಲಾಗತಿಯವು ಸೇ. 62½ ಇದ್ದುದು ಸೇ. 20ಕ್ಕೆ ಇಳಿಸಲ್ಪಟ್ಟುದು ವಿಭಜಿತ ಪ್ರಾಂತ್ಯವಾದ ಪಶ್ಚಿಮ ಬಂಗಾಳಕ್ಕೆ ದೊಡ್ಡ ಹೊಡೆತವಾಯಿತು.

ಪಾನ ನಿಷೇಧ

ಮದ್ರಾಸು ಸಾರ್ವತ್ರಿಕ ಪಾನ ನಿಷೇಧವನ್ನು ಪೂರ್ಣಗೊಳಿಸಿಕೊಂಡಿತು. ಈ ಪ್ರಾಂತ್ಯದ 8 ಜಿಲ್ಲೆಗಳಲ್ಲಿ 1946ನೇ ಒಕ್ಟೋಬರಿನಲ್ಲಿ ಪಾನನಿಷೇಧ ಜಾರಿಗೆ ಬಂದಿದ್ದು, ಅದು 1947ನೇ ಒಕ್ಟೋಬರಿನಲ್ಲಿ ಮತ್ತೆಂಟು ಜಿಲ್ಲೆಗಳಿಗೆ ವ್ಯಾಪಿಸಿದ್ದಿತು. 1948ನೇ ಒಕ್ಟೋಬರ್ 2ರಲ್ಲಿ ಉಳಿದ 8 ಜಿಲ್ಲೆಗಳಲ್ಲೂ ಅಸ್ತಿತ್ವಕ್ಕೆ ಬರುವ ಮೂಲಕ ಈ ಕಾರ್ಯಕ್ರಮ ಪೂರ್ಣಗೊಂಡಿತು. ಇದು ಪ್ರಾಂತಿಕ ಸರಕಾರದ ಖಜಾನೆಗೆ ಅಂದಾಜು 17 ಕೋಟಿ ರೂಪಾಯಿಗಳಷ್ಟು ನಷ್ಟವನ್ನೊಡ್ಡಿತು. ಬೊಂಬಾಯಿಯು ಈ ಗುರಿ ಮುಟ್ಟಲು 4 ವರುಷಗಳ ಅವಧಿಯಿಟ್ಟುಕೊಂಡು 1947ರಲ್ಲಿ ಇದನ್ನಾರಂಭಿಸಿಕೊಂಡು ಬಂದಿದೆ. ಆದರೆ ವಾರ್ಷಿಕ ನಷ್ಟ ರೂ. 4 ಕೋಟಿಯಿಂದ 5 ಕೋಟಿಯವರೆಗಿದ್ದಿತು. 1950ನೇ ಎಪ್ರಿಲ್ 1ರಿಂದ ಬೊಂಬಾಯಿಯೂ ಒಣಗಲಿದೆಯೆಂದು ಅದರ ಅಬಾಧಿ ಮಂತ್ರಿಗಳು ದಿನ ಹೇಳುತ್ತಿದ್ದರು. ವ್ಯಾಯಶಃ: ಈ ಮಟ್ಟಿಗಿನ್ನೇ ಉತ್ಪಾದಿಸಿದ್ದರೂ ಅರ್ಥಿಕ ಸ್ಥಿತಿ ದುರ್ಬಲವಿರುವ ಇತರ ಪ್ರಾಂತ್ಯಗಳು ಈ ಗುರಿಯನ್ನು ನಿಧಾನ ಗತಿಯಿಂದ ಮುಟ್ಟಲು ಸಂಕಲ್ಪಿಸಿವೆ.

ಬೇಂಕಿಂಗ್

ಬೇಂಕುಗಳ ಆಡಳಿತೆಯಲ್ಲಿ ಸುಧಾರಣೆ ತರುವ, ನಿಯಮಾವಳಿಗಳನ್ನು ಬಂದೋಬಸ್ತುಪಡಿಸಿಟ್ಟುಕೊಳ್ಳುವದನ್ನು ತಡೆಗಟ್ಟುವ, ಸುದೃಢ ಮೂಲಧನದ ಆತಿಗಟ್ಟನ್ನು ನಿರ್ಮಿಸುವ ಹಾಗೂ ಆಡಚಣೆಯ ಅವಧಿಗಳಲ್ಲಿ ಸಾಕಷ್ಟು ಮೇಲ್ತನವಿ ಮತ್ತು ಸಹಾಯವನ್ನು ರಿಜರ್ವ್ ಬೇಂಕಿನಿಂದ ಮಾತಿಸುವ ಮತ್ತಿತರ ಅಂಶಗಳನ್ನೊಳಗೊಂಡ 'ಬೇಂಕಿಂಗ್ ಕಂಪೆನಿಗಳ ಶಾಸನ'ವೊಂದು ವಸಾಹತು ಪಾರ್ಲಿಮೆಂಟಿನ ಮುಂದೆ ಕಳದ ಮಾರ್ಚಿಯಲ್ಲಿ ಬಂದಿದ್ದಿತು. ಈ ಮಸೂದೆಯು ತನಗೆ ಮಂಜೂರಾಗಿಲ್ಲವಾದರೂ, ಮೆಲ್ಲಡಿ ನಮೂದಿಸಿರುವ ಕೆಲವು ವಿಭಾಗಗಳು ಆಡಳಿವಾಗಿರುವ ಒಂದು ಓರ್ಡಿನೆನ್ಸು ಸೆಪ್ಟೆಂಬರ್ ತಾ. 18ರಲ್ಲಿ ಜಾರಿಗೆ ಬಂದಿವೆ. ಕೆಲವಂತೂ ತಮ್ಮ ಬಾಗಿಲು ಹಾಕಿಕೊಳ್ಳಬೇಕಾಗಿ ಬಂದಂಥಾ ಮತ್ತಾಕಾದಲ್ಲಿ ಹಲವು ಬೇಂಕುಗಳನ್ನು ಬಲಿಗೊಡಂಥಾ ಬಿಕ್ಕಟ್ಟಿನ ಪರಿಸ್ಥಿತಿಯಿಂದಿದ್ದ ವಶ್ಯಕತೆಯೇ ಈ ಓರ್ಡಿನೆನ್ಸನ್ನು ನಿಮಿಸಿತು. 1949ನೇ ಜನವರಿ ತಾ. 1ರಂ ರಿಜರ್ವ್ ಬೇಂಕಿನ ಪಾಲು ಭಂಡವಾಳವನ್ನು ರಾಷ್ಟ್ರದ ಅಧಿಕಾರದೊಳಗೆ ತರುವ ಮಸೂದೆಯೊಂದನ್ನು ಸೆಪ್ಟೆಂಬರ್ ತಾ 3ರಲ್ಲಿ ವಸಾಹತು ಪಾರ್ಲಿಮೆಂಟು ಮಂಜೂರು ಮಾಡಿಕೊಂಡಿದೆ. ಪ್ರಚಲಿತ ಪಾಲುದಾರರಿಗೆ ಶೇರ್ 1ಕ್ಕೆ ರೂ. 118 10-0ರಂತೆ ಪ್ರತಿಫಲವು 3% ನಲೆಂಬಡ್ಡಿ ನಡೆಯುವ ಸರಕಾರೀ ಬೊಂಡುಗಳ ಮೂಲಕ ದೊರೆಯುವುದು. ಬೇಂಕಿಗ್ ಕ್ಷೇತ್ರದ ಮತ್ತೊಂದು ಗಣ್ಯ ಘಟನೆಯೆಂದರೆ, ಆತನಕ ಪಾಕಿಸ್ತಾನದಲ್ಲೂ ಭಾರತದ ರಿಜರ್ವ್ ಬೇಂಕೇ ಇದ್ದ ಸ್ಥಾನದಲ್ಲಿ ಜುಲಾಯಿ ತಾ 1ರಲ್ಲಿ ಪಾಕಿಸ್ತಾನ್ ಬೇಂಕು ನಿರ್ಮಾಣಗೊಂಡುದು.

ಉದ್ದಿಮೆ

ಏಪ್ರಿಲ್ 6ರಲ್ಲಿ ಕೇಂದ್ರ ಸರಕಾರವು ಉದ್ದಿಮೇಸಂಬಂಧದ ತನ್ನ ಹೊಸ ಧೋರಣೆಯನ್ನು ಜಾಹೀರು ಮಾಡಿತು. ಈ ಧೋರಣೆಯ ಮೇಲಿಂದ ಉದ್ದಿಮೆಗಳು 4 ವಿಭಾಗಗಳಾಗಿ ವಿಂಗಡಿಸಲ್ಪಡಬೇಕು:-(1) ರಕ್ಷಣೆ, ರೈಲ್ವೆ, ಅಟಂ ಶಕ್ತಿ ಮುಂತಾದ ಕೇಲೀ ಉದ್ದಿಮೆಗಳು. ಇವುಗಳ ಮೇಲಿನ ನಿಯಂತ್ರಣ ಸಂಪೂರ್ಣವಾಗಿ ಸರಕಾರದ್ದೇ. (2)ಕಲ್ಲಿದ್ದಲು, ಕಬ್ಬಿಣ, ಉಕ್ಕು, ವಿಮಾನ ನಿರ್ಮಾಣ ಮುಂತಾದ ರಾಷ್ಟ್ರೀಯ ಪ್ರಾಮುಖ್ಯತೆಯ ಉದ್ದಿಮೆಗಳು. ಇವುಗಳ ಮಟ್ಟಿಗೆ ಪ್ರಚಲಿತ ಕಂಪೆನೀ ಕಾಯಿದೆ ನೆಗಳು ಹಾಗೆಯೇ ಮುಂದೊತ್ತಬಹುದಾದರೂ ಇನ್ನು ಹೊಸತಾಗಿ ಪ್ರಾರಂಭಿಸುವ ಹೊಸ್ತು ಸರಕಾರಕ್ಕೆ ಮಾತ್ರ. (3) ಉಪ್ಪು, ಇಲೆಕ್ಟ್ರಿಕಲ್ ಇಂಜನೀಯರಿಂಗ್, ಮೋಟಾರು, ದೊಡ್ಡ ರಸಾಯನಿಕಗಳೇ ಮುಂತಾದ ಮೂಲ ಉದ್ದಿಮೆಗಳು. ಇವುಗಳ ಕ್ರಮ ನಿಯಮವ್ಯವಸ್ಥೆ ಮತ್ತು ಹತೋಟಿ ಸರಕಾರದ್ದು. (4) ಉದ್ದಿಮೇಕ್ಷೇತ್ರದಲ್ಲಿ ಮೇಲಿನವನ್ನು ಬಿಟ್ಟು ಉಳಿಯುವವುಗಳನ್ನು ಖಾಸಗೀ ವಾಲಯತ್ತಕ್ಕೆ ಬಿಡಲಾಗಿದೆ. ಈ ಹೊಸ ಧೋರಣೆಯೆಂಬುದು ಭಂಡವಾಳಶಾಹಿ ಮತ್ತು ಸಮತಾವಾದಗಳ ನಡುವಿನ ಮಧ್ಯಸ್ಥಿಕೆಯಂತೆ. ಹೀಗಾಗಿ ಉದ್ದಿಮೇ ರಾಷ್ಟ್ರೀಕರಣದ ವಾದಿಗಳಿಗಾಗಲೀ ಪ್ರತಿವಾದಿಗಳಿಗಾಗಲೀ ಇದು ಸಮಾಧಾನ ಕೊಟ್ಟಿಲ್ಲ. ಇದರ ದೊಡ್ಡ ದೋಷವೆಂದರೆ. ಅಧಿಕಾರಿ

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾದಲ್ಲಿ ಸಾಂಸ್ಥೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು ನಮ್ಮ ಶಾಖೆಗಳಿರುವಲ್ಲಿ ರವಿವಾರಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ. ಪೂನಿಪಿದಂತಿರುವ ನಮ್ಮ ಶಾಖೆಗಳು ದಖ್ಖಣದ ಅರಬೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಒಕ್ಕ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷಪಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕಿಗಳ ಬಗ್ಗೆ ಕಲೆಕ್ಷನ್ ರವಿವಾರಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಶ್ಚಿತ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ನೋಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿಯುವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರವಿವಾರಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಕ್ಷ್ಯ ಲಕ್ಷ ದೊರೆವುದು.

he Canara Bank Limited.

ESTD: 1906.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

-ಆರ್ಥಿಕ ನೋಟ

-ಇವರ "ಹಿಂದು" ಲೇಖನದ ಆಧಾರದಿಂದ)

ವರ್ಗದವರು ಆದನ್ನೇ ಗುಣನೆಂದಾರಂ-ಗ್ಯವ್ಯ ನಿರ್ದೇಶನದ ಅಭಾವ. ಬೆಳವಣಿಗೆಯು ಅಸಮಾಧಾನಕರವೆಂಬ ಆರೋಪದ ಮೇಲಿಂದ, ಯಾವದೇ ಉದ್ದಿಮೆಯನ್ನಾ ಸರ್ಕಾರ ಯಾವ ಕಾಲದಲ್ಲಾದರೂ ರಾಷ್ಟ್ರೀ-ಕರಣಗೊಳಿಸುವ ಹಕ್ಕನ್ನು ಸರಕಾರಕ್ಕೇ ಯುವ ಅತಿರೇಕ ಸವಲತ್ತುಗಳು ಇದರಲ್ಲಿ ವೆ. ಉದ್ದಿಮೇ ಧೋರಣೆಯನ್ನು ಮುಂ ಹೊತ್ತಲಾಗುವಂತೆ ಉದ್ದಿಮೆಗಳ ವ್ಯವ ಮತ್ತು ಹೆಜ್ಜೋಟಿಯನ್ನು ತನ್ನ ಕೈ ನೇ ತೆಗೆದುಕೊಳ್ಳುವ ಮೇಲಧಿಕಾರವ ನ್ನು ಕೇಂದ್ರ ಸರಕಾರಕ್ಕೆಯಿರುವ ತಿದ್ದುಪ ಯೊಂದು 'ಭಾರತ ಸರಕಾರ ಶಾಸನ'ದ ಲ್ಲಿ ಧರದ ನವಂಬರ್‌ನಲ್ಲಾಗಿದ್ದಿತು. ಆ ೋಸ್ತು 16ರಲ್ಲಿ 'ವಿದ್ಯುತ್ ಸರಬರಾ ಯ ಶಾಸನ'ವೊಂದು ಸಂಜಾರಾಗಿದೆ. ಸಾರ್ವಜನಿಕಾವಶ್ಯಕತೆಯ ದೃಷ್ಟಿಯಿಂದ ನ್ಯಾಯಬದ್ಧ ಹಾಗೂ ಪರಿಣಾಮಕಾರಿ ಯಿರುವ ಮತ್ತು ವಿತರಣೆಯಾಗುವಂತೆ ನೋಡಲು ಹೃಚಲಿತ ಇಲೆಕ್ಟ್ರಿಸಿಟಿ ಉ ತ್ಪಾದಕ ಹಂಗೂ ವಿತರಣಾ ಕಂಪೆನಿಗಳ ಷೇರುಗಳ ಮತ್ತು ವ್ಯವಸ್ಥಾಧಿಕಾರವನ್ನು ಪಡೆ. ಸರಕಾರಕ್ಕೆಯಿರುತ್ತದೆ.

ಮದ್ರಾಸ್ ಮತ್ತು ಬೊಂಬಾಯಿಗಳ ಕೇಂದ್ರದ ಮಾನಾರ್ಹ ಸಮಿಶ್ರಲ ಆರ್ಥಿಕ ಸ್ಥಿತಿಯಿತ್ತು. ಮೊದಲು ಮಾಡಿದಂತೆ ಕೆಲವು ಉದ್ದಿಮೇ ಯೋಜನೆಗಳನ್ನು ಡಾ.ಹೀರುಹಿಡಿಸಿದೆ. ಇಪ್ಪರಲ್ಲೇ ಸಂಘಟಿಸಲ್ಪಟ್ಟಿರುವ ಕೇಂದ್ರ ಸಂಸ್ಥೆಗೆ ಸುವಣೆಯಾಗಿ ಈ ಪ್ರಾಂತ್ಯಗಳೂ ತಮ್ಮ 'ಇಂಡಸ್ಟ್ರಿಯಲ್ ಫೈನೆನ್ಸ್ ಕೋರ್ಪರೇಶನ್'ಗಳನ್ನು ಸ್ಥಾಪಿಸಿಕೊಳ್ಳಲು ಏನಸ್ಸು ಮಾಡಿದೆ. ಮದ್ರಾಸ್ ಸರಕಾರವು ತನ್ನ ಪ್ರಾಂತ್ಯದ ಇಲೆಕ್ಟ್ರಿಕ್ ಸರ ಬರಾಜು ಕಂಪೆನಿಗಳನ್ನು ರಾಷ್ಟ್ರೀಕರಣಗೊಳಿಸಲು ನಿರ್ಧರಿಸಿದೆ. ಮದ್ರಾಸ್ ಇಲೆಕ್ಟ್ರಿಕ್ ಸಪ್ಲೈ ಕಾರ್ಪರೇಶನ್ನನ್ನು ಆದಿ ಸ್ಥದಲ್ಲೇ ಪಡಕೊಂಡಿದೆ. ಬೊಂಬಾಯಿ ಯಲ್ಲಿ ಇಲೆಕ್ಟ್ರಿಕ್ ಸರಬರಾಯಿ ಕಾರ್ಯ ವನ್ನು ಸಿಟಿ ಮುನಿಸಿಪಲ್ ಕೋರ್ಪರೇಶ ನು ವಹಿಸಿಕೊಂಡಿದೆ. ಅತಿ ಬೇಗನೇ ತ ನ್ನ ಪ್ರಾಂತ್ಯದ ವಿದ್ಯುಚ್ಛಕ್ತೀ ಉದ್ಯಮ ವನ್ನು ರಾಷ್ಟ್ರೀಕರಣಗೊಳಿಸಲಾಗುವ ಸಂಬ ತನ್ನ ಇಚ್ಛೆಯನ್ನು ಪೂರ್ವ ಪಂ ಜಾಬಿನ ಪ್ರಧಾನ ಮಂತ್ರಿಗಳು ಪ್ರಕಟಿ ಸಿರುವಿಸಿದ್ದಾರೆ.

ಸ್ತೇ ವಾಹನ ವಹಿವಾಟು

ರಾಷ್ಟ್ರೀಕರಣವು ಸಾರಸ್ವ ಮುಂ ಹೊತ್ತಿರುವ ಮತ್ತೊಂದು ಕ್ಷೇತ್ರವೆಂದರೆ ಮೋಟಾರು ಮುಂತಾದ ರಸ್ತೇ ವಾಹನ ಸಿದ್ಧಿಮೆ. ಮದ್ರಾಸು ಇದನ್ನು ಹಿಂದಿನ ವ ರ್ಷ ಪ್ರಾರಂಭಿಸಿ 1948ನೇ ಜನವರಿ 1ನೇ ತಾರೀಕಿನೊಳಗೆ ರೂ. 5 ಲಕ್ಷ ನ್ಯಿ ಮಿಕ್ಕಿದ ಪರ್ಮಿಟ್ ಮುನಾಫೆಯನ್ನು-ಕೊಡಿದ್ದ ಭಂಡವಾಳದ ಮೇಲೆ ಸುಮಾ ರು 12½ ಸಲೆಯ ಉತ್ಪನ್ನವನ್ನು-ಸಂ ಪಾದಿಸಿದ್ದಿತು. 1948ನೇ ಜೂನ್ ತಿಂಗ ಳಿಂದ ಮದ್ರಾಸ್ ಸಿಟಿಯ ಮೋಟಾರು ವಾಹನ ವಿಭಾಗವು ಸಂಪೂರ್ಣವಾಗಿ ರಾ ಷ್ಟ್ರೀಕರಣಗೊಂಡಿದೆ. ಸದ್ರಾಸನ್ನು ಪ್ರತಿ ತೆಗೆಯುವುದರಲ್ಲಿ ಬೊಂಬಾಯಿಯೂ ತಡ ವಾಡಿಲ್ಲವಾದರೂ ಇದೀ ಸಾಹಸದಲ್ಲಿ ಸ್ಥಳೀಯ ಸಂಸ್ಥೆಗಳೊಡನೆ ಸಹಕರಿಸಿ ನಡೆದಿದೆ. ಸರಕಾರದ ಅನುಮತಿಯಿಂದ ಅಹಮ್ಮದಾಬಾದ್ ಸಿಟಿ ಮುನ್ಸಿಪಾಲಿಟಿ ಮತ್ತು ಬೊಂಬಾಯಿ ಕಾರ್ಪರೇಶನ್ನುಗಳು ತಂತಮ್ಮ ನಗರಗಳ ಸೋಟಾರು ಸಂ ಚಾರವಹಿವಾಟನ್ನು ಸ್ವಾಧೀನಪಡಿಸಿಕೊಂ ಡಿವೆ ದಿಲ್ಲಿಯಂತೂ ರಾಷ್ಟ್ರೀಕರಣ ಪಡೆ ದ ಮೋಟಾರು ವಾಹನ ವಹಿವಾಟಿಗೆ ಪ್ರಯೋಜನಗಳನ್ನೀಗೆ ಅನುಭವಿಸುತ್ತಿದೆ-ಕಲ್ಕತ್ತದಲ್ಲಿ ಪಶ್ಚಿಮ ಬಂಗಾಳ ಸರಕಾರ ವ್ವಾದ ಕೆಲವು ಸರಕಾರೀ ಬಸ್ಸು ಕರ್ವಿಸ-ಗಳೊಡಿಸುತ್ತಿವೆ.

ಹಡಗು ರಚನೆ

ಭಾರತದಲ್ಲಿ ಪ್ರಥಮಕೇ ತಯಾರಾದ ಹಡಗನ್ನು ವಿಜಿಪಟ್ಟಣ ರೇವಿನಲ್ಲಿ ಮಾರ್ಚ್ 14ರಲ್ಲಿ ನೀರಿಗಳಿಸಿದುದು ಉದ್ದಿಮೇಕ್ಷೇತ್ರದೊಂದು ಗಣ್ಯಘಟನೆ. ಆ ದು 8000ಟನ್ನುಗಳದ್ದು. ಇಷ್ಟೇ ಭಾರದ ಎರಡನೇ ಬಾರತ ನಿರ್ಮಾಪಕ ಹಡಗವು ನವಂಬರ್ 20ರಲ್ಲಿ ಇಳಿಸಲ್ಪಟ್ಟಿದ್ದಿತು; ಮೊದಲನೆಯದನ್ನು ಭಾರತದ ಪ್ರಧಾನಿಗಳೂ ಎರಡನೆಯದನ್ನು ಉರ ಪ್ರಧಾನಿಗಳೂ ಇಳಿಸಿದ್ದರು.

ಮಜೂರರಂಗ

1946ನೇ ಎಪ್ರಿಲಿನಲ್ಲಿ ಮುಂದೆ ಬಂದಿದ್ದ "ನಿಯುಮಿತ ಸಂಬಳಗಳ ಮಸೂದೆ"ಯು 1948ನೇ ಎಪ್ರಿಲ್‌ನಲ್ಲಿ ಶಾಸನವಾಗಿ ಮೂರ್ತಿಟ್ಟಿತು. ಉಲ್ಲನ್, ಕಂಬಳಿ ಆಥವಾ ಶಾಲ್ ರಚನಾ ಕಾರ್ಯಾಲಯಗಳು, ಹೊಗೆಸೊಪ್ಪು ಕಾರ್ಖಾನೆ, ಅಕ್ಕಿ ಗಿರಣಿಗಳು, ಎಣ್ಣೇ ಗಿರಣಿಗಳು, ಹಿಟ್ಟು ಗಿರಣಿಗಳು, ಚಾ ಮತ್ತು ಕಾಫಿ ತೋ ಟಗಳು, ಪೆಟ್ರೋಲ್ ಮೋಟಾರು ಕಂ ಪೆನಿಗಳು ಮತ್ತಿತರ ಇತರ ಕಾಮ ಗಾರಿಗಳಲ್ಲಿ ಸಂಬಳದ ಕಡಿಮೇ ನಿಯಂ ತ್ರಣವನ್ನು ಹೇರುವ ಅಧಿಕಾರವನ್ನು ಈ ಶಾಸನವು ಸಂದರ್ಭೋಚಿತವಾ ಗಿ ಪ್ರಾಂತ್ಯ ಆಥವಾ ಕೇಂದ್ರ ಸರಕಾರಗಳಿಗೀಯುತ್ತಿದೆ. 'ಕೆಲಸಗಾರರ ಪರಿಹಾರ ಇನ್ಶೂರೆನ್ಸ್ ಕೋರ್ಪರೇಶನ್' ಒಂದು ಸ್ಥಾಪನೆಗೊಂಡು, ಕಾಯಿಲೇ ಭತ್ತೆ, ಅ ಸಮರ್ಥರಿಗೂ ಮತ್ತು ಆಶ್ರಿತರಿಗೆ ಸಹಾಯ, ಧನರ್ಹಾರ್ಥ ಚಿಕಿತ್ಸೆ ಮತ್ತು ಆರೈಕೆ, ಮಹಿಳಾ ಕೆಲಸಗಾರರಿಗೆ ಬಾಣಂತೀ ಅವಧಿ ಸಹಾಯ ಇತ್ಯಾದಿ ಸೌಕರ್ಯ ಗಳನ್ನೂ ಒಳಗೊಂಡಿದೆ. 'ಲಾಭದಲ್ಲಿ ಪಾ ಲು' ಕೊಡುವ ಯೋಜನೆಯ ವಂದಿಯೊಂ ದು ಪ್ರಕಟವಾಗಿದ್ದರೂ ಸರಕಾರದಿಂದ ಆ ಕುರಿತು ಯಾವ ನಿರ್ಧಾರವೂ ಇದುವ ರೆಗೂಗಿಲ್ಲ. ಮುಷ್ಕರಗಳನ್ನು ತಡೆಗಟ್ಟುವ ಉದ್ದೇಶದಿಂದ ಆಡಳಿತ ಮತ್ತು ಸರಕಾ ರದಲ್ಲೂ ಕೆಲಸಗಾರರ ಸಹಭಾಗಿತ್ವ ದೊರಕಿಸಿಕೊಳ್ಳುವ ಕಾಯಿದೆಗಳು ಕೆಲವು ಪ್ರಾಂತಿಕ ಶಾಸನ ಸಭೆಗಳಲ್ಲಾಗಿ ವೆಯಾದರೂ ಎತ್ತ ಹೇಳತಕ್ಕ ಪ್ರತಿಫಲ ವೇನೂ ತೋರಿಬಂದಿಲ್ಲ. ಕೇಂದ್ರ ಸರಕಾರದಿಂದ ನಿಯೋಜಿಸಲ್ಪ ಟ್ಟ ತ್ರಿಪಕ್ಷೀಯ ಸಲಹೆಗಾರ ಸಮಿತಿಯು ಕೂಡಾ ಭಂಡವಾಳ- ಕೂಲಿಗಾರರೊಳಗಿನ ಸಂಬಂಧ ಸುಧಾರಣಾ ಕಾರ್ಯದಲ್ಲಿ ಆಶ್ಚರ್ಯಂದು ಜಯಶೀಲವಾಗಿಲ್ಲ.

ಟೀಸಾಯರಂಗ

ಅಹಿತಾಹಾರ ಬೆಳೆಸುವ ಒತ್ತಡದ ಪ್ರಚಾರವು ಟೀಸಾಯವಲಯದಲ್ಲಿ ನಡೆದಿರುವುದು ಕಾಣಿಸುತ್ತಿದೆ. ಗಣನೀಯ ಘಟನೆಯೆಂದರೆ ಟ್ರೇಕ್ಟರುಗಳ ಉಪಯೋಗವು ಹೆಚ್ಚಿರುವುದು. ವಿವಿಧ ಪ್ರಾಂತಿಕ ಸರಕಾರಗಳು ಟ್ರಾಕ್ಟರುಗಳನ್ನು ಉಪಯೋಗಿಸಿ, 8,642 ಟನ್ನುಗಳಷ್ಟು ಧಾನ್ಯಗಳಾಗಬಹುದೆಂದು ನಿರೀಕ್ಷೆಯಿರುವ 1,20,795 ಎಕ್ರೆಗಳಷ್ಟು ಭೂಮಿಯನ್ನು ಸಾಗುವಳಿ ಮಾಡಿವೆ. ಆ ಪೈಕಿ ಮದ್ರಾಸ್ ಪ್ರಾಂತ್ಯದಲ್ಲಿ 1750 ಟನ್ನು ಬೆಳೆಯುವ 10,025 ಎಕ್ರೆಗಳು; ಬೊಂಬಾಯಿ ಪ್ರಾಂತ್ಯದಲ್ಲಿ 4432 ಟನ್ನುಗಳಷ್ಟು ಬೆಳೆಯುವ 1,03500 ಎಕ್ರೆಗಳು. ಕೇಂದ್ರ ಟ್ರೇಕ್ಟರ್ ಸಂಸ್ಥೆಯು 33806 ಎಕ್ರೆಗಳಷ್ಟು ಭೂಮಿಯನ್ನು ಸುತ್ಯೇಕ ಸಾಗುವಳಿ ಮಾಡಿಸಿದ್ದಲ್ಲದೆ 'ಮೆಸ್ಸರ್ಸ್ ಯೂನಿಯನ್' ನಲ್ಲಿ ಮುಸ್ಸೂರು ಬಟ್ಟು ಹೋದ 50000 ಎಕ್ರೆ ಭೂಮಿಗಳನ್ನು ಯಂತ್ರೋಪಕರಣಗಳಿಂದ ಸಾಗುವಳ್ಳಿ ಮಾಡಿಸುವ ತಯೋಜನೆಯನ್ನೂ ರೂಪಿಸಿಕೊಂಡಿದೆ.

ಜಮೀನ್ದಾರೀ ರದ್ದತಿ

ಬಿಹಾರ್, ಸಂಯುಕ್ತ ಪ್ರಾಂತ್ಯ, ಮಧ್ಯ, ಮದ್ರಾಸುಗಳಲ್ಲಿ ಜಮೀನ್ದಾರೀ ಬರ್ಖಾಸ್ತು ಮಸೂದೆಗಳು ಮಂಜೂರಾಗಿ ಈಗ ಗವರ್ನರ್ ಜನರಲರ ಸಮ್ಮತಿಯನ್ನು ಕಾಯುತ್ತಿವೆ. ಪ್ರತ್ಯೇಕ ಅವುಗಳ ದಿರೊಂದು ತಡೆ ಬಂದಿದೆ. ಭಾರತ ಸರಕಾರ ಶಾಸನದ 299ನೇ ಸೆಕ್ಷನಿನನ್ವಯ ಭೂಮಿ ಸಂಬಂಧದ ಹಕ್ಕು ಬಾಧ್ಯತೆಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಪರಿಹಾರ ಕೊಡಬೇಕೆಂದಿದೆ. ಈ ಪರಿಹಾರವನ್ನು ನಗದಿಯಾಗಿಯೇ ಕೊಡದೆ ಬೇರೆ ವಿಧಾನಗಳಿಂದ ಸಂದಾಯಿಸಿದರೆ ಆಗ ಕೋರ್ಟಗೆಳೆಯುಬಹುದೆಂದು ಎಡ್ವೊ ಕೇಟ್ ಜನರಲರ ಅಭಿಪ್ರಾಯಪಟ್ಟಿರುವರೆಂದು ತಿಳಿದು ಬಂದಿದೆ.

ಭಾರತದಲ್ಲಿ ಧಾನ್ಯಗಳು ಮೇಲ್ಕೊಗವಾಗಿಯೇ ಇದ್ದವು. ಇಡೀ ಲೋಕಕ್ಕೂ ದಗಿಸುವ ಸ್ಥಿತಿಯು ಒಂದು ಭೂಗವೆಷ್ಟಲಕ್ಕೆ ಗದಷ್ಟೂ ಅವು ಏರುಕ್ತಾ ಬಂದಿವೆ. ಫ್ರಾನ್ಸ್ ಒಂದನ್ನು ಬಟ್ಟರೆ ಕೊನೆಯ ತಿಂಗಳುಗಳಲ್ಲಿ ಇತೀ ಲೋಕದಲ್ಲೇ ಧಾರಣೆ ಹೆಚ್ಚಳದ ದಾಖಲೆಯು ಭಾರತದ್ದು.

ಸಾಮಾನ್ಯಿಗಳ ಉತ್ಪಾದನೆಯೂ ಆಶೋತ್ತೇಜಕವಾಗಿರಲಿಲ್ಲ. ಎಲ್ಲಿಯೂ ಯಾವ ಉತ್ಪಾದನೆಯಲ್ಲೂ ಉಲ್ಲೇಖನೀಯ ಪ್ರಗತಿ ಕಂಡು ಬಂದಿಲ್ಲ. ಕೆಲವು ಉದ್ದಿಮೆಗಳು ತಸು ಕಳ ಮೊಗವಾದುದು ತೋರಿಬಂದಿದೆ.

ಮುಷ್ಕರಗಳು

1948ರ ಜನವರಿಯಿಂದ ಜುಲಾಯಿ ವರೆಗೆ ಜುಮ್ಲಾ 85000 ಕೆಲಸಗಾರರ ಒಟ್ಟು 1000 ಮುಷ್ಕರಗಳು ನಡೆದು 6,800,000 ಕೂಲಿಯ ದಿನಗಳು ನಷ್ಟವಾಗಿದ್ದುವು. 1947ರ ಇದೇ ಅವಧಿಯಲ್ಲಿ ಒಟ್ಟು 1500,000 ಕೆಲಸಗಾರರ 1500 ಮುಷ್ಕರಗಳು ನಡೆದು 12,500,000 ಕೆಲಸಗಾರ ದಿನಗಳು ನಷ್ಟವಾಗಿದ್ದುದರೊಡನೆ ಇವನ್ನು ಹೋಲಿಸಿದರೆ ವ್ಯತ್ಯಾಸ ತಿಳಿಯುತ್ತದೆ. ಇದರಲ್ಲೂ ಪ್ರಥಮ ಮೂರು ತಿಂಗಳುಗಳಲ್ಲಾಗಿದ್ದಷ್ಟು ಆ ನಂತರದ ಮೂರು ತಿಂಗಳುಗಳಲ್ಲಾಗಿರಲಿಲ್ಲ.

[೬ನೇ ಪುಟ ನೋಡಿರಿ]

Greetings and Best Wishes

For a

Prosperous New Year

To

All our Policyholders, Medical Examiners,
Agents and Wellwishers

From

Kochikar Brothers Ltd.,

Chief Agents,

The Bombay Life Assurance Co., Ltd,

Calicut, Trivandrum, Mangalore, Coimbatore,
Madras, Bangalore, Madura, Bombay & Udipi.

ಮುಂದಿನ ಸುಖ ಸೌಕರ್ಯಕ್ಕಾಗಿ ಇಂದೇ ಮುಂಜಾಗ್ರತೆ ವಹಿಸುವುದು

ಜೀವಾತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪವನ್ನಾದರೂ ಉಳಿಸಬೇಕೆನ್ನುವವರಿಗೆ ಅತ್ಯನುಕೂಲವಾದ ಜನತಾ ವಿಮಾಸಂಸ್ಥೆ

ದಿ ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿವಾಸಿವಯಸ್ಕರು ನಿಜನ್ಸಾಮಾನ್ಯರೂ ಬರೆಯಿರಿ.

ಕಾಶ್ಮೀರ ಯುದ್ಧ ನಿಂತಿತು--

ಹೊಸ ವರುಷದ ಪ್ರಥಮ ದಿನ ಕೊನೆಯ ಕ್ಷಣದಲ್ಲಿ!

1948ರ ಮೊದಲನೇ ದಿನ ಮುಗಿಯುವ ಕೊನೆಯ ವಿನಿಟಿನಲ್ಲಿ ಅತಿ ಮುಖ್ಯ ಸಂಗತಿ ಸಂಭವಿಸಿತು-ಸುಮಾರು ಒಂದೂಕಾಲು ವರುಷದಿಂದ ಕಾಶ್ಮೀರದಲ್ಲಿ ನಡೆದಿದ್ದ ಯುದ್ಧದ ಗುಂಡುಹಾರಾಟ ಆ ವಿನಿಟಿನಿಂದ ನಿಂತಿದೆ. 'ಹೊಸ ವರುಷವು ಶಾಂತಿ, ಸುರಕ್ಷಿತತೆ, ಕಲ್ಯಾಣವನ್ನು ತರಲಿ' ಎಂಬ ಹಾರ್ದಿಕೆಯು ಈ ವರುಷದಲ್ಲಿ ಇದೊಂದು ಮಟ್ಟಿಗೆ ಕಾರ್ಯರೂಪದಿಂದ ಲೇ ಬಂದಿದೆ. ಇನ್ನಾ ಸಂಬಂಧದ ಮಾತುಕತೆ ಮತ್ತು ವ್ಯವಸ್ಥೆಗಳು ಆಗಲುಳಿದಿವೆ ಯಾದರೂ-ಕಾಶ್ಮೀರದ ಹೋರಾಟಕ್ಕೆ ಬಿದ್ದ ಆರ್ಧವಿರಾಮವಲ್ಲವಾದರೂ-ಇನ್ನಿದು ಕ್ರಮಬದ್ಧ ಪೂರ್ಣಗೊಳ್ಳಬಹುದೆಂದು ಭರವಸೆ ಪಡಲಂಧಾರಗಳಿವೆ.

ಭಾರತ ಸರಕಾರದ ಪ್ರಕಟಣೆ

ಹೊಸ ವರುಷದ ಪ್ರಥಮ ದಿನದಲ್ಲಿ ಭಾರತ ಸರಕಾರವು ಪ್ರಕಟಿಸಿದ, ಕಾಶ್ಮೀರ ಗುಂಡು ಹಾರಾಟ ನಿಲ್ಲಿಸುವಿಕೆಯ ಪ್ರಕಟಣೆಯ ಸಾರ ಹೀಗಿದೆ:-"ಸಂಯುಕ್ತ ರಾಷ್ಟ್ರಸಂಘವು ನೇಮಿಸಿದ್ದ ಕಾಶ್ಮೀರ ಸಮಿತಿಯವರಾದ ಮೂವರು ಸದಸ್ಯರು ಇತ್ತೀಚೆಗೆ ದಿಲ್ಲಿ ಮತ್ತು ಕರಾಚಿಗಳಿಗೆ ಭೇಟಿಕೊಟ್ಟು ತಾವು ಹೂಸತಾಗಿ ತಯಾರಿಸಿದ ಸಧ್ರಿ ಕಮಿಶನಿನ 1948ನೇ ಆಗೋಸ್ತು 13ರ ಠರಾವಿನ 111ನೇ ಭಾಗದ ಕೆಲವು ತಿದ್ದುಪಡಿ ಸೂಚನೆಗಳ ಕುರಿತು ಇಕ್ಕಡೆಯ ಸರಕಾರಗಳೊಡನೆ ಪರ್ಯಾಲೋಚನೆ ನಡೆಸಿದ್ದರು. ಈ ಸೂಚನೆಗಳು ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಿತ್ಯ ಸ್ಥಿತಿ ಸ್ಥಾಪನೆಗೊಂಡ ಮೇಲೆ ನಡೆಯ ಬೇಕಾದ ಜನಮತ ಸಂಗ್ರಹದ ಮೂಲ ನಿಯಮಗಳಿಗೆ ಸಂಬಂಧಿಸಿದವುಗಳು, 111ನೇ ಭಾಗಕ್ಕೆ ಸಂಬಂಧಿಸಿದ ಈ ಸೂಚನೆಗಳು ಅಂಗೀಕರಿಸಲ್ಪಟ್ಟಲ್ಲಿ ಆ ಮೇಲೆ ಆ ಠರಾವಿನ 1, 11ನೇ ಭಾಗಗಳನ್ನು ಕಡವಿಲ್ಲದೆ ಜಾರಿಗೆ ಮಾಡಲು ಸಾಧ್ಯವಾಗುತ್ತದೆಂದು ಕಮಿಶನ ತಿಳಿದಿದೆ. ಆದರೆ ಈ ಮಧ್ಯಸ್ಥಿಕೆಗೆ ಜಯವಾಯಿತು. ಜನವರಿ 8ಕ್ಕೆ ಸಭೆ ಸೇರಲಿರುವ ಕಾಶ್ಮೀರ ಸಮಿತಿಯ ಮುಂದೆ ಇದನ್ನಿಡುವುದಕ್ಕಾಗಿ ಅವರು ದಶಂಬರ್ ತಾ. 26ರಲ್ಲಿ ನ್ಯೂಯೊರ್ಕ್‌ಗೆ ಹೊರಟು ಹೋಗಿದ್ದಾರೆ. ಆ ಕಮಿಶನಿನ ಕೊನೆಯ ಸೂಚನೆಗಳು ಸದ್ಯದಲ್ಲೇ ಮುಂಬರಲಿವೆ. ಹೇಗಿದ್ದರೂ ಆವರ ಸೂಚನೆಗಳಿಗೆ ಇಕ್ಕಡೆಯವರೂ ಒಪ್ಪಿಕೊಂಡ ಮೇಲೆ ಇನ್ನವರ ಪೂರ್ವಭಾವೀ ಪ್ರಕಟಣೆ ಹೊರಡವರೆಗೆ ಯುದ್ಧ ಮುಂದೊತ್ತಬೇಕೆಂದಿಲ್ಲವೆಂದು ಭಾರತ ಸರಕಾರವು ನೆನಸಿತು; ಪಾಕಿಸ್ತಾನ್ ಸರ್ವಸೇನಾನಿಯು ತಾವೂ ಹಾಗೆಯೇ ಮಾಡುವೆವೆಂಬ ವಾಗ್ದಾನವಿತ್ತಲ್ಲಿ ಹಿಂದೀ ಸೈನಿಕರು ಗುಂಡು ಹಾರಾಟವನ್ನು ನಿಲ್ಲಿಸುವರೆಂದು ಪಾಕಿಸ್ತಾನ್ ಸರ್ವ ಸೇನಾನಿ ಜನರಲ್ ಸರ್. ಡೊಗ್ಲಾಸ್ ಗ್ರೇಸಿಗೆ ತಿಳಿಸುವಂತೆ ಭಾರತ ಸರಕಾರವು ತಮ್ಮ ಸರ್ವಸೇನಾನಿ ಜನರಲ್ ಸರ್. ರೋಯಿಬುಚರರಿಗೆ ಅಧಿಕಾರ ಕೊಟ್ಟಿತು. ಪಾಕಿಸ್ತಾನ್ ಸರ್ವಸೇನಾನಿಯು ತನ್ನ ಸರಕಾರದಿಂದ್ಹಅಧಿಕಾರ ಪಡೆದುಈ ಆಶ್ವಾಸನೆ ಕೊಟ್ಟಿದ್ದರಿಂದ 1948ನೇ ಜನವರಿ ತಾ.1ರ ಮಧ್ಯರಾತ್ರಿಯಾಗುವದಕ್ಕೆ 1ವಿನಿಟು ಇರುವಾಗ ಗುಂಡು ಹಾರಾಟವನ್ನು ನಿಲ್ಲಿಸುವ ಆಜ್ಞೆ ಕೊಡಲ್ಪಟ್ಟಿದೆ. ಹೊಸ ವರುಷದ ಪ್ರಥಮ ದಿನವೇ ಅಸ್ತಿತ್ವಕ್ಕೆ ಬರಲಿರುವ ಈ ನಿರ್ಧಾರವು ಜಮ್ಮು ಮತ್ತು ಕಾಶ್ಮೀರದ ಜನತೆಯ ಪಾಲಿಗೆ ಶಾಶ್ವತ ಶಾಂತಿಯನ್ನೂ ಭಾರತ ಮತ್ತು ಪಾಕಿಸ್ತಾನದ ಜನತೆಯಲ್ಲಿ ನಿಕಟ ಸ್ನೇಹಾಚಾರ ಭಾವವನ್ನೂ ತುಂಬಿಸಲಿ ದೆಂದು ಭಾರತ ಸರಕಾರವು ಯಥಾರ್ಥವಾಗಿ ಆಶಿಸುತ್ತದೆ".

ಮೇಲಿನ ಒಕ್ಕಣೆಯಲ್ಲೀ-ನೇಲಿನ ವಾಕ್ಯಗಳ ಯಥಾ ಪ್ರತಿ ಹಾರ್ದಿಕೆಯೊಂದಿಗೆ-ಅಂದೇ ಪಾಕಿಸ್ತಾನ್ ಸರಕಾರದ ಪ್ರಕಟಣೆಯೂ ಹೊಂಟಿತು.

ಹೀಗಾಗಬಹುದೆಂಬ ಪೂರ್ವ ಸೂಚನೆಯು ಹಿಂದೀ ಸೈನಿಕರಿಗೆ ಮೊದಲೇ ದೊರೆತಿದ್ದು ತಾ. 1ನೇ ಮಧ್ಯಾಹ್ನದೂಟದ ಹೊತ್ತಿಗೆ 'ಗುಂಡು ಹಾರಾಟ ನಿಲ್ಲಿಸುವ ಆಜ್ಞೆ'ಯು ಹಿಂದೀ ಸೈನಿಕರಿದ್ದ ಎಲ್ಲೆಡೆಗಳಿಗೂ ಜಾರಿಯಾಯಿತು. ತಾ.1-1-49 ಮುಗಿಯುವ ಮಧ್ಯ ರಾತ್ರಿಗೆ ಇನ್ನೊಂದೇ ನಿಮಿಷ ಎನ್ನುವಾಗ ಕಾಶ್ಮೀರ ಕಾಳಗ ನಿಂತಿತು.

ಇದರ ಹಿನ್ನೆಲೆ

ಕಾಶ್ಮೀರದ ಜಗಳ ತೀರ್ಮಾನಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಕಗೊಂಡಿದ್ದ ಕಾಶ್ಮೀರ ಸಮಿತಿಯು ಭಾರತ—ಪಾಕಿಸ್ತಾನ್—ಕಾಶ್ಮೀರಗಳನ್ನು ಸ್ವತ್ಯಕ್ಷ ಸಂದರ್ಶಿಸಿ, ಕೊನೆಗೆ 1948ನೇ ಆಗೋಸ್ತು 13ರಲ್ಲಿ ಮೂರು ವಿಭಾಗಗಳುಳ್ಳ ಗುಂಡುಹಾರಾಟ ನಿಲ್ಲಿಸುವ ನಿರ್ಣಯ'ವೊಂದನ್ನು ತಯಾರಿಸಿ ಇಕ್ಕಡೆಯವರಿಗೂ ಅದನ್ನು ತಿಳಿಸಿ ಫಲ ಬಾರದೆ ಮರಳಿ ನೋಗಿದ್ದಿತು. ಆ ಮೇಲೆ ಆ ನಿರ್ಣಯದ ಮೂರನೇ ವಿಭಾಗದ ಕುರಿತು ಕೆಲವು ತಿದ್ದುಪಡಿಗಳನ್ನು ತಯಾರಿಸಿಕೊಂಡು ಸಮಿತಿ ಸದಸ್ಯರಾದ ಅಲ್ಜೆಂಡ್ರೋ ಲೋಝಾನೋ ಮತ್ತು ಬೇರಿಬ್ಬರು ಈ ಬಾರಿ ಬಂದಾಗ ಆ ಸೂಚನೆಗಳಿಗೆ ಭಾರತದ, ಆ ಮೇಲೆ ಪಾಕಿಸ್ತಾನದ ಒಪ್ಪಿಗೆ ದೊರೆಯಿತು. ನಿರ್ಣಯದ ಮೊದಲಿನ ಎರಡು ವಿಭಾಗಗಳನ್ನು ಎರಡೂ ಕಡೆಯವರು ಮೊದಲೇ ಒಪ್ಪಿಕೊಂಡಿದ್ದರಾದ್ದರಿಂದ ಇನ್ನು ಮುಂದಿನ ವ್ಯವಸ್ಥೆಗಳು ನಡೆಯುವವಷ್ಟೇ ಬಾಕಿ. ಕಾಶ್ಮೀರ ಸಮಿತಿಯು ಈ ಒಪ್ಪಂದ ಸೂಚನೆಗಳನ್ನು ತಾನಾಗಿ ಇದೇ ತಾ 3ರಲ್ಲಿ ಅಲೋಚಿಸಿ, ಇಕ್ಕಡೆಯವರಿಗೂ ತಿಳಿಸುವ ಕ್ರಮಬದ್ಧ ಕೆಲಸವು ಬಾಕಿಯಿದ್ದರೂ, ಆದಕ್ಕಾಗಿ ಕಾಯದೆ ತಾವಾಗಿ ಶಸ್ತ್ರ ಕೆಳಗಿಟ್ಟು ನಿಲ್ಲುವ ಘೆಸಸ್ಥಿತಿ ಪ್ರದರ್ಶನಕ್ಕೆ ಭಾರತ ಸರಕಾರ ಮುಂದಾದುದನ್ನೂ ಪಾಕಿಸ್ತಾನ್ ಸರಕಾರವು ಅದಕ್ಕೆ ಕೂಡಲೇ ಒಪ್ಪಿಕೊಂಡುದನ್ನೂ ಕಾಣುವಾಗ ಶಾಂತಿ ಮತ್ತು ಪರಸ್ಪರ ಸೌಹಾರ್ದತೆಯ ಆತುರ ಇಕ್ಕಡೆಯವರಲ್ಲೂ ಯಥಾರ್ಥವಾಗಿ ಇದೆ ಎಂದು ಖಚಿತವಾಯಿತು. ತಾ 1ರಲ್ಲಿ ಅಲಹಾಬಾದಿನ ಲಕ್ಷ್ಮಿ ಮಂದಿರಾ ಮಿಕ್ಕಿದ ಸಾರ್ವಜನಿಕ ಸಭೆಯೊಂದರಲ್ಲಿ ಪಂಡಿತ ನೆಹರುಗಳು ಈ ಶುಭ ವಾರ್ತೆಯನ್ನು ಬಿಚ್ಚಿದೊಡನೆ ಪ್ರಚಂಡ ಕರ ಜಪ್ಪಾಳೆಗಳಾದುವು. ಈ ಸಂದರ್ಭದಲ್ಲಿ ಕಾಶ್ಮೀರ ಹೋರಾಟದ ಹಿಂದೀ ಸೈನಿಕರು ಮಾಗೂ ಇತರ ವಿಭಾಗಗಳನ್ನೂ, ಶೇಕ್ ಅಬ್ದುಲ್ಲಾ ಸರಕಾರ ಮತ್ತು ಜನತೆಯನ್ನೂ ಪಂಡಿತ ನೆಹರುಗಳು ಅಭಿನಂದಿಸಿದ್ದಾರೆ. ಶೇಕ್ ಅಬ್ದುಲ್ಲಾರು ಪಂಡಿತ ನೆಹರು ಮತ್ತು ಸರಕಾರ, ಭಾರತ ಜನತೆ, ಹಿಂದೀ ಯೋಧರು ಮತ್ತಿತರ ಉಪಕಾರಿಗಳೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಂಡಿತಜೀಗೆ ತಿಳಿಸಿ "ಜನತಾ ನಿರ್ಧಾರವೇ ಮಾನ್ಯತೆಹೊಂದಬೇಕೆಂಬ ನಮ್ಮ ಮತ್ತು ನಿಮ್ಮದಾದ ಸಂಕಲ್ಪಕ್ಕೆಗ ಎಲ್ಲರ ಒಪ್ಪಿಗೆ ದೊರೆತಂತಾಯಿತು. ನಮ್ಮ ನಿಮ್ಮೆಲ್ಲಾಗಿನ ಸಂಬಂಧ ಇನ್ನಷ್ಟು ಬಲಗೊಳ್ಳುವದೆಂದು ದೃಢವಾದ ನಂಬಿಕೆ" ಎಂದಿದ್ದಾರೆ. ಎಲ್ಲೆಲ್ಲೂ ಒಂದು ಸಮಾಧಾನ ವ್ಯಾಪಿಸಿಕೊಂಡಿದೆ. ಆದರೆ ಕೆಲವಂಶ ಅನಿಶ್ಚಿತತೆ ಹಾಗೂ ಅಸ್ಪಷ್ಟತೆಗಳುಳಿದಿದ್ದು ಮುಂದೆ ಹೇಗೆ ಎಂಬ ಪ್ರಶ್ನೆ ವ್ಯಾಮುಖ್ಯತೆ ಪಡೆದಿದೆ.

ಮುಂದೇನು?

ಎಲ್ಲವೂ ಸ್ಪಷ್ಟಗೊಳ್ಳಬೇಕಾದರೆ ಕಾಶ್ಮೀರ ಸಮಿತಿಯ ಹೇಳಿಕೆ ಮತ್ತದರ ಮುಂದಿನ ಹೆಜ್ಜೆಗಳನ್ನು ನೋಡಿಕೊಳ್ಳಲಿಕ್ಕೆ ದೆ. ಆದರೆ ಸಮಿತಿಯ ಆಗೋಸ್ತು 13ರ ಶಾಂತಿ ಸ್ಥಾಪನಾ ಠರಾವಿನ್ನೂರೂಪದರ್ಶನೆ ಹೀಗಿದೆ:—

ಹೋರಾಟ ನಿಲ್ಲಿಸಿದ ಬೆನ್ನಲ್ಲೇ ಒಂದು ಒಡಂಬಡಿಕೆ ಠರಾರು ಪತ್ರವಾಗಬೇಕು. ಆ ಪ್ರಕಾರ ಪಾಕಿಸ್ತಾನ್ ಸರಕಾರವು ಕಾಶ್ಮೀರದಿಂದ ತನ್ನ ಸೇನೆಯನ್ನು ಕೂಡಲೇ ಹಿಂದೆಗೆಯಬೇಕು. ಮತ್ತು ಹೋರಾಟಕ್ಕಾಗಿ ಕಾಶ್ಮೀರ ನುಗ್ಗಿರುವ ಗುಡ್ಡಗಾಡುಳಿವನ್ನೂ ಪಾಕಿಸ್ತಾನ್ ಪ್ರಜೆಗಳನ್ನೂ ಅಲ್ಲಿಂದ ವಾಪಾಸು ಮಾಡಲು ತನ್ನಿಂದ ಸಾಧ್ಯವಿದ್ದುದೆಲ್ಲವನ್ನೂ ಪಾಕಿಸ್ತಾನ ಮಾಡಬೇಕು. ಇದಕ್ಕೆಪ್ರತಿಯಾಗಿ ಭಾರತ ಸರಕಾರವು ಇಂತಹ ಸ್ಥಿತಿಯಲ್ಲಿ ಅನಗತ್ಯವಾಗುವ ತನ್ನ ಸೇನೆಗಳ ಭಾಗಗಳನ್ನು ಕ್ರಮವಾಗಿ ಹಿಂತೆಗೆದುಕೊಳ್ಳುವುದನ್ನು ಆರಂಭಿಸಬೇಕು. ಕಾಶ್ಮೀರ ಭದ್ರತೆಗಾಗಿ ಅಲ್ಲಿಯ ಅಡಳಿತೆಯು ಸಹಾಯಕ್ಕಾಗಿ ಬೇಕಾದಷ್ಟು ಸೇನೆಗಳನ್ನು ಹಿಂದೀ ಸರಕಾರ ಅಲ್ಲಿ ಇಡಬಹುದು. ಪಾಕಿಸ್ತಾನ್ ಸೇನೆಗಳು ಬಿಟ್ಟು ಹೋದ ಭಾಗಗಳ ಆಡಳಿತೆ ಕಾಶ್ಮೀರ ಸಮಿತಿ ನೇಮಿಸುವ ಕಾಶ್ಮೀರ ಸರಕಾರದ ಅಧಿಕಾರಿಗಳ ಕೈಯಲ್ಲಿರಬೇಕು. ಜನಮತಸಂಗ್ರಹದ ಮುಖ್ಯಾಧಿಕಾರಿಯನ್ನು ಕಾಶ್ಮೀರ ಸರಕಾರದ ನೇಮಕ ಮತ್ತು ಅಧಿಕಾರಕ್ಕೊಂದಿದನ್ನಾಗಿದ್ದು ರಾಷ್ಟ್ರ ಸಂಘದಿಂದ ನಾಮಿ ರ್ಜಿಸಲ್ಪಡಬೇಕು ಇರುತ್ತನೆ. ಕಾಶ್ಮೀರವು ಸೇರಬೇಕು ಭಾರತದೊಂದಿಗೋ ಪಾಕಿಸ್ತಾನದೊಡನೆಯೋ ಎಂಬುದೆ ಈ ಮತ ಸಂಗ್ರಹ ಪರೀಕ್ಷೆಗೆ ಬರಬೇಕಾದ ಮುಖ್ಯ ಪ್ರಶ್ನೆ. ಅದರ ವಿವರಗಳು ಇನ್ನು ತಿಳಿದು ಬರಬೇಕಲ್ಲದೆ, ಮತದಾರರ ಯಾದಿ ಮತ್ತು ಮತದಾನ ಸ್ಥೈತ್ರಗಳ ರಚನೆ, ಕಾಶ್ಮೀರಗಳ್ಳದವರನ್ನು ಹೊರಗಿಡುವ ರೀತಿ ಮತ್ತಿತರ ಕಾರ್ಯಗಳಾಗಲುಳಿದಿವೆ.

ಪೆಲಸ್ತೈನ್, ಇಂಡೊನೇಶಿಯಗಳಲ್ಲಾದಂತೆಯೇ ಸಂಯುಕ್ತ ರಾಷ್ಟ್ರ ಸಂಘದ ಸಮಿತಿಯ ಈ ಪ್ರಥಮ ಚಿಕಿತ್ಸೆಯು ತಾತ್ಕಾಲಿಕವಾಗಲಾರದೆನ್ನಲು ಸಂಶಯವಿಲ್ಲ. ಆದರೂ ಹೆಚ್ಚಿನಂಶ ಶಾಶ್ವತ ಶಾಂತಿ ಸ್ಥಾಪನೆಯಾಗುವ ಭರವಸೆಯಿದೆ. ಯಾಗಾದರೂ ಭಾರತ-ಪಾಕಿಸ್ತಾನಗಳೊಳಗಿನ ವೈಷಮ್ಯ ನಿವಾರಣೆಗೊಂಡು ಎರಡು ರಾಷ್ಟ್ರಗಳಾ ನಿಜ ಮೈತ್ರಿಯಿಂದಿದ್ದು ತಂತಮ್ಮ ರಾಷ್ಟ್ರ ರಚನಾ ಕಾರ್ಯಗಳಲ್ಲೇ ಮಗ್ನರಾಗುವ ಸುಕಾಲ ಮೂಡಲಿ!!

ದಿ ಕ್ರಿಸೆಂಟ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ 1919.)

ಹೆಡ್ ಆಫೀಸು:- ಬೊಂಬಾಯಿ, ಶಾಖೆ ಕಚೇರಿ:- ಮಂಗಳೂರು.

ಜೀವ ವಿಮಾ ಮಾಡುವವರಿಗೆ ಸರ್ವ ಸೌಕರ್ಯಗಳನ್ನೂ ಒದಗಿಸಿ ಕೊಡುವುದು.

"ನಿಮ್ಮ ಮರಣಾನಂತರವೂ ನಿಮ್ಮ ಸಂಸಾರವನ್ನು ಸಾಧ್ಯವೇ?"

"ಅಹುದು, ಇನ್ಶೂರ್ ಮಾಡಿದರೆ ಮಾತ್ರ ಸಾಧ್ಯ".

"ನೀವು ನಿಮ್ಮ ಕೆಲಸದಿಂದ ನಿವೃತ್ತರಾದರೂ ಅಥವಾ ನಿಮ್ಮ ಮರಣಾನಂತರ ನಿಮ್ಮನ್ನವಲಂಬಿಸಿರುವ ಕುಟುಂಬಕ್ಕೂ ಹಣ ಸಿಗಬೇಕೆಂದಿದ್ದರೆ ಜೀವ ವಿಮಾ ಮಾಡುವುದೊಂದೇ ಸುಲಭ ಉಪಾಯ"

"ಮರಣ ಯುಂಟಾದ ಸಂದರ್ಭದಲ್ಲಿ ಬೇರೆಯವರ್ಲಿ ಎಷ್ಟು ಹಣ ದಿವಾಜಿಟ್ ಇಟ್ಟಿದ್ದಿರೋ ಅಷ್ಟೇ ಹಣ ಸಿಗುವುದು. ಆದರೆ ಇನ್ಶೂರ್ ಮಾಡಿಸುವಾಗ ಎಷ್ಟು ಹಣ ಸಿಗಬೇಕೆಂದು ಬಯಸುವಿರೋ ಅಷ್ಟೇ ಹಣವನ್ನು ಇನ್ಶೂರೆನ್ಸ್ ಕಂಪೆನಿಯು ಜೀವವಾನಾದಲ್ಲಾಗಲಿ ಆ ಅಕಸ್ಮಿಕ ಮರಣಾನಂತರವಾಗಲಿ ಕೊಡುವುದು."

ಇನ್ಶೂರ್ ಮಾಡುವವರಿಗೆ ಉತ್ತಮ ಮತ್ತು ಭದ್ರತೆಯುಳ್ಳ ವಿಮಾ ಸಂಸ್ಥೆ.

ಉತ್ಸಾಹಿ ಏಜಂಟರಿಗೆ ಆಕರ್ಷಕ ಸವಲತ್ತುಗಳನ್ನು ಕೊಡಲಾಗುವುದು.

ಎಮ್. ಸುಂದರರಾಮ ಶೆಟ್ಟಿ, ಮೆನೇಜಿಂಗ್ ಡೈರೆಕ್ಟರ್,

ಕೆ. ಸಿ. ಭವಾನಿಶಂಕರ ಶೆಟ್ಟಿ, ಬ್ರಾಂಚ್ ಮೆನೇಜರ್,
ದಿ ಕ್ರಿಸೆಂಟ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
ಜಯಂತ್ ಬಿಲ್ಡಿಂಗ್, ಮೈದಾನ್ ರೋಡ್,
ಮಂಗಳೂರು.

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	...	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.
General Manager.

ನವಯುಗ

ಗುರುವಾರ, ೫ ಡುಪಿ, ೬-೧-'೪೯

ಈಗೇನು?

ಸಂದು ಹೋದ 1948ರ ಸಿಂಹಾವಲೋಕನ ಮಾಡಿದ ವಿಚಾರಿಗಳೆಲ್ಲರೂ, ನಾವು ಕಳೆದ ವಾರ ಪ್ರಸ್ತಾಪಿಸಿದ ಮಾದರಿಯಲ್ಲೇ, ಭಾರತವು ರಾಜಕೀಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಗಾಗಿ ಹೆಗ್ಗಳಿಕೆಯ ನ್ನೂ, ಆರ್ಥಿಕ ರಂಗದಲ್ಲಿ ತೀರಾ ಹಿಂದೆ ಬಿದ್ದದಕ್ಕಾಗಿ ನಿರಾಶೆಯನ್ನೂ ವ್ಯಕ್ತ ಪಡಿಸಿದ್ದಾರೆ. ರಾಜಕೀಯವೆಂಬುದು ಒಂದು ಲೌಲಸೆ ಮಾತ್ರವಾಗಿದೆ ಜನ ಜೀವನಕ್ಕೆ ಸಂಬಂಧಿಸಿದ್ದೇನೋ ನಿಜ, ಒಂದು ಸ್ವತಂತ್ರ ರಾಷ್ಟ್ರದಲ್ಲಿ ಜನತೆಯ ನೈತ್ಯಜೀವನದ ಸುಖ ಸೌಕರ್ಯಗಳನ್ನು ರೂಪಿಸುವ ಸಮಸ್ಯೆಗಳ ಪರಿಹಾರ ಅಭೋಗತಿ ಪಡಿಸುವ ಹೊಣೆಯು ರಾಜಕೀಯದ್ದೆಂಬುದೂ ನಿಜವೇ. ಆದರೆ ಸದ್ಯದ ಭಾರತದಂತೆ ಜನತೆಯಲ್ಲಿ ಅ ಸಂಬಂಧದ ತಿಳುವಳಿಕೆ ಮತ್ತು ಜೀವನವಿಲ್ಲದಿದ್ದರೆ–ಮತ್ತು ಈಗಿನ ಭಾರತ ಸರಕಾರದಂತೆ ಜನತೆಯ ಮುಂದೊಂದು ಕಾರ್ಯಕ್ರಮ ಸಟ್ಟಯನ್ನಿಟ್ಟು ಜನಮತದಿಂದೇನೂ ಅರಿಸಲ್ಪಟ್ಟಿರದ, ಕೇವಲ ಜನತೆಯ ಸ್ವಾಸವಾತ್ರ ಹಾಗೂ ರಾಷ್ಟ್ರಹಿತ ಸಾಧಕ ಸರಕಾರವಿದ್ದರೆ–ರಾಜಕೀಯವು ಜನ ಜೀವನಕ್ಕೆ ಸಾಕಷ್ಟು ಹೊಂದಿಕೆಯಾಗದೆ ಹೋಗುವದು ಸಂಭವನೀಯ. ಹಿಂದೀ ಸರಕಾರಗಳು–ಭಾರತ ನಾಯಕರು–ಕಳದ ವರುಷ ಮಾಡಿದ್ದ ರಾಜಕೀಯ ಹಾಗೂ ಆರ್ಥಿಕ ನಿರ್ಮಾಣಾ ಮಹತ್ಕಾರ್ಯಗಳಿಗಾಗಿ ಭಾರತೀಯೆಲ್ಲರೂ ಚಿರಋಣಿಗರಾಗಬೇಕು. ಆದರೆ ಇಷ್ಟೇ ರಾಷ್ಟ್ರದ ಜನತೆಯ ದೃಷ್ಟಿಯಿಂದ ನೋಡುವಾಗ ಇವೆಲ್ಲ ಪ್ರಗತಿಗಳ ಒಟ್ಟು ಪರಿಮಾಣವು ಸಣ್ಣದಾಗಿ ತೋರುತ್ತದೆ. ಹೈದರಾಬಾದ್ ನಿಜಯ–ನಿಜಾರುಗಳ ದಿಗ್ವಿಜಯ -ದುಷ್ಕಾರ್ಯೋಲನಗಳ ನಿರ್ಮೂಲನ, ಇತ್ಯಾದಿಗಳನ್ನೆ ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲವರು ಹಿಂದೀ ಜನಸಾಮಾನ್ಯರಲ್ಲಿ ಈಗ ಕೂಡಾ ಬಹಳ ಮಂದಿ; ಕೇಳಿ, ತಿಳಿದು ಹೆಗ್ಗಳಿಕೆ ಸಲ್ಲಿಸಲಿಕ್ಕೆಂತ ಪೆಜ್ಜೆನ ಸುಖವಾತ್ಮಿದೂ ಇಂಧನಗಳಿಂದ ಜನಸಾಮಾನ್ಯರಿಗೆ ಉನ್ನವಸ್ತ್ರಗಳ ಅಭಾವ ನಿರ್ಮಾಣಕ್ಕೆ ಸಂತೆ ಮತ್ತು ಅತಿ ಸಂಗ್ರಹಗಳ ನಿರ್ಮೂಲನ– ನಾನೂಜಕ ಪ್ರಾಸಿನಾನಗಳಲ್ಲಿ ಸಮಾನತೆ ಮೂಡಿಸುವುದು ಸ್ವತಃ ಜನತೆಯು ಅನುಭವಕ್ಕೆ ಬರುವಂತಹವನ್ನು ಅವು ಅಂಥ ಬಿಡದೆ ಆರ್ಥವಾಗಿಲ್ಲವು. ಇಂತಹ ಸತ್ಪ್ರಯೋಗಗಳು ಕಳದ ವರುಷ ಸಾಕಷ್ಟು ತೃಪ್ತಿಕರವಾಗಿ ನಡೆದಿಲ್ಲ. ಕಾಣದ ರೋಗವನ್ನು ಪ್ರಥಮತಃ ಗುಣವಡಿಸಿಕೊಂಡು ಆ ಮೇಲೆ ದೇಹ ಪುಷ್ಟಿಯ ಯೋಜನೆ ಎಂಬುದೇನೋ ಸರಿ. ರೂಪ್ಪದ ಹಾಗೂ ಜನತೆಯ ಅಸ್ತಿತ್ವ ಕ್ಕೇನೇ ಅಪಾಯಕರವಾದ ಗಂಡಾಂತರಗಳು ಬಂದಾಗ ಮೊದಲಾಗಿ ಅವುಗಳನ್ನು ನಿವಾರಿಸಿಕೊಂಡು ಆ ಮೇಲೆ ಜನತೆಯ ಜೀವನ ಮಟ್ಟ ಸುಧಾರಣೆಯ ಕಡೆಗೆ ಲಕ್ಷ್ಯ ಕೊಟ್ಟರೆಂಯತೆಂಬುದೇನೋ ನಿಜ. ಈ ಕ್ರಮವು ವಾದವಿಲ್ಲ, ಆ ರೋಗವೇ ಮುಖ್ಯತಃ ದೈಹಿಕ ನಿರ್ಮಾಣದಿಂದ ಹುಟ್ಟಿದ್ದರೆವಾಗ, ಅದರ ಚಿಕಿತ್ಸೆಯ ಕಾಲದಲ್ಲಿ ಅದಕ್ಕನುಗುಣವಾದ ಸಪ್ಯ ಮತ್ತು ರೋಗನಿವಾರಣೆಯೊಂದಿಗೆ ಕೂಡಲೇ ತಾಪಣ ಬರಿಸುವ ಸಿದ್ಧತೆಯಿರಬೇಡವೇ, ಎಂಬುದೇ ಈಗಿನ ಪ್ರಶ್ನೆ. ಈ ಪ್ರಶ್ನೆಯು ಮುಟ್ಟುಗೆ ಸಮಾಧಾನಕರ ಉತ್ತರವು, ಮಿಕ್ಕ ಪ್ರಶ್ನೆಗಳನ್ನು ಜಯಶೀಲವಾಗಿ ತೀರ್ಮಾನಿಸಿಕೊಂಡು ನ್ಯಾಯಬದ್ಧ ಹೆಗ್ಗಳಿಕೆ ಪಡುತ್ತಿರುವವರಿಂದ ಕೂಡಾ ಬರುತ್ತಿಲ್ಲ. ಇದೀಗ ನಿಜಕ್ಕೂ ರೋಚನೀಯ ಒಂದು ರಾತ್ರಿ ಒಂದು ವರುಷ ಕಳೆದುಹೋಗಿ ಹೊಸ ವರುಷ ಮೂಡಿದಂತೆಯೇ ಹಿಂದಿನ ಪರುಷ ಪ ಸ್ಥಿತಿಗತಿಗಳೆಲ್ಲವೂ ಅದರೊಂದಿಗೆ ಹೋದುವೆಂದೂ ಹೊಸ ವರುಷದಲ್ಲಿ ಹೊಸತೇ ಬಂದುವೆಂದೂ ನಿರೀಕ್ಷೆ ಸಲಸಗುವದಿಲ್ಲ, ಆದರೂ ಈ ವರುಷದ ಆದಿಯು ಕೆಲವಂಶ ಆಂತಹ ವಿಸ್ಮಯಗಳಿಂದ ಕೂಡಿದೆ. ಕಳದ ವರ್ಷವಿಡೀ ನಡೆದಿದ್ದ ಕಾಶ್ಮೀರದ ಹೋರಾಟವು ಈ ವರ್ಷದ ಹಿಡಿದ ದಿನವೇ ನಿಂತು ಹೋಯಿತು. ಇಂಡೋನೇಶಿಯದಲ್ಲಿ ಡಚ್ಚರು ನಡೆಸುತ್ತಿರುವ ಆಕ್ರಮಣದ ಸಿರಾಸ್ಥ ಒಟ್ಟಾಗಲು ಅಸ್ಯಾದ ಎಲ್ಲಾ ರಾಷ್ಟ್ರಗಳ ಸಮ್ಮೇಳನವೊಂದರ ಆಹ್ವಾನವು ನಂತಿತ ಜವಾಹರಲಾಲರಿಂದ ಹೋಗಿರುವದೆಂಬುದು ಪ್ರಥಮದಿನದಲ್ಲೇ ಅವರಿಂದ ಜಾಹೀರಾಯಿತು. ಭಾರತ ಸರಕಾರಕ್ಕೆ ರಾಜಕೀಯದಲ್ಲಿ ಇಂತಹ ದೊಡ್ಡ ಜೆಜ್ಜೆಗಳನ್ನಿಡುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಗಿದ್ದರೆ, ಜನಜೀವನದ ಸರ್ವಾಂಗೀಯ ಕಡೆಗೆ ಅಂತಹ ಲಕ್ಷ್ಯವನ್ನು ಕೊಡದಿದ್ದುದರಿಂದಲೇ ಆ ಭಾಗದಲ್ಲಿ ಅದೇ ಮಾದರಿಯ ಘನ ಜೆಜ್ಜೆಗಳನ್ನಿಡಲಾಗಲಿಲ್ಲ ಎಂದೂಹಿಸುವದಂ ಲಾಗಲೀ ಈ ವರುಷದಲ್ಲಾದರೂ ಮುಖ್ಯವಾಗಿ ಈ ಕೆಲಸವೇ ಆಗಬೇಕು ಎಂದು ಒತ್ತಿ ಹೇಳುವುದರಲ್ಲಾಗಲೀ ತಪ್ಪೇನಿದೆ? ಈ ಸಂಬಂಧವಾಗಿ ಜನತೆಯಲ್ಲಿ ಹಬ್ಬುರುವ ವಿಶ್ವಾಸವನ್ನು ಇನ್ನು ಬೆಳೆಯಲು ಬಿಡುವದು ಸರಿಯಲ್ಲ—ತಾವಿದುವರೆಗೆ ನಿರ್ವಾಸಿಸಿಕೊಂಡು ಅವಾಯಗಳ ವಿಚ್ಛೇದಕ್ಕೇನೇ ಇದೂ ಎರಡನ ವರೆಗೆ ಭಾರತ ನಾಯಕರು ಕಾರ್ಯಾಚರಿಸಲು–ಎಂದೀ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ.

ಮುಖ್ಯ ಸುದ್ದಿಗಳು

❖ ಇಜಿಪ್ತಿನ ಪ್ರಧಾನ ಮಂತ್ರಿ ನೊಕ್ರಾಶಿ ಪಾಶರನ್ನು ಡಿಸೆಂಬರ್ ತಾ. 28ರಲ್ಲಿ ಓರ್ವ ತರುಣನು ಗುಂಡಿಟ್ಟು ಕೊಂದಿದ್ದಾನೆ. ಆ ಕೊಲೆಯೂ ಗಾಂಧಿಜೀ ಕೊಲೆಯು ಮಾದರಿಯಲ್ಲೇ–ಓರ್ವ ತರುಣನಿಂದ ಪ್ರಥಮತಃ ನಮಸ್ಕಾರ; ಆ ಮೇಲೆ ರಿವಾಲ್ವರಿನಿಂದ ಅಂ ಗುಂಡುಗಳ ಹೊಡೆತ.

❖ ಅನ್ಸಾಮಿಷ ಗವರ್ನರ್ ಆಗಿದ್ದ ಸರ್. ಆರ್ಚರ್ ಹೈದರಿಗಳು ತಾ 28ರಲ್ಲಿ ರಕ್ತಪೊತ್ತಡದಿಂದ ತನ್ನ 54ನೇ ವಯಸ್ಸಿನಲ್ಲಿ ಅಕಸ್ಮಾತ್ ನಿಧನಗೊಂಡರು. ಏ. ಸಿ. ಯಸ್. ಆಗಿದ್ದ ಸರ್. ಹೈದರ್ ಕೇಂದ್ರಸಂಕಾರದಕಾರ್ಯದರ್ಶಿಗಳಾಗಿ ಟೇಬ್ಲ್ ಕಾನ್ಫರೆನ್ಸಿನ ಸದಸ್ಯ ಮುಂತಾದ ದೊಡ್ಡ ಸ್ಥಾನಾಪನ್ನರಾಗಿದ್ದರಲ್ಲದೆ ಸ್ವತಂತ್ರ ಭಾರತದ ಪ್ರಥಮ ಮುಸ್ಲಿಮ್ ಗವರ್ನರ್ ಆಗಿದ್ದರು.

❖ ಪಶ್ಚಿಮ ಬಂಗಾಳದ ಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಮೋಹಿನಿ ಮೋಹನ್ ಬರ್ಮಾನರು ದಶಂಬರ್ ತಾ. 31ನೇ ರಾತ್ರಿ ಕಲ್ಕತ್ತದ ತನ್ನ ಹೊಟೇಲಿನಲ್ಲಿ ಮೂರು ಗುಂಡಿಡಲ್ಪಟ್ಟು ರಕ್ತ ಸೋರಿ ತ್ತಾ ಬಿದ್ದಿದ್ದವನ್ನು ಆಸ್ಪತ್ರೆಗೆ ಸಾಗಿಸಿದಾಗ ಮುಂಜಾನೆ ಸತ್ತುಹೋದರು. ತಾನೇ ಅವರಿಗೆ ಗುಂಡಿಟ್ಟವನೆಂದು ಪೃತ್ಯ ಪತ್ರ ಬರೆದು ತನ್ನ ಕುಟ್ಟಿಗೂ ಗುಂಡಿಟ್ಟುಕೊಂಡಿದ್ದ 22 ವರುಷ ಪ್ರಾಯದ ಅವರ ಪುತ್ರನೇ ಸೇವಕನೂ ಆಗಿದ್ದನೆಂಬುದು ಹೊಸ್ತಿನಲ್ಲಿ ತೀರಿಕೊಂಡಿದ್ದಾನೆ.

❖ ಭಾರತದ ಘಟನಾ ಸಮಿತಿಯಲ್ಲಿ ಕೇಂದ್ರ ಅಧ್ಯಕ್ಷ, ಉಪಾಧ್ಯಕ್ಷ, ಮಂತ್ರಿ ಮಂಡಲಗಳ ಹಕ್ಕು ಸಂಬಂಧ, ಕೇಂದ್ರ ಪಾರ್ಲಿಮೆಂಟಿನ ರಚನೆ ಮುಂತಾದ ಪ್ರಾಮುಖ್ಯ ರಾಜ್ಯಾಂಗ ಶಾಸನಗಳುಗುತ್ತಿವೆ.

❖ ಇಂಡೋನೇಶಿಯಾ ಸಮಸ್ಯೆಯ ಪರ್ಯಾಲೋಚನೆಗಾಗಿ ಭಾರತ ಸರಕಾರವು ಕರೆದ ಏಸ್ಯಾ ರಾಷ್ಟ್ರಗಳ ಸಮ್ಮೇಳನಕ್ಕೆ ಉತ್ಸಾಹದ ಅನುಮೋದನೆಯು ಸಂಬಂಧಪಟ್ಟ ರಾಷ್ಟ್ರಗಳಿಂದ ತೋರಿ ಬಂದಿದೆ.

❖ ಭಾರತದಲ್ಲಿ 14 ವರುಷಗಳಿಂದಿರುವ ರಿಜರ್ವ್ ಬೇಂಕು ಇದೇ ತಾ. 1ರಿಂದ ಸರಕಾರದ ಪ್ರಸ್ವತ್ಯ ಆಡಳಿತಯಲ್ಲಿ ಜಾರಿಗಾಗಹತ್ತಿದೆ. 100 ರೂ. ಪಾಲಿಂದಕ್ಕೆ ತೆರ ಸೆಲೆಯ ಬಡ್ಡಿ ವಡೆಯುವ ರೂ. 118-10ರ 20 ವರುಷಾವಧಿಯ ಸರಕಾರೀ ಬೋಂಡುಗಳು ಪಾಲುಗಾರರಿಗೆ ದೊರೆಯುವವು.

❖ ಚೈನದ ಹೃದಯ ಪ್ರದೇಶ ನಾನ್ಕಿಂಗ ವಂಭಾಗದಲ್ಲಿ 1000000 ಕಮ್ಯೂನಿಸ್ಟ್ ಸೈನಿಕರು ಕೊನೆಯ ಹೊಡೆತ ಕೊಡಲು ತಯಾರಾಗಿದ್ದಾರೆ. ಕಮ್ಯೂನಿಸ್ಟರಲ್ಲಿ ಸಂಧಾನದ ಯತ್ನಾರ್ಥ ತುರವಿದ್ದಲ್ಲಿ ತಾನು ರಾಜಿಕೊಡಲು ತಯಾರೆಂದು ಚಿಯಾಂಗ್ ಕೈಶೇಕರು ಹೊಸವರುಷದ ಸಂದೇಶದಲ್ಲುಂಬಿದ್ದರಲ್ಲದೆ ಅವರ ರಾಜೀನಾಮೆ ಖಂಡಿತವನ್ನಿಸಿದೆ. ಸಂಧಾನ ಪಹಣಾಟುಗಳಾರಂಭವಿನಿವೆ ಆದರೆ ಕಮ್ಯೂನಿಸ್ಟರು ತಮ್ಮ ದೀಗುರಿಯನ್ನೇ ಮುಟ್ಟುವ ಸಂಕಲ್ಪವಡಿದಿದ್ದಾರೆ.

❖ ಯೂರೋಪಿಗೆಲ್ಲಾ ಸೇನಾ ಸಹಾಯಕರಾಗುವ ಮೊದಲನೆಯ ಜನವರಿ 3ರಲ್ಲಿ ಸೇರಲಿರುವ ತನ್ನ 70ನೆಯ ವರ್ಷದ 81ನೇ ಕಾಂಗ್ರೆಸಿನ ಪ್ರಥಮಾಧಿವೇಶನದ ಮುಂದೆ ಬರಲಿವೆ

ಶ್ರೀ ಕೆ. ವೆಂಕಪ್ಪ ಶೆಟ್ಟರ ನಿಧನ

ಆತ್ಯಾಧಿ ಶ್ರಾಸುಭಾಗರದ್ದು, ಆಸುಪಾಸಿನಲ್ಲಿ ವರ್ಚಸ್ಸನ್ನೂ, ಸರಕಾರೀ ಅಧಿಕಾರಿಗಳ ವಿಶ್ವಾಸವನ್ನೂ ಗಳಿಸಿದ್ದ ಶ್ರೀ. ಕೆ. ವೆಂಕಪ್ಪ ಶೆಟ್ಟರು ತನ್ನ 71ನೇ ವಯಸ್ಸಿನಲ್ಲಿ ತಾ 30-12-48ರಲ್ಲಿ ನಿಧಿ ವಶರಾದರೆನ್ನಲು ವಿಷಾದಿಸುತ್ತೇವೆ. ಶ್ರೀ. ಶೆಟ್ಟರು ಕರ್ತೃತ್ವಶಾಲಿ ಮತ್ತು ಪ್ರತಿಷ್ಠಾವಂತರಾಗಿದ್ದರು. ಮೂತ್ರರೋಗ ಪೀಡಿತರಾದ್ದ ಅವರು ಉಡುಪಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಬಂದು ಕಾಲು ‹ಪಿರೇಶನ್' ಆಪ ಕೆಲವೇ ದಿನಗಳಲ್ಲಿ ಕಾರಾಧಿನರಾದರು. ಶೆಟ್ಟರ ಆತ್ಮಕ್ಕೆ ಶಾಂತಿಯನು ಕೋರಿ,ಅವರ ಮಕ್ಕಳು ಹಾಗೂ ಬಂಧು ಮಿತ್ರರೊಂದಿಗೆ ನಮ ಸಾಂತಾಪ ಸೂಚಿಸುತ್ತೇವೆ

ಅಂತರಂಗ

ಪ್ರತಿವಾರವೂ ಎರಡಾಣೆಯ ಪುಸ್ತಕರೂಪದಲ್ಲಿ ಇದೇ ತಾ 4-1-49ರಿಂದ ಪ್ರಕಟವಾಗಹತ್ತಿದೆ. ಮೊದಲನೇ ಪುಸ್ತಕ '1949ರ ಬಿರುದಾವಳಿ' ಹೊರಬಿದ್ದಿದೆ. ಜಾಹೀರಾತುದಾರರೂ ಚಂದಾದಾರರಾಗುವವರೂ ತ್ವರೆಮಾಡಿರಿ:–

ಮ್ಯಾನೇಜರ್, 'ಅಂತರಂಗ' ಉಡುಪಿ, ದ. ಕ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins' Boarding & Lodging

Sadanand Rao, Kunjoor,
Manager.

(೫ನೇ ಪುಟದಿಂದ)

ಅತಿ ಪ್ರಸರಣ ನಿರೋಧ

ಆರ್ಥಿಕ ಪರಿಸ್ಥಿತಿಗೆ ಮುಖ್ಯ ಹೇತು ವೆಂದು ಹಲವರು ಗಣಿಸಿದ್ದ 'ಅನುಕ್ರಮವಾಗಿ ನಿಯಂತ್ರಣ ರದ್ದು' ಮಾಡುವ ಘೋರಣೆಯನ್ನು 1948ರ ಆಧಿ ಭಾಗದಲ್ಲಿ ಸರಕಾರವು ಸೂಚಿಸಿತ್ತು. ಜೈಲು ಜೀವನದಲ್ಲೇ ತ. ಬೇತಿ ಪಡೆದಿದ್ದ ರಾಜಕೀಯ ಅಡಳಿತಗಾರರಾ ಪಾಲಿಗೆ ಹಣಕಾಸಿನ ವಿಷಯಗಳು ಹುಸುಬಿಗಿವಿನವಾಗುವಂಥ ವುಗಳೇ. ಹೀಗಾಗಿ ಹಣಕಾಸಿನ ಸಂಬಂಧದ ಒಂದು ಮಂತ್ರಿಪದವನ್ನು ಸದ್ಯದಲ್ಲೇ ಸ್ಥಾಪಿಸಲಾಗುವದೆಂದು ಆಗೋಸ್ತು 11 ರಲ್ಲಿ ಪ್ರಧಾನ ಮಂತ್ರಿಗಳು ನವಾಹಕ ಪಾರ್ಲಿಮೆಂಟಿನಲ್ಲಿ ಘೋಷಿಸಿದ್ದರು. ಆದರೂ ಆ ಕ್ರಮ ಸ್ವಪ್ನ ಹೆಜ್ಜೆಯಿಟ್ಟಿದಾವುದೂ ತೋರಿಬಂದಿಲ್ಲ. ಪರಿಪಡ ಕಾನೆಯ ಭಾಗದಲ್ಲಿ ಅಧಿಕತಜ್ಞರು ಉದ್ದಿಸಿವಂಒರ್ಕರ ಬೇಂಕರ ಸಲಹೆಗಳನ್ನು ಸಡಕೊಂಡು ಭಾರತ ಸಂಕಾರವು ಅತಿಪ್ರಸರಣದ ಮೇಲೆ ಹತುರ್ಮುಖಿ ಧಾಳ ನಡೆಸುವ ಘೋಷಣೆಯೊಂದನ್ನು ಒಕ್ಟೋಬರ್ 4ರಲ್ಲಿ ಘೋಷಿಸಿತು. (1) ಸರಕಾರದ ಖರ್ಚನ್ನು ತಗ್ಗಿಸುವುದು ಮತ್ತು ಉತ್ಪನ್ನವನ್ನು ಹೆಚ್ಚಿಸುವದು. (2) ಆಹಾರ ಮತ್ತು ವಸ್ತ್ರಗಳ ಮೇಲೆ ಪುನರ್ನಿಯಂತ್ರಣ ಹೇರುವುದು ಮತ್ತು ಇತರ ಅವಶ್ಯಕ ಸಾಮಗ್ರಿಗಳ ವಿತರಣಾವ್ಯವಸ್ಥೆಯನ್ನು ಉತ್ತಮಗೊಳಿಸುವದು. (೩) ಹೆಚ್ಚಿನ ಉತ್ಪಾದನೆಗೆ ಪ್ರೋತ್ಸಾಹಿಸುವುದು (1) ಜನತೆಯ ಆಧಿಕ ವ್ಯಾಪಾರಶಕ್ತಿಯನ್ನು ತಗ್ಗಿಸುವದು. ಇವುಗಳನ್ನು ಅಸ್ತಿತ್ವದಲ್ಲಿ ತಾವುವ ವಿವಿಧ ವಿಧಾನಗಳು ಜಂಗಿಗೆ ಬಂದಿವೆ. ಅತಿ ಪ್ರಸರಣ ನಿವಾರಣಾ ಹೆಜ್ಜೆಗಳು ಇತ್ತೀಚೆಗಿನವಾದ್ದರಿಂದ ಅವುಗಳೇಗ ರಂಗಕ್ಕೆಯ್ದಿರುವ ಶಕ್ತಿ ಯೋಗ್ಯತೆಗಳ ಪರಿಣಾಮವನ್ನು ತಿಳಿಯುವ ಕಾಲಬಂದಿಲ್ಲ.

ನಿರಾಶೆಯ ವರುಷ

ರಾಷ್ಟ್ರೀಯ ಹಾಗೂ ಜನತಾ ಸರಕಾರಗಳು ಒಂದೊಡನೆಯೇ ರಾಷ್ಟ್ರದಲ್ಲಿ ದೊಡ್ಡದೊಡ್ಡ ನೀರ್ಪೇಗೆಗಳಿದ್ದವು. ಕೊನೆಯ ಪಕ್ಷ ಅತ್ಯಂತ ನಾಜೂಕಿನಿಂದ ಸ್ವಾರಂಭಿಸಬಹುದೆಂಬುದನ್ನಾದರೂ ಎಲ್ಲರೂ ಪೇಕ್ಷಿಸಿದ್ದರು. ನಿಜಕ್ಕೂ ಕವಿ ಶನುಗಳೂ ಸಮಿತಿಗಳೂ ಕೊಡಿದ್ದುವು; ಶುಭಿಸಿದ್ದುವು; ಅಧಿಕಾರದಲ್ಲಿರುವವರ ಅಮೋಘವಾದ ಭಾಷಣಗಳೂ ಘನವಾದ ನಿರ್ಧಾರಗಳೂ ಆಗಿದ್ದವು. ಆದರೆ ಒಳಗಿನ ಹೃದಯ ಮತ್ತು ವೇಲಿನ ದೇವರ ಕಡೆಗೆ ನೋಡಿಕೊಂಡು ಸರಿಯಾದ ಶೋಧನೆ ನಡೆಸಿದಲ್ಲಿ, ನಾವು ಹಲವು ಕ್ಷೇತ್ರಗಳಲ್ಲಿ ಹೆಜ್ಜೆ ಮುಂದಿಟ್ಟಿದ್ದು ತೀರಾ ಕಡಿಮೆಯಾಪುದ ಪ್ಪೇ ಅಲ್ಲ, ಇನ್ನು ಕೆಲವೆಡೆಗಳಲ್ಲಿ ಆಗಿರುವ ಅಭಿವೃದ್ಧಿಗಳನ್ನು ತಡೆಗಟ್ಟುವ ದಕ್ಕೆ ಕೂಡಾ ಅಸಮರ್ಥರಾಗಿದ್ದೇವೆ. ತಾವು ರಾಜಕೀಯ ಹಾಗೂ ಆಡಳಿತೆಯ ಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿ ಪಡೆದಿರುವೆವೆಂದೂ ಆದರೆ ಆರ್ಥಿಕ ಕ್ಷೇತ್ರದ ಕಮ್ಮ ಪ್ರಗತಿ ಅಸಮಾಧಾನಕರವೆಂದೂ ಡಾ। ಜೋನ್ ಮಥಾಯಿಗಳು ಸ್ವತಃ ಒಪ್ಪಿಕ್ಕಿದ್ದರು. ನಿಜಕ್ಕೂ ವಸ್ತುಸ್ಥಿತಿ ಕೊಡುತ್ತಿರುವ ಸ್ವರ ಇದೇ. ಹೀಗಾಗಿ ಈ ವರುಷವು ಕಳೆದುಹೋಗುತ್ತಿರುವಾಗ ಎಲ್ಲೆಲ್ಲೂ ಗಾಢ ನಿರಾಶೆ ಕವಿದುಕೊಂಡಿದೆ. ಆದರಲ್ಲೂ ಸಾರ್ವಜನಿಕರ ಅತೃಪ್ತಿ ಬೆಳೆಯಹತ್ತಿರುವುದು ದೊಡ್ಡ ದುಶ್ಚಿಹ್ನೆಯೇ ಸರಿ. ಬಹುಶಃ ನಾವು ನಮ್ಮ ನಿರೀಕ್ಷೆಯನ್ನು ಬಹಳ ಎತ್ತರಕ್ಕೆ ಹಾರಿಸಿಟ್ಟಿದಬಹುದು. ಪ್ರಯುಕ್ತ 200 ವರುಷಗಳ ಪರದಾಸ್ಯ, ರಾಷ್ಟ್ರವಿಭಜನೆ, ಗಲಭೆಗಳು, ಜನತಾಜಳವಳಗಳು, ಯಂತ್ರಗಳ ಅಭಾವ, ಮತ್ತಿತರ ಸ್ಥಿತಿಗತಿಗಳೇ ಇದಕ್ಕೆ ಕಾರಣವೆನ್ನುವ ವಾದಬರಬಹುದು. ಆಥವಾ ಡಾ। ಜೋನ್ ಮಥಾಯಿಗಳೇ 1947ನೇ ಆಗೋಸ್ತಿನ ಮೊದಲೊಮ್ಮೆ ಹೇಳಿದ್ದ "ಪರಂಪರಾಗತ ಹಕ್ಕುಬಾಧ್ಯತೆಗಳೂ ಸ್ವಾತಂತ್ರ್ಯ ಹೋರಾಟದಲ್ಲಿ ತಾವು ತ್ಯಾಗಗೊಂಡಿವೆ ಸ್ವಾತಂತ್ರ್ಯದೊರೆತೊಡನೆ ಈ ಹಳೇ ಹಕ್ಕುಭಾದ್ಯತೆಗಳೇ ಅಧಿಕಾರ ಸ್ಥಾನಗಳನ್ನೂ ಪ್ರತಿಷ್ಠೆಯನ್ನೂ ಗಳಿಸಿಕೊಂಡಿವೆ. ಈಗ ಮುಂದಿರುವ ಕಾರ್ಯವೆಂದರೆ ಈ ಹಳೇ ಹಕ್ಕು ಬಾಧ್ಯತೆಗಳ ಹಿಂಡಿತದಿಂದ ರಾಷ್ಟ್ರವನ್ನು ವಿಮೋಚನೆಗೊಳಿಸುವುದೇ" ಎಂಬ ಮಾತೇ ಸತ್ಯವಿರಬಹುದು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ

ಫಿಲ್ಮ್‌ಸ್ಥಾನದವರ

"ಸಿಂಧೂರ್"

ತಾಮಿಳ್, ತೆಲುಗರ್, ಕನ್ನಡಿಗರ್ ಸಾಹು, ಸಾರೂ.

ಕಾರ್ಕಳ ೫-1-1949ರಿಂದ

ಭಕ್ತಿಪರ ಚಿತ್ರ

ಕೃಷ್ಣಭಕ್ತ ಭೋಧನ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿಂದ.

ನಿಮ್ಮ ಜೀವನಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್ ಲಿಮಿಟೆಡ್

ಹೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಖಂಡಿತವಿಸಸು, ಇವುಗಳ ರುಚಿಯನು ಕೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಉನ್ಮಾದ, ಚಿತ್ತ ಭ್ರಮೆಯ ನಿವಾರಣೆ

ಈ ಔಷಧ ಸೇವನೆಯಿಂದ ಎಂಥಹ ಹುಚ್ಚು, ಉನ್ಮಾದ, ಚಿತ್ತ ಭ್ರಮೆಗಳೂ ನಾಶವಾಗುವವು. ಬುದ್ಧಿಶಕ್ತಿಯನ್ನು ವೃದ್ಧಿಸುವುದು. ಹುಟ್ಟಿನಿಂದ ಬಂದ ದೌರ್ಬಲ್ಯವನ್ನು ಪರಿಹಾರ ಮಾಡುವುದು. ಹುಟ್ಟಿನಿಂದ ಕಿವುಡರಾಗಿದ್ದವರಿಗೆ ಕೇಳುವ ಶಕ್ತಿ ಬರುವುದು. ಸರ್ವ ಸರ್ವಾಂಗದ ದೌರ್ಬಲ್ಯಕ್ಕೂ ಹಿತಕಾರಿ.

ದಿ ಗುಡ್ಡಾ ಫಾರ್ಮಸ್ಯೂಟಿಕಲ್ ವರ್ಕ್ಸ್

ಮಂದ್ಯಾಸ್ ಸಂಸ್ಥಾನದ ವಿತರಣ ಅಧಿಕಾರಿಗಳು:—

ಮೆಸರ್ಸ್ ಯುನೈಟೆಡ್ ಇಂಡಿಯಾ ಬ್ಯೂಸಿನೆಸ್ ಬ್ಯೂರೋ,

ಕೋಯಲ್ ಮಹಾಲ್, ಉಡುಪಿ, (ದಕ್ಷಿಣ ಭಾರತ)

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಇದೇ ತಾ. 7ರಲ್ಲು ಶ್ರೀ ಜಿ. ಶಂಕರ ಪೈ ಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಆರ್. ಎಸ್. ಎಸ್. ಕಡೆಗೆ ಮಹಾಜನರು ಸಹಾನುಭೂತಿ ತೋರಿಸಬಾರದೆನ್ನುವಅಕ್ಕೂಬರ್ ತಿಂಗಳಲ್ಲಿ ಅಕ್ಕಿಯ ಸ್ಟೊಪ್ಪಿಸಿದವರಿಗೆ ಇನ್ನೂ ಹಣವು ಸಿಕ್ಕಿಲ್ಲವಾದುದರಿಂದ ಆರ್ಥಿಕವಾಗಿ ಬೇಗನೆ ಹಣ ಬರ್ವಾಡೆಯ ಏರ್ಪಾಡಾಗಬೇಕೆನ್ನುವ, ರಾಜಕೀಯ ಸಂತ್ರಸ್ತರಿಗೆ ಯೋಗ್ಯ ಭೂದಾನವು ಬೇಗನೆ ಆಗಬೇಕೆನ್ನುವ, ಗಾಂಧಿ ರಾಷ್ಟ್ರೀಯ ನಿಧಿಗೆ ಮಾಸಾಹಜನರು ಮುಕ್ತ ಹಸ್ತದಿಂದ ಹಣ ಸಹಾಯವೀಯಬೇಕೆನ್ನುವ ನಿರ್ಣಯಗಳಾದುವು.

ಸತ್ಕಾರ ಕೂಟ:—ಇಲ್ಲಿಯ ಬೋರ್ಡು ಹ್ಯಾಸ್ಕೂಲಿನ ಯಶಸ್ವೀ ಮುಖ್ಯೋಪಾಧ್ಯಾಯರಾಗಿ ಈಗ ತಾನೇ ನಿವೃತ್ತರಾದ ಶ್ರೀ ಆರ್. ಫೆರ್ನಾಂಡೀಸರಿಗೆ ಆ ಶಾಲೆಯ ಹಳೆ ವಿದ್ಯಾರ್ಥಿಗಳು ತಾ. 2ರಲ್ಲಿ ಸರ್ಕಿಲ್ಸ್ ಹಾಲಿನಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಈಸಮಾರಂಭನ ಅಧ್ಯಕ್ಷತೆಯನ್ನು ಡಾ. ಟಿ. ಮಾಧವ ಪೈಗಳು ವಹಿಸಿದ್ದು ಶ್ರೀಗಳಾದ ಡಾ. ಎಸ್. ಆರ್. ಪೈ, ಟಿ. ಅನಂತ ಪೈ, ರಮೇಶ ಪೈ, ಬಿ ಶ್ಯಾಮರಾಯ ಸೆಟ್ಟಿ, ಆರ್. ಆರ್. ಕುಂಜೂರು, ಜಗನ್ನಾಥ ಸೆಟ್ಟಿ, ಮಿಸ್. ದುರ್ಗಾವತಿ ಮೊದಲಾದವರು ಮಾನ್ಯ ಅತಿಥಿಯ ಗುಣಗಾನಮಾಡಿದರು. ಶ್ರೀ ಫೆರ್ನಾಂಡೀಸರಿಗೆ ಒಂದು ಚಿನ್ನದ ಚೈನು ಮತ್ತು ಶ್ರೀ ಆಥವಾರು ಸ್ವಾಮಿಗಳವರ ಅಮೃತಹಸ್ತದಿಂದ ರೂಪಾಯಿ 275/- ಸಂಭಾವನೆಯಾಗಿ ಕೂಡಲಾಯಿತು. ಶ್ರೀ ಫರ್ನಾಂಡೀಸರು ಉತ್ತರ ಕೊಡುತ್ತಾ ತನ್ನ ಸ್ಥಾನಮಾನಗಳಿಗೆ ಸಹಾಯಪಡಿದ ಸರ್ವರಿಗೂ, ಸಂಸ್ಥೆಗಳಿಗೆ ಅಭಾರ ಸೂಚಿಸಿ ಹೃದಯಸ್ಪರ್ಶಿ ಭಾಷಣಮಾಡಿದರು. ಶ್ರೀ ಕೆ. ಕೆ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಜ. ತೈ ಶ್ರೀಕೃಷ್ಣ ಮಂದಿರ ಸಂಕ್ರಾಂತಿ ಬಾತ್ರಯು ಇದೇ ತಾ 8ನೆ ಶನಿವಾರ ಸ್ವಾರ್ಥಭಾವಿಗೆ ತಾ. 13ರಲ್ಲು ಮಕರ ಸಂಕ್ರಮಣೋತ್ಸವ, ತಾ 14ರಲ್ಲು ಹಗಲು ತೇರು, ಅಷ್ಟಭೋತ್ಸವಾದಿಗಳಿದ ನಮುಕ್ತಾಯವಾಗಲಿರುವುದು.

ಕೊಡಡ್ಕಲ್ ಸ್ಮಾರಕ ನಿಧಿ ಈ ಕಾ ಸಂಗ್ರಹನಾದ ಮಾತ್ಕ್ಯಸಾರವಾಗಿ ವರ ತಿಂಗಳ ಕೊನೆಯ ವಾರದಲ್ಲಿ ಅವರ ತೈಲಚಿತ್ರ ಅನಾವರಣವನ್ನೂ ಸ್ಮರಣೆಯಲ್ಲಿ ಸ್ಮಾರಕ ಗ್ರಂಥ ಪ್ರಕಾಶನವನ್ನೂ ಮಾಡಬೇಕೆಂದು ಸಮಿತಿಯವರು ಅಲೋಚಿಸಿರುವರೆಂದೂ ಉಳಿದ ಉದ್ದೇಶಗಳನ್ನೂ ನಿಧಿ ಸಂಗ್ರಹನಾದಂತೆ ನೆರವೇರಿಸಲಿರುವರೆಂದೂ ತಿಳಿದುಬರುತ್ತದೆ.

ಪ್ರಕಟಣೆ

ಉಡುಪಿ ತಾಲೂಕು ನಮ್ಮ ಪಾಂಗಾಳ ಶ್ರೀ ಜನಾರ್ದನ ದೇವಸ್ಥಾನದ ಮಾನ್ಯ ಟ್ರುಸ್ಟಿಯವರ ಅಧಿಕಾರ ನಡೆಯುವ ಕಾಲಾವಧಿ ಉತ್ಸವವು ಇದೇ ತಾ 12 ಮತ್ತು 13ನೆ ಬುಧವಾರ, ಗುರುವಾರ ದಿನಗಳಲ್ಲಿ ಜರಗುವುದು. ಅಲ್ಲದೆ ತಾ 13ನೆ ದಿನ ಅಪರಾಹ್ನ 3 ಗಂಟೆಗೆ ದೇವಸ್ಥಾನ ಗೋಪುರದಲ್ಲಿ ದೇವಸ್ಥಾನ ಕವಿ.ಟಿಯು ಮಹಾಸಭೆಯು ವಿಷಯಗಳು ಜರಗಲಿರುವುದರಿಂದ ಸದ್ರಿ ಸಭೆಗೆ ಮೆಂಬರದೆಲ್ಲರೂ ಸಕಾಲದಲ್ಲಿ ಅಗತ್ಯ ಬರಬೇಕಾಗಿ ಸದ್ರಿ ಕಮಿಟಿಯ ಅಧ್ಯಕ್ಷ ಶ್ರೀ ಪಿ. ನಾರಾಯಣ ಸೆಟ್ಟಿ ಮತ್ತು ಕೋಶಾಧಿಕಾರಿ ಶ್ರೀ ಪಿ. ಸುಬ್ಬರಾಯ ಇವರುಗಳು ತಿಳಿಸಿಸುತ್ತಾರೆ.

ಕೋಟೆ:—ಇಲ್ಲಿ ಒಂದು ಹೈಸ್ಕೂಲು ಸ್ಥಾಪಿಸುವ ವಿಷಯವನ್ನು ವಿವೇಚಿಸಿ ಕಾರ್ಯಕ್ರಮಕ್ಕೆ ಬರಲು 5-12-1948ರಲ್ಲಿ ಸ್ಥಳೀಯರ ಸಭೆಯೊಂದು ನೇಮಿತ್ತು. ಅದರಲ್ಲಿ ಬರುವ ಜೂನು, 1949ಕ್ಕೆ ಕೋಟೆಯಲ್ಲಿ ಹೈಸ್ಕೂಲನ್ನು ಸ್ಥಾಪಿಸಲು ಪ್ರಯತ್ನಿಸಬೇಕೆಂದು ನಿರ್ಣಯಿಸಿ ಆ ಬಗ್ಗೆ "ಕೋಟೆ ಪ್ರಾಥಮಿಕ ವಿದ್ಯಾಸಂಘ"ವನ್ನು ರಚಿಸಲಾಗಿದೆ. ಕೋಟೆಯ ಸರಹದ್ದಿನಲ್ಲಿರುವ ಆರು ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಈಗ 6, 7, 8ನೇ ತರಗತಿಗಳಲ್ಲಿ ಕಲಿಯುತ್ತಿರುವ ಒಟ್ಟು ಪುಷ್ಕಳ ಸಂಖ್ಯೆ: 531; 8ನೇ ತರಗತಿಯಲ್ಲಿ ಅಭ್ಯಾಸಿಸುವವರು 113. ಇವರಲ್ಲಿ ಸೆಕಡಾ 25ರಷ್ಟು ಮಕ್ಕಳು ವಿದ್ಯೆ ಮುಂದುವರಿಸುವುದಾದರೂ ಕೋಟೆಯಲ್ಲಿ ಹೈಸ್ಕೂಲು ಸ್ಥಾಪಿಸುವಲ್ಲಿ ಅವಕಾಶವಿದೆ. ಆದುದರಿಂದ ಸ್ಥಾಪಿಸಲಿರುವ ಹೈಸ್ಕೂಲು ಎಲ್ಲರಿಗೂ ವಿದ್ಯೆಯನ್ನು ನೀಡುವ ಮುಖ್ಯ ಎನ್ಸ್ಟಿಟ್ಯೂಶನ್ನೆಯಾಗಬೇಕೆಂಬ ಸದಿಚ್ಛೆಯಿಂದ ಈ "ಕೋಟೆ ಪ್ರಾಥಮಿಕ ವಿದ್ಯಾಸಂಘ"ವು ಯತ್ನಿಸಿದೆ.

ಈಗ ಹೈಸ್ಕೂಲನ್ನು ತೆರೆಯುವುದರಿಂದಾಗಿ, ರೂ. 30,000/- ಸರಕಾರದ ನಲ ದೇವಣಾಶಯವಾಗಿಡಬೇಕು, ಶಾಲಾ ಕಟ್ಟೋಣಕ್ಕೆ ಹೀಗೆ ಹಣವೂ ಬೇಕು. ಗ್ರಂಥಾಲಯ, ಸ್ವಯೋಗಶಾಲೆ, ಬುಟಿ, ಪೀಠೋಪಕರಣ, ತೆಸ್ಕೂಗಳು- ಇವುಗಳಿಗೂ ಸಾವಿರಗಟ್ಟಲೆ ರೂಪಾಯಿಗಳು ಬೇಕು. ಆದುದರಿಂದ ಬರುವ ಜೂನಿಗೆ ಹೈಸ್ಕೂಲು ಸಂಸ್ಥೆ ನಮ್ಮಲ್ಲಿ ಹುಟ್ಟಬೇಕಾದರೆ, ಕನಿಷ್ಠಪಕ್ಷ ಒಂದು ಲಕ್ಷ ರೂಪಾಯಿಗಳ ನಿಧಿ ಬೇಕು. ಅದ್ದರಿಂದ ಎಲ್ಲರ ನೆರವನ್ನು ಕೋರಿದೆ.

ಸಾಲಗ್ರಾಮ ಸಭೆಯ ಸಮಯಕ್ಕೆ ಕೋಟೆಯಲ್ಲಿ ನಿಧಿಸಂಗ್ರಹಕ್ಕಾಗಿ ಶ್ರೀ ಎಮ್. ಮಾಧಪ್ಪ ಉರಾಳ್, ಬಿ. ಎ. ಬಿ. ಎಲ್., ಎಮ್ಯೂಕೇಟರ್ ಅವರೂ ಶ್ರೀ. ಕೆ. ರಾಮಕೃಷ್ಣ ಕಾರಂತ ಬಿ. ಎ., ಎಲ್. ಎಲ್. ಬಿ, ಎಮ್. ಎಲ್. ಎ. ಮದರಾಸು ಅವರೂ, ಶ್ರೀ ಎ. ವಿ. ಎಸ್. ಹೆಬ್ಬಾರ್ ಬಿ. ಎ ಎಲ್. ಎಲ್. ಬಿ. ಅವರೂ ಬರುವರು. ಮುಂದೆ ಬೆಂಗಳೂರು ಮತ್ತು ಇತರ ಪ್ರದೇಶಗಳಲ್ಲಿ ಕೂಡಾ ಹಣ ಸಂಗ್ರಹದ ಕಾರ್ಯಕ್ರಮಗಳಾಗುವುದು. ಎಂದು ಕಾರ್ಯದರ್ಶಿ ಶ್ರೀ ಕೋ. ಲ. ಕಾರಂತ ಬಿ. ಎ. ಎಲ್. ಟಿ. ಯವರು ಬರೆಯುತ್ತಾರೆ.

ಕಟಪಾಡಿ:—ಇಲ್ಲಿಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯ 1947-1948ನೇ ವರ್ಷದ 14ನೇ ವಾರ್ಷಿಕ ವಂದಿಯ ಮಹಾ ಸಭೆಯು ತಾ 26-12-1948ರಲ್ಲಿ ಜರಗಿತು. ಸಭೆಯಲ್ಲಿ ಪರದಿ ವಾಚಿಸಲಾಯಿತು. ಸದ್ರಿ ವಂದಿಯಲ್ಲಿ ತೋಗುವಂತೆ 19ನೇ ಪುಟದಲ್ಲಿ ಡಬ್ಬಿಗಳಿಂದ ಜಮಾ ಬಾತೆಯಲ್ಲಿ ಅಂಬಾಡಿ ಪರೀಸ್ರ ಪೂಜಾರಿಯವರಿಂದ ರೂ 4-12-9 ಎಂದಾಗಬೇಕು. ಬೊಂಬಾಯಿ ತಾತ್ಕಾಲಿಕ ಪ್ರತಿನಿಧಿ ಕನಿಟಿಯ ಲೆಕ್ಕದ ಆಯದಲ್ಲಿ S. V. S. High School ನಿಧಿಗೆ ರೂ 115-0-0 ಎಂದಾಗಬೇಕು. ಮಂಡಿಸುವಲ್ಲಿ ಇತರ ಡಬ್ಬಿಗಳಿಂದ ರೂ 147-13 4 ಎಂದಾಗಬೇಕು. ಹಂಡಿ, ಕಾಣಿಕೆ ವಗೈರೆಗಳಿಂದ ರೂ 32-0-6 ಸೈ. ಎಂದಾಗಬೇಕು. ಈ ತಪ್ಪುಗಳು ಟಾಪಿಯಲ್ಲಿ ತಪ್ಪಾಗಿರುವುದರಿಂದ ಅದನ್ನು ದುರುಸ್ತಿ ನಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ನುಜೂರಾಯಿತು. ಈ ಸಭೆಗೆ ದರಖೂರಿನ ಅನೇಕ ಮಂದಿ ಮಹನೀಯರು ಗಳೂ ಬಂದಿದ್ದರು ಸಭಾಕಾರ್ಯಕ್ರಮಗಳು ಯೋಗ್ಯ ರೀತಿಯಲ್ಲಿ ಜರಗಿದವು ಸಭೆಯಲ್ಲಿ ಶ್ರೀ. ಕೆ. ಮುದ್ದು ಸುವರ್ಣರೂ, ಗುಡ್ಡೆ ಗರಡಿಮನೆ ಗುರುವಪ್ಪನವರೂ, ಶ್ರೀ ಕೆ. ಮುತ್ತಪ್ಪನವರೂ ಶ್ರೀ ಯು. ದಾದು ಮಾಸ್ತರ್, ಮತ್ತು ಮುಜಿಕ್ಕರ್ಮಾಸ್ತರರು ತಮ್ಮತಮ್ಮ ಹಿತಸೂಚನೆಗಳನ್ನು ಕೊಟ್ಟಬಳಿಕ ಅಧ್ಯಕ್ಷರ ಭಾಷಣವಾಯಿತು. ಕಡೆಗೆ ಕಾರ್ಯದರ್ಶಿ ಶ್ರೀ ವೆಂಕಪ್ಪನವರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದ ಬಳಿಕ ಶ್ರೀ ಗುರುಸ್ವಾಮಿಯೊಂದಿಗೆ ಸಭಾಂತ್ಯವಾಯಿತು.

ದ. ಕ. ಜಿಲ್ಲಾ ಗ್ರಾಮೋದ್ಯೋಗ ಸಂಘ ಮೂಲ್ಕಿ ಇದರ ಸ್ಥಿತಿಯು ಪಾರ್ಶ್ವಿಕೋತ್ಪನ್ನವು ಕಳೆದ ತಾ ೧೫ರಲ್ಲಾ ಜನಾಬ್ ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನೆರವೇರಿ, ಮೇಲಧಿಕಾರಿಗಳ ಮಂಜೂರಿ ಜನತಾ ಸೇವೆಯತ್ತ ಹೊರಳಬೇಕೆಂದೂ, ಗ್ರಾಮೋದ್ಯೋಗದ ತುಟ್ಟಿಭತ್ಯೆಯ ವಿಚಾರದಲ್ಲಿ ಸರಕಾರ ಕೂಡಲೆ ಗಮನಕೊಡಬೇಕೆಂದೂ, ಸರಕಾರ ೪ ಕುರಿತು ಉಪಾಸೀನ ತಾಳಿದರೆ ಇನ್ನೊಂದು ಸಭೆ ಕರೆಯಬೇಕೆಂದೂ, ಗ್ರಾಮೋದ್ಯೋಗಸ್ಥರುಜಗ್ಗುಟ್ಟಿನಲ್ಲಿ ದಬೇಕೆಂದೂ ಠರಾವಾದುವು. ಅಧ್ಯಕ್ಷ ಭಾಷಣ-ಲಘೂಪ ಹಾರಗಳಾಗಿ ಸಭೆ ಕೊನೆಗೊಂಡಿತು.

ಉಳ್ಳಾಲ:— ಉಳ್ಳಾಲ ಕೇಂದ್ರ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಕಳೆದ ತಾ. 20ರಲ್ಲಿ ಭಾಷಣ, ನರ್ತನ ಮತ್ತು ಪ್ರಹಸನ ನಡೆಯಿತು. ಶ್ರೀಮಾನ್ ವೆಂಕಟ್ರಾಯ ಕಿಣಿಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಕೆ. ಶೆಟ್ಟಿ, ಎಚ್. ಕೆ. ತಿಂಗಳಾಯ ಮತ್ತು ಎನ್. ಎಸ್. ಕಿಲ್ಲೆ ಯವರು ಕಾಂಗ್ರೆಸ್ಸಿನ ಧ್ಯೇಯ ಮತ್ತು ಧೋರಣೆಯನ್ನು ವಿವರಿಸಿ ಆರ್. ಎಸ್. ಎಸ್. ನಂತಹ ಅರ್ಥರಹಿತ ಮತ್ತು ರಾಷ್ಟ್ರ ವಿಘಾತುಕ ಕೂಟಕ್ಕೆ ಉಳ್ಳಾಲದ ಜನರಾರೂ ಬೆಂಬಲ ಕೊಡಬಾರದೆಂದು ವಿನಂತಿ ಮಾಡಿಕೊಂಡರು. ಭಾಷಣದ ನಂತರ ಮಂಗಳೂರಿನ ಶ್ರೀ ಹಂಸರಾಜ್ ಥಿಯೇಟರಿನವರ ನರ್ತನ ಪ್ರದರ್ಶನ ಮತ್ತು ಪ್ರಹಸನವು ಜಯಶೀಲವಾಗಿ ನಡೆಯಿತು. ಶ್ರೀ ರಾಜನ್ ಅಯ್ಯರ್ ರ ನೃತ್ಯಗಳು ಪ್ರೇಕ್ಷಕರ ಮೆಚ್ಚುಗೆ ಪಡೆದವು. ಶ್ರೀ ಆರ್- ಎಸ್- ಚೂರ್ಯಾರೆ ಮೊದಲಾದವರ ಸಮಯೋಚಿತ ಹಾಸ್ಯ ಪ್ರಹಸನವು ಪ್ರೇಕ್ಷಣೀಯವಾಗಿತ್ತು.

ಬೇಕಾಡಿ ತಾ 1-1-1949ರಲ್ಲಿ ಆರ್. ಕೆ ಪಾಟ್ಕಾರ್ ಶಾರದಾ ಹಯರ್ ಎಲಿಮೆಂಟರೀ ಶಾಲೆಯ ವರ್ಧಂತ್ಯುತ್ಸವವು ಉತ್ಸಾಹ ಸಂಭ್ರಮಗಳಿಂದ ಜರಗಿತು. ಶ್ರೀ ಕೆ. ಗೋಪಾಲ ಬಿ. ಎ. ಎಲ್. ಟಿ. ಇವರ ಸನ್ನಿಧ್ಯದಲ್ಲಿ ಸಭೆಯು ಜರಗಿತು. ವರದಿ ವಾಚನ, ವಿನೋದಾವಳಿಗಳು, ಸಂಗೀತ ನಾಟಕ ಮೊದಲಾದ ಕಾರ್ಯಕ್ರಮಗಳಿತ್ತು.

ಕಾಪು ನೊಗವೀರ ವೃತ್ತಿಪರ ಸಂಘದ ಮಂದಿರದ ದಕ್ಷಿಣಕನ್ನಡ ಜಿಲ್ಲಾ ಪ್ರತಿನಿಧಿಯ ಕಾರ್ಯಾಲಯದ ಉದ್ಘಾಟನಾ ಸಮಾರಂಭವು ಇದೇ ತಾ 16ರಲ್ಲಿ ಅಪರಾಹ್ನ 2 ಗಂಟೆಗೆ ಜ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಬಸ್ಸು ಅವಘಡ-ಜಖಂ :- ತಾ 1 ರಲ್ಲು ಪುತ್ತೂರಿನಿಂದ ಬೆಳಿಗ್ಗೆ 8-30ಕ್ಕೆ ಸುಬ್ರಹ್ಮಣ್ಯಕ್ಕೆ ಬಿಟ್ಟ ಶಂಕರ್ ವಿಲಾಸ್ ಕಂಪನಿಯ ಬಸ್ಸು ಪುತ್ತೂರಿನಿಂದ ಹತ್ತು ಮೈಲು ದೂರದಲ್ಲಿರುವ ತಿಂಗಳಾಡಿ ಸಮೀಪ ಹಿರ್ನ ಮಾಡುಣಾಗ್ಗೆ ಒಂದು ಸಣ್ಣ ಕಲ್ಲು ಬಿದ್ದಿದೆ ಹಿಂದಿನ ಚಕ್ರ ತಾಗಿ ಜೊಯಿಂಟ್ ಕುಂಡಾಗಿ ಡಿಫರೆನ್ಶಲ್ ಚಕ್ರ ಸಮೇತ ಹಿಂದಕ್ಕೆ ಸರಿದು ಬಸ್ಸು ಮುಂದೆ ಹಾರಿದಂತಾಗಿ ಮಗುಚಿ ಬಿದ್ದು ಅವಘಡ ಉಂಟಾಯಿತೆಂದು ತಿಳಿದು ಬರುತ್ತದೆ. ಬಸ್ಸಿನಲ್ಲಿ ಪ್ರಯಾಣಿಸಿದ ಒಬ್ಬ ಹೆಂಗಸಿಗೆ ಬೆರಳು ತುಂಡಾಗಿ ರಸ್ತೆಗೆ ಬಿದ್ದಿತ್ತೆಂದೂ ಇನ್ನಿಕರಿಗೆ ಸಾಕಷ್ಟು ಗಾಯವಾಗಿವೆ ಎಂದೂ ಬಸ್ಸು ಡ್ರೈವರ್ ಶ್ರೀ ದೇವು ಅವರೂ ಜಖಂ ಆಗಿದೆ ಎಂದೂ ವಾರ್ತೆ. ಅವಘಡದ ಕುರಿತು ವಿಚಾರಣೆ ನಡೆಯುತ್ತಿದೆ.

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಭೀತಿಯಾ ಕಿಸಲ್ಪಟ್ಟ **ಅಮೋಘ ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾಮೃತ ಎಂಬ ಸೂತಿಕಾ ರಸಾಯನ



ಈ ಟಿಸ್ಸಿನಬಾಟ್ಟಿಗಳು ಹೆಚ್ಚು ಕಡಿಮೆ ಅಷ್ಟೇ ಪ್ರಮಾಣಗಳಿಗೆ ಬರುವವು. ಅಂದರೆ ಬೆಲೆ ೫ ರೂಪಾಯಿಗಳ ಒಂದು ಬಾಣಂತಿಯನ್ನೆ ಸಾಕಾಗುವಷ್ಟು ವಿಕೇತ ಮಾಡುವ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯೇಲಬೈಲು, ಪೆ. ಕ.

ಸ್ವಾಮಿಸ್ವರು- ಡಾ| ಐ. ಕೆ. ಶಿವರಾಮ ರಾವ್, ಕಂಜಿಬೆಟ್ಟು, ಉಡುಪಿ.



ಜಗತ್ತಿನಲ್ಲೆಲ್ಲಾ ಸುಮಾರು ದೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲಿಪರ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವರೋಗಗಳಿಗೆ ಪ್ರಸಿದ್ಧ ಜಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ಸ್ವಾಧಿಗಳಲ್ಲಿ ಪ್ರವರ್ತಿಸಿ ಅವುಗಳ ನೂಲವನ್ನೇ ಕತ್ತು ಹಿಡುವಂತೆ ಶುದ್ಧ ವನಸ್ಪತಿ ನಿಷಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಳ್ಳಾಂಡ ದೇಶದಲ್ಲಿ ಪ್ರಮುಖ ಕಂಪನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಜೀವಾನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ಪೀಡಿತರ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀನುಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷಪಾತ, ಗೂರಲು ಕೃಮಿ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದೊಳಗಿನ ತೀಕ್ಷ್ಣವಾದ ವೇದನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ "ದೇವಾನುಮೋದಿತ ಔಷಧಿ" ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಪಾತ್ರಿಗುಣಾನಾಗುವದು. ಹಲ್ಲುನೋವು, ಮಳ್ಳಳಹೊಟ್ಟೆನೋವು, ಕಿವಿಗಳ ಉಪದ್ರವ ಹಂಗಸರ ದುಬ್ಬಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೂ ಸಾಕಾಗಿದೆ. ಉಪಯೋಗ ಕ್ರಮ ಸ್ಪಷ್ಟವಾಗಿ ಬಾಟ್ಲಿಯೊಳಗೆ ಸುತ್ತಿದೆ. ಕಿನ್ನುತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕಪ್ಸೂಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸೂಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ- ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-0-0 ವಿ.ಪಿ.ಸಹಿತ.

ಪ್ರಕಂಪನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೫ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ಪ್ರಯೋಗಿಸುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣಸಾಧ್ಯವಾಗದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಶ್ರೀ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಎ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ನ್ಯಾಕಿಸ್ವರು:—ಅಕ್ಕನಾಲಾ ಲಿಮಿಟೆಡ್, 25, ಹಿಲ್ಲ್ ಹನುಮಾನ್ ಲೇನ್, ಬೊಂಬಾಯಿ 2.

ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಬೇಗನೆ ಪ್ರಕಟವಾಗಲಿದೆ

ವಿರೋಧಿ ಸಂವತ್ಸರದ (1949 - 1950)

ನವಯುಗ ಪಂಚಾಂಗವು

ವಾಡಿಕೆಯಂತೆ ಪ್ರಸಿದ್ಧ ಗಣಿತಜ್ಞರಿಂದ ಪರಿಶೋಧಿಸಲ್ಪಟ್ಟು, ಉಪಯುಕ್ತ ವಿಷಯ ಸಂಗ್ರಹದೊಂದಿಗೆ ಜನವರಿ ತಿಂಗಳಲ್ಲಿ ಪ್ರಕಟವಾಗಲಿದೆ.

ಬೆಲೆ ೦—೬—೦ ಮಾತ್ರ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ನವಯುಗ ಪ್ರೆಸ್, ಉಡುಪಿ.

ಧಾತುಪುಷ್ಟಿ ಲೇಹ

ಇದುವರೆಗೂ ಸಪ್ತಧಾತುಗಳಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು, ಮೂತ್ರಪೋಡನೆ ಹೊರಗೆ ಡೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಸುಸ್ತುವಿನ ತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಪುಷ್ಟಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಸ್ತ್ರೀಸಮಾನಂಶರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾನಂತರದ ಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕೀಲು, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶರೀರಕ್ಕೆ ಮತ್ತು ಪೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಸ್ತ ಔಷಧಿಗಳು ಹೊರಬೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಟಿಸಿಯನ್ಸ್, ರಥಬೀದಿ ಸಂಬ್ರ, 10 ಮಂಗಳೂರು.

ಎಲ್ಲಾ ಸಮಾಚಾರಗಳು ಔಷಧಗಳಿಂದ ದೊರೆಯುತ್ತವೆ. ಇವುಗಳಿಂದ ಸಂಗ್ರಹಿಸಿ ಬರದಲ್ಲಿ ರೋಗಗಳಿಗೆ ತಕ್ಕವಾದ ಔಷಧಿ ರವಾನಿಸಬಹುದು. (1) ಉಡುಪಿ ಸಿಟಿಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಾಟಿಯರು:—ಪೊಸ್ಟಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್, ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಟಿ. ಪಿ. ಕೆ. ಮೂಟುಂಗಾ.

ಋತಸ್ರಾವ ನಿಧಿತಿಪು

'ಋಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಶಕ್ತಿ ಋತುಸ್ರಾವನಾಗುವುದು ಸತತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾರಿಗಳ ಸ್ಪೆಶಲ್ ರೂ. 8-[ನಿ. ಪೊಸ್ಟೇಜಹಾಜ ಪ್ರತೇಕ]

Mrs P. DEVEE, F. DS. (N. J.)
Tollygunge CALCUTTA.

ಸ್ವಾಸಿಸ್ವರು: ಶಹಾಕಂಸೆ, ಮಂಗಳೂರು

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿಪೊಸಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಮಂಗಳೂರು

ಹಿಂದೂ ಧರ್ಮ ಸಂಸ್ಥೆಗಳು:— ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಹಾಯ ಕೊಡಲು ಬದುಸಿದ್ದ ಲ್ಲಿ ಎಂಡೋಮೆಂಟ್ ಬೋರ್ಡಿನವರು ಅದಕ್ಕೆ ಕೂಡಲೇ ಅನುಮತಿಯನ್ನು ಕೊಡುವರು. ಹೀಗೆ ಸಹಾಯ ಕೊಡುವ ಸಂಸ್ಥೆಗಳು ಜನವರಿ ತಾ. 15ರೊಳಗಾಗಿ ಕೊಡಬೇಕಾಗಿದೆ.

ಧರ್ಮಾರ್ಥ ಪಶುವೈದ್ಯ ಶಾಲೆ:— ಮಂಗಳೂರು ವೆಟರಿನರಿ ಅಸ್ಸಿಸ್ಟೆಂಟ್ ಆಗಿ ಸರ್ಜನರಾಗಿದ್ದ ಶ್ರೀ ಬಿ. ಸೀತಾರಾಮ ಭಾಯರು ಕೆಲಸದಿಂದ ನಿವೃತ್ತರಾಗಿ, ಬಾಸಗಿ ವೆಟರಿನರಿ ಫಾರ್ಮಸಿಯೊಂದನ್ನೂ ಧರ್ಮಾರ್ಥ ಪಶು ವೈದ್ಯ ಶಾಲೆಯೊಂದನ್ನೂ ಕೂಡಿಯಾಲ ಬೈಲಿನಲ್ಲಿರುವ ಸುಬ್ರಹ್ಮಣ್ಯ ನಿಲಯದಲ್ಲಿ ಇದೇ ತಾ. 1ರಲ್ಲಿ ತೆರೆದಿರುವರು.

ಗಾಂಧಿ ಸ್ಮಾರಕ ನಿಧಿ ಸಂಗ್ರಹ:— ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಮಂಗಳೂರು ನಗರಶಾಖೆಯ ಮುಖಾಂತರ ಕಳೆದ ನವೆಂಬರ ತಿಂಗಳಾಂತ್ಯದವರೆಗೆ ಸಂಗ್ರಹವಾದ ನಿಧಿಯ ವಿವರ ಹೀಗಿದೆ. ಶ್ರೀಯುತ ಎ. ಆರ್. ಫೆರ್ನಾಂಡೀಸ್ ಮಂಗಳೂರಿನ ವಿಶೇಷರೂಪಾಯಿ 2000-ಶ್ರೀಗಳಾದ ಕುದ್ರಿ ಶ್ರೀನಿವಾಸ ಶೆಣೈ ಸ್ಪೋನ್ಸ್ರ್ಯಾಟರ್ ತಾಜ ಸುಲಾಲ್ ಕೆಳೆ ರೂ 1003, ತಾಜಾಮಹಾಲ್ ಕೆಲಸಗಾರರ ಸಂಘ ರೂ. 1405. ಎಸ್ಸನ್ ಸಾಲ್ ಎಂಡ್ ಕೊ. ರೂ. 750. ಎಮ್. ಎಸ್. ಶ್ರೇಷ್ಠ ರೂ. 200. ಕೊಂಚಾಡಿ ಕೇರಳ ಶಖೆ ರೂ. 191-4-0. ಎ. ಎಸ್. ಕಿಣಿ, ರೂ. 166-10-8, ಕೆನರಾ ಹೈಸ್ಕೂಲ್ ಉರ್ವಾ ಬ್ರಾಂಚ್, ರೂ. 101.

ಕೃಷಿಕರ ಉಪಕರಣಗಳು:— ಮಂಗಳೂರು, ಉಡುಪಿ, ಕಾರ್ಕಳ, ಪುತ್ತೂರು, ಕಾಸರಗೋಡು ಎಗ್ರಿಕಲ್ಚರಲ್ ಡಿಪೋಗಳಲ್ಲಿ ಕೃಷಿಕರಿಗೆ ಉಪಯೋಗಕ್ಕೆ ಬರುವ ಕೆಲವು ಉಪಕರಣಗಳು ಮಾರಾಟಕ್ಕೆ ಇವೆಯೆಂದೂ, ಆಯಾ ಸರಹದ್ದುಗಳಿಗೊಳಗಣ ರೈತರು ಬಂದು ಅವುಗಳನ್ನು ಕೊಂಡುಕೊಳ್ಳಬಹುದೆಂದೂ ಜಿಲ್ಲಾಧಿಕಾರಿಗಳು ಪ್ರಕಟಿಸಿ ಕೊಟ್ಟಿರುವರು- ಅವುಗಳ ವಿವರ, ಕ್ರಯ ಮುಂತಾದುವನ್ನು ಅಯಾ ಡಿಪೋಗಳಿಂದ ಅಥವಾ ರೆವಿನ್ಯೂ ಡಿವಿಜನಲ್ ಆಫೀಸರುಗಳಿಂದ, ತಹಸೀಲ್ದಾರರಿಂದ, ತಾಲೂಕು ಸಪ್ಲೈ ಆಫೀಸರರಿಂದ, ರೆವಿನ್ಯೂ ಇನ್ಸ್ಪೆಕ್ಟರರಿಂದ ಮತ್ತು ಫಿಶರೀಸ್ ಸಪ್ಲೈ ಆಫೀಸರರಿಂದಲೂ ತಿಳಿಯಬಹುದು.

ನೇಮಕ:— ಈ ರೇಂಜಿನ ಡಿಸ್ಟ್ರಿಕ್ಟ್ ಇನ್ಸ್ಪೆಕ್ಟರರಾಗಿದ್ದ ಶ್ರೀ ಬಿ. ವಿ. ರಮಣ ಆವರು ಪ. ಕ. ಜಿಲ್ಲಾ ಬೋರ್ಡು ಎಜ್ಯುಕೇಶನಲ್ ಆಫೀಸರರಾಗಿ ನೇಮಕ ಹೊಂದಿರುವರು.

ವಿಜಯಬೇಂಕಿನ ಮಹಾಸಭೆಯು ತಾ. 31ರಲ್ಲು ಜರಗಿತು. ಚುನಾವಣೆಯಾಗಲಿದ್ದ ಡೈರೆಕ್ಟರರ ಏದು ಸ್ಥಾನಗಳಿಗೆ ಅನೇಕರು ಪ್ರಬಲ ಪೈಪೋಟಿವಿದ್ದರೂ ಶ್ರೀಗಳಾದ ಕೆ. ಜೆ. ಬಲ್ಲಾಳ್, ಬಿ. ಶೇಷಪ್ಪ ಹೆಗ್ಡೆಯವರ ಮಧ್ಯಸ್ಥಿಕೆಯಿಂದ ನಿವೃತ್ತರಾಗಲಿದ್ದ ರಾ. ಬ. ಕೆ. ಟಿ. ಆಳ್ವ, ಶ್ರೀಗಳಾದ ಎ. ಸೂರಪ್ಪ ಸೆಟ್ಟಿ, ಎಮ್. ಜಿ. ಗಣೇಶ ನಾರಾಯಣ ರೈ, ಕೆ. ಪಿ. ಭಂಡಾರಿ ಶಂಕರ ಸೆಟ್ಟಿ, ಎಮ್. ಸುಂದರರಾಮ ಸೆಟ್ಟಿ ಇವರೇ ತಿರುಗಿ ಡೈರೆಕ್ಟರರಾಗಿ ಆರಿಸಲ್ಪಟ್ಟಿರುವರು.

ಆರ್. ಯಸ್. ಯಸ್. ಕೈದುಗಳು ಹಾಗೂ ಲಾಠಿಪ್ರಯೋಗ— ಕಳೆದ ತಾ 26ನೆ ಸಂಜೆ ಇಲ್ಲಿಯ ಮಾರ್ಕೆಟ್ ರೋಡಿನಲ್ಲಿ, ಕೆಲವು ಮಂದಿ ಆರ್. ಯಸ್. ಯಸ್. ನವರು ಆಜ್ಞೋಲ್ಲಂಘನ ಮಾಡಿದ ಸಂಬಂಧ, ಪೋಲೀಸರು ಬಾಷಿ ಪ್ರಯೋಗ ಮಾಡಬೇಕಾದ ಸಂದರ್ಭವೊದಗಿ, ಏಳು ಮಂದಿಯ ದಸ್ತಗಿರಿಯಾಗಿದೆ. ಇವರಲ್ಲಿ ಕಾರ್ಕಳ, ನೂಡಬಿದ್ರೆ, ಕುಂದಾಪುರ, ಉಡುಪಿ (ಕಲ್ಯಾಂಜೆ) ಕಡೆಗಳಿಂದ ಒಬ್ಬೊಬ್ಬರಂತೆ ನಾಲ್ವರು ಮುಂದಿಯೂ, ಮಂಗಳೂರು ನಗರದಿಂದಲೇ ಮೂರು ಮಂದಿಯೂ ಇರುವರು. ಕೆಲವು ದಿನಗಳಿಂದ ಇವರ ಗಲಭೆ ಇಲ್ಲದೆ, ದಸ್ತಗಿರಿಗಳೂ ಇದ್ದಿಲ್ಲ

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
S. C. 190/1948
ವೆಳುತ್ತಂಬಾಡಿ -ವಾದಿ.
ಮತ್ತು
ಕುಂಞಕಂಣ ನಂಬ್ಯಾರ ಸಹಾ. -ಪ್ರತಿವಾದಿರು.

ಸದ್ರಿ ವ್ಯಾಜ್ಯದಲ್ಲಿ 3ನೇ ಪ್ರತಿವಾದಿ ಕೈಸ್ಲ ನಂಬ್ಯಾರನೀಗೆ ನೋಟೀಸು ಜಾರಿಯಾಗದೆ ಅತನ ನೋಟೀಸಿಗೆ 8-1-49ಕ್ಕೆ ಯಿಟ್ಟ ಸಂಗ್ತಿ ಯೀ ಸೂಲ್ಮ ತಿಳಿಸೋಣಾಗಿದೆ.

ಶ್ರೀ. ಟಿ. ಪಾನೋದರ ನಾಯರ್,
ಕಾಸರಗೋಡು } ವಾದಿಯಕಡೆ
29-12-48 } ಅಡ್ವಕೇಟು.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
O. S. No. 352/1948
ಇಯ್ಯಕಾಟಿಲ್ಲತ್ತು ಸುಬ್ರಮ್ಮಣ್ಯ
ನಂಬುದ್ರಿ -ವಾದಿ.
ಮತ್ತು
ಚಂಡನ್ ಸುಬಾ -ಪ್ರತಿವಾದಿರು

ಸದ್ರಿ ವ್ಯಾಜ್ಯದಲ್ಲಿ 1ನೇ ಪ್ರತಿವಾದಿ ಚಂಡನೀಗೆ ಯೀ ವರೇಗೆ ನೋಟೀಸು ಜಾರಿಯಾಗದೆ ಅತನ ನೋಟೀಸಿಗೆ 17-1-1949 ಕ್ಕೆ ಬಿಟ್ಟ ಸಂಗ್ತಿ ಯೀ ಮೂಲ್ಮ ತಿಳಿಸೋಣಾಗಿದೆ.

ಶ್ರೀ. ಟಿ ದಾನೋದರ ನಾಯರ್,
ವಾದಿಯಕಡೆ ಅಡ್ವಕೇಟು.
ಕಾಸರಗೋಡು 29-12-48

ವಿವಿಧ ಪಾತ್ರೆಗಳು

ಯಾವತ್ತೂ ವಿಧವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಮಣ ಅಗಿ ಯೂಜಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಾಯರ್,
ರಥಬೀದಿ, ಉಡುಪಿ.



ಅಮೃತಾಂಜನ ಕಲೇವರನೆ, ಕಿರಿಪೀನಸೆ, ಅಜೀರ್ಣಕ್ಕೆ, ಹುಣ್ಣಿಗೆ, ಸೇವನೆಗೆ ಎದೆನೋವು, ಭಯಂಕರ ಬಾತು ಕೈಕಾಲುಬ್ಬು, ಜೀವಿಸಿ ಮಂತ್ರದ ಬೇನೆ ಕಜ್ಜಿಪಾಡ್ಡ ಮೊದಲಿನ ವೆದನೆಗಳಿಗೆ ಎಲ್ಲಾ ರೋಗಗಳಿಗೂ ಇದು ಸಮ್ಮಕ್ಷಿ ಸಿಶ್ಚಿತ

ಅಮೃತಾಂಜನ ಲಿಮಿಟೆಡ್

ಮದರಾಸು.

ಹೊಂಬಾಯಿ ಮತ್ತು ಕಲ್ಕತ್ತ.

ಜಿಲ್ಲಾ ರೈತಬಾಂಧವರಲ್ಲಿ ನಿವೇದನೆ

ನಮ್ಮ ದೇಶ ಕೃಷಿ ಪ್ರಧಾನವಾದ ದೇಶ. ಜನತೆಯ ಶೇಕಡಾ 75ರಷ್ಟು ಮಂದಿ ಹಳ್ಳಿಗಳಲ್ಲಿ ಹೊಲವನ್ನು ಉತ್ತು, ಬಿತ್ತಿ ಬೆಳೆ ಬೆಳೆಯುವ ರೈತರು. ರೈತರೇ ನಮ್ಮ ದೇಶದ ತೇಜಾಳ. ರೈತರ ಉದ್ಧಾರವೇ ನಮ್ಮ ದೇಶದ ಉದ್ಧಾರ!

ರೈತರ ಪರಿಸ್ಥಿತಿಯೇನಾಗಿದೆ?

ಸುಮಾರು ನೂರು ನೂರೈವತ್ತು ವರ್ಷಗಳಿಂದೀಚೆಗೆ ರೈತರ ಪರಿಸ್ಥಿತಿ ಒಂದೇ ಸಮನೆ ಜಾರುತ್ತಾ ಬಂದಿದೆ. ಉಳುವ ರೈತನಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟು ಅವರು ಸಮೃದ್ಧಿಯಿಂದ ಬೆಳೆ ಬೆಳೆಸುವಂತೆ ಮಾಡುವ ಬದಲು ಅವರನ್ನು ಬಂಡೇರುತ್ತಿ ಸುಲಿಗೆ ಮಾಡುವವರ ಪರಿಣಾಮವಾಗಿ ಬಂಡೊಮ್ಮೆ ಜಗತ್ತಿನಲ್ಲೇ ಸಾಮಾನ್ಯವೆನ್ನಿಸಿದ್ದ ನಮ್ಮ ಭಾರತ ಇಂದು ಜಗತ್ತಿನಲ್ಲೇ ಆತ ಬಡತನದಿಂದ ತುಂಬಿದ ದೇಶವೆನಿಸಿಕೊಂಡಿದೆ. ಈ ಶತಮಾನದಲ್ಲಿ ಸಲವು ಬರಗಾಲಗಳು ತಲೆದೋರಿ ಹೊಟ್ಟೆಗಿಲ್ಲದೆ ಕೋಟಿಗಟ್ಟಲೆ ಜನ ಅಸಹಾಯಕ ಬಲಿಯಾಗಿರುವುದು ಸಾಯಬೇಕಾಯಿತು. ಈ ಸಂಕಷ್ಟಗಳೂ ನಮ್ಮ ದೇಶದ ಜನತೆಗೆ ತಿಳುವಳಿಕೆಗೆ ಬರುವಂತೆ ಮಾಡಿ, ಬರಗಾಲಗಳು ತಲೆದೋರದಂತೆ ಮಾಡಲು ರೈತನನ್ನು ಉದ್ಧಾರ ಮಾಡಬೇಕೆಂಬ ಸದ್ಬುದ್ಧಿ ಬರುವಂತೆ ಮಾಡಲಿಲ್ಲ! ಈಗಲೂ ಕೆಲ ವರ್ಷಗಳಿಂದ ಜನತೆ ಉಸಿರಾಡಿದಂತೆಲ್ಲಾ ತಿನ್ನುತ್ತಾ ಬಂದಿದೆ-ಎಲುವು ಗೂಡಾಗಿದೆ! **ಈಗಲಾದರೂ ನಾವು ಎಚ್ಚೆತ್ತು ಎವಂದೆ ಸಂಗೋಜ.**

ನಮ್ಮ ದೇಶದ ತಂದೆ ಗಾಂಧೀಜಿ ಯವರ ಮುಖ್ಯೋದ್ದೇಶವೇನು?

ಗಾಂಧೀಜಿಯವರು ಕಾಂಗ್ರೆಸ್ಸಿನ ಮುಂದಾಳತನ ವಹಿಸಿ ಭಾರತ ಜನತೆಯನ್ನು ಸ್ವಾತಂತ್ರ್ಯ ಸಮರಕ್ಕಾಗಿ ಸಜ್ಜುಗೊಳಿಸುವಾಗ ಹೇಳಿದುದೇನು? ನಮ್ಮ ಮುಖ್ಯ ಉದ್ದೇಶ ಗ್ರಾಮೋದ್ಧಾರವಾಗಿರಬೇಕೆಂದು. ಆನಂತರವು ಕಾರ್ಯರೂಪದಲ್ಲಿಯೂ ಹಾಗೆ ತೋರಿಸಿದರು. ಅವರು ಮೊತ್ತ ಮೊದಲು ಮಾಡಿದ ಸಮರ ಸಂಯುಕ್ತ ಪ್ರಾರಂಭದ ರೈತರಿಗಾಗಿ. ಅದಕ್ಕಾಗಿಯೇ ಅವರೆಂದುದು-ಹಳ್ಳಿಗಳೇ ಕಾಂಗ್ರೆಸ್ಸಿನಚಟುವಟಿಕೆಗಳ ಕೇಂದ್ರವಾಗಬೇಕೆಂದು. ಅವರು ದೇಶಕ್ಕೆ ಕೊಟ್ಟ ಜಾತೀಯ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮುಖ್ಯವಾದುದು ರೈತ ಸಂಘಟನೆ! ರೈತರು ಸಾಂಘಟಿತರಾಗಿದ್ದರೆ ಮಾತ್ರ ನೇರಕ್ಕೆ ಸಿಕ್ಕಿದ ಸ್ವಾತಂತ್ರ್ಯ ಜನತೆಗೆ ಪ್ರಯೋಜನಕಾರಿಯಾಗಿ ಪರಿಣಮಿಸಿದೆಂದು ಅವರು ಮನಗಂಡಿದ್ದರು.

ಸ್ವಾತಂತ್ರ್ಯ ಸಿಕ್ಕಿದ ನಂತರ

ಸರದೇಶೀಯರ ಆಳ್ವಿಕೆಯಿಂದ ಬಳಲಿ ಬೆಂಡಾದ ಜನತೆ ಸ್ವಾತಂತ್ರ್ಯ ಸಿಕ್ಕಿದರೆ ತನ್ನೆಲ್ಲ ಕಷ್ಟ ಪೂರ್ವವಾದೀತೆಂದು ಎಣಿಸಿ ಸ್ವಾತಂತ್ರ್ಯ ಸಮರಾಂಗಳಲ್ಲಿ ಭಾಗವಹಿಸಿತು! ಈಗ ದೇಶವು ಸ್ವತಂತ್ರವಾಗಿದೆ. ಒಂದೊಮ್ಮೆನ್ನ ರೈತರು ಅರಾಜ್ಯಾತೀಯಾಗಿದ್ದ ಕಾಂಗ್ರೆಸ್ಸು ಜನಾನುರಾಗಿಯು ಅಂದರ್ಥದಲ್ಲಿ-ನಾನಾಗಿ ಸುಧಾರಣೆಗಳುವೆಂಬುದು-ರೈತರಿಗೆ ಇತ್ತ ಭರವಸೆಯನ್ನೆಲ್ಲ ನುಚ್ಚಿತು! ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ಸು ಸರಕಾರ ರೈತರಿಗೆ ದ್ರೋಹವೆಸಗಿದೆ! ಇದನ್ನು ಗಾಂಧೀಜಿಯವರು ಮನಗಂಡರು. ನೊಂದರು! ಆದಕ್ಕಾಗಿ ಅವರೆಂದುದು-ಕಾಂಗ್ರೆಸ್ಸು 'ಲೋಕ ಸೇವಾ ಸಂಘ'ವಾಗಿ ಮಾರ್ಪಡಬೇಕೆಂದು.

ಈಗ ಗಾಂಧೀಜಿಯವರ ಜೀವನದ ನಮ್ಮ ಉದ್ದೇಶವಾಗಿದ್ದ ರೈತ ಸಂಘಟನೆಯನ್ನು ಸಾಧಿಸಲು ರೈತರೇ ಮುಂದೆ ಬರಬೇಕು. ತಮ್ಮಮೇಲೆ ಆಗುತ್ತಿರುವ ಅನ್ಯಾಯ ಹಾಗೂ ಅಧಿಕ ಬಡಪಾಯಿಯಂದಾಗಿ ಬ್ರಿಟಿಷರ್ ಹೊರಬಂದ ಮುಕ್ತರಾಗಲು ರೈತರು ಸಂಘಟಿತರಾಗಬೇಕು

ದೇಶದ ಎಲ್ಲೆಡೆಗಳಲ್ಲಿಯೂ ನಡೆಯುತ್ತಿರುವ, ರೈತನನ್ನು ಹೊಲದಿಂದ ಓದಿಸುವ ಶ್ರೀಸ್ಥ ನಮ್ಮದುದು ನಲ್ಲುತ್ತಿದೆ. ಅನೇಕ ಸರ್ಕಾರಗಳ ತಮ್ಮ ದುಡಿಮೆಯಿಂದ ಸೆಲವನ್ನು ಹೊಲವಾಗಿ ಮಾರ್ಪಡಿಸಿದ ರೈತನನ್ನು ಕಷ್ಟಕ್ಕೊಡಗೆಯುವ ಅನ್ಯಾಯವನ್ನು ತಡೆಗಟ್ಟಬೇಕು. ವರ್ಷವಿಡೀ ಬೆವರು ಸುರಿಸಿ ದುಡಿದು ಬೆಳೆ ಬೆಳೆಸಿ, ಸೊನೆಗೆ ಬೆಳೆದುದೆಲ್ಲಾ ಹೊಲಸೊಡೆಯನಿಗೆ (ಧನಿಗೆ) ಒಪ್ಪಿಸಬೇಕಾದಷ್ಟು ನಿತಿನಿಯಾರಿರುವ ಗೇಣಿ ಈಸಿರುವಷ್ಟರ ಅರಿವಾಸಿಗಿಂತಲೂ ಕಡಮೆಯಾಗಬೇಕಾಗುವುದು. ದುಡಿಯುವ ರೈತನಿಗೆ ಬೆಳೆದ ಬೆಳೆಯ ಅಧಿಕಾರ ಸಿಗಬೇಕಾದುದು ನ್ಯಾಯ.

ಅಸ್ಪೃಶ್ಯತೆ, ಜನತೆಗೆ ಉಪಯೋಗವಾಗಬೇಕೆಂದು ಈಗ ಜಾರಿಗೆ ಕಂದಿರುವ 'ಹರಿಜನ ಸೇವಕ' ಕ್ರಮದಿಂದಲೂ ಬಡರೈತನಿಗೆ ತುಂಬಾ ಅನ್ಯಾಯವಾಗಿದೆ. ಮೊದಲೇ ಕುಂದಿ ಬೆಂದು ಹೋದ ರೈತರು ಸಾರಿಗೆಯ ಪದ್ಧತಿಯಲ್ಲಿರುವ ನ್ಯೂನತೆಗಳಿಂದ ಸರಕಾರದ ಅಧಿಕಾರಿಗಳಕೈ ಕಾಲಾಡಿಗೆ ಸಿಕ್ಕಿ ಜಜ್ಜಾಡಬೇಕಾಗಿ ಬಂದಿದೆ. ದೇಶದ ಅಕ್ಕಿ ಭತ್ತಗಳನ್ನು ಸರಕಾರವು ಸಂಗ್ರಹಿಸುವಾಗ, ದೇಸಾಯಿದ ಖರ್ಚಿಗೆ ಮತ್ತು ಅವನ ನುನೆಯ ಉಪಯೋಗಕ್ಕೆ ಜೇಕಾದಷ್ಟು ಸಂಗ್ರಹವನ್ನು ಒಕ್ಕಲಿಗನಿಗೆ ಬಿಟ್ಟು ಮಿಗಿದುದನ್ನು ಸಂಗ್ರಹ (Requisitioning) ಮಾಡುವುದು ನ್ಯಾಯ. ಗದಲಾಗಿ ಬೆಳೆದುದಕ್ಕಿಂತಲೂ ಹೆಚ್ಚಿಗೆ ಧಾನ್ಯವನ್ನು ಸರಕಾರಕ್ಕೆ ಒಪ್ಪಿಸಬೇಕೆಂದು ನೋಟೀಸು ಬಂದ ನಿದರ್ಶನಗಳು ನಮಗೆಷ್ಟೋ ಸಿಗುತ್ತವೆ.

ಸರಕಾರವು ಇಂತಹ ಅನ್ಯಾಯಗಳನ್ನು ಹೋಗಲಾಡಿಸುವ ಬದಲು ರೈತನಿಗೆ ಕೇಡು ಬಗೆಯುವ, ಸುಲಿಗೆ ಮಾಡುವ ಭೂಮಾಲಿಕರ ಪ್ರಭಾವದಿಂದ ತಟಸ್ಥವಾಗಿದೆ. ಮಾತ್ರವಲ್ಲ, ಬಡ ರೈತರು ತಮ್ಮ ಮೇಲಾಗುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಹೋಗಲಾಡಿಸಲು ಸಂಘಟಿತರಾಗಿ ಮುಂದೆ ಬರುವಾಗ ಅವರಿಗೆ ಪ್ರೋತ್ಸಾಹವೀಯುವ ಬದಲು ಬಿದರಿಸಲು ಯತ್ನಿಸುತ್ತಿದೆ.

ನಮ್ಮ ದೇಶದ ಬಡತನ ಹೋಗಬೇಕಾದರೆ, ಜನರ ಹಸಿವು ಹಿಂಗಬೇಕಾದರೆ, ಆಹಾರ ಪದಾರ್ಥ ಕೊರತೆ ನೀಗಬೇಕಾದರೆ, ರೈತರು ಸಂಘಟಿತರಾಗಬೇಕು. ರೈತವರ್ಗದ ಅಭ್ಯುದಯ ಕ್ಕೋಸ್ಕರ ರೈತರೆಲ್ಲರೂ, ಹಳ್ಳಿ ಹಳ್ಳಿಗಳಲ್ಲಿಯೂ, ಒಂದಾಗಿ ಕೆಲಸಮಾಡಲು ಮುಂದಾಗಬೇಕು. ಮಹಾತ್ಮಗಾಂಧಿಯವರು ಪದೇ ಪದೇ ಕಸವರಿಸುತ್ತಿದ್ದ ರಾಮರಾಜ್ಯದ ಉದಯವಾಗಬೇಕಾದರೆ, ರೈತರು ತಮ್ಮ ವರ್ಗದಲ್ಲಿ ಬೆಳೆತಿರುವ ದುಶ್ಚಟ, ಜೂಜಾಟ ಎಂಬ ಕಳೆಗಳನ್ನು ಕಿತ್ತು ವಿಚಾರಕ್ರಾಂತಿ ಎಂಬ ಗೊಬ್ಬರವನ್ನು ಹಾಕಿ, ಪ್ರಯತ್ನಶೀಲ ಎಂಬ ನೀರನ್ನು ಬಿಟ್ಟು ತಮ್ಮ ಈ ರೈತ ಪಂಚಾಯತಿಯನ್ನು ಬೆಳೆಸಬೇಕು, ಪೋಷಿಸಬೇಕು. ಪ್ರತಿ ಏದು ಗ್ರಾಮಗಳಿಗೊಂದು ರೈತ ಪಂಚಾಯತಿಯ ಸ್ಥಾಪನೆಯಾಗಬೇಕು. ಈ ಸಂಘಟಿತ ಶಕ್ತಿಯ ಮೂಲಕ ತಮ್ಮ ಮೇಲೆ ಹೊರಿಸಲ್ಪಟ್ಟ ಸುಲಿಗೆ ತೊಡಪಡಿಗಳನ್ನು ಇದಿರಿಸಬೇಕು. ಸರಕಾರವು ಈ ಕೆಳಗಿನ ಸುಧಾರಣೆಗಳನ್ನು ಕೂಡಲೆ ಜಾರಿಗೆ ತರುವಂತೆ ರೈತರೆಲ್ಲರೂ ಒಕ್ಕೊರಲಿಂದ ಪ್ರಯತ್ನಿಸಬೇಕು. ಆ ಸುಧಾರಣೆಗಳು ಯಾವುವು ಎಂದರೆ,

1. ಉತ್ಪನ್ನ ಹೆಚ್ಚಿಸಲು ಸಾಕಷ್ಟು ಸೌಲಭ್ಯಗಳು ಪ್ರತಿ ರೈತನಿಗೆ ದೊರಕಬೇಕು.

2. ಹೊಲದಲ್ಲಿ ದುಡಿಯುವ ರೈತನಿಗೆ ದಿನಕ್ಕೆ ಕನಿಷ್ಠವೆನ್ನಿಸಿ ಅಧಿಕವೇದು ಆಳ್ಕೆ ಸಮಾನವು ದೊರಕಬೇಕು.

3. ವ್ಯವಸಾಯದಿಂದ ಉತ್ಪನ್ನವಾದ ಸಾರ್ವಜನಿಗಳಿಗೆ ಯೋಗ್ಯ ಬೆಲೆಯು ದೊರಕಬೇಕು.

4. ಒಕ್ಕಲತನ ಕೂಲಿಗಾರರಿಗೆ ನ್ಯಾಯವಾದ ಜೀವನ ವೇತನ ದೊರಕಬೇಕು.

ರೈತ ಬಾಂಧವರಲ್ಲಿ ವಿಜ್ಞಾಪನೆ

ರೈತ ಬಾಂಧವರ ಅನುದಿನದ ಕಷ್ಟ ನಾಶ ಕೃಯಗಳನ್ನು ನಿವಾರಿಸಲು ಈ ರೈತ ಪಂಚಾಯತಿಯು ಪ್ರಯತ್ನಿಸುವದು. ರೈತ ಪಂಚಾಯತಿಯು ರೈತರ ಸೇವೆಗೆ ಸದಾ ಸಿದ್ಧವಿದೆ. ರೈತರು ತಮ್ಮ ಮೇಲೆ ನಡೆಯುವ ಅನ್ಯಾಯ ಅತ್ಯಾಚಾರಗಳನ್ನು ಇದಿರಿಸಲು ರೈತ ಪಂಚಾಯತಿಯನ್ನು ಬಲಪಡಿಸಬೇಕು. ಕೃಷಿಯಲ್ಲಿನ ತಮ್ಮ ಅನುಭವ ವಿವರಗಳನ್ನು, ತಾವು ಬಯಸುವ ಭೂಸುಧಾರಣೆ ಸೂಚನೆಗಳನ್ನು ನಮಗೆ ಬರೆದು ತಿಳಿಸಿದ್ದಲ್ಲಿ, ನಾವು ಇತರ ರೈತ ಬಂಧುಗಳ ಪ್ರಯೋಜನಾರ್ಥವಾಗಿ ಜಿಲ್ಲೆಯ ಮುಖ್ಯ ಮುಖ್ಯ ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಿಸುವೆವು

ನಮ್ಮ ಈ ರೈತ ಸಂಘಟನೆಯ ಧ್ಯೇಯೋದ್ದೇಶಗಳ ಪ್ರಚಾರಕ್ಕಾಗಿ ನಾವು ಜಿಲ್ಲೆಯ ನುಮ್ಮ ಮುಮ್ಮ ಕೇಂದ್ರಗಳಲ್ಲಿ, ನಭಿಭಾಷ ಸಾದಿಗಳ ವ್ಯವಸ್ಥೆಯನ್ನು ಮಾಡಿರುವೆವು. ನಮ್ಮ ಈ ಕಾರ್ಯದಲ್ಲಿ ತಮ್ಮ ಸಂಪೂರ್ಣ ಬೆಂಬಲ ನೀಡಬೇಕಾಗಿ ಜಿಲ್ಲಾ ರೈತ ಬಾಂಧವರಲ್ಲಿ ಆಗ್ರಹಪೂರ್ವಕ ವಿನಂತಿ

ಡಾ। ಸಂಜೀವನಾಥ,
ಕನ್ವೀನರ್ಜಿಲ್ಲಾ ರೈತ ಪಂಚ್ಯಾತ್,
ಮಂಗಳೂರು.

— ಮಕ್ಕಳನ್ನು ಹಡೆಯುವುದು ಸಾಕು —

ಅಕಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಜ್ಜು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೆಯಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ ೫—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪ ಭಕೀರಪ್ಪ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಶಾಖೆಗಳು:—ಹುಬ್ಳಿ ಘಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಜಾಸಪ್ಪ ಷಡ್ಡಂಗಪ್ಪ ಧಾರವಾಡಕರ ವಿಜಾಪುರ ಸಂಜುಬೀನ್ಸ್ತರ ಮೂರ್ತಿ ಡಾವಣಗೇರಿ
ಮಾಲಕರು:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಸ್ಟ್ರಿ, ಹಾರ್ಮೋನಿಯಂ ಬ್ಯಾಡಿಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸುರಿಯದಿದ್ದರೆ, ಶರೀರದ ಸುತ್ತ ಳಿಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಕೊಂಡಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಷಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬಾರ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ೫ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಘಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಘಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಘಾರ್ಮಸಿ, ಧಾರವಾಡ:—ಧಾರವಾಡ ಘಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಿಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಅಂದರೆ ಸುನರ್ಜನ್ಮವೆಂದು ಸ್ತ್ರೀಯರೆಸ್ಸುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕ್ಕುಳಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕನಬೇಧದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇವರಿಂದ ಪ್ರಲಾಪಸನ್ನಿ, ಮೂರ್ಛೆರೋಧ, ಸ್ನಾಯುಗಳ ಜೀರ್ಣ, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ. ವೈದ್ಯ, ಡಾಕ್ಟರ, ನರ್ಸರನ್ನು ವರೆಗೆ ಅರಿಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಆದ್ದಷ್ಟೆ ಬರ್ಕೆ!

ಆದರೆ ಭಾರತೀಯತನದಲ್ಲಿ ಜಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವೈದ್ಯ **'ಪ್ರಸೂತಾಮೃತ'**ದ ೧ ಬಾಟ್ಲಿ ಮತ್ತು ೧ ಡಜನು **'ಪ್ರಸೂತ ಕಲ್ಯಾಣ ವಟಿ'** ಇವುಗಳನ್ನು ಮುಂದಾಗಿ ತಂದಿಟ್ಟು, ಸಕಾಲದಲ್ಲಿ ಉಪಯೋಗಿಸಿದರೆ ಕಮ್ಮಿ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮಸೀಯ ಕೇರಕಲಾಪ, ತಂಪು ಮೆದುಳು, ಶುಭ್ರ ನೇತ್ರಗಳನ್ನು ಕೊಡಲು ಬಹು ಗುಣಾಯುಕ್ತ **ಆಮಲಕೀ ತೈಲ** ಯಾ ಹೆಮ್ಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (BLGM)
Kunjal P. O. Brahmavar, S. K.

ಆಹಾರ ಉತ್ಪಾದನೆಕ್ಕಾಗಿ ಮಲೆನಾಡು

ಮಾ. ನಾ. ರಾ.

ಮಲೆನಾಡೆಂದರೆ ಆದೇಶೊ ಜನರಲ್ಲಿ ತಿರಸ್ಕಾರವಿದೆ. ಈ ತಿರಸ್ಕಾರ ಮತ್ತು ಅಲಕ್ಷ್ಯ ಭಾವನೆಗಳ ಪರಿಣಾಮವಾಗಿಯೇ ಮಲೆನಾಡು ಹತ್ತಾರು ವರುಷಗಳಿಂದ ಬರಿದಾಗುತ್ತಾ ಬಂದಿದೆ. ಜನತೆಯೂ ಸರಕಾರವೂ ಏಗೆ ಬರಿದಾಗುತ್ತಲಿರುವ ಮಲೆನಾಡಿನ ಕುರಿತು ಆಸಕ್ತಿಯನ್ನು ವಹಿಸಿದಿರೋಣದರಿಂದಲೇ ನಮ್ಮ ದ. ಕ. ಜಲ್ಲೆಯಲ್ಲಿ ಪ್ರತಿಯೊಂದು ತಾಲೋಕಿನಲ್ಲಿಯೂ ಸಾವಿರಾರು ಎಕ್ರೆ ಭೂಮಿಗಳು ಈ ಮೊದಲು ಸಾಗ್ವಳಿಯಾಗುತ್ತಿದ್ದು, ಈಗ ಹಡುಬಡಿದುತ್ತವೆ. ಆಹಾರಾ ಭಾವದ ಈ ದಿವಸಗಳಲ್ಲಿ ಅವುಗಳು ತಿರುಗಿ ಸಾಗ್ವಳಿಯಾಗುವಂತೆ ಕೈಕೊಳ್ಳುವುದು ತೀರಾ ಅಗತ್ಯ.

ಪುಸ್ಕಳನಾದ ಮಳೆ ಬೀಳುತ್ತಲಿರುವ ಪಶ್ಚಿಮಘಟ್ಟದ ಬಿಡಪಲ್ಲಿ ಜಲ್ಲೆಯ ಅನುಲಾಗ್ರ ವ್ಯಾಪಿಸಿರುವ ಈ ಮಲೆನಾಡು ಭೂಮಿಗಳಿಗೆ ಸೀರಿನ ಕೊರತ ಇರುವುದಿಲ್ಲ.ನೊದಲು ಸಾಗ್ವಳಿಯಾಗುತ್ತಿದ್ದು, ಇತ್ತೀಚೆಗೆ ಅವುಗಳು ;ಹಡುಬಡಿದ್ದಿರುವವಾಪುದರಿಂದಲೂ ಆ ಭೂಮಿಗಳಲ್ಲಿ ಕಲೆತು, ಕೊಳತ ಸೊಪ್ಪು-ಕಸ-ಹುಲ್ಲುಕಡ್ಡಿಗಳಿಂದ ತುಂಬಿದ ತಿಪ್ಪುಗುಂಡಿಗಳು ಇರುವುದಿಲ್ಲವಲ್ಲದೆ, ಯಾಂತ್ರಿಕ-ತಂತ್ರಿಕಸಲಕರಣೆಗಳಿಂದ ವಿಸ್ತಾರವಾಗಿ ವ್ಯವಸಾಯವನ್ನು ಮಾಡಲು ಅನುಕೂಲವಿರುವ ವಿಶಾಲ ಭೂಮಿಗಳೂ ಅಲ್ಲಲ್ಲಿ ಇರುತ್ತವೆ ಅಲ್ಲದೆ ಸ್ವಲ್ಪ ಸ್ವಲ್ಪವೇ ಗದ್ದೆಗಳನ್ನು ಸಾಗ್ವಳಿ ಮಾಡುವಪಂ ಅನುಕೂಲತೆಗೆ ಸಂಯಾಗಿ ಜಂಜಲು ಅನುಕೂಲವಾದವುಗಳೂ ಹೇರಳವಾಗಿರುತ್ತವೆ

ನಮ್ಮ ಜಲ್ಲೆಯಲ್ಲಿಯ ಅಧಿಕೋತ್ಪಾದನೆಯ ಏರಿಕೆಯು ಮಲೆನಾಡಿನಲ್ಲಿಯೇ ಆಗಬೇಕೆಂಬುದು ತೀರಾ ಯಥಾರ್ಥವು, ಒಲವ ಸಹಸ್ರ ಕುಟುಂಬಗಳು ನಿರುಪಾಧಿಕವಾಗಿ ಸಾಗ್ವಳಿಯನ್ನು ಕೈಕೊಳ್ಳಬಹುದು. ಮತ್ತು ಸರಕಾರವು ಅಲ್ಲಲ್ಲಿ ಮಾದರಿಯ ಕೃಷಿ ಕ್ಷೇತ್ರಗಳನ್ನು ಇರಿಗೊಡಿಸಿ ಜನರಿಗೆ ಕೃಷಿಯಲ್ಲಿ ಆಸಕ್ತಿಯನ್ನು ಬೆಳೆಸಿದರೆ ಅವಶ್ಯವಿರುವ ಹೊಸ ಸುಧಾರಣೆಗಳನ್ನೂ ಬೆಳೆ ಸುಟ್ಟು ಯಾಂತ್ರಿಕ ಉಪಕರಣಗಳ ಬಳಸುವಿಕೆಯನ್ನೂ ಪ್ರಯೋಗವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಬಹುದು.

ಇದಕ್ಕೆ ಕಾಲ ವಿಳಂಬನಾಗಲೀ, ನೀರಾವರಿಯ ಮಹದ್ಯೋಜನೆಗಳಾಗಲೀ ಆವಶ್ಯಕವಿಲ್ಲವಾಗಿಯೂ, ಕೇವಲ ವ್ಯವಸಾಯವನ್ನು ಕೈಕೊಳ್ಳುವ ಪ್ರಯಾಸ ಮಾತ್ರದಿಂದಲೇ ವಿಪುಲವಾದ ಆಹಾರ ಧಾನ್ಯಗಳನ್ನು ನನ್ಮ ಜಿಲ್ಲೆಯು ಬೆಳೆಸಲು ಸಮರ್ಥವಾಗಬಲ್ಲುದು. ತೀವ್ರವೇ ಶಲಧಾಯಿ ಮತ್ತು ಪರಿಣಾಮ ಕಾರಿಯಾದ ಈ ಕಾರ್ಯಕ್ರಮವನ್ನು ಆಹಾರ ಅಧಿಕೋತ್ಪಾದನೆಯ ಅವಶ್ಯವಿರುವಾಗ, ಆಪದ್ಧರ್ಮವೆನಿಸಿರುವ ಆಹಾರಾ ಭಾವವನ್ನು ಎದುರಿಸಲು ಸಕಾಲಿಕ ಸೂಕ್ತ ಉಪಾಯವಾಗಿ ತಿಳಿಯುವುದು ಸರ್ವ ಸಮಂಜಸ.

ಜನತಾ ಸರಕಾರವು ಈ ಆಹಾರ ಅಧಿಕೋತ್ಪಾದನೆಕ್ಕಾಗಿ ಮಲೆನಾಡಿನ ಸುಧಾರಣೆಯನ್ನು ಕೈಕೊಳ್ಳಲಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

'ಕೇಶ ಕಲಾ'

ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ರೆಟ್ಟಿ.	0	3	0
ಸಂತಯ ಪಿಶಾಚಿ	(ನಾಟಕ)	ಕೆ. ಕೆ. ರೆಟ್ಟಿ.	0	8	0
ಕುರಿಲಪ	(,,)	,,	0	6	0
ವೈಭಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ನೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್ ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜು.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸಪ್ತಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ರೆಡ್ಡಿ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶ-ಪರಾಧಗಳು ಆರ್ಥಾತ್ ದಶಾವತಾರಗಳು	(ವಿಡಂಬನೆ)	ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	9	8	0
ಸ್ವಾತಂತ್ರ್ಯವೀರ ಸಾವರಕರರು (ಜೀವನ ಚರಿತ್ರೆ)		ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಶೀನ ರೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ.— ನವಭಾರತ ಪುಸ್ತಕ ಭಂಡಾರ, ಉಡುಪಿ ದ. ಕ.

ದಿ. ಬಾರ್ಕೂರು ಬಿಲ್ಲವರ ಚಾರಿಟಿ ಸಂಘ, ಮುಂಬಾಯಿ ಇದರ 1948-49ನೇ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನು ಆರಿಸಲಾಗಿದೆ. ಶ್ರೀ. ವೈ. ಜಿ. ಬಂಗೇರ, ಅಧ್ಯಕ್ಷ. ಶ್ರೀ. ಪಿ. ಯಸ್. ಕೋಟ್ಯಾನ್, ಗೌ. ಪ್ರ. ಕಾರ್ಯದರ್ಶಿ. ಶ್ರೀ. ಪಿ. ಕೆ. ಸುವರ್ಣ, ಉಪಾಧ್ಯಕ್ಷ. ಶ್ರೀ ಮೋನಪ್ಪ ಸಾಲಿಯಾನ್. ಉಪಕಾರ್ಯದರ್ಶಿ. ಶ್ರೀ. ಯಲ್. ಸಿ. ಕುಕ್ಯಾನ್-ಗೌ. ಕೋಶಾಧಿಕಾರಿ. ಸದಸ್ಯರು:-ಶ್ರೀಯುತರಾ ಡ, ಕೆ ಯಂ. ಬಂಗೇರ, ಟಿ. ತನಿಯ, ಯು. ಕಾಡಪ್ಪ, ಯಸ್. ಯಂ. ಉದ್ಯಾವರ, ಕುಪ್ಪ ಬಿ ಅವಿನ್, ಬ್ಯಾಮು, ಜೆ ಸುವರ್ಣ, ಕೈಪುಂಜಾಲು ಕಾಡ್ಯ, ಶೀನ ಎ. ಕೋಟ್ಯಾನ್, ಯಚ್. ತನಿಯಪ್ಪ, ವೀರಪ್ಪ ಆಮಿನ್.

ಗಂಗಯ ಸ್ಮಾರಕ ಭಂಡು, ಮುಂಬಾಯಿ:-ಈ ಸಂಸ್ಥೆಯ ಕಾರ್ಯಕಾರಿ ಸಮಿತಿಗೆ ಇತನಿಯ ಹೊಸ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನು ಆರಿಸಲಾಗಿದೆ. ೧ ಶ್ರೀಗಳಾದ ದತ್ತ ಯಸ್. ಸುವರ್ಣರು (ಅಧ್ಯಕ್ಷರು) ೨ ಲಕ್ಷ್ಮಣ ನೈ. ಸುವರ್ಣರು ಮತ್ತು ೩ ಕೃಷ್ಣಪ್ಪ ಎ. ಬಂಗೇರರು (ಗೌ. ಕಾರ್ಯದರ್ಶಿಯರು) ೪ ಬಾಬು ಟಿ. ಸಾಲ್ಯಾನರು (ಕೋಶಾಧಿಕಾರಿ). ೫ ರಾಜು ಜೆ. ಶ್ರೀಯಾನರು. ೬ ಸೇಸು ಜಿ. ಸುವರ್ಣರು ೭ ವಾಮೋದರ ಯಸ್. ಸುವರ್ಣರು ೮ ವಾಮನ ಪಿ. ಕರ್ಕೇರರು ಮತ್ತು ೯ ಸೀನ ಜೆ. ಕುಂದರರು (ಸದಸ್ಯರು) ಎಂದು ಕಾರ್ಯದರ್ಶಿಯವರು ಸೂಚಿಸುತ್ತಾರೆ.

ಮದ್ರಾಸು ಸಂತಾಪಸೂಚಕ ಸಭೆ

ಕರ್ನಾಟಕ ಮಿತ್ರಮಂಡಳಿ, ಮದ್ರಾಸು ಇದರ ಸಭೆಯು ಕಳದ ಶಾ 24ರಲ್ಲು ತಂಬುಚೆಟ್ಟಿ ಬೀದಿಯ ಹರಿನಿವಾಸದಲ್ಲಿ ಸೇರಿ ಮಂದಿಯ ಅಗ್ಮಿಕ್ಷರಾದ ಡಾ। ಎಚ್. ಎಸ್. ರಾಯರ ಅಕಾಲಮರಣದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಗಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಕುಟುಂಬದವರಿಗೆ ಉಂಟಾದ ಶೋಕವನ್ನು ಸಹಿಸುವ ಶಕ್ತಿಯನ್ನು ದಯಪಾಲಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸಲಾಯಿತು. ದಿವಂಗತರು ಅಖಿಲಭಾರತ ದಂತವೈದ್ಯ ಸಂಘದ ಮೊದಲು ಅಧ್ಯಕ್ಷರಾಗಿದ್ದು ಕನ್ನಡ ಸಾಹಿತ್ಯ, ಸಂಗೀತಾದಿಗಳಲ್ಲಿ ವಿಶೇಷ ಸೇವೆಯನ್ನು ಸಲ್ಲಿಸಿದ್ದರು.

[೧ನೇ ಪುಟದಿಂದ]

ರೀ ನಾಯಕರಿಗೆ ಅಡಳಿತೆಯ ಪೂರ್ಣಾನುಭವ ದೊರಕಿಸಿ ಕೊಟ್ಟ ವರುಷ-ಅವರ ಯೋಗ್ಯತೆಯು ಸರ್ಟಿಫಿಕೇಟನ್ನು ಪಡೆದ ಇಸವಿ—ನಿಜಕ್ಕೂ 1948.

ಸ್ವತಂತ್ರ ಭಾರತದಲ್ಲಿ—ರಾಷ್ಟ್ರ ಪ್ರೇಮಿ ಯೋಧರು ಕಾಶ್ಮೀರ, ಹೈದರಾಬಾದುಗಳಲ್ಲಿ ಯುದ್ಧದ ಪ್ರತ್ಯಕ್ಷ ಪಾಠ ಕೊಟ್ಟುದೂ ಗೃಹ ವ್ಯವಸ್ಥಾ ಪಾಲಕ ಪೋಲೀಸರು ಗೊಂದಲ ನಿಯಂತ್ರಣದಲ್ಲಿ ಅಧ್ಯಾಯ ಹೊಂದಿದುದೂ 1948ರಲ್ಲೇ.

ಪಾನ ನಿಷೇಧ ಪೂರ್ಣತೆ-ಹರಿಜನ ದೇವಾಲಯ ಪ್ರವೇಶ-ಜಮೀನ್ದಾರೀ ಬಿರ್ಮಿಸ್ತು-ಹಲವು ಮುಖ್ಯರಿಗಾಗಲಿಂದೋಲನಗಳ ನೇಲೆ ವಿಜಯ-ಮುಂತಾದುವನ್ನು ಮದ್ರಾಸ್ ಸರಕಾರವು ಸಾಧಿಸಿದ್ದಿತು. ಮಿಕ್ಕ ವ್ರಾಂತಿಕ ಸರಕಾರಗಳೂ ವ್ರಾಂತ್ಯೋಚಿತ ಮಹತ್ಕಾರ್ಯಗಳನ್ನು ಮಾಡಿದ್ದುವು.

ಜನತೆಯು ಅನ್ನ ವಸ್ತ್ರಗಳ ಅಭಾವ ಮತ್ತು ಚಿತ ಪ್ರಸವಣೆಯಿಂದೆದ್ದಿರುವ ವಿವಿಧ ಸಂಕಷ್ಟಗಳನ್ನು ಕಳದ ವರುಷ ಸಾಕಷ್ಟು ಅನುಭವಿಸಿದೆ. ರಾಜಕೀಯ ಜ್ಞಾನ ಮತ್ತು ತಪ್ಪಸ್ಥಿತಿಗತಿಗಳ ತಿಳುವಳಿಕೆಯ ಸ್ಪೈರ್ಯ ಪ್ರತಿಗಳನ್ನು ಹಿಂದೀ ಜನಸಾಮಾನ್ಯರಿಗೆ 1948 ಕೊಟ್ಟಿದ್ದಿತು.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA

Regd. No. M. 3618 ಎರಡಾನೆ 13-1-1949

ಅಂತರಂಗ
ಹೊಸ ನೂದರಿಯ
ವಾರ ಪತ್ರಿಕೆ

ಜಾಹೀರಾತಿಗೆ ಉತ್ತಮ
ಸಾಧನ ನಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೨೦

NAVAYUGA WEEKLY, UDIPI, S. K.

FOUNDER: Hon'ble Mr. A. B. SHETTY, Health Minister, Govt. of Madras.

Vol. 29
No. 20

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾಭಿ ಸೀತಾರಾಮಯ್ಯನವರು, ತನ್ನ ಅವಧಿಯ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಾಗಿ ಈ ಕೆಳಗಿನ 19ಮಂದಿಯನ್ನು ಆರಿಸಿಕೊಂಡಿದ್ದಾರೆ:- ಪಂಡಿತ ಜವಾಹರ ಲಾಲ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಮೌಲಾನಾ ಅಬುಲ್‌ಕಲಮ್ ಆಜಾದ್, ರಾಫಿ ಅಹಮ್ಮದ್ ಕಿಡ್ವಾಯಿ, ಶ್ರೀ ಜಗಜ್ಜೀವನ ರಾವ್, ಪಂಡಿತ ಗೋವಿಂದ ವಲ್ಲಭಪಂತ್, ಸರ್ದಾರ್ ಪ್ರತಾಪ ಸಿಂಗ್, ಡಾ। ರಾಜೇಂದ್ರ ಪ್ರಸಾದ್, ಡಾ। ಪ್ರಫುಲ್ಲಚಂದ್ರ ಘೋಷ್, ಶ್ರೀ. ಶಂಕರ ರಾವ್ ದೇವ್, ಶ್ರೀಮತಿ ಸುಚೇತಾ ಕೃಪಲಾನಿ, ಶ್ರೀ ಕಲಾ ವೆಂಕಟರಾವ್, ಶ್ರೀ. ಯಸ್. ಕೆ. ಪಾಟೀಲ್, ಪ್ರೊ. ಎನ್. ಜಿ. ರಂಗ, ಕೆ. ಕಾಮರಾಜ ನಾಡರ್, ಶ್ರೀ ದೇವೇಶ್ವರ ಶರ್ಮ, ಶ್ರೀ. ನಿಜಲಿಂಗಪ್ಪ, ಶ್ರೀ ಗೋಕುಲ್‌ಭಾಯಿ ಭಟ್, ಶ್ರೀ. ರಾಮ್ ಸಹಾಯ್,

ಶ್ರೀ ಕಲಾ ವೆಂಕಟರಾವ್ ಮತ್ತು ಶ್ರೀ ಶಂಕರರಾವ್ ದೇವ್ ಈ ಕಾರ್ಯದರ್ಶಿಗಳಾಗಿಯೂ ಸರ್ದಾರ್ ವಲ್ಲಭಭಾಯಿ ಪಟೇಲರು ಖಜಾನ್ಚಿಯಾಗಿಯೂ ಇರುವರು.

ಅಗ್ರಗಣ್ಯ ನಾಯಕರು ಮಾತ್ರವಿರುವ "ಹೈಕಮಾಂಡ್"ನ ಕಾಲಕಳೆದು ರಾಷ್ಟ್ರದ ಎಲ್ಲಾ ಭಾಗಗಳ ಪ್ರತಿನಿಧಿ ಸ್ವರೂಪದ ಹೆಚ್ಚು ಸಂಖ್ಯೆಯ ಕಾರ್ಯಕಾರೀ ಸಮಿತಿ ಬಂದುದೇ ಈ ಬಾರಿಯ ನವೀನತೆ. ಇದಕ್ಕನುಗುಣವಾಗಿ, ರಾಷ್ಟ್ರಕ್ಕೆ ವಿಶೇಷ ಪರಿಚಯವಿಲ್ಲದ ಹಲವು ಮುಖಗಳನ್ನು ಈ ಬಾರಿಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಕಾಣುವಂತಾಗಿದೆ.

ಈ ಹಂತ್ಕೊಭತ್ತು ಮಂದಿಯ ಪಟ್ಟಿಯಲ್ಲಿ ಬಂದಿರುವ ಮೊದಲಿನ ಏಳರು -ನೆಹರು ಪರೇಲ್, ಆಜಾದ್, ಕಿಡ್ವಾಯಿ, ರಾಜಪುತಾನ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರಾಗಿರುವ ಯಸ್. ಕೆ. ಪಾಟೀಲ್, ಎನ್. ಜಿ. ರಂಗ, ಕೆ. ಕಾಮರಾಜ ನಾಡರ್, ನಿಜಲಿಂಗಪ್ಪ, ದೇವೇಶ್ವರ ಶರ್ಮ, ಗೋಕುಲ ಭಾಯಿಭಟ್ಟರೂ ಗ್ವಾಲಿಯರ್‌ದ್ದು -- ಮೂಲ್ವ ಸಂಸ್ಥಾನ ಕ್ಷೇತ್ರಗಳ ಪರವಾಗಿ ರಾಮ್ ಸಹಾಯರಿಗೂ ನೇಮಕಗೊಂಡಿರುವದು ಈ ಬಾರಿಯ ವೈಶಿಷ್ಟ್ಯ. ಕಾಂಗ್ರೆಸ್ ಹೈಕಮಾಂಡಿನಲ್ಲಿ ಕ್ಷೇತ್ರವಾರು ಪ್ರಾತಿನಿಧ್ಯ ತೋರಿ ಬಂದಿರುವುದು ಇವರಿಂದಾಗಿಯೇ.

ಜಗಜ್ಜೀವನರಾಮ್ ---ಕೇಂದ್ರ ಸರಕಾರದ ಮಂತ್ರಿಗಳು. ಮೂವರು--- ಪಂತ್, ವೆಂಕಟರಾವ್, ಪ್ರತಾಪ ಸಿಂಗ್- ಪ್ರಾಂತೀಕ ಸರಕಾರಿಗಳ ಮಂತ್ರಿಗಳು. ಡಾ। ಪ್ರಫುಲ್ಲ ಚಂದ್ರ ಘೋಷರು ಪಶ್ಚಿಮ ಬಂಗಾಳದ ಮಾಜೀ ಪ್ರಧಾನಿ.

ಗಾಂಧೀಯುಗವಾರಂಭಿಸಿದಂದಿನಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಶಾಶ್ವತ ಸದಸ್ಯರಂತಿದ್ದು, ಕೊನೆಯ ಪಕ್ಷ ಒಂದು ಬಾರಿಯಾದರೂ ಅಧ್ಯಕ್ಷ ಗಾದಿಗೇರಿ "ಇವರಿಲ್ಲದೆ ಹೈಕಮಾಂಡ್ ಇಲ್ಲ"ಎಂಬಂತಾಗಿದ್ದು ನೆಹರು, ವಲ್ಲಭಭಾಯಿ, ಆಜಾದ್, ಪ್ರಸಾದರು ಈ ಬಾರಿಯೂ ಇದ್ದಾರೆ. ಗಣ್ಯ ಗೈರುಹಾಜರಿಗಳೆಂದರೆ ಗವರ್ನರ್ ಮತ್ತು ಗವರ್ನರ್ ಜನರಲರಾಗಿರುವ ಸರೋಜನಿ ಮತ್ತು ರಾಜಾಜಿ. ಭಿನ್ನಾಭಿಪ್ರಾಯದ ದೆಸೆಯಿಂದ ಕಾಂಗ್ರೆಸ್ ನಾಯಕ ಮಂಡಳಿಯಿಂದ ದೂರನಾಗಿರುವ ಆಚಾರ್ಯ ಕೃಪಲಾನಿಯ. ಅನುಶ್ರಮವಾಗಿ ಬೊಂಬಾಯಿ, ಆಂಧ್ರ, ತಮಿಳುನಾಡು, ಕರ್ನಾಟಕ, ಅಸ್ಸಾಮ್, ಜತೆಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವ ಶ್ರೀ. ಕಲಾ ವೆಂಕಟರಾಯರು ಮತ್ತು ಶ್ರೀ. ಶಂಕರ ರಾವ್ ದೇವ್ರೋ ಇವರ ಸೈಕಿ ಮೊ ಬಲನೆಯವರು ಮದ್ರಾಸ್ ಮಂತ್ರಿ ಮಂಡಲದ ಮುಖ್ಯ ಸದಸ್ಯರು; ಮದ್ರಾಸ್ ಸರಕಾರದ ರೆವಿನ್ಯೂ ಮಂತ್ರಿಗಳು ಡಾ। ಪಟ್ಟಾಭಿಗಳ ಆಂಧ್ರ ಪ್ರಾಂತ್ಯದವರೇ ಇದ್ದು, ಪಟ್ಟಾಭಿ ಅಧ್ಯಕ್ಷರಾದಿಗಾರಿಸಲ್ಪಟ್ಟಾಗಲೇ "ಆಂಧ್ರರೆಲ್ಲಾ ಆರಡಿ ಉದ್ದ ಬೆಳೆದರು!"ಎಂದು ಹಿಗ್ಗಿದವರು ಎರಡನೆಯವರು ಕಳದ ವರುಷವೂ ಕಾಂಗ್ರೆಸಿನ ಜನರಲ್ ಸೆಕ್ರೆಟರಿಯಾಗಿದ್ದವರು. ಖಜಾನ್ಚಿಯಾಗಿರುವ ಸರ್ದಾರ್ ಪಟೇಲರಿಗೆ ಹಲವು ವರುಷಗಳಿಂದಲೂ ಆ ಸ್ಥಾನ ಇದ್ದದ್ದೇ.

ಮಜ್ಯಾಸಿನ ಈಗಿನ ಮಂತ್ರಿಮಂಡಲದ ಕುರಿತೂ ಕಾಂಗ್ರೆಸ್ ಪಕ್ಷೀಯಂಲ್ಲಿ ಒಡಕುಂಟಾಗಿದೆಯೆಂದೂ ಇನ್ನು ಒಂದೆರಡು ತಿಂಗಳುಗಳ ಅವಧಿಯಲ್ಲಿ ನಡೆಯಲಿರುವ ಕಾಂಗ್ರೆಸ್ ಪಕ್ಷೀಯ ಶಾಸನಸಭಾ ಸದಸ್ಯರ ವಾರ್ಷಿಕ ಸಭೆಯಲ್ಲಿ ನಾಯಕ ಬದಲಾವಣೆ ನಡೆಯಬಹುದೆಂದೂ ಸುದ್ದಿ ಹಬ್ಬರುವಾಗಲೇ ಈ ಮಂಡಲಿಯ ಸಮರ್ಥದಲ್ಲೊಬ್ಬರಾದ, ಕಂದಾಯ ಮಂತ್ರಿತ್ವದಂತಹ ಪಟುಖ್ಯ ಖಾತೆಯನ್ನು ನಿರ್ವಹಿಸುತ್ತಿದ್ದ ಶ್ರೀ. ಕಲಾ ವೆಂಕಟರಾಯರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ, ಅತ್ತ ಹೊರಟು ಹೋದುದರಿಂದ ಇಲ್ಲಿ ಹಲವು ಊಹಾ ಪೋಹಗಳಿದ್ದವು. ಕಾರ್ಯಕಾರೀ ಸಮಿತಿಯ ಸದಸ್ಯನಾಗಿದ್ದುಕೊಂಡು ಪ್ರಾಂತೀಕ ಮಂತ್ರಿಯಾಗಿರಬಹುದಾದರೂ ದೈನಂದಿನ ಕಾರ್ಯನಿರ್ವಹಿಸುವ ಕಾರ್ಯದರ್ಶಿಯಾಗಿದ್ದುಕೊಂಡು ಮಂತ್ರಿಸ್ಥಾನದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಶ್ರೀ. ಕಲಾ ವೆಂಕಟರಾಯರನ್ನು ಕಾರ್ಯದರ್ಶಿಯಾಗಿ ಆರಿಸಿಕೊಳ್ಳುವ ಮೊದಲು ಎಲ್ಲಾ ಸ್ಥಿತಿಗತಿಗಳ ಪರ್ಯಾಲೋಚನೆ ನಡೆದಿತ್ತು. ಈಗ ಕಲಾ ಅವರು ಮದ್ರಾಸ್ ಮಂತ್ರಿತ್ವ ಕ್ಕೆ ರಾಜೀನಾಮೆಯೊಪ್ಪಿಸಿಯೇ ನವಢಿಲ್ಲಿಯ ಪ್ರಧಾನ ಕಾರ್ಯಾಲಯದ ಕಾರ್ಯಕಾರೀ ಸಮಿತಿ ಸಭೆಗೆ ಹಾಜರಾಗಲು ಹೊರಟು ಹೋಗಿದ್ದಾರೆ.

ಸಮತಾವಾದಿ ಸಮಾಜವಾದಿ ಪಕ್ಷೀಯರು ಕಾಂಗ್ರೆಸಿನಿಂದ ಹೊರಬಿದ್ದಿದ್ದರೂ ಸಮತಾವಾದದ ತತ್ವ ಮೂಲವ ಮನೋನೈತ್ಯಯವು ಕೂಡಾ ಪ್ರಜಲಿತ ಆರ್ಥಿಕ ಸ್ಥಿತಿಯ ಆರಾಧಕರಾದ ಡಾ. ಪಟ್ಟಾಭಿಗಳ ಮಂತ್ರಿ ಮಂಡಲದಲ್ಲಿಲ್ಲದಿರುವದೊಂದು- ಆಂಧ್ರ ಪ್ರಾಂತ್ಯರಚನೆಯಲ್ಲಿ ಅಗಕ್ಯಂರುವ ಪಟ್ಟಾಭಿಗಳು ಆಂತರ ಭಾಷಾನ್ವಯ ಪ್ರಾಂತ್ಯಂರಚನಾಸಕ್ತಿಯು ಅತುರವಾಗಿ ದೆಳೆದಿರುವ ಕ್ಷೇತ್ರದ ಪ್ರಾಂತೀಕ್ಯಕ್ಷರುಗಳನ್ನು ತನ್ನ ಮಂಡಲಿಗಾರಿಸಿಕೊಂಡಿರುವುದಿನ್ನೊಂದು.- ಒಡೆದು ತೋರುವ ವಿಷಯುಗಳ..

ಕಾಂಗ್ರೆಸ್ ಕಾರ್ಯಶಾಲಕರಾದ ಅಧ್ಯಕ್ಷ ಮತ್ತು ಇಬ್ಬರು ಕಾರ್ಯದರ್ಶಿಗಳೂ ಭಾಷಾವಾರು ಪ್ರಾಂತ್ಯರಚನೆಯು ಪ್ರಸ್ತುತದಲ್ಲೇ ಆಗಬೇಕೆನ್ನುವವು. ಪ್ರ

[ಉಳಿದ ಪುಟ ನೋಡಿರಿ]

ನಿಮ್ಮ ಮೆಚ್ಚಿನ
ಸುವಾಸನೆಯ ಸ್ವಾದವುಳ್ಳ
ಪ್ರಭಾತ ಚಾ ಮತ್ತು ಕಾಫಿ
ರಾಜಾ ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR (Niligiris)

ವಿಮೆಮಾಡಲಿಕ್ಕೆ ಯಾ ಪ್ರತಿನಿಧಿ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED

ಕೇಡೀ ನಿವಾಸ ಅಂದಮಾನ್ ನಿರಾಶ್ರಿತ ನಿಲಯವಾಗಲಿದೆ!

"ಹೋ! ಅವ ತಾಜಾ ಅಂದಮಾನಿನವ" ಎಂದರೆ ವರಮಾನವಧಿ ಕೇಡಿಯೆಂದೂ "ಅವ ಬಸ್ಸಿಕ್ಕೆ ಹೆಣ ಹೊರಲು ಪೋದೊರಂತೀತು" ಎಂದಾಗ ತೀರಾ ನಿಷ್ಪ್ರಯೋಜಕನೆಂದೂ ನಮ್ಮಲ್ಲಿ ವಾಡಿಕೆಯಾಗಿರುವ ಅರ್ಥ. ಜೀವನ ವಧಿ ನಿಜ ದೊರೆತವರನ್ನು ಅಂದಮಾನಿಗೆ ಕಳುಹಿಸುತ್ತಾರೆ.--ಅದೊಂದು ನರಕವೇ ಆಗಿರಬೇಕು– ಫಾಶಿಗೇರಿಸಿ ಪರಲೋಕಕ್ಕೆ ಕಳುಹುವ ಬದಲಿಗೆ, ಹೀಗೆ ಮಾಡಿ ಈ ಲೋಕದಿಂದ ಪ್ರತ್ಯೇಕವಿರುವ ಅಂದಮಾನಿಗೆ ರವಾನಿಸುವದರಿಂದ ಆದಕ್ಕೂ ಇದಕ್ಕೂ ವಿಶೇಷ ವ್ಯತ್ಯಾಸವಿಲ್ಲ-- ಎಂಬೊಂದು ನಂಬಿಕೆ ಸಾಮಾನ್ಯವಾಗಿದೆ. 1948ರ ಸುಮಾರಿಗೆ ಅಂದಮಾನ್ ದ್ವೀಪಗಳನ್ನು ಜಪಾನಿಯರು ಹಿಡಿದುಕೊಂಡರು ಎಂಬ ವಾರ್ತೆ ಬಂದಾಗ ಅವುಗಳ ವಿಸ್ತಾರ ಹಾಗೂ ವ್ಯಾವಹಾರಿಕತೆಗೆ ಮಿಕ್ಕಿರುವ ಮಹತ್ವವು ಅಸುದ್ದಿಗ್ಲಿದ್ದೂ ದೊಡ್ಡ ದೊರೆತಿತ್ತು.ಮಹಾಪರಾಧಿಗಳನ್ನು ಒಯ್ದಿಡುವ ಕ್ಷೇತ್ರವಾಗಿದ್ದು, ಸಮುದ್ರದಿಂದ ವಿಂಗಡಿಸಲ್ಪಟ್ಟು ಉದರೊಡನೆ ಸರಿಯಾದ ಹೊಣ್ಣುಬಳಕೆ ಇಲ್ಲಿಯವರಿಗಿಲ್ಲದಿರುವ ಕಾರಣವೊಂದನ್ನು ಬಿಟ್ಟರೆ, ಅಂದಮಾನಿಗೆ ಹೆದರುವ ಅವಶ್ಯಕತೆಯೇ ಇಲ್ಲ; ಅದರ ನಿಜಸ್ಥಿತಿಯನ್ನು ಅರಿತರೆ, ಸಂಗತಿಯರಿಯದವರ ತಲೆಯಲ್ಲಿ ಈಗಲೂ ಇದ್ದಿರಬಹುದಾದ ಅದು 'ಜೈಲಿಗೂ ಜೈಲು' ಎಂಬ — ಅದರ ಸುತ್ತಲೂ ಬಲವಾದ ಕೋಟೆಯಿದ್ದು, ಒಳಗೆ ಪ್ರತ್ಯೇಕ ನರಕವೇ ಆಗಿರಬೇಕು ಎಂಬ ಚಿತ್ರವೇ ಮಾಯಾನಗರಿಯಂತೆ ಅಂತರ್ಧಾನವಾದೀತು. ಜಾತೀಯ ಗಲಭೆಗಳಿಂದ ನಿರಾಶ್ರಿತರಾದವರನ್ನು-ಆ ಗಲಭೆಗಳನ್ನೆಬ್ಬಿಸಿ ಕೊಲೆ ದರೋಡೆಗಳನ್ನು ನಡೆಸಿದ್ದ ಕೇಡಿಗಳನ್ನಲ್ಲ– ಅಂದಮಾನಿನಲ್ಲಿ ಸ್ಥಾಪಿಸುವ ಯೋಜನೆಯನ್ನು ಸರಕಾರವೀಗ ಕೈಗೊಂಡಿದೆ. ಅದು ಶಿಕ್ಷೆಯಲ್ಲ, ರಕ್ಷಣೆ! ಆ ಭೂಮಿ ಸಾಯಲಬರ್ದನ್ನು ನಿವರ ಕ್ಷೇತ್ರವಾಗುವ ಬದಲು ಬದುಕಲು ಯೋಗ್ಯರಿರುವವರ ನಿಲಯವಾಗಿ ಮಾರ್ಪಡಲಿದೆ. ಇತ್ತೀಚೆಗೆ ಹಿಂದೀ ಸರಕಾರವು ಸಚ್ಚಿಮಬಂಗಾಳದ 'ನಿರಾಶ್ರಿತ ರಕ್ಷಣಾ ಖಾತೆ'ಯ ಮಂತ್ರಿ ಶ್ರೀ ಏಕುಂಜ ಬಿಹಾರಿ ವೈಲೆಯವರ ನಾಯಕತ್ವದಲ್ಲಿ,ಅಂದಮಾನನ್ನು ನಿವಾಸ ಯೋಗ್ಯ ವಸಾಹತಿಕಾಗಿ ಮಾರ್ಪಡಿಸಬಹುದೇ ಎಂಬುದನ್ನು ಗೊತ್ತುಹಚ್ಚಲು ಶೋಧಕ ಮಂಡಲಿಯೊಂದನ್ನಲ್ಲಿಗೆ ಕಳುಹಿದ್ದಿತು. ಆ ಮಂತಲಿಯವರು ಎಲ್ಲವನ್ನೂ ಶೋಧಿಸಿ ನೋಡಿ ವಾಸಾರ್ಹ ವಸಾಹತಾಗಿ ಮಾರ್ಪಡಲು ಅಂದಮಾನ್ ದ್ವೀಪಗಳು ಪೂರ್ಣ ಯೋಗ್ಯವಿವೆ" ಎಂದು ಶಿಫಾರಸು ಮಾಡಿದ್ದಾರೆ. ಅದು ನಿರಾಶ್ರಿತರು ಆಶ್ರಯ ಭೂಮಿ ಯಾಗಲಿದೆ. ಅನ್ಯರ ಪ್ರಾಣ, ಮನೆಗಳನ್ನು ತೆಗೆದವರು ಇನ್ನು ಅಲ್ಲಿಗೆ ಹೋಗುವನನ್ನು ನಿರೀಕ್ಷಿಸುವಾರದು. ಮನೆ ಭೂಮಿ ಕಳಕೊಂಡವರು ಅಂತಹ ಬಯಕೆ ಕಟ್ಟಕೊಂಡಲ್ಲಿ ಅದು ಫಲಿಸಬಹುದೇನೊ!

ಆ ದ್ವೀಪಸಮೂಹ

"ಅಂದಮಾನ್"ಎನ್ನುವದು ಬಂಗಾಳಾಖಾತದಲ್ಲಿಯನ್ನಿರುವ ಸಮುದ್ರ ಮಧ್ಯದಲ್ಲಿರುವ ದ್ವೀಪಗಳ ಸಮೂಹಕ್ಕೆ. ಈ ಗುಂಪಿನಲ್ಲಿ 200ಕ್ಕೂ ಮಿಕ್ಕಿದ ಸಣ್ಣ ದೊಡ್ಡ ದ್ವೀಪಗಳಿವೆ. ಗುಂಪಿನ ಮುಖ್ಯ ಭಾಗಗಳು ಐದು. ಉತ್ತರ ಅಂದಮಾನ್, ಮಧ್ಯ ಅಂದಮಾನ್, ದಕ್ಷಿಣ ಅಂದಮಾನ್, ಬಂಟಾಂಗ್ ದ್ವೀಪಗಳು ಮತ್ತು ರಟ್ಲೆಂಡ್ ದ್ವೀಪಗಳು; ಕೊನೆಯವೇ ಸರ್ವ ಸಾಮಾನ್ಯವಾಗಿ 'ದೊಡ್ಡ ಅಂದಮಾನಗಳು' ಎಂದು ಕರೆಯಲ್ಪಡುತ್ತಿವೆ. ಈ ಅಂದಮಾನು ಮತ್ತು ನಿಕೋಬರ್ ದ್ವೀಪಗಳು ಒರ್ವ ಚೀಫ್ ಕಮಿಶರನ ಆಡಳಿತೆಯೊಳಗಿವೆ. ದಕ್ಷಿಣ ಅಂದಮಾನ್ ದ್ವೀಪ ಗುಂಪುಗಳಲ್ಲಿರುವ ಬ್ಲಯರ್ ಬಂದರ (ಪೋರ್ಟ್ ಬ್ಲಯರ್)ದಲ್ಲಿ ಈ ಆಡಳಿತೆಯ ಹೆಡ್ಡಾಫೀಸಿದೆ. ಪೋರ್ಟ್ ಬ್ಲಯರಿಗೆ ಕಲ್ಕತ್ತದಿಂದ 780 ಮೈಲು; ಮದ್ರಾಸಿನಿಂದ 740 ಮೈಲು, ರಂಗೂನಿನಿಂದ 360 ಮೈಲು ದೂರವಿದೆ. ಇಡೀ ಅಂದಮಾನ್ ದ್ವೀಪ ಸಮೂಹದ ತುತ್ತ ತುದೀ ಉದ್ದ 219 ಮೈಲುಗಳು; ತುದೀ ಅಗಲ 32 ಮೈಲುಗಳು. ಒಟ್ಟಗೆ 2508 ಚದರ ಮೈಲು ವಿಸ್ತೀರ್ಣವುಳ್ಳ ಭೂಭಾಗವಿದು. ಹಲವೆಡೆ ಜವುಗುಭೂಮಿಗಳಿಂದ ಆವರಿಸಲ್ಪಟ್ಟ ಹಳ್ಳಿಕೊಳ್ಳಿಗಳೂ ಹಲವು ಸುರಕ್ಷಿತ ಳೆಗಳೂ ಉಳ್ಳ ಅದರ ಕರಾವಳಿಯು ಆಳವುಳ್ಳ ಬದಿ. ಅಲ್ಲಿಯ ಪ್ರದೇಶ ನೆಲೆಗಳಾದರೋ ಎಲ್ಲೆಲ್ಲಿಯೂ ಅ ಕರ್ಷಣೀಯ ಸೌಂದರ್ಯ ಹಾಗೂ ವೈವಿಧ್ಯವುಳ್ಳವುಗಳು.ಸದಾ ಹಸುರಾಗಿರುವ ನಿಬಿಡವಾದ ಹಾಗೂ ಎತ್ತರಕ್ಕೆ ಬೆಳೆದಿರುವ ಮರಗಳು--ಅವುಗಳನ್ನು ಸುತ್ತಿರುವ ಬಳ್ಳಿಗಳು, ಪೊದೆಗಳು– ಅಲ್ಲಲ್ಲಿ ಬಿದಿರು ಗುಂಪುಗಳಿಂದ ಅದು ಸಸ್ಯಸಮೃದ್ಧ ಭೂಮಿಯಾಗಿದೆ.

ದಕ್ಷಿಣ ಅಂದಮಾನ್ ಕ್ಷೇತ್ರವು ಸುಮಾರು 473 ಚದರ ಮೈಲಿಷ್ಟಿದೆ. ಅದರ ಕೆಲವಂಶ ಭಾಗವು ಬೇಸಾಯ, ಹುಲ್ಲುಗಾವಲು ಹಾಗೂ ಅರಣ್ಯಸಂಪತ್ತಿನ ಬೆಳಸುವಿಕೆಗನುಕೂಲವಿದೆ. 19ನೇ ಶತಮಾನದಲ್ಲೇ ಬ್ಲಯರ್ ಬಂದರದಲ್ಲಿ ಒಂದು ದಂಡನಾ ಕೇಂದ್ರ ತೆರೆಯಲ್ಪಟ್ಟಿದ್ದಿತು. ಒಳದ ಮಹಾಯುದ್ಧದಲ್ಲಿ 1945ರಲ್ಲಿ ಜಪಾನಿಯರಿಂದ ಮರು ಸ್ವಾಧೀನ ಪಡಿಸಿಕೊಂಡ ಮೇಲೆ ಅದನ್ನು ಪೂರ್ತಿ ಮುಚ್ಚಿ ಬಿಡಲಾಗಿದೆ.

ಅಂದಮಾನಿನ ಹವಾಮಾನವು ತಂಪಾದದ್ದು ಹಾಗೂ ತ್ಯಾವವುಳ್ಳದ್ದು. ಅಲ್ಲೊಂದು ನಿಶ್ಚಿತ ಪರಿಮಾಣದಲ್ಲಿ ಮಳೆ ಬೀಳುವದೆಂದಿಲ್ಲ. ಆದರೆ ಹೆಚ್ಚಿನ ಮಳೆ ಬರುವದು ನೈಋತ್ಯ ಗಾಳಿಯ ಮಳೆಗಾಲದಲ್ಲಿ. ಮೇ-ತಿಂಗಳಿಂದಾರಂಭಿಸಿ ಸೆಪ್ಟೆಂಬರದ ವರೆಗಿರುವ ಈ ನೈಋತ್ಯ ಮಳೆಯಂತೆಯೇ ನವಂಬರದಿಂದ ಜನವರಿವರೆಗಿನ ವಾಯುವ್ಯಮಳೆಯೂ ಇಲ್ಲಿ ಇದೆ. ಬ್ಲಯರ್ ಬಂದರದಲ್ಲಿ ಸರಾಸರಿ 116 ಇಂಚು ಗಳಷ್ಟು ಮಳೆ ಬೀಳುತ್ತದೆ.

ಒಳಗಿನ ಸ್ಥಿತಿಗತಿ

ಅಂದಮಾನ್ ದ್ವೀಪಗಳ ಸದ್ಯದ ಜನಸಂಖ್ಯೆ ಸುಮಾರು 14,500. ಆ ಪೈಕಿ ಭಾರತೀಯರೇ 11885. ನಿವಾಸ ಕ್ಷೇತ್ರವು, ಇತ್ಯಾದ್ಯವಲಂಬನಗಳಿಂದ ವಿಂಗಡಿಸಲ್ಪಟ್ಟ ಗುಡ್ಡವಲಯಗಳುಳ್ಳದ್ದಾಗಿದೆ. ಆದರೆ ಅದನ್ನು ಸುತ್ತಮುತ್ತಲಿನ ಹಚ್ಚೆನ ಹಳ್ಳಿಗಳಿಂದ ಜೋಡಣೆಗೊಳಿಸುವ ಉತ್ತಮ ರಸ್ತೆಗಳು ಇಲ್ಲವೆ. ಪಶ್ಚಿಮ ಮತ್ತು ಉತ್ತರಗಡೆಯಲ್ಲಿ ಅತಿ ಮೇಲ್ಮಡೆಯಲ್ಲೇ ನೀರಿದ್ದು, ವರುಷವಿಡೀ ದಕ್ಷಿಣದಿಂದ ಉತ್ಪಾದಿಸುವಾಗಿ ಹರಿಯುತ್ತಿರುವ ಕಾಲುವೆಗಳು ಬಹಳವಿವೆ. ಅಂದಮಾನ್ ದ್ವೀಪದ ಎಲ್ಲೆಡೆಯಲ್ಲೂ ಶುದ್ಧ ನೀರು ಬೇಕಾದಷ್ಟಿದೆ. ನೀರಿನ ಸೌಗಮ ಸಂಚಾರಕ್ಕನುಕೂಲವಾದ ಜಲದ್ವಾರಗಳೂ ಕಣಿಗಳೂ ಅಲ್ಲಿ ಅಧಿಕ ಸಂಖ್ಯೆಯಲ್ಲಿವೆ.

ಸಾಧ್ಯವಿದ್ದಷ್ಟು ಹರಕುಮುರುಕು ಶಬ್ದಗಳ ಹಾಗೂ ವಿವಿಧ ರೀತಿಯ ವಿಲಕ್ಷಣ ಉಚ್ಚಾರಗಳ ಉರ್ದು ಧಾಪೆಯೇ ಅಲ್ಲಿ ಸರ್ವ ಸಾಮಾನ್ಯ. ಈಗ 'ಭಾರತೀಯ ಅಂದಮಾನಿಗಳು' ಎಂದು ಹೇಳಿಸಿಕೊಳ್ಳುತ್ತಿರುವ ಅಲ್ಲಿಯೇ ಹುಟ್ಟಿದವರ ಮಾತೃಭಾಷೆ ಅದು.

ಇನ್ನು ಆರೋಗ್ಯದ ದೃಷ್ಟಿಯಿಂದ ನೋಡಿದರೆ ಅಂದಮಾನ್ ದ್ವೀಪಗಳು ವಾಸಯೋಗ್ಯ ವಸಾಹತಾಗಿ ಮಾರ್ಪಡಲು ಅತ್ಯಂತ ಯೋಗ್ಯವಿವೆ. ಹವಾಮಾನವು ಉತ್ತಮ ಹಾಗೂ ಸರಿಯಾದ ಉಷ್ಣ ಪರಿಮಾಣವುಳ್ಳದ್ದಿದೆ. ನುಸಿಗಳು ಕಡಿಮೆ. ಜನರು ಒಳ್ಳೇ ಆರೋಗ್ಯವಾಗಿ ಇದ್ದಾರೆ. ಮಾಂಸಾಹಾರಿ ವ್ಯಗಳು ಅಲ್ಲಿಲ್ಲವೇ ಇಲ್ಲ. ಪ್ಲೇಗು, ಸಿಡುಬು, ಕೊಲೆರಾ ಅಲ್ಲಿ ಹುಟ್ಟಿದುದೇ ಇಲ್ಲ. ಮಲೇರಿಯವು ಅಪರೂಸ.

ಪ್ರಕೃತ ಭಾರತ ಸಂತ್ತು ಈ ದ್ವೀಪಗಳೊಳಗಿರುವ ಸಂಚಾರ ವಹಿವಾಟುಗಳೆಲ್ಲವೂ ಸಮುದ್ರ ಮಾರ್ಗವಾಗಿ ಮಾತ್ರ. 'ಟರ್ನರ್ ಮೊರಿಸನ್ ಎಂಡ್ ಕೊ'ದವರ 'ಯಸ್. ಯಸ್. ಮಹಾರಾಜ' ಹಡಗವನ್ನು ಅಂದಮಾನ್ ಆಡಳಿತೆಯು ಪರವಾಗಿ ಭಾರತ ಸರಕಾರವು ಬಾಡಿಗೆಗೆ ಹಿಡಿದಿದ್ದು ಅದು ಸರದಿ ಪ್ರಕಾರ ಕಲ್ಕತ್ತ ಮತ್ತು ಬ್ಲಯರ್ ಬಂದರ ಹಾಗೂ ಮದ್ರಾಸ್ ಮತ್ತು ಬ್ಲಯರ್ ಬಂದರಗಳ ನಡುವೆ ಓಡಾಡುತ್ತಿದೆ. ಈ ಹಡಗವು ಪ್ರತಿನ್ನೆದು ದಿನಕ್ಕೊಮ್ಮೆ ಕಲ್ಕತ್ತಕ್ಕೂ ಎರಡು ತಿಂಗಳುಗಳಿಗೊಮ್ಮೆ ಮದ್ರಾಸಿಗೂ ಬಂದು ಹೋಗುತ್ತಿದೆ. ಎರಡೂ ಕಡೆಯ ಪ್ರತಿಯೊಂದು ಪ್ರಯಾಣಕ್ಕೂ ಅದಕ್ಕೆ ಮೂರೂವರೆ ದಿನ ತಗಾಗುತ್ತದೆ. ಅಂದಮಾನಿನೊಳಗೆ ಸಂಚಾರೀ ಮೋಟಾರುಗಳು ದೊಂಕುತ್ತವೆ. ಪೋರ್ಟ್ ಬ್ಲಯರ್ ಮತ್ತು ಕೆಲವು ಹಳ್ಳಿಗ ನಡುವೆ ಕೆಲವು ಬಸ್ಸುಗಳು ಓಡಾಡುತ್ತಿವೆ. ಬ್ಲಯರ್ ಬಂದರದಲ್ಲಿ ಒಂದು ಟಪ್ಪಾಲು ಕಟ್ಟೆಯಿದ್ದು ಯಸ್. ಯಸ್. ಮಹಾರಾಜಾ ಹಡಗವು ಬಂದಷ್ಟು ಸಲ ಅಲ್ಲಿಯ ಟಪ್ಪಾಲುಗಳನ್ನು ಒಯ್ಯುತ್ತಿದೆ. ಜತೆಯಲ್ಲಿ ಅಲ್ಲಿಂದು ಟೆಲಿಗ್ರಾಫ್ ಆಫೀಸೂ ಇದೆ. ಸಾಮಾನ್ಯ ದಂದಲ್ಲೇ ವಯರ್‌ಲೆಸ್ ಮೂಲಕ ಇಲ್ಲಿಂದ ಭಾರತಕ್ಕೆ ಮಾತು ರವಾನೆಯಾಗುತ್ತಿದೆ. ಕಲ್ಕತ್ತಾ ಯ ನಿವರ್ಸಿಟಿಗೆ ಸೇರಿದ ಒ

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಸೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಳಲ್ಪಟ್ಟಿದೆ. ಪೋಷಿಸಿದಂತಿರುವ ನಮ್ಮ ಶಾಖೆಗಳು ಪಟ್ಟಣದ ಆರಳೆಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ--ಮಲಬಾರು ಜಿಲ್ಲೆಯ ತೆಂಗುಗಳ್ಳ ವೃಕ್ಷವಾಟಿಕೆಗಳಿರುವಲ್ಲಿ-- ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕರಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸಲಹತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ತೀಕ್ಷ್ಣ ಲಕ್ಷ್ಯ ದೊರೆವುದು.

he Canara Bank Limited.

ESTD: 1906.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ದು ಸರಕಾರೀ ಹೆಸರಾಂ ಎಲಿಸೆಂಟರಿ ಶಾಲೆ ಅಲ್ಲಿದೆ; ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 750. ಪೋರ್ಟ್‌ಬ್ಲೆಯರಿನಲ್ಲಿ ಒಂದು ಉತ್ತಮ ಸರಕಾರೀ ಆಸ್ಪತ್ರೆಯೂ ಇದೆ. ನೀರಿಗೆ ಕೆಲವು ಗ್ಯಾಮಗಳಲ್ಲಿ ತೊಂದರೆಯಾದರೂ ಬ್ಲೂಯರ್ ಬಂದರಿನಲ್ಲಿದೆ; ಅಲ್ಲೊಂದು ಐಸ್ ಫ್ಯಾಕ್ಟರಿಯೂ ಇದೆ. ಹೆಚ್ಚಿನ ಸಾಮಾನ್ಯಗಳನ್ನು ಭಾರತದಿಂದಲೇ ತರಿಸಿಕೊಂಡು ಸರಬರಾಯಿ ಖಾತೆಯವರು ಜಗತ್ಯಳ್ಳಿ ಆಹಾರ ಧಾನ್ಯಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಕಟ್ಟುನಿಟ್ಟಿನ ರೇಶನಿಂಗ್ ಪದ್ಧತ್ತು ಧಾರಾಳ ನಿಯಂತ್ರಣವು ಅಲ್ಲಿ ಜಾರಿಯಲ್ಲಿದ್ದು, ಸರ್ವಸಾಮಾನ್ಯವಾಗಿ ಭಾರತದಲ್ಲಿ ದೊರಕುವ ಆಹಾರ ವಸ್ತುಗಳೆಲ್ಲವೂ ನಿಯಂತ್ರಿತ ಬೆಲೆಗೆ ಇಲ್ಲಿಯೂ ದೊರಕುತ್ತವೆ. ಕಾಯಿ-ಪಲ್ಯಗಳು ಹಾಗೂ ಹಣ್ಣುಗಳು ಅಲ್ಲಿಯೇ ಬೆಳೆಸಲ್ಪಡುತ್ತಿದ್ದು, ಕೆಲವನ್ನು ಹೊರಗಿನಿಂದ ಆಮದು ಮಾಡಿಸಿಕೊಳ್ಳಲಾಗುತ್ತಿದೆ. ಅಕ್ಕಿ, ಕಬ್ಬು ಜೋಳ, ದವಸಧಾನ್ಯಗಳು, ತೆಂಗಿನ ಕಾಯಿ, ಹಣ್ಣುಹಂಪಲುಗಳು, ಕೆತ್ತಳೆ ಮತ್ತಿತರ ಜಾತಿಯ ಹಣ್ಣುಗಳು ಆಸ್ಪತ್ರೆ ಬೆಳೆಸಲ್ಪಡುತ್ತವೆ. ಚಾ ಕಾಫಿ, ರಬ್ಬರ್ ತೋಟಗಳು ಅಲ್ಲಿವೆ.

ಅರಣ್ಯಸಿರಿಯೇ ಆ ದ್ವೀಪದ ಮುಖ್ಯ ಸಂಪತ್ತು. ದಕ್ಷಿಣ ಅಂಡಮಾನಿನ ಅಂಜ್ಯೋವೈಟ್ಟಿಗಳಲ್ಲಿ ಕಲವಂಶ ಮಾತ್ರ ಈ ತನಕ ಸರಕಾರದ ನೇತ್ರತ್ವದಿಂದ ಸಂಗ್ರಹಿಸಲ್ಪಟ್ಟಿದೆ. ಭಾರತ ಸರಕಾರವು ನೇಮಿಸಿದ್ದ ಬೀಸಾಯತಜ್ಞರಿಂದ ಅಲ್ಲಿಯ ಬೇಸಾಯ ಸರ್ವೆಯನ್ನು ಇತ್ತೀಚೆಗೆ ತಾನೇ ನಡೆಸಿ ಮುಗಿಸಿದ್ದರು. ಭೂವ್ಯವಸಾಯ ಅಥವಾ ವೀಸುಗಾರಿಕೆ ಉದ್ದಿಮೆಯವರು ಅಲ್ಲಿ ಬೀಡುಬಿಡಲು ಅನುಕೂಲತೆಗಳು ಬಹಳವಿವೆ. ಬಿಲ್ಲಿ, ಅಜಾದಂತಹ ಬುಡುಬು ಉದ್ದಿಮೆಗಳ ಸಮೇತ ಎಲ್ಲಾ ವಿಧದ [illegible] : ಪರಿಸ್ಥಿತಿಯೂ ಅಂದಮಾನ್ ದ್ವೀಪವಲ್ಲಿಗ ಒಹಳವಿದೆ. ಭೂ-ಸಮಮಟ್ಟ, ಭೂ-ವ್ಯವಸಾಯ, ವೀಸುಗಾರಿಕೆ, ಇಂಡಸ್ಟ್ರಿ, ಮನೆ-ಕೈಗಾರಿಕೆ, ಪೀನ್ಸುವಾರು ರಪ್ಪಣೆ, ಕಾಲೇಜು ಸೀಟುಗಳು, ಕಟ್ಟಡಗಳ ತಯಾರಿ, ಉಪ್ಪು ತಯಾರಿ, ಇಂಡಸ್ಟ್ರಿ ಮತ್ತು ಬೀಜಾಯಿಗಳ ರಿಜಿಸ್ಟ್ರಿ, ಮೀನು ತಯಾರಿ, ವಿವಿಧ ಸಾಮಾನುಗಳ ತಯಾರಿ, ಲೈಟ್ ಹೌಸ್ ಕೆಲಸ, ಇಂಡಸ್ಟ್ರಿ ಕೆಲಸ, ಪೋಸ್ಟ್ ಕೆಲಸ, ಪುಲಿಹಣ್ಣು, ಬಟ್ಟೆ ಇತ್ಯಾದಿಗಳ ತಯಾರಿ, ಮತಕ್ಕ ತಯಾರಿ ಹೀಗೆ ಅನೇಕ ಕೆಲಸಗಾರರಿಗೆಲ್ಲಾ ಅಲ್ಲಿ ಬೇಕಾದಷ್ಟು ಕೆಲಸವಿದೆ. ಅಂತೂ ಅಂದಮಾನ್ ಈಗ ಉದ್ಯೋಗಿಗಳನ್ನು ಆಶ್ವಾಸಿಸುತ್ತಿದೆ-ಕೇಡಿಗಳನ್ನಲ್ಲ!

ಹಿಂದೂ ಮಹಾಸಭೆಗೂ ಮದ್ದರೆಯಲಿ!

ಭಾರತವನ್ನು ಪುನಃ ಅಖಂಡಗೊಳಿಸುವುದು-ಪಾಂಪರಾಗತ ಹಿಂದೂ ಸಂಸ್ಕೃತಿ ಪುತ್ತು ಕ್ರಮಸಿಯವ-ಗಳಿಗನುಸಾರವಾಗಿ ಸರಕಾರ ರಚಿಸುವುದು-ಮುಂತಾದ ಗುರಿಯನ್ನಿಟ್ಟುಕೊಂಡು ಹಿಂದೂ ಮಹಾಸಭೆಯು ಪುನಃ ರಾಜಕೀಯ-ಪ್ರವೇಶಿಸಬೇಕೆಂದು ಕಳದ ತಿಂಗಳಾಂತ್ಯದಲ್ಲಿ ನವದೆಹಲ್ಲಿಯಲ್ಲಿ ಸೇರಿದ್ದ ಅಖಿಲ ಭಾರತ ಹಿಂದೂ ಮಹಾ ಸಭಾ ಕೌನ್ಸಿಲು ನಿರ್ಧರಿಸಿದೆ.

ಮಹಾ ಸಭೆಯ ಮನೋವೃತ್ತಿಯಾಗಿರುವ ಕರೋಣ 'ಹಿಂದೂತ್ವ'ದ ಮುಖ್ಯ ನಿರ್ಲಾಣ ಮಹಾ ರಾಷ್ಟ್ರದಲ್ಲಿ ಅಮಟ್ಟಿಗೆ ಸಾರ್ವಕರರಿಗೆಂಡನೆಯವಂಗಿರುವ ಹಾಗೂ ಮಹಾಸಭೆಯ ಅಧ್ಯಕ್ಷರಾಗಿರುವ-ಗಾಂಧೀಜೀ ಖೂಲೆಯ ವಿಚಾರಣೆಯಲ್ಲಿ ಸಾರ್ವಕರರ ವಕೀಲರಾಗಿ ವ್ಯವಹರಿಸಿರುವ-ಶ್ರೀ ಭೋಪಟ್ಕರರು ಆದರ ಅಧ್ಯಕ್ಷತೆ ವಹಿಸಿದ್ದರು.

ಹಿಂದೂ ಮಹಾ ಸಭೆಯ ಮಾಜೀ ಅಧ್ಯಕ್ಷ ಹಾಗೂ ಇತ್ತೀಚೆಗಿನ ವರೆಗೆ ಮಹಾ ಸಭೆಯ ಪ್ರಮುಖರಲ್ಲೊಬ್ಬನೆನ್ನಿಸಿದ್ದು, ಈಗ ಭಾರತ ಸರಕಾರದಲ್ಲಿ ಉದ್ದಿಮೇ ಮಂತ್ರಿಯಾಗಿರುವ ಡಾ. ಶ್ಯಾಮ ಪ್ರಸಾದ್ ಮುಖರ್ಜಿಗಳು ಆದರೊಡನೆ ಭಿನ್ನಾಭಿಪ್ರಾಯಗೊಂಡು ಕಾರ್ಯಕಾರೀ ಸಮಿತಿಗೆ ಈ ಮೊದಲೇ ರಾಜೀನಾಮೆಯೊಪ್ಪಿಸಿದ್ದರೂ ಆ. ಭಾ. ಕೌನ್ಸಿಲ್ ಸದಸ್ಯರಾಗಿ ಉಳಿದಿದ್ದಾರೆ. ಆವರು ಆ ಸಭೆಗೆ ಹಾಜರಾಗಿ 'ಇಂದಿನ ಸ್ವಾತಂತ್ರ್ಯದಲ್ಲಿ ಮಹಾಸಭೆಯು ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯರಂಗಗಳಿಗೇನೇ ಅಂಟಿಕೊಂಡಿರಬೇಕಲ್ಲದೆ ರಾಜಕೀಯಕ್ಕೆ ಪ್ರವೇಶಿಸುವುದು ಸರಿಯಲ್ಲ; ಸರಕಾರವು ಜಾತೀಯತಾ ಸಂಸ್ಥೆಗಳಿಗೆ ರಾಜಕೀಯ ಪ್ರವೇಶವಿಲ್ಲವೆಂಬ ಘೋಷಣೆ ವಹಿಸಿರುವಾಗ, ಮಹಾಸಭೆಯು ರಾಜಕಾರಣಕ್ಕೆ ಕೈಯಿಕ್ಕಬೇಕಾದರೆ ಹಿಂದುಗಳಲ್ಲದವರಿಗೂ ಬಾಗಿಲು ತೆರೆದಿಡಬೇಕು" ಎಂದು ಉಪದೇಶಿಸಿದರೆಂದು ತಿಳಿದು ಬಂದಿದೆ.

ಆದರೆ ಮಹಾಸಭೆಯು ಮನಃ ರಾಜಕಾರಣ ಪ್ರವೇಶಿಸುವ ನಿರ್ಣಯ ಮಾಡಿದೆಯಲ್ಲದೆ 'ಆರ್. ಯಸ್. ಯಸ್.'ನ ಮೇಲಿನ ಬಹಿಷ್ಕಾರ ತೆಗೆಯಬೇಕೆಂದು ತಂಯಸಿದೆ. ಲಭ್ಯಕ್ಷ ಭೋಪಟ್ಕರರು ತನ್ನ ಭಾಷಣದಲ್ಲಿ ಭಾರತ ಸರಕಾರದ ಘೋಷಣೆಯನ್ನು ಟೀಕಿಸಿದ್ದಾರೆ.

1948ನೇ ಜನವರಿಯಲ್ಲಿ ಗಾಂಧೀಜೀಯ ಕೊಲೆಯಾದೊಡನೆಯೇ ಅಖಿಲ ಭಾರತ ಹಿಂದು ಮಹಾಸಭಾ ಶಾಖೆಗಳೂ ಕಾರ್ಯಕರ್ತರೂ ನಿಂತಲ್ಲೇ ಹೆದರಿ ಸಟಪಟನೆ ಬರ್ಖಾಸ್ತುಗೊಂಡಿದ್ದುವು- ರಾಜೀನಾಮೆಯೊಪ್ಪಿಸಿದ್ದವು ಈಗ ಸ್ವತಂತ್ರ ಭಾರತದ ಶಾಶ್ವತ ರಾಜ್ಯಂಗ ರಚನೆಯಾಗುತಿದ್ದು 1950ರಲ್ಲೇ ಚುನಾವಣೆಗಳು ನಡೆಯುವ ಪೆಂದು ಖಚಿತವಾಗಿರುತ್ತಿದೊಡನೆ ಅಡ್ಡ ಹಾದಿಯಿಂದ ಅಧಿಕಾರಕ್ಕೇರುವುದನ್ನೇ ತನ್ನ ಮಹೋತ್ಸಾಕಾಂಕ್ಷೆಯಾಗಿ ಇಟ್ಟುಕೊಂಡಿಯವ ಮಹಾ ಸಭೆಗೆ ರಾಜಕೀಯದಿಂದ ದೂರ ಫಿಲ್ಲಲು ದುರಾಶೆ ಬಿಡಲಿಲ್ಲ.

ಇದರ ಪ್ರತಿಕ್ರಿಯೆಯೇನು ಎಂಬುದನ್ನು ನೋಡಲಿಕ್ಕಿದೆ. ಗಾಂಧಿಜೀಯು ಕೊಲೆಯಾದ ಬೆನ್ನಲ್ಲೇ ಆರ್. ಯಸ್. ಯಸ್. ಮುಸ್ಲಿಂಲೀಗ್ ನೇಶನಲ್ ಗಾರ್ಡ್ಸ್, ಕೆಂಪುದಳಗಳಂತಹ ಪಾಸಿಸೀ ಸೇನಾ ಮಜಲ್ದು ಜಾತೀಯತಾ ದಳಗಳಿಗೆ ಮುಟ್ಟುಗೋಲು ಬಿದ್ದಿದ್ದರೂ, ಹಿಂದೂ ಮಹಾ ಸಭೆ, ಮುಸ್ಲಿಂ ಲೀಗಿನಂತಹ ರಾಜಕೀಯವಾದೀ ಜಾತೀಯ ಸಂಸ್ಥೆಗಳ ಮೇಲೆ ಬಹಿಷ್ಕಾರ ಬೀಳಲಿಲ್ಲ. ಆ ಮೇಲೆ 'ಯಾವುದೇ ಜಾತೀಯ ಸಂಸ್ಥೆಗೂ ರಾಜಕೀಯದಲ್ಲಿ ಸ್ಥಾನವಿಲ್ಲ' ಎಂಬ ತನ್ನ ಘೋಷಣೆಯನ್ನು ಭಾರತ ಸರಕಾರವು ಸಾರಿದೆ. ಆದ್ದರಿಂದ ರಾಷ್ಟ್ರದ ಎಲ್ಲಾ ಜನತೆಗಾಗಿಇದ್ದು ರಾಜಕೀಯಾಭಿಪ್ರಾಯಗಳಿಗಾಗಿ ಪಕ್ಷ, ಸಂಸ್ಥೆಗಳನ್ನು ಕಟ್ಟಿಕೊಳ್ಳಬಹುದು ಅಥವಾ ಜಾತಿಮತಗಳ ಸಾಂಸ್ಕೃತಿಕ, ಸಾಮಾಜಿಕ ಕಾರ್ಯಗಳಿಗಾಗಿ ಮಾತ್ರವೇ ಜಾತೀಯ ಸಂಸ್ಥೆಗಳಿರಬಹುದು. ಕೇವಲ ಒಂದೊಂದು ಮತದವರಿಗೇನೇ ಮೀಸಲಿರುವ ಹಿಂದೂ ಮಹಾಸಭಾ, ಮುಸ್ಲಿಂ ಲೀಗಿನಂತಹವು ಎಲ್ಲರ ಸಮಾನ ಹಕ್ಕಿನ ಭಾರತ ರಾಜಕೀಯದಲ್ಲೂ ಕೈಹಾಕುವವೆಂದರೆ ಆಗದು. ಇದು ಸ್ವಪ್ರವಿರುದ್ಧವೆಂದು ಮಹಾಸಭೆಯು ಪುನಃ ರಾಜಕೀಯ ಪ್ರವೇಶಿಸುವುದನ್ನು ಭಾರತ ಸರಕಾರವು ಎಷ್ಟಕ್ಕೂ ಕ್ಷಮಿಸಲಾರದೆಂದೂ, ಆದರ ಮೇಲೆ ತಡೆ ಬೀಳುವುದು ಖಂಡಿತವೆಂದೂ ನಿರೀಕ್ಷಿಸಬೇಕು.

ಹೈದರಾಬಾದ್, ಮೈಸೂರು ಸಂಚಾರ ಮುಗಿಸಿ ನಂಡಿತ ನೆಹರುಗಳು ನವರಾತ್ರಿಯ ಮೇಲೆ ಭಾರತ ಸರಕಾರೀ ನಾಯಕರೂ, ಮೊನ್ನೆ ನವಶಿಲ್ಲಿಯಲ್ಲಿ ನೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ಈವಿಷಯವನ್ನು ಗಾಢ ವಿಚಾರಣೆ ನಡೆಸಿವವರೆಂದು ತಿಳಿದು ಬಂದಿದೆ.

ಆರ್. ಯಸ್. ಯಸ್. ಮತ್ತು ಹಿಂದೂ ಮಹಾ ಸಭೆ, ಇವೆರಡೂ ಬಾಹ್ಯಾಕಾರದಲ್ಲಿ ಭಿನ್ನ ಸಂಸ್ಥೆಗಳಾದರೂ ಎರಡರ ಧ್ಯೇಯ ಮತ್ತು ಘೋಷಣೆಯೂ ಒಂದೇ; ರಾಷ್ಟ್ರಕ್ಕೆ ಆಪಾಯ, ರಾಷ್ಟ್ರದ ಜನಜೀವನಕ್ಕೆ ಗಂಡಾಂತರ, ರಾಷ್ಟ್ರೀಯ ಸ್ಥಾನ ಮಾನನೆರೆಹಕ್ಕಾ ಮಹತ್ತಾದ ಧಕ್ಕೆಯಾಗಿರುವ-ವ್ಯತ್ಯೇಕವಾಗಿ ಹಿಂದೂ ಸಂಸ್ಕೃತಿ ಮತ್ತು ಹಿಂದುತ್ವವನ್ನೇ ಆಧೋಗತಿ ಹಿಡಿಸಿ ಅವನ್ನು ಲೋಕದಿಂದ ಅನಮಸಕ್ಕೆ ಕ್ರಿಯಮಾಡುವ-ಅತ್ಯಂತ ಹೇಯ ರೀತಿಯ ಮತ ಭ್ರಾಂತಿಯ ಒಳ ಹೊರ ವೈಗಳಂತೆ ಆರ್. ಯಸ್. ಯಸ್. ಮತ್ತು ಮಹಾ ಸಭೆ. ಹಿಂದೂ ಜಾತೀಯ [illegible]

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಪರಿಪಕ್ವ ಅನುಭವ

ನಿರಖು ಠೇವಣಾತಿ

ಮೂರು ತಿಂಗಳಿಗೆ	....	....	....	2%
ಆರು ,,	....	....	....	2½%
ಹನ್ನೆರಡು ,,	....	....	....	3½%
ಇಪ್ಪತ್ತು ನಾಲ್ಕು ,,	....	....	....	4%
ಪಾವತಿಯಾಗಿರುವ ಭಂಡವಾಳ	....	....	ರೂ.	4,91,000.
ಕ್ಷೇಮ ನಿಧಿ	....	....	,,	98,000.
ಒಟ್ಟು ವಹಿವಾಟು ಭಂಡವಾಳ	....	....	,,	40,65,000.

(ಸಾರವಿಕ್ಕೆ ಸರಿಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ. ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುದು.

ದಿ

ವಿಜಯ ಬೇಂಕ್ ಲಿಮಿಟೆಡ್

THE VIJAYA BANK, LIMITED.

H. O. MANGALORE.

ಮಹಾತ್ಮಾ ಗಾಂಧಿಜೀ ಸ್ಮಾರಕ ನಿಧಿಗೆ ಕಾಣಿಕೆಯನ್ನೀಯಿರಿ.

ಲೋಕದ ಜನರೂ ಭಾರತದ ಸಿಖ್ಖಿಗ
ರಿಗಳಲ್ಲಿ ಹೊಸ ಸಂಚಾರಂಭದಿಂದ ಗಣ್ಯ
ಘಟನೆಗಳಾಗುತ್ತವೆ ಈ ಪರಿಷತ್ತು ಹೊ
ಸಹೊಸ ವಿದ್ಯಮಾನಗಳನ್ನು ನಿರ್ಮಿಸು
ತ್ತಿರುವುದೆಂದೂ, ಮಂತ್ರಾಂತ್ಯದಲ್ಲಿ ಕಳದ ಪ
ರಿಷತ್ತಂತ್ಯದಲ್ಲಿದ್ದುದಕ್ಕಿಂತ ಪೂರ್ಣ ಭಿ
ನ್ನ ರೂಪವು ಲೋಕದ ವಿವಿಧ ವಿಷಯ
ಗಳಲ್ಲಿ ತೋರಿಬರಬಹುದೆಂದೂ ನಿರೀಕ್ಷಿಸಲಿ
ಡಯದ.

ಪ್ರಾವಂಚಿಕ ಸ್ಥಿತಿಗತಿ

ಚೈನದ ಅಂತರ್ಯುದ್ಧವೇ ಈ ದಿನಗ
ಳಲ್ಲಿ ದೊಡ್ಡದು ಮತ್ತು ಮಹತ್ವವುಳ್ಳ
ದ್ದು. ಒಲ್ಲೆಡೆಗಳಲ್ಲಾ ಚಿಯಾಂಗ್ ಸರ
ಕಾರದ ಸೇನೆಗಳು ಹಿಮ್ಮೆಟ್ಟುತ್ತಾ ಹೋ
ಗುತ್ತವೆಯೂ ಕಮ್ಯೂನಿಸ್ಟರ ಸೇನೆಗಳು
ಮುಂದೊತ್ತುತ್ತಿರುವುದೂ ಕಾಣಿಸುತ್ತಿ
ದೆ ಕೆಲವು ತಿಂಗಳುಗಳಿಂದ ಸ್ವಲ್ಪವಾಗು
ತ್ತ ಬಂದಿದ್ದ ಈ ಸೋಲು ಗೆಲುವು ಕಳದ
ಕೆಲವು ದಿನಗಳಲ್ಲಿ ನಿಶ್ಚಯಾತ್ಮಕ ರೂ
ಪಂತಿದೆ. ರಾಜಧಾನಿ ನಾನ್ಕಿಂಗಿನ ಉತ್ತ
ರದಲ್ಲಿ ಕಮ್ಯೂನಿಸ್ಟರು ದೊಡ ಮ
ಧ್ಯಭಾಗ ಹೊಡಿದ್ದಾರೆಲ್ಲಿದೆ, ಉತ್ತರ
ಮತ್ತು ಮಧ್ಯ ಚೈನಾವು ತಮ್ಮ ಸೇನಾ
ವ್ಯೂಹವನ್ನ ಇನ್ನಷ್ಟು ಬಲಗೊಳಿಸಿ
ಮುಂದೊತ್ತಿಹತ್ತಿದ್ದಾರೆ. ಅಂತೂ ಚೈನ
ರಾಷ್ಟ್ರೀಯ ಸರಕಾರದ ಹೃದಯ ಪ್ರ
ದೇಶವೇ ಈಗ ಕತ್ತಿಯಂಚಿಗೆ ಸಿಕ್ಕಿಕೊಂ
ಡಿದೆ. ಜಿಯಾಂಗ್ ನಾಯಕತ್ವದ ಮಂತ್ರಿ
ಮಂಡಲದಲ್ಲಿ ಸಂಧಾನ ಪರ್ಯಾಲೋಚ
ನೆ ನಡೆದಿದ್ದು, ಸಂಧಿ ಸಂಭಾಷಣೆಗೆ ಬೆ
ರತ್ತುಕೊಂಡು ವಿಶೇಷ ಪರಿಸ್ಥಿತಿಯು ಹಾ
ರಾಡುತ್ತಿರುವುದು ಕಂಡು ಬರುತ್ತಿದೆ. ತನ್ನ
ಅಂತಿಮ ಕಾಲದಲ್ಲಿ, ತನ್ನ ಸೋಲಿಗೆ ಅನಿ
ವಾರ್ಯವಾದ ಅಪಾಯದಿಂದ ತಪ್ಪಿಸಿ
ಕೊಳ್ಳುವುದಕ್ಕಾಗಿ ಚಿಯಾಂಗರ ಕಡೆ
ಯಿಂದ ಬರುವ ಸಂಧಾನ ಸೂಚನೆಗಳ
ನ್ನು ಕಮ್ಯೂನಿಸ್ಟರು ಗಂಭೀರ ದೃಷ್ಟಿಯಿಂ
ದ ಕಾಣುವಂತಿಲ್ಲವೆಂಬುದು ಖಂಡಿತ.
ಚಿಯಾಂಗಂ ಪೂರ್ಣ ಸಂಭವ, ಅಥವಾ
ಅಂತಹ ಶರಣಾಗತಿ ಸೂಚಕ ಸಂಧಾನದ
ಒಪ್ಪಿಗೆ ಹೊರತು ಬೇರಾವ ರಿಯಾಯಿತಿ
ಯೂ ಕಮ್ಯೂನಿಸ್ಟರಿಂದ ಬರುವಂತಿಲ್ಲ.

ಪೆಲಸ್ಟೈನಿನ ತಿಕ್ಕಾಟವಂತೂ ಯೆಹೂ
ದೀ ಅರಬರೊಳಗೆ ಯಥಾ ಪ್ರಕಾರ ಸಾ
ಗಿರುವಂತೆಯೇ ಬ್ರಿಟಿಷರನ್ನು ಕೆಣಕುವ
ಲ್ಲಿಗೂ ಬಂದಿದೆ. ಇಜಿಪ್ಟ್ ಮತ್ತು ಪೆಲ
ಸ್ಟೈನ್ ಗಡಿಯಲ್ಲಿ 5 ಬ್ರಿಟಿಷ್ ವಿಮಾನ
ಗಳನ್ನು ಇಸ್ರಾಯೆಲ್ ಸರಕಾರ ಹೊಡೆ
ದುರುಳಿಸಿದ ಕುರಿತು, ಲೇಕ್ ಸಕ್ಸೆಸ್‌ನಲ್ಲಿ
ಯೆಹೂದೀ ಸರಕಾರದ ರಾಯಭಾರಿಗೆ ಬ್ರಿ
ಟಿಷ್ ಸರಕಾರವು ಒಪ್ಪಿಸಿದ 'ಕಂಡೋಕ್ಕ
ನಿಷೇಧದಲ್ಲಿ 'ಇಸ್ರಾಯೆಲ್ ಸರಕಾರಕ್ಕೆ'
ಎಂಬ ಒಕ್ಕಣೆಯಿಲ್ಲವಾದ್ದರಿಂದ ತಾನದ
ನ್ನು ತನ್ನ ಸರಕಾರಕ್ಕೆ ಮಟ್ಟಿಸಲಾರೆನೆಂ
ದು ಆ ರಾಯಭಾರಿ ಧಿಕ್ಕರಿಸಿದ್ದಾನೆ. ಇ
ನ್ನು ಪೆಲಸ್ಟೈನ್–ಈಜಿಪ್ಟ್ ಗಡಿಯಲ್ಲಿ
ಹಾಂಡುವ ಯಾವುದೇ ಯೆಹೂದೀ ವಿ
ಮಾನವನ್ನು ಪೈರಿಯೆಂದು ಗಣಿಸಬೇಕೆಂ
ದು ಬ್ರಿಟಿಷ್ ವಿಮಾನಗಳಗಾಜ್ಞೆ ಹೋ
ಗಿದೆ. ಯೆಹೂದಿಗಳ ಇಸ್ರಾಯೆಲ್ ಸರ
ಕಾರವು ರಕ್ಷಣೆಯ ಕೈಗೊಂಬೆಯಾಗುವದೆಂ
ಬ ಭೀತಿಯಿಂದ ಅಂಗ್ಲೋ ಅಮೆರಿಕಾನ್ಸ
ರು ಅದಕ್ಕೆ ಬದ್ಧ ವಿರೋಧಿಯಿದ್ದು ಶಾಂತಿ
ಸ್ಥಾಪನೆಯನ್ನೆವನದಿಂದ ಆ ಅಪಾಯವ
ನ್ನು ನಿವಾರಿಸಿಕೊಳ್ಳುವ ಪ್ರಯತ್ನದ
ಲ್ಲಿದ್ದಾರೆ.

ಇಂಡೋನೇಶಿಯದಲ್ಲಿ ಡಚ್ಚರು ಆರಂ
ಭಿಸಿರುವ ಆಕ್ರಮಣವು ಇದೀ ಆಸ್ಯಾದ
ಕಲೆ ಬಿಸಿ ಮಾಡಿದೆ; ಇನ್ನೂ ಆಶ್ಯ ರಾ
ಷ್ಟ್ರಗಳಲ್ಲಿ ಯುರೋಪು ರಾಷ್ಟ್ರಗಳ ಮೇಲ
ಧಿಕಾರವಿರಬೇಕೆನ್ನುವ ಅವರ ದುರುದ್ದೇ
ಶ ಮತ್ತು ಅದಕ್ಕಾಗಿ ನಡೆದಿರುವ ಈ ಆ
ಕ್ರಮಣವನ್ನು ಆಶ್ಯದ ಮುಖ್ಯ ರಾಷ್ಟ್ರಗ
ಳೆಲ್ಲವೂ ಪ್ರತ್ಯಕ್ಷ ತಮಗಾದ ಅಘಾತವೆ
ಮತ್ತು ಅಸಮಾನವೆಂದು ಗಣಿಸಿವೆ. ಈ ಸಂ
ಬಂಧದ ಮುಂದಳತ್ವವು ಭಾರತದ್ದಾಗಿ
ದ್ದು, ಪಂಡಿತ ಜವಾಹರಲಾಲರು ಇದೇ

ಕಾಶ್ಮೀರ ಶರಸಂಧಾನದ-

ತಾ 20ರಲ್ಲಿ ನವಢಿಲ್ಲಿಯಲ್ಲಿ ಏಷ್ಯಾ
ರಾಷ್ಟ್ರಗಳ ಸಮ್ಮೇಳನ ಕರೆದಿದ್ದಾರೆ. ಇ
ದಕ್ಕೆ 13 ಆಸ್ಯಾ ರಾಷ್ಟ್ರಗಳಿಗೆ ಆಮಂ
ತ್ರಣ ಹೋಗಿದೆ. ಭಾರತ, ಪಾಕಿಸ್ತಾನ,
ಆಸ್ಟ್ರೇಲಿಯ, ನ್ಯೂಜೀಲೇಂಡ್ ಮತ್ತು
ಸಿಂಹಳ ಸರಕಾರಗಳು ಈ ಸಂಬಂಧವಾಗಿ
ವಿಶೇಷಾಸಕ್ತರಾಗಿರುವೆಯಲ್ಲದೆ ಡಚ್ಚರಿಂ
ಕ್ರಮಣದ ಕುರಿತು ಮೇಲಿನ ಮಹಾಹತು
ಗಳ ಹತ್ಯಾಕಮಿಶನರರುಗಳು ಲಂಡನ್ನಿಲ್ಲಿ ಬ್ರಿ
ಟಿಷ್ ವಿದೇಶ ಮಂತ್ರಿ ಮಿ. ಅರ್ನೆಸ್ಟ್
ಬೆವಿನರನ್ನು ಭೇಟಿಯಾಗಿ ಪರ್ಯಾಲೋ
ಚನೆ ನಡೆಸಿದ್ದಾರೆ. ಡಚ್ ಆಕ್ರಮಣದ
ಕುರಿತು ಬ್ರಿಟನು ಇಂತಹ ಶಿರಾಸಕ್ಕೆ ವಹಿ
ಸಿದಲ್ಲಿ, ಅದರ ಪರ್ಚಸ್ಸು ಪೌರ್ವಾತ್ಯ ರಾ
ಷ್ಟ್ರಗಳಲ್ಲಿ ಹಾನಿಗಾಬಹುದೆಂದು ತಿಳಿಸಿ,
ಅದರ ಇಂತಹ ಧೋರಣೆಗೆ ಕಾರಣವೇ
ನೆಂದು ವಿಚಾರಿಸಿದರೆಂದು ತಿಳಿದು
ಬಂದಿತ್ತು. ಇಂಡೋನೇಶಿಯದ
ರಕ್ಷಣೆಯಲ್ಲಿ ವಿಶೇಷಾಸಕ್ತರಿರುವ ಪಂಡಿ
ತ ಜವಾಹರಿಲಾಲರು, ನವಢಿಲ್ಲಿಯ
ಕಾಂಗ್ರೆಸ್ ಕಾರ್ಯಕಾರೀ ಸಮಿತಿ
ಯಲ್ಲಿ ಆ ಸಂಬಂಧವಾಗಿ ಕಾನು ಕರಿದಿರು
ವ ಆಸ್ಯಾ ಸಮ್ಮೇಳನದ ಕುರಿತು ವಿವರಿ
ಸಿದ್ದಾರೆ.

"ಮಾರ್ಶಲ್ ಯೋಜನೆ" ಪ್ರಸಿದ್ಧಿಯ
ಅಮೇರಿಕನ ಗೃಹ ಕಾರ್ಯದರ್ಶಿ ಜೋ
ಜ್ ಮಾರ್ಶಲ್‌ರು ಅನಾರೋಗ್ಯದ ಪೀ
ಯಿಂದ ತನ್ನ ಸ್ಥಾನಕ್ಕೆ ರಾಜೀನಾಮೆ
ಯೊಪ್ಪಿಸಿದ್ದಾರೆ. ಇವರು ಯುದ್ಧ ಕಾಲದ
ಭೀರ ನಾಯಕನಾಗಿದ್ದಂತೆಯೇ, ಯು
ದ್ಧೋತ್ತರ ಪುನರ್ಜೀವನಾ ಯೋಜನೆಯ
ನಿರ್ಮಾಪಕರಾಗಿ ಪ್ರಸಿದ್ಧಿ ಪಡೆದವರು.
ಅಧ್ಯಕ್ಷ ಟ್ರುಮೇನರು ತಾನು ಚುನಾ
ಣಾ ಘೋಷಣೆಯಲ್ಲಿ ನಮೂದಿಸಿದ್ದ ಕಾ
ರ್ಯಕ್ರಮಗಳಿಗನುಸಾರವಾದ ತನ್ನ ಭಾ
ವೀ ಕಾರ್ಯಭಾರಗಳ ಅಂದಾಜುಪಟ್ಟಿ
ನ್ನು ಅನೇರಿಕದ ಕಾಂಗ್ರೆಸಿನ ಮುಂದಿಟ್ಟಿ
ದ್ದಾರೆ. ಆರ್ಥಿಕ, ಸಾಮಾಜಿಕ ದೋಷಗಳ
ನಿವಾರಣೆಯ ಗುರಿ, ಮತ್ತು ಆವಶ್ಯಕ
ಕಾರ್ಯನಿರ್ವಹಣೆಗಾಗಿ ಕರಿನಿರೀಕ್ಷಿತ
ಆರ್ಥಿಕ ನಿಯಂತ್ರಣಗಳನ್ನು ಹೇರು
ಸೂಚನೆ ಅದರಲ್ಲಿದ್ದ.

ಕಾಶ್ಮೀರದ ಶಾಂತಿ

ಹೊಸ ವರುಷಾರಂಭ ದಿನದಿಂದಲೆ
ಭಾರತದಾದ್ಯಂತ ಒಂದು ಯುದ್ಧಪೂ
ನಿಂತುಹೋಗಿದೆ. ಈ ಸೊಪಲು ಒಂದ
ಯದ್ದ ಕಿವಿತ, ಪ್ರದೇಶಗಳಾಗಲೀ ಒ
ದಿನದವರೆಗೂ ಇದ್ದ ಕಾಶ್ಮೀರದ್ದೊಂ
ಗುಂಡು ಹಾರಾಟವಾಗಲೀ ಇಲ್ಲದೆ ಇ
ನೇ ಜನವರಿ 1ನೇ ತಾರೀಖಿನಿಂದ
ದ ಅದ್ಯಂತವೂ ಪೂರ್ಣ ಶಾಂತಿ ಇನ್ನೆ
ದಿಗೂ, ಕೊನೆಯುಪಕ್ಷ ಈ ಇಸವಿ
ಯುವ ವರೆಗಾದರೂ ಪಿಗ್ಗಿಸುವ ಲಕ್ಷ
ಕಾಗ್ಗಸುವ ಯುದ್ಧ ಸಂದಿಗ್ಧಗಳೇ ಭಾರ
ಯಂ ಪಾರಿಲ್ಲವನ್ನಬಹುದು. ಕಾಪ
ರ ಪ್ರಕಟಣೆಯಿಂದೆ ಜಾಗತಿಕ ಸಂಘ
ದ್ರತಾ ಕೌನ್ಸಿಲು ನೇಮಿಸಿದ್ದ ಕಮ್ಮಿ
ಕಮಿಶನ್ನಿನ ಮಧ್ಯಸ್ಥಿತೀರ್ಪಕಗಳಿಗಾಸ್ಪ
ಧಾರಿ–ಪಾಕಿಸ್ತಾನ ಸರಕಾರದ
ಮುಂದಾಗಿ ಜನವರಿ ತಾ. 1ನೆ
ಮಧ್ಯರಾತ್ರಿ ಕಾಶ್ಮೀರದಲ್ಲಿ ಗುಂಡಿನ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ನೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins' Boarding & Lodging

Sadananda Rao, Kunjoor
Manager.

THE CRESCENT INSURANCE CO., LTD.
(Estd 1919)
Head Office:- Bombay, Branch at:- Mangalore.
Offers every convenience for Life Assurance
"Will your earnings continue after death ?"
"Yes, if you insure them"
"By means of life Assurance you can continue your income after retirement, or for the benefit of your dependents after your death".
"In case of death the Bank pays what you have saved, the Assurance company pays what you had hoped to save"
The safest and best life office of long standing fame.
Best terms for agents offered.
K. P. Bhavanishanker Shetty,
Branch Manager,
The Crescent Insurance Co., Ltd.
Jayant Building, Maidan Road,
MANGALORE
M. Sunderram Shetty,
Managing Director.

Chitrakot Hills Herbs
For Asthma Cure.
A most powerful and highly effective world renowned remedy which cures asthma in a single dose. To be taken on 13-2-1949 full moon night.
Apply in English or Hindi at once
SWAMI DARSHNANAND,
Ayurvedashram,
P. O. Chitrakot (Banda) U. P.

ಸೂಚನೆಗಳು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O.S. 7
R. I. A. No 1932
ಚಂದನ್ಮೃತ್ತಿ...ಸಾದಿ. ಅರ್ಜದಾರರು
1 ಪದ್ಮಾವತಿ 2 ಮೈನಂ ಜಾಡ್ರರು
ಪ್ರತಿವಾದಿ ಎದ್ದ
ಸದ್ರಿ 1ನೇ ಪ್ರತಿವಾದಿಯು ಉದ್ದೇ
ಕೀದಾರ ಉಗ್ರಾಣ ಮನೆಯಲ್ಲಿರುವ ಸ
ಬ್ಬಾಯಿಯನ್ನೆ ಕೂಡಿಯಾನ ವಿಧವೆ ಪ
ವತಿಗೆ ಈ ಮೂಲಕ ತಿಳಿಯ ಪಡಿಸುವ
ನಂದ್ರೆ–
ಸಾದಿಯುನಮ್ಮಮೇಲೆ ಕೂಡಾ ಮೇಲ್ಕಾ
ಡ ದಾನೆಯಲ್ಲಿ ಪಡದ ಪ್ರತಿಮನೇರಿ ಡಿ
ದ್ದಿಪ್ರಕಾರ ಆಸ್ತಿ ಸಾರಾಬಡ ಕೂಡಿಸು ಮೊ
ದಿನ ವ್ಯವಹರಣೆ ನಡಿಸುವದೇ ಸ್ಥಾನಲ್ಲಿ
ಕ್ರಕೊಡಿಸಬೇಕಾಗಿ ದಾಖಲುಪಡಿಸಿ ಸ
ಅರ್ಜಿತ್ಯಾಗೆ ತಾ 24-1-1949ಕ್ಕೆ ಇಟ್ಟಿ
ದರಿಂದ ಈ ಬಾಬಿನಲ್ಲಿ ನಿಮ್ಮ ಅಕ್ಷೇಪ ಇ
ವದಾದ್ರೆ ತಪ್ಪದಿದ್ದಿ ಪೂರ್ವಾಹ್ನ 11 ಗಂ
ಕೋರ್ಟು ಮುಂದೆ ಹಾಜರಾಗಿ ಜ್ಞಾಪ
ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪ
ರ್ಯಾಗಿ ತೀರ್ಮಾನಿಸಲ್ಪಡುವದು.

(Sd) V Srinivas Shetty
Advocate for Plaintiff
ತಾ 5-1-1949 ಕುಂದಾಪುರ

ಪರಿಣಾಮ ಹೇಗಾಗಬಹುದು?

ಂಟೆ ನಿಲ್ಲಿಸಿದ್ದುವು. 'ಕಾಶ್ಮೀರದಲ್ಲಿ ಸ್ವತಂತ್ರ ಹಾಗೂ ನಿಷ್ಪಕ್ಷಪಾತೀ ಮತಗಣನೆ' ನಡೆಸುವ ಸಂಬಂಧದ, ಹಾಗೂ ಭಾರತ ಪಾಕಿಸ್ತಾನಗಳಂದ ಸಮ್ಮತಿಸಲ್ಪಟ್ಟು ಪೋರಾಟ ಮುಕ್ತಾಯಕಾರಣವಾದ ಸೂಚನೆಗಳನ್ನು ಇದೇ ತಾ 6ರಲ್ಲಿ ಕಾಶ್ಮೀರ ಕಮಿಶನಿನವರು ಲೇಕ್‌ಸಕ್ಸೆಸ್‌ನಿಂದ ಜಾಹೀರುಮಾಡಿದ್ದಾರೆ. ಅವುಗಳ ಸಾರ ಹೀಗಿದೆ:—ಜಮ್ಮು ಮತ್ತು ಕಾಶ್ಮೀರವು ಭಾರತಕ್ಕೆ ಸೇರಬೇಕೋ ಪಾಕಿಸ್ತಾನಕ್ಕೊ ಎಂಬ ಸ್ವತ್ನೆಯನ್ನು ಒಂದು ಸ್ವತಂತ್ರ ಹಾಗೂ ನಿಷ್ಪಕ್ಷಪಾತೀ ಜನಮತ ಗಣನೆಯನ್ನು ತೆಗೆಯುವ ಪ್ರಜಾ ಪ್ರಭುತ್ವಾನುಸಾರ ನಿರ್ಧರಿಸಲ್ಪಡಬೇಕು; ಹೋರಾಟ ಮುಕ್ತಾಯ ಮತ್ತು ಶಾಂತಿಸ್ಥಾಪನಾ ಶರ್ತಗಳು ಖಂಡಿಸಲ್ಪಟ್ಟಾಗ ಮತ್ತು ಮತ ಸಂಗ್ರಹದ ವ್ಯವಸ್ಥೆ ಪೂರ್ಣಗೊಂಡುದು ಕಮಿಶನಿಗೆ ವರದಿಯಾದಾಗ ಈ ಮತಸಂಗ್ರಹ ನಡೆಯುವದು; ಕಮಿಶನಿನ ಅಭಿಮತ ಪಡೆದು ಸಂಯುಕ್ತ ರಾಷ್ಟ್ರಸಂಘದ ಮುಖ್ಯ ಕಾರ್ಯದರ್ಶಿಯು, ಉಚ್ಚ ವರ್ಗದ ಅಂತರ್‌ರಾಷ್ಟ್ರೀಯ ವ್ಯಕ್ತಿತ್ವವುಳ್ಳ ಹಾಗೂ ಸರ್ವ ಪಕ್ಷಾನುಹಾರನಾದ ಓರ್ವನನ್ನು ಮತಸಂಗ್ರಹಾಧಿಕಾರಿಯಾಗಿ ನಾಮಕರಣಮಾಡುವರು. ಅವನ್ನಾ ಅಧಿಕಾರಕ್ಕೆ ಜಮ್ಮು ಮತ್ತು ಕಾಶ್ಮೀರ ಸರಕಾರವು ನೇಮಿಸಿಕೊಳ್ಳತಕ್ಕದ್ದು; ಜನಮತ ಸಂಗ್ರಹದ ವ್ಯವಸ್ಥೆ ಮತ್ತು ಸಂಘಟನೆಗೂ, ಅದರಲ್ಲಿ ಸ್ವಾತಂತ್ರ್ಯ ಮತ್ತು ನಿಸ್ಪಕ್ಷಪಾತತೆಯುರುವಂತೆ ಮಾಡುವದಕ್ಕೂ ಅಗತ್ಯವುಳ್ಳ ಅಧಿಕಾರಗಳನ್ನು ಜಮ್ಮು ಕಾಶ್ಮೀರ ಸಂಸ್ಥಾನದಿಂದಲೇ ಈ ಮತಸಂಗ್ರಹಾಧಿಕಾರಿ ಪಡಕೊಳ್ಳುವನು; ತನಗೆ ಅಗತ್ಯ ತೋರುವ ಸಹಾಯಕರು, ನೌಕರರನ್ನೇ ಮೊದಲಾದವರನ್ನು ನೇಮಿಸಿಕೊಳ್ಳುವ ಅಧಿಕಾರ ಮತಸಂಗ್ರಹಾಧಿಕಾರಿಗಿದೆ. [illegible] ಸ್ತ್ರ 1ರ ರಂದಿನಿಂದ 1 ಮತ್ತು 11ನೇ ಭಾಗಗಳನ್ನು ಜಾರಿಮಾಡಿಯಾದ ಮೇಲೆ(ಪಾಕಿಸ್ತಾನದ ಸೈನಿಕರು ಕೂಡಲೇ ಕಾಶ್ಮೀರದಿಂದ ಹಿಂದೆ ಗಯತಕ್ಕದ್ದು ಮತ್ತು ಗುಡ್ಡಗಾಡಿನವರೆಲ್ಲ ಪೋಷದಲಾದವರನ್ನು ಹಿಂದಿರುಗಿಸಲು ಪಾಕಿಸ್ತಾನವು ತನ್ನಿಂದ ಸಾಧ್ಯವಿದ್ದುದನ್ನೆಲ್ಲ ಮಾಡತಕ್ಕದ್ದು. ಇತ್ಯಾದಿ) ಸಂಸ್ಥಾನದ ಭದ್ರತೆ ಮತ್ತು ಮತ ಸಂಗ್ರಹದ ಸ್ವಾತಂತ್ರ್ಯದ ಕಡೆಗೆ ಸಂಯಾದ ಲಕ್ಷ್ಯವನ್ನಿಟ್ಟೇ ಭಾರತದ ಮತ್ತು ಕಾಶ್ಮೀರ ಸಂಸ್ಥಾನೀ ಸೇನೆಗಳ ಕೋನೆಯ ಹಿಂದೆಗೆಯುವಿಕೆಯನ್ನು ಭಾರತ ಸರಕಾರದೊಡನೆ ಆಲೋಚಿಸಿಕೊಂಡು ಈ ಕಮಿಶನು ಮತ್ತು ಮತ ಸಂಗ್ರಹಾಧಿಕಾರಿ ನಿಶ್ಚೈಸುವರು; ಅಜಾದ್ ಕಾಶ್ಮೀರ್ ಸೇನೆಯ ವಶವಿರುವ ಭಾಗಗಳಲ್ಲಿ ಇರುವ ಸೈನಿಕ ಕೋನೆಯ ಹಿಂದೆಗೆಯುವಿಕೆಯನ್ನೂ ಸ್ಥಳೀಯ ಅಧಿಕಾರಿಗಳೊಡನೆ ಯೋಚಿಸಿಕೊಂಡು ಕಮಿಶನು ಮತ್ತು ಮತ ಸಂಗ್ರಹಾಧಿಕಾರಿ ನಿರ್ಣಯಿಸುವರು; ಸಂಸ್ಥಾನದ ಎಲ್ಲಾ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳೂ ಸಂಸ್ಥಾನದ ಮುಖ್ಯ ರಾಜಕೀಯ ವ್ಯಕ್ತಿಗಳೂ ಮತ ಸಂಗ್ರಹ ವ್ಯವಸ್ಥೆಯ ವಿಷಯದಲ್ಲಿ ಮತಸಂಗ್ರಹಾಧಿಕಾರಿಯ ಸಂಬಂಧದ ಕಾರ್ಯಗಳಲ್ಲಿ ಮತಸಂಗ್ರಹಾಧಿಕಾರಿಯೊಂದಿಗೆ ಸಹಕರಿಸಬೇಕಾಗಿದೆ; ಗೊಂದಲಗಳ ದೆಸೆಯಿಂದ ಸಂಸ್ಥಾನವನ್ನು ಬಿಟ್ಟುಹೋಗಿದ್ದ ಕಾಶ್ಮೀರದಲ್ಲಿನ ನಾಗರಿಕರನ್ನೂ ಮರಳಿ ಕರೆಯಲಾಗುವದು, ಮತ್ತವರು ಮರಳಿ ಬರುವ ದಕ್ಕೂ ಸ್ವೇಚ್ಛಾವಾಸದ ಮಾಡುವ ದಕ್ಕೂ ಪೂರ್ಣ ಸ್ವತಂತ್ರರಾದ್ದಾರೆ. ಭಾರತ ನೇಮಿತ ಹಾಗೂ ಪಾಕಿಸ್ತಾನ್ ನೇಮಿತ ಎರಡು ಕಮಿಶನುಗಳು ರಚಿಸಿಗೊಂಡು ಅವು ಮತಸಂಗ್ರಹಾಧಿಕಾರಿಯ ಇಚ್ಛಾನುವರ್ತಿಗಳಾಗಿ ಕೆಲಸಮಾಡುವವು.

ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೂ ಸಂಸ್ಥಾನದೊಳಗಿನ ಎಲ್ಲಾ ಅಧಿಕಾರಿಗಳೂ ಈ ಕಾರ್ಯನಿರ್ವಹಣದಲ್ಲಿ ಮತ ಸಂಗ್ರಹಾಧಿಕಾರಿಯೊಡನೆ ತಾದಾತ್ಮ್ಯ ಗೊಳ್ಳತಕ್ಕದ್ದು; ಕಾಯದೇಶೀರ ಉದ್ದೇಶಗಳಿಗಲ್ಲದೆ ಅನ್ಯಥಾ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದೊಳಗೆ 1947ನೇ ಆಗೋಸ್ತು 15 ಮತ್ತಾನಂತರ ಪ್ರವೇಶಿಸಿದ್ದ ಹೊರಗಿನವರೆಲ್ಲರೂ ಸಂಸ್ಥಾನ ಬಿಟ್ಟು ಹೋಗಲೇಕ್ಕದ್ದು; ಮತಸಂಗ್ರಹ ವ್ಯವಸ್ಥೆಗಳಲ್ಲಿ ಈ ಕೆಳಗಿನ ಮೂಲಸೂತ್ರಗಳನ್ನು ಜಾರಿಯಲ್ಲಿಡಲು ಸಂಸ್ಥಾನದ ಎಲ್ಲಾ ಅಧಿಕಾರಿಗಳಿಗೂ ಮತಸಂಗ್ರಹಾಧಿಕಾರಿಯೊಂದಿಗೆ ಮಿಲನಗೊಂಡು ಕೆಲಸ ಮಾಡಬೇಕು- ಮತದಾನದ ಕ್ರಮ ಕಟ್ಟು ಬೆದರಿಕೆ, ಜುಲುಮು, ಮೂಸಲಾಯಿಸುವಿಕೆ ಲಂಚ ಅಥವಾ ಅನಗತ್ಯ ವರ್ಚಸ್ಸಾವುದೂ ಇಲ್ಲದೆ ಸಂಸ್ಥಾನದಲ್ಲಿ ನ್ಯಾಯಬದ್ಧ ರಾಜಕೀಯ ಚಟುವಟಿಕೆಗಳಿಗೆ ನಿರ್ಬಂಧವಿರಕೂಡದು- ಜಾತಿ ಮತ, ಪಕ್ಷ ಭೇದವಾವುದೂ ಇಲ್ಲದೆ ಸಂಸ್ಥಾನದ ಎಲ್ಲಾ ಪ್ರಜೆಗಳೂ ಕಾಶ್ಮೀರವು ಭಾರತಕ್ಕೋ ಪಾಕಿಸ್ತಾನಕ್ಕೋ ಎಂಬ ಪ್ರಶ್ನೆಯ ಸಂಬಂಧದ ತಮ್ಮ ಅಭಿಪ್ರಾಯ ಪ್ರಕಟಣೆ ಮತ್ತು ಮತದಾನದ ಮಟ್ಟಿಗೆ ಪೂರ್ಣ ಸ್ವತಂತ್ರರು ಮತ್ತು ಸುರಕ್ಷಿತರಾಗಿರತಕ್ಕದ್ದು--ಪತ್ರಿಕಾಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯ, ಸಭಾಸ್ವಾತಂತ್ರ್ಯ, ಸಾಮಾದೇಬದ್ಧವಾಗಿ ಸಂಸ್ಥಾನದೊಳಗೆ ಬರುವ ಮತ್ತು ಹೊರಡುವ ಸ್ವಾತಂತ್ರ್ಯ ಸಮೇತ ಸಂಸ್ಥಾನದಲ್ಲೆಲ್ಲೂ ತಿರುಗಾಡುವ ಸ್ವಾತಂತ್ರ್ಯ ಎಲ್ಲರಿಗಿರಬೇಕು-ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು- ಸಂಸ್ಥಾನದ ಎಲ್ಲಾ ಭಾಗಗಳ ಆಲ್ಪ ಸಂಖ್ಯಾಕ ಸಮಾಜಗಳವರಿಗೆ ಸಾಕಷ್ಟು ರಕ್ಷಣೆಯೀಯುವ ತಕ್ಕದ್ದು-ಪ್ರತೀಕಾರಾತ್ಮಕ ದಂಡನೆಗಳಿರಕೂಡದು; ಮತ ಸಂಗ್ರಹಾಧಿಕಾರಿಯ ಮುಂದೆ ಬರುವ ಯಾವುದೇ ಸಮಸ್ಯೆಯನ್ನು ಆತನು ಕಮಿಶನಿನ ಮುಂದಿಟ್ಟು ಸಹಾಯ ಯಾಚಿಸಬಹುದು; ಮತ್ತದಕ್ಕೆ ಸ್ವತಃಯಾಗಿ ಕಾಶ್ಮೀರ ಸಮಿತಿ ಅವರಿಗತನ್ನ ನೇಮಿಸಿದ ಜನಪ್ರತಿನಿಧಿಗಳನುಸಾರವಾಗಿ ದಿಗ್ದರ್ಶನ ಮಾಡಿ ಕೊಡಬಹುದು. ಮತ ಸಂಗ್ರಹದ ಅಂತ್ಯದಲ್ಲಿ ಫಲಿತಾಂಶಗಳನ್ನು ಅದರ ಅಧಿಕಾರಿಯು ಕಾಶ್ಮೀರ ಸಮಿತಿಗೂ ಕಾಶ್ಮೀರ ಸರಕಾರಕ್ಕೂ ವರದಿ ಮಾಡಬೇಕು. ಆ ಮೇಲೆ, ಆ ಜ್ಞಾನಾನಂತರ ಸ್ವತಂತ್ರ ಮತ್ತು ನಿಷ್ಪಕ್ಷಪಾತವಾಗಿರ್ಕೋ ಇಲ್ಲವೋ ಎಂಬುದನ್ನು ಕಾಶ್ಮೀರ ಸಮಿತಿಯು ಭದ್ರತಾ ಕೌನ್ಸಿಲಿಗೆ ತಿಳಿಸಬೇಕು ಎಂದು ಮತಸಂಗ್ರಹಾಧಿಕಾರಿಯು ವರದಿ ಮಾಡುವದು.

ಇದರ ಪರಿಣಾಮವೇನು?

ಭಾರತ ಮತ್ತು ಪಾಕಿಸ್ತಾನವೆರಡರಿಂದಲೂ ಒಪ್ಪಲ್ಪಟ್ಟಿರುವ ಮೇಲಿನ ಶಾಂತಿಸ್ಥಾಪನಾ ಏರ್ಪಾಡಿನ್ವಯದ ನೊದಲ ಕೆಲಸವಾಗಿ, ಕಾಶ್ಮೀರ ಬಟ್ಟೋಡಿರುವವರನ್ನು ಹಂಪೆ ತರಿಸಿಕೊಳ್ಳುವ ಹಾಗೂ ಅಕ್ರಮ ಪ್ರವೇಶಮಾಡಿರುವವರನ್ನು ಹೊರಗಟ್ಟುವ ವ್ಯವಸ್ಥೆಗಳಾಗಬೇಕು.ಮತದಾರರ ಕಟ್ಟೆ ಮತ್ತು ಮತದಾರ ಕ್ಷೇತ್ರಗಳೇ ಮೊದಲಾದುವು ತಯಾರಾಗಬೇಕು; ಆನಂತರವೇ ಮತಸಂಗ್ರಹ. ಕಾಶ್ಮೀರದ ಸ್ಥಾನಭ್ರಷ್ಟರನ್ನು ಮಂಡಿಸುವದಕ್ಕೇನೇ ಕೆಲವು ವರುಷಗಳು ತಾಗಬಹುದೆಂದು ಶೇಕ್ ಅಬ್ದುಲ್ಲಾರಂದಿದ್ದಾರಾದರೂ ಕೊನೆಯ ಪಕ್ಷ ಒಂದು ವರುಷಮಾದರೂ ಕಳೆಯುವದು ಖಂಡಿತ. ಈ ಮಧ್ಯವರ್ತಿಯ 'ಕಾರ್ಯನಿರ್ವಹಣಾ ಕಾಲದಲ್ಲಿ, ಎಂತಹುಹುನ್ನಾಭಿಪ್ರಾಯಗಳೆದ್ದರೂ ಆದುದುಹುನಃ ಹೋರಾಟವಾಗಿ ರೂಪುಗೊಳ್ಳುವ ಸಂಭವವಿಲ್ಲ.

ಇಂದಿನ ರಾಜಕೀ ಕರಾಂದು ಭಾರತ ಮತ್ತು ಪಾಕಿಸ್ತಾನದೊಳಗೆ ಮಾತ್ರ, ಕೃಷ್ಣ ಬದ್ಧ ಅಸ್ತಿತ್ವನಾಪದೂ ಇರದ, ಆದರೆ ಧಾಳಿಗಾರರಲ್ಲಿ ಬಹುಸಂಖ್ಯಾಕರಾಗಿರುವ ಗುಡ್ಡಗಾಡು ಪುಂಡರಿಗೂ ಇದಕ್ಕೂ ನೇರವಾದ ಸಂಬಂಧವಿಲ್ಲ. ಅವನ್ನು ಹಿಂದಿರುಗಿಸಲು ತನ್ನಿಂದ ಸಾಧ್ಯವಿರುವ ಕೆಲಸ ಮಾಡುವೆನೆಂದು ಪಾಕಿಸ್ತಾನವೀಕಾರಾರಿನಲ್ಲಿ ಒಪ್ಪಿರುವುದಾದರೂ, ಸಂದರ್ಭಾನುಸಾರವಾಗಿ ಯಾವುದಾವರೊಂದು ನೆವ ಹೇಳಿ ಅವನ್ನು ಮುನ್ನುಗ್ಗಿಸಲು ಇನ್ನೂ ಪಾಕಿಸ್ತಾನಕ್ಕೆ ಸಾಧ್ಯವಿದೆ. ಅದರೆ ಪಾಕಿಸ್ತಾನದ ಸೇನೆಗಳು ಕೂಡಲೇ ಹಿಂದೆಗೆಯಬೇಕೆಂಬ ಶರ್ತವಿರುವಂತೆ ಭಾರತ ಸರಕಾರದ ಮಟ್ಟಿಗಿಲ್ಲದೆ ಕಾಶ್ಮೀರದ ರಕ್ಷಣೆ ಮತ್ತು ಭದ್ರತೆಗಾಗತ್ಯವಿರುವಷ್ಟ ಸೇನೆಗಳನ್ನಿಟ್ಟುಕೊಂಡೇ ಅದಕ್ಕವಶ್ಯವೆಂದು ತೋರುವ ಅಧಿಕ ಸೇನೆಗಳನ್ನು ಮಾತ್ರ ಅಂರ ಪ್ರಕಾರ ಹಿಂದೆಗೆಯುತಕ್ಕದ್ದೆಂಬ ಶರ್ತವಿರುವೆದರಿಂದ ಆ ಮಟ್ಟಿಗೆ ಭಾರತವೇನೂ ನಂಬಿಸಲ್ಪಟ್ಟಿಲ್ಲ.

ಗಡಿನಾಡು ವಿಸ್ತಾರ್ಣ ಮತ್ತು ಪರ್ವತ ಬಹುಭಾಗದ ಪಾಕಿಸ್ತಾನ್ ಕ್ಷೇತ್ರಗಳಂದ ನುಗ್ಗಿದವರನ್ನು ಮಂಗಳ ಕರುಣಿಸುವ ಸೂಚನೆಗಳಿದ್ದರೂ 'ಆಜಾದ್ ಕಾಶ್ಮೀರ್ ಸರಕಾರ' ಮತ್ತವರ ಸೇನೆಗಳಿಂದ ಕಾಶ್ಮೀರ ಮುಸ್ಲಿಮರೇ; ಅವರು ಕಾಶ್ಮೀರದಲ್ಲೇ ಉಳಿದು, ಇದುವರೆಗೆ ಧಾಳಿಗಾರರು ಅತ್ಯಮಿಸಿರುವಂತಿಲ್ಲದ ಕಾಶ್ಮೀರದ ಭಾಗಗಳನ್ನು ಹಿಡಿದುಕೊಂಡು ಅಲ್ಲಿ, ಮತ ಸಂಗ್ರಹವು ಸಮಯದಲ್ಲಿ ಧಳಿಗಾರ ಪತಿನಿಧಿಗಳು ಮತ್ತು ಅಧಿಕಾರಪ್ರಭಲರಿಲಿ. ಹೀಗಾಗಿ ಮತ ಗಣನೆಯಾಗುವಾಗ ಕೆಲವು ಭಾಗಗಳಲ್ಲಿ ಕೇವಲ ಅಲ್ಪುಲ್ಲ ಸರಕಾರವೂ ಉಳಿದ ಕಡೆ ಧಾಳಿಗಾರರ ಸರಕಾರವೂ ಅಸ್ತಿತ್ವದಲ್ಲಿದ್ದು ಎಲ್ಲಾ ಕಡೆ

(ಮುಂದೆ ನೋಡಿರಿ)

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈತಕ್ಕ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ನೀಲಾಗಿ ಉಡುಪಿ ಬ್ರಾಹ್ಮಣರ ಆಡಿಗೆ, ತಿಂಡಿತಿನಸು, ಇವುಗಳ ರುಚಿಯುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಥೆಯ ಮಹಾ ವಾತಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ (1949-1950)

ನವಯುಗ ಪಂಚಾಂಗ,

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿಂದ,

ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11 0-0- 100 ಪ್ರತಿಗಳಿಗೆ 20-0-0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ಗುರುವಾರ, ಜುಮುಪಿ, ೧೩-೧-'೪೯

ಜನತೆ ತಯಾರಾಗಲಿ

ಸ್ವತಂತ್ರ ಭಾರತದ ಶಾಶ್ವತ ರಾಜ್ಯಾಂಗ ರಚನೆಯು ಅಂತಸ್ತುತವಾಗಿ ರಚಿಸಲ್ಪಡುತ್ತಿರುವ ಭವ್ಯ ಭವಿಷ್ಯವು ಘಟನಾ ಸಮಿತಿಯಲ್ಲಿ ಕಾಣಿಸುತ್ತಿದೆ. ಸಂಯುಕ್ತ ಭಾರತದ ಅಧ್ಯಕ್ಷ, ಉಪಾಧ್ಯಕ್ಷ, ಮಂತ್ರಿ ಮಂಡಲ, ಪಾರ್ಲಿಮೆಂಟ್ ಮುಂತಾದ ಅಗ್ರ ಭಾಗಗಳ ರಚನಾ ವಿಧಾನಗಳು ಅಲ್ಲಿ ನಿಶ್ಚಯವಲ್ಪಟ್ಟಿವೆ; ಪ್ರಾಂತೀಯ ಶಾಸನ ಸಭೆಗಳ ರಚನಾ ನಿಧಾನವು ಎತ್ತಿಕೊಳ್ಳಲ್ಪಟ್ಟಿದೆ ಎಲ್ಲವೂ ಪೂರ್ಣಗೊಳ್ಳುವಾಗ ದ್ವಿತೀಯ ಸ್ವಾತಂತ್ರ್ಯ ವರ್ಧಂತಿ ದಿನ ಬರಬಹುದೆಂದು ಸೂಚಿಸಲ್ಪಟ್ಟಿದೆ. ಸ್ವತಂತ್ರ ಭಾರತದ ಶಾಶ್ವತಾಕಾರ ಕೆತ್ತುವ ಈ ಚರಿತ್ರಾರ್ಹ ಕಾರ್ಯದ ಪ್ರತಿಯೊಂದಂತರವೂ ವಿಶೇಷ ಪ್ರಾಮುಖ್ಯತೆಯುಳ್ಳದ್ದಾದರೂ, ಆ ಕುರಿತು ಸವಿವರ ಏನುಶೇ ಮಾಡಲು ಇಲ್ಲಿ ಅವಕಾಶವಿಲ್ಲ. ಆದರೆ ಆ ಕೆಲಸವು ಪೂರ್ಣದಲ ಭಾಗದಲ್ಲಾಗುವ ಈ ದಿನಗಳಲ್ಲೇ 1950ರಲ್ಲಿ ಆದಷ್ಟು ಬೇಗನೇ ಜನಾವಣೆಗಳನ್ನು ನಡೆಸಬೇಕು; ಅದಕ್ಕಾಗಿ ಮತದಾರರ ಯಾದಿ ಪೂರ್ಣದಲದ ಸರ್ವ ತಯಾರಿಗಳನ್ನು ಆ ಸಂಬಂಧದ ಅಧಿಕಾರ ವ್ಯಕ್ತಿಗಳು ಪ್ರಾಂತೀಯ ಸರಕಾರಗಳು ನೂಡತಕ್ಕದ್ದು" ಎಂದು ನಿರ್ದೇಶಿಸುವ ಅವಶ್ಯಕತೆಯು ಘಟನಾಸಮಿತಿಗೆ ಬಿದ್ದಂತೆಯೇ ಆ ಕುರಿತು ಈಗಲೇ ಎಚ್ಚರಗೊಳ್ಳಬೇಕಾದ ಜಾಗೃತ ಜನತೆಗೂ ಇದೆ. ಈ ಚುನಾವಣೆಯ ಮಹತ್ವವೇನು-ಈ ಮೊದಲಿನ ಚುನಾವಣೆಗಳಿಗೂ ಮುಂಬರಲಿರುವ ಇದಕ್ಕೂ ಇರುವ ವ್ಯತ್ಯಾಸವೇನು—ಎಂಬುದನ್ನು ಸಾರ್ವಜನಿಕರು ಸರಿಯಾಗಿ ಮನವರಿಕೆ ಮಾಡಿಕೊಂಡಲ್ಲಿ, ತಮ್ಮ ಅದೃಷ್ಟವನ್ನು ತಾವೇ ರೂಪಿಸಿಕೊಳ್ಳುವ ಮಹತ್ತಾದ ಜವಾಬ್ದಾರಿಯಿದು ಎಂದು ಜಾಗ್ರತಗೊಳ್ಳದಿರಲಾರರು. ಕಮ್ಯೂನಿಸ್ಟ್, ಆರ್. ಎಸ್. ಎಸ್, ಹಿಂದೂ ಮಹಾಸಭೆಗಳಂಥವರು ಇಂದಿನ ಸರಕಾರಗಳು ಅರಾಷ್ಟ್ರೀಯ, ಅಪ್ರಯೋಜಕ ಏನೆ, ಮತ್ತು ಜನತಾ ಪ್ರತಿನಿಧ್ಯವಿಲ್ಲದ ಪುಗಳೆಂದು ದೂರುವಬದು; "ಕಾಂಗ್ರೆಸ್ ಸರಕಾರ ಒಂದೂ ನಿತ್ಯಜೀವನ ಸ್ಥಿತಿಗತಿಗಳು ಮತ್ತನ್ನು ಹಾಳಿಂದುವಲ್ಲಾ!" ಎಂಬ ಸಂತಾಸ ಜನಸಾಮಾನ್ಯರಲ್ಲೂ ಕಂಡುಬರುತ್ತಿದೆ. ಇಂತಹ ದೂರು ದೂಷಣೆಗಳಿಗೆ ಹಚ್ಚನಿಂದ ದ್ವೇಷಾಸೂಯೆಯ ಮತ್ತು ಅಜ್ಞಾನವೇ ಕಾರಣವೆಂಬುದು ನಿಜವಾದರೂ ಇಂದಿನ ಸಂಕಾರಗಳ ಸ್ವರೂಪದ ಮೇಲಿಂದ ಈ ಅರೋಪಾಸ್ಪಗಳಿಗೆ ಸಾಕಷ್ಟು ತಪ್ಪದಂತಾಗಿದೆ. ಇಂದಿನ ಭಾರತ ಶಾಂತಿ ಸಂರಕ್ಷಣಾವು ರಾಷ್ಟ್ರರಕ್ಷಣೆ ಯಾಗಲೀ ಜನತಾ ಸರ್ವಾಸಾಮಾನ್ಯ ಸರಕಾರವೇ ಆದರೂ ಜನಮತದಿಂದಾರಿಸಲ್ಪಟ್ಟ ಒಂದು ಸರಕಾರವಲ್ಲ. ಜನತಾ ಬೆಂಬಲವು ಳ್ಳವರೆಂದು ನಿಸ್ಸಂದೇಹವಾಗಿ ಖಚಿತ ಸ್ಥಾಪಿಸಿದ ಕಾಂಗ್ರೆಸ್ ನಾಯಕರ ಕೈಗೆ ಬ್ರಿಟಿಷರು ಅವಸರದಿಂದ ಅಧಿಕಾರವೊಪ್ಪಿಸಿಕೂಟ್ಟು ಮೇಲೆ, ಆ ನಾಯಕರು ಸರ್ವ ಸದ್ಧತೆಯನ್ನು ಅಸರಿಸಿದೆ, ಯೋಗ್ಯರನ್ನು ಕೂಡಿಕೊಂಡು ರಚಿಸಿಕೊಂಡಿರುವ ಸರಕಾರವಿದು; ಆದ್ದರಿಂದ ಅದರ ಮೇಲೆ ದ್ವೇಷಾಸೂಯೆಯಿಂಬುವ ತೀರಾ ಅಲ್ಪ ಸಂಖ್ಯಾಕರಾದರೂ "ಇದು ಜನಪ್ರತಿನಿಧಿ ಸರಕಾರವಲ್ಲ" ಎನ್ನುವಾಗ "ಹೌದು" ಎನ್ನಲೆವೆಯಿಲ್ಲ. ಇಂದಿನ ಪಾರ್ಲಿಮೆಂಟೂ ಆಗಿರುವ ಘಟನಾ ಸಮಿತಿಯು ಪದಸ್ಯರಾದರೋ ಜನರ ಮತದಿಂದಾರಿಸಲ್ಪಟ್ಟವ್ರಾಂತೀಕ ಶಾಸನ ಸಭೆಗಳಿಂದಾರಿಸಲ್ಪಟ್ಟವರೇ ಹೊರತು, ನೇರವಾಗಿ ಜನತಾರಂಗದಿಂದ ಚುನಾಯಿಸಲ್ಪಟ್ಟವರಲ್ಲ ಪ್ರಾಂತ್ಯಗಲ್ಲೇನೋ ಪ್ರಜಾಸತ್ತಾತ್ಮಕ ರೀತಿಯಿಂದ ಚುನಾಯಿಸಲ್ಪಟ್ಟ ಶಾಸನ ಸಭೆಗಳೂ, ಅವುಗಳ ಬಹು ಸಂಖ್ಯಾಕ ಪಕ್ಷದ ಸರಕಾರಗಳೂ ಇವೆ. ಅದರೆ ಇವುಗಳು ಕೂಡಾ ವ್ಯಾಯ ಪ್ರಬುದ್ಧರಲ್ಲಾ ಮತದಿಂದಾರಿಸಲ್ಪಟ್ಟವುಗಳಲ್ಲ. ಹೀಗಾಗಿ ಈ ದಿನ ಸಂಪೂರ್ಣ ಜನತಾ ಸ್ಪಂದನಶೀಲವಾಗಿರುವ ಸರಕಾರವು ಕೇಂದ್ರದಲ್ಲಾಗಲೀ ಪ್ರಾಂತ್ಯದಲ್ಲಾಗಲೀ ಇಲ್ಲ. ಆದ್ದರಿಂದ ಯಾವುದೇ ಕಾರಣದಿಂದಾದೂ ನಾಯಕರನ್ನು ಅಥವಾ ವರ್ಗವನ್ನು ಆರೋಪಿಸುವ ಅವಕಾಶ ಕೆಲವರಿಗೀಗ ಇದೆ 1950ರ ಚುನಾವಣೆಯು ಆವೆಲ್ಲಾ ಜವಾಬ್ದಾರಿಯನ್ನೂ ಜನತೆಯು ಮೇಲೆಯೇ ಹೇರಲಿದೆ ಎಂಬುದನ್ನೂ, ಆ ಮೇಲೆ ಜನರಿಗಾಗುವ ಹಿತಾಹಿತಗಳೆಲ್ಲಕ್ಕೂ ಸ್ವತಃ ಅವರೇ ಹೊಣೆಗಾರರಲ್ಲದೆ ಬೇರೆಯವರುವಂತಿಲ್ಲ ವೆಂಬುದನ್ನೂ ತಿಳಿದಿರಬೇಕು. 21 ವರ್ಷದ ವಯಸ್ಕರೆಲ್ಲರಿಗೂ ಮತಾಧಿಕಾರವಿದ್ದು, ಸುಮಾರು 75,000 ಜನಕ್ಕೊಬ್ಬನಂತೆ ಪ್ರತಿನಿಧಿಯಾರಿಸಲ್ಪಟ್ಟು, ಹೀಗೆ ಆರಿಸಲ್ಪಟ್ಟವರೇ ಅಧಿಕಾರ ಚಾಲು ಮಾಡುವವರಾಗುತ್ತಾರೆ. ತಾವೇ ನುಂದೊಡ್ಡಿದ ಆಂಧವರಿಂದಲೇ ಜನತೆ ತಮಗೆ ಬೇಕಾದುದನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಸಾಮಾನ್ಯ ಜನರ ತಲೆಯು ಮೇಲೆ ಇಂತಹ ಸ್ವಾಧಿಕಾರಿತ ಜವಾಬ್ದಾರಿ ಬೀಳುವ ಕಾಲ ಇನ್ನು ದೂರವಿಲ್ಲ. 1950 ನೇ ಇಸವಿಯ ಆದಿ ಭಾಗದಲ್ಲಿ ಚುನಾವಣೆಯಂತ ನೋಲೆ, ಅದಕ್ಕೂ ಆರು ತಿಂಗಳ ಮೊದಲೇ ಅದರ ಸಂಬಂಧದ ಚಟುವಟಿಕೆಗಳೇಳುವದು ಸಂಭವನೀಯ. ಆ ಸಂಬಂಧವಾದ ಕಾರ್ಯಾರಂಭವಾಗುವಂತೂ ಕೂಡಲೇ ಆಗಬೇಕೆಂಬುದಕ್ಕಾಗಿಯೇ ಘಟನಾ ಸಮಿತಿಯು ಇಷ್ಟವ್ಯಗ ಹೀಗೆ ನಿರ್ದೇಶಿಸಿತೆಂದ ವೇಲೆ ಜನತೆಯೂ ಈಗಲೇ ಅತ್ಯ ಗಮನಕೊಡಬೇಕಾದುದು ಅಗತ್ಯ. ತಮಗೆ ಎಂತಹ ಭವಿಷ್ಯ ಬೇಕು ಎಂಬುದನ್ನು ನಿರ್ಧರಿಸಿಕೊಂಡು, ಅದನ್ನು ಪೂರೈಸಿಕೊಡಬಲ್ಲ ಸಕ್ಷಮರಾವುದು ಎಂಬುದನ್ನು ಗೊತ್ತು ಹಚ್ಚಿಕೊಳ್ಳುವ ಕೆಲಸವು, ಈ ವರೆಗೂ ಕಡೆಗಣಿಸಲ್ಪಟ್ಟಿರುವ ಜನ ಸಾಮಾನ್ಯರ ಪಾಲಿಗಿದೆ. ಜನತೆಯಲ್ಲಿ ಅಂತಹ ಸ್ಪಷ್ಟ ತಿಳುವಳಿಕೆ ಮತ್ತು ಸಂಘಟನೆಯಿಲ್ಲದೆ ಹೋದರೆ, ಆವರೇ ಆ ವೈಫಲ್ಯ ನಿರ್ಣಾಪಕ ಕಾರ್ಯದಲ್ಲಿ ಕೂಡಾ ವಂಚಿನಲ್ಪಡುವ ಗಂಡಾಂತರವಿದೆ. ಆದ್ದರಿಂದ ಜನತೆಯೂ ಜನಜಾಗೃತ ನಿರ್ಮಾಪಕರೂ ಸರಕಾಲದಲ್ಲಿ ಕಾರ್ಯ ಪ್ರವೃತ್ತರಾಗಲಿ ಎನ್ನುತ್ತೇನೆ.

ಕಾಶ್ಮೀರದ ಭವಿಷ್ಯವೇನು?

(ಜನೇ ಪುಟದಿಂದ)

ಗಳ ಮತ ಸಂಗ್ರಹಾಧಿಕಾರ ಮಾತ್ರ ಕಾಶ್ಮೀರ ಸಮಿತಿಯ ಕೈಕೆಳಗಿನ ಮತಸಂಗ್ರಹಾಧಿಕಾರಿಯು ವಶವಿರುವುದು. ಇಲ್ಲಿ ಪಾಕಿಸ್ತಾನ್ ಪಕ್ಷಪಾತಿಗಳ ಸಂಚು ಹಂಚಿಕೆಗಳಿಗೆ ವಿಶೇಷಾನುಕೂಲವಿದೆ

ಮತ್ತೊಂದು ಕಂಟಕವೆಂದರೆ ಕಾಶ್ಮೀರ ಬಿಟ್ಟು ಹೋದವರ ಮತ್ತು ಹೊರಗಿನಿಂದ ನುಗ್ಗಿ ಸೇರಿಕೊಂಡವರ ಆಮದು ರಪ್ಪು. ಕಾರ್ಯವೂ ನ್ಯಾಯಬದ್ಧವಾಗಿ ನಡೆದೀತೆಂಬ ವಿಶ್ವಾಸವಿಲ್ಲ. ಇಲ್ಲಿಯೂ ಹಲವು ವಿಧದ ಘೋರ್ಜರಿಗಳನ್ನು ಮಾಡುವುದರಲ್ಲಿ ಪಾಕಿಸ್ತಾನ್ ಪಕ್ಷಪಾತಿಗಳೇ ಮೇಲ್ಗೈಯ್ಯಾಗಬಹುದು.

ಆದರೂ ಅಂತರಾಷ್ಟ್ರೀಯ ಪ್ರಸಿದ್ಧನಿರುವ ಮತಸಂಗ್ರಹಾಧಿಕಾರಿಗೆ ಕಾಶ್ಮೀರ ಸರಕಾರವೇ ಜೆಂಗೋಲಾಗಿದ್ದು, ಆತನಿಗೆ ಅದರದ್ದೇ ಆಶ್ರಯವೆಂಬುದೊಂದು; ಕಾಶ್ಮೀರದ ರಕ್ಷಣೆಗೆಮತ್ತು ಭದ್ರತೆಗಗತ್ಯವುಳ್ಳಷ್ಟು ಕಾಲ ಅಗತ್ಯವುಳ್ಳಷ್ಟು ಸೇನೆಯನ್ನು ಭಾರತ ಸರಕಾರವು ಅಲ್ಲಿಡಬಹುದೆಂಬುದಿನ್ನೊಂದು; ಜನ ವ್ಯವಸ್ಥೆಯೇ ಮೊದಲಾದ ಪ್ರಥಮಭಾಗದಲ್ಲಿ ಹೊರತು ಚುನಾವಣೆಯಲ್ಲಿ ಪಾಕಿಸ್ತಾನಕ್ಕೆ ಯಾವ ಪಾಲುಗಾರಿಕೆಯೂ ಇಲ್ಲವೆಂಬುದು ಮತ್ತೊಂದು—ಸಮಾಧಾನಕರ ಸಂಗತಿಗಳು.

ಒಟ್ಟಿನ ಮೇಲೆ ಈ ಶಾಂತಿ ವ್ಯವಸ್ಥಾ ಸೂತ್ರಗಳು ಪಾಕಿಸ್ತಾನ್ ಪಾದಕ್ಕೆಂತ ಭಾರತದ ಪಾದದತ್ತವೇ ಹೆಚ್ಚಾಗಿ ಮೂಲಿಕೊಂಡಿವೆ. ಆದರೆ ಚುನಾವಣೆಯ ಫಲಿತಾಂಶದ ಕುರಿತು ನಿಸ್ಸಂಶಯ ಭರವಸೆ ಸಡುವ ಮೊದಲು ಯೋಚಿಸಿಕೊಳ್ಳಬೇಕಾದ ವಿಷಯಗಳು ಬಹಳವಿವೆ.

ಪೂರ್ಣ ಪ್ರಚಾರಸ್ವಾತಂತ್ರ್ಯವಿರುವ ಚುನಾವಣೆಯಲ್ಲಿ, ಮತಭ್ರಾಂತ ಅಜ್ಞ ಮುಸ್ಲಿಮರ ತಲೆ ಕಡಿಸುವ ಕಲೆಯು ಪಾಕಿಸ್ತಾನ್ ಪ್ರಚಾರಕರಲ್ಲಿ ಸಂಪೂರ್ಣ ಮೈಗೂಡಿದೆಯೆಂಬುದನ್ನೂ ಆನಲ್ಲಿ ಬೇರಾವುದೂ ಪಿಲ್ಲರಾರೆಂಬುದನ್ನೂ ಊಹಿಸಿದರೆ ಹೆಚ್ಚಾಗದು.

ದೀರ್ಘಾವಧಿಯ ಸೇವೆಯಿಂದ ಜಿಲ್ಲೆಯ ಅನಭಿಷಿಕ್ತ ರಾಜನೆನ್ನಿಸಿದ್ದ ಬಾದರಹಾಖಾನರ ಗಡಿನಾಡು ಪ್ರಾಂತ್ಯದಲ್ಲೂ, ಸಾಕಷ್ಟು ಸಂಖ್ಯೆಯ ಹಿಂದೂ ಮತದಾರರಿದ್ದ ಅಸ್ಸಾಮಿನ ಸಿಲ್ಹೆಟ್ ಜಿಲ್ಲೆಯಲ್ಲೂ ಆದ ಇಂತಹ ಮತಸಂಗ್ರಹಗಳ ಫಲಿತಾಂಶಗಳ ನೇರಿಂದ ಮುಸ್ಲಿಂ ಜನತೆಯು ಮೇಲೆ ಲೀಗಿನ ಪ್ರಚಾರದ ಅಮಲಿಂತಹ ಪ್ರಭಾವವುಳ್ಳದ್ದೆಂಬುದನ್ನು ಊಹಿಸಬಹುದು. ಒಟ್ಟು ಕಾಶ್ಮೀರದಲ್ಲಿ ಅಧಿಕ ಸಂಖ್ಯಾಕರಿರುವ ಮುಸ್ಲಿಮರು ಬಡವರೂ, ಹೆಚ್ಚಾಗಿ ಅವಿದ್ಯಾವಂತರೂ ಇದ್ದು, ಹಿಂದೂ ಗುಜರ ಶೈಕೆಗೆ ದೀರ್ಘಾವಧಿಯಿಂದ ಈ ಬಡತನವನ್ನು ಅನುಭವಿಸಿದವರಾದ್ದರಿಂದ ನೋಡಲೇ ಕರುಟೆಹೋಗಿರುವ ಆ ಮುಸ್ಲಿಂ ಮೆದುಳಿಗೆ ಪಾಕಿಸ್ತಾನಿಗಳು ಹತ್ತಿಸುವ ಬೆಂಕಿ ಸುಲಭದಲ್ಲಿ ಹಿಡಿದುಕೊಂಡೀತು.

ಆದರೆ ಜನರ ಅದಲು ಬದಲಾವಣೆ, ಎಲ್ಲವುಗಳ ಪುನರ್ವ್ಯವಸ್ಥೆ ಆಗಿಕೂಳ್ಳದ ಜನಮತ ಮತ್ತು ಕಾಶ್ಮೀರದ ಜನಮತ ಸಂಗ್ರಹವಾರಂಭಿಸುವಂತಿಲ್ಲ ಇದಕ್ಕೆ ಒಂದು ವರುಷಕ್ಕಿಂತ ಹೆಚ್ಚಿಗೆ ಅವಧಿ ಹಿಡಿಯುವುದು ಖಂಡಿತ. ಈ ನಡುವೆ ಅಧಿಕಾರಾರೂಢರಿರುವ ಶೇಖ್ ಅಬ್ದುಲ್ಲರ ಸರಕಾರವು ಜನಮತವನ್ನೊಲಿಸಿಕೊಳ್ಳುವ ಯಾವ ಅಂಶವನ್ನೂ ಬಾಕಿಯಿಡಲಾರದ್ದರಿಂದಲೂ ಪಾಕಿಸ್ತಾನ್ ಹಸ್ತಕಾದ ಧಾಳಿಗಾರರಿಂದ ಕಾಶ್ಮೀರೀ ಮುಸ್ಲಿಮರಿಗೆ ಆಗಿರುವ ಪೈಶಾಚಿಕ ಅತ್ಯಾಚಾರಗಳಾಗಲೀ ಕಡಿದ ಒಂದೊಂದು ಕಾಲು ವರುಷದಿಂದ ಭಾರತದಿಂದ ಅವರಿಗಾಗಿರುವ ಎಲ್ಲಾ ವಿಧದ ಉಪಕಾರಗಳಾಗಲೀ ಎಂದೂ ಮರೆಯುವಂತಹದಲ್ಲವಾದ್ದರಿಂದಲೂ ನಿರ್ಣಯವೇ ಗತಿಯಾಗಿಲ್ಲ.

ಮತಸಂಗ್ರಹದಲ್ಲಿ ಪಾಕಿಸ್ತಾನವೆನ್ನೆಲ್ಲಿಯಾದರೂ ಗೆದ್ದು ಬಿಟ್ಟರೆ ಆಪತ್ಕಾಲಗಾಗುವವು ಶೇಖ್ ಅಬ್ದುಲ್ಲಾ ಮತ್ತು ಅವರ ಹಿಂಬಾಲಕ ಜನತೆ. ಆದ್ದರಿಂದ ಈ ಚುನಾವಣೆಯಲ್ಲಿ ಶೇಖ್ ಅಬ್ದುಲ್ಲಾ ಮತ್ತವರ ಪಕ್ಷದವರು ತಮ್ಮ ಜೀವಸ್ಮರಣ ಪ್ರಶ್ನೆಯೇ ಇದೆ ಎಂದು ಪ್ರಾಣಾವಧಿ ಹೋರಾಡುವರೆಂಬುದು ಖಂಡಿತ.

ಪ್ರಾಯಶಃ 1950ರ ಉತ್ತರಾರ್ಧದ ನೇಳೆ ಕಾಶ್ಮೀರದ ಭವಿಷ್ಯವು ತೀರ್ಮಾನಗೊಳ್ಳುವಾಗ ಅದು ಹೇಗಾದರೂ ಭ್ರಾಂತಿಕೆ ಅವಿಶಾಸಿಕರ ಆಪವಾನಕರವಾಗುವಂತಿಗಲಾದೆಂಬುದು ಖಂಡಿತ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿಕವಾಗಿ 64 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕನ್ನು ಎಲ್ಲಾ ತರದ ವಹಿವಾಟುಗಳಿಂದ ಅವಶ್ಯ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಹೆಂಗಸರು ಗಂಡಸರಲ್ಲದೆ ಪ್ರಪಂಚವಿಲ್ಲ. ಆದರೂ ಪ್ರಪಂಚ ಮಿಥ್ಯವಂತೆ. ದೇವರೇ ಸತ್ಯವಂತೆ. ಅದು ಹೇಗೆಂದು ಇದೊಂದು ಪುರಾಣಕಥೆಯಿಂದೇಕೆ ತಿಳಿಯಬಾರದು?

ಮಾಯಾ ಮಚ್ಛೀಂದ್ರ

(ತೆಲುಗು)

ಕನ್ನಂಬ, ಗೌರೀನಾಥ ಶಾಸ್ತ್ರಿ, ಆವಂಕ, ಶ್ರೀ ರಾಮ ಮೂರ್ತಿ, ಮಾಲತಿ ಮಂಗಳಂ ಮೊದಲಾದವರು

ಕಾರೀಕು 12-1-1949ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರ ಘೋರ್ ಜಮಾಯಿ (ವಸಂತಸೇನ)

[೬ನೇ ಪುಟದಿಂದ]

ತಾ ಭೂತದ ಕೈ ಪುಸ್ತಕ ಆರ್. ಯಸ್. ಯಸ್. ರೂಪದಿಂದ ಯೋಚಿಸಿದರೆ ಅದರ ಆರ್ಭಟ ಮತ್ತು 'ನಾಡಿ' ಮಹಾಸಭಾ ರೂಪದಿಂದ ಜ್ವರಿತ್ತಿದೆ. ಆದ್ದರಿಂದ ಅದರಂತೆಯೇ ಇದನ್ನೂ ನಿಲ್ಲಿಸಬೇಕಾದುದು ಅಗತ್ಯ.

ಹಿಂದುಗಳ ಹೆಸರಿನಿಂದ ಅನ್ಯ ಸಮಾಜಗಳ ಮೇಲೆ ದ್ವೇಷ ಹಬ್ಬಿಸುವುದರಲ್ಲಿ ರ.ವ ಹುರುಸು ಸ್ವತಃ ಹಿಂದೂ ಸಮಾಜದ ಭಿನ್ನಾಂಗಗಳೊಳಗೆ ಸುಸಂಬಂಧ ಜೋಡಣೆ ಮಾಡಿ, ಸಂಘಟನೆಗೊಳಿಸುವ ಕಡೆಗೆ ಈ 'ಹಿಂದೂ ವಾದಿ'ಗಳಿಗಿಲ್ಲ. ಅನ್ಯ ಸಮಾಜಗಳವರಿಂದ ಈ ಮೊದಲು ಹಿಂದೂಸಮಾಜಕ್ಕಿಲ್ಲಿಯಾದರೂ ತಾತ್ಕಾಲಿಕ ಆಘಾತಗಳಾದುದಿದ್ದರೆ, ಅದಕ್ಕಿಂತ ಹೆಚ್ಚಾಗಿ ಹಿಂದುಗಳ ದುರ್ಬುದ್ಧಿ ಮತ್ತು ದೌರ್ಬಲ್ಯಗಳಿರುವ ಹಿಂದೂ ಮತಾಂಧರೇ ಕಾರಣ ಹೊರತು ಬೇರೆಯವರಲ್ಲ; ಈಗಲಂತೂ ಸ್ವತಂತ್ರ ಭಾರತದಲ್ಲಿ ನಿಜಕ್ಕೂ ಹಿಂದುಗಳಿಗಲ್ಲದ ಅನ್ಯ ಸಮಾಜಗಳಿಂದ ಆಕ್ರಮಣ ಭೀತಿಯಕಾಲ್ಪನಿಕವಾಡಿ ತೋರಿಸುವದೊಂದನ್ನಲ್ಲದೆ, ಹಿಂದೂ ಸಮಾಜದ ದೌರ್ಬಲ್ಯಗಳಾಗಿರುವ ಅಸ್ಪರ್ಶತೆ, ಗುಲಾಮೀರಿಗಳ ಅಧಃಪತನ ಮುಂತಾದುವುಗಳ ನಿವಾರಣೆಯತ್ತ ಇವರ ಲಕ್ಷ್ಯವೇ ಇಲ್ಲ.

ಪಾಕಿಸ್ತಾನ್ ಪೂರ್ವದಲ್ಲಾದರೂ ಸರಿಯೇ; ಅಖಿಲ ಭಾರತದಲ್ಲಿ ಹಿಂದುಗಳು ಬಹು ಸಂಖ್ಯಾಕರಾಗಿರುವಾಗಲೂ ಮಹಾಸಭಾ ವಾದಿಗಳಂತಹ ಸಮಾಜಾಂಧರು ತೋರಿಸಜತ್ತಿದ ಸಂಕುಚಿತ ಬುದ್ಧಿಯ ಫಸಿಯಿಂದಲೇ ಮುಸ್ಲಿಂ ಲೀಗಿನಂತಹ ಅಲ್ಪ ಸಂಖ್ಯಾಕ ಜಾತ್ಯಂಧ ವಾದವು ಅರೀತಿ ಪ್ರಮಾಣಾರ್ಹವಾಯಿತು; ಸ್ವಾತಂತ್ರ್ಯ ನವನ್ನೊಡ್ಡಿ ಅಲ್ಪಸಂಖ್ಯಾಕರ ಮೇಲೆ ದ್ವೇಷ, ಆಕ್ರಮಣಕಾರಿ ಪ್ರದರ್ಶನವು ಬಹು ಸಂಖ್ಯಾಕರಲ್ಲೇ ಇದ್ದಾರೆಂದಾದ ಮೇಲೆ, ಅಲ್ಪ ಸಂಖ್ಯಾಕರು ಅವರ ಜತೆಯಲ್ಲಿರಲು ಹೆದರಿ ತಾವು ಪ್ರತ್ಯೇಕ ಹೋಗುವೆವೆನ್ನುವದು ನ್ಯಾಯವಲ್ಲವೇ ಎಂಬ ಪ್ರಶ್ನೆ ಎಂಬಲದಲ್ಲಿ ಲೋಕದ ವಿಚಾರಿಗಳಲ್ಲಿ ಮೊಳೆತತ್ತಿಂಬುದನ್ನು ನೆನಪಿನಲ್ಲಿಡಬೇಕು. ಆದ್ದರಿಂದಲೇ ಈಗ ಪಾಕಿಸ್ತಾನ ನವನ್ನು ಸರಿಗಾಳುಳ್ಳತ್ತಿನೆಂದು ಬಂದೂ ನಿವು ತೀರ್ಮಾನವದಿಲ್ಲ" ಎಂದು ನೆಹರು ವಲ್ಲಭಭಾಯಿಗಳನ್ನುತಿದ್ದಾರೆ.

ಪ್ರಜಾ ಸ್ವಭುತ್ವ-ಲೌಕಿಕವಾದ ರಾಷ್ಟ್ರ-ಎಂದರೆ ಅಂಸ್ಟ್ರದಲ್ಲಿರುವ ಎಲ್ಲರ ಹಕ್ಕಿನದಲ್ಲವೂ ಎಂದರ್ಥ. ಹೀಗೆ ಜನಮತವನ್ನು ಗಣಿಸುವ ಹರೀತ್ಪೇಕ್ಷೆಯಲ್ಲಿ ಬಹುಸಂಖ್ಯಾಕರ ಮತವೇ ಸಾಗಾಗಬೇಕು. ಭಾರತದಲ್ಲಿ ಒಟ್ಟು ಸಂಖ್ಯಾಕರು ಹಿಂದುಗಳಿಂದ ಮೇಲೆ ಇನ್ನೂ ಇಷ್ಟ ಹಿಂದುಗಳಿಗೆ ಅಪಾಯವೆಂದರೇನು? ಅಲ್ಪ ಸಂಖ್ಯಾಕ ಸಮಾಜಗಳವರೇ ಇಲ್ಲ ಇಲ್ಲದಂತೆ ಮಾಡಬೇಕು, ಅಥವಾ ಹಿಂದುಗಳ ಪೈಕಿ ತಮ್ಮವರೇ ಎಲ್ಲವನ್ನೂ ಹಿಡಿದುಕೊಳ್ಳುವಂತಾಗಬೇಕು ಎಂಬ ದುರುದ್ದೇಶವೊಂದಕ್ಕಿಲ್ಲದೆ, ಹಿಂದೂ ಮಹಾ ಸಭೆ ಬೇರಾವುದಕ್ಕೂ ಈಗ ರಾಜಕೀಯ ಪ್ರವೇಶಿಸಬೇಕೆಂದಿಲ್ಲ.

ಹಿಂದೂ ಮಹಾಸಭೆಗೂ ಮದ್ದರೆಯಲಿ.

ಈಗ ರಾಂಗ್ರೆಸಿನ ನೇತೃತ್ವದಲ್ಲಿ ಸ್ವತಂತ್ರ ಭಾರತದ ಘಟನಾ ಸಮಿತಿಯು ಜಾತೀಯ ಶ್ರೇಯಸ್ಕರ ಭಾವನೆಯು ನೊಳೆಯಲವಕಾಶವೇ ಇಲ್ಲದ ಘಟನೆ ತಯಾರಿಸುತ್ತಿದೆ. 'ಮುಸ್ಲಿಮನಿಗೆ ಮುಸ್ಲಿಮನದ್ದೇ ವೋಟು' ಎಂಬ ಯಾವ ಪ್ರತ್ಯೇಕ ಮತದಾನದ ಹೆಕ್ಕಿನ ಕಾರಣದಿಂದ ಪ್ರತ್ಯೇಕತೆಯ ಭಾವನೆ ಬೆಳೆಯುತ್ತಾ ಹೋಗಿ, ಈ ನೆಗಲು ಪಾಕಿಸ್ತಾನದಲ್ಲಿ ಸರಣಿ ಮಿಸಿತೋ ಆ ಅಪಾಯವಿಂದಿನ ನವಶಸನದಲ್ಲಿ ದ್ದಾಗಿದೆ. ಸಮ್ಮಿಶ್ರ ಮತದಾನದ ಪದ್ಧತಿ ಜಾರಿಗೆ ಬರುವುದರಿಂದ ಜನತಾ ಸೌಹಾರ್ದತೆಯಿಲ್ಲದ-ಬಹು ಸಂಖ್ಯಾಕರ ನಂಬಿಕೆಗಿರ್ಹನಾಗದ-ಮತಾಂಧ ಮುಸ್ಲಿಮನಾದೂ ಇನ್ನು ಶಾಸನ ಸಭೆಗೆ ಆರಿಸಲ್ಪಡಲಾರ. ಈ ಮಾತು ಎಲ್ಲಾ ಮತಗಳವರಿಗೂ ಅನ್ವಯಿಸುವಂತಹದು.

ಪಾಕಿಸ್ತಾನವನ್ನು ಪುನಃ ಭಾರತದೊಳಗೆ ಎಳೆದುಕೊಳ್ಳಬೇಕಂಬ ಹಿಂದೂ ಮಹಾಸಭೆಯ ದುರುದ್ದೇಶವು ಸದ್ಯಸ್ಥಿತಿಯಲ್ಲಿ ಎಷ್ಟು ಅನಾಹುತಕಾರಿಯೆಂಬುದನ್ನು ಊಹಿಸಬೇಕು. 1947ರಲ್ಲಿ ಪಾಕಿಸ್ತಾನ ಕೊಡದಿದ್ದರೂ ಮುಸ್ಲಿಂ ಬಹುಸಂಖ್ಯೆಯಿರುವ ಆ ಭಾಗಗಳೆಲ್ಲಂತೂ ಮುಸ್ಲಿಂ ರಾಜ್ಯಗಳಾಗಿ ಮಾರ್ಪಡುತಿದ್ದುವಲ್ಲದೆ, ಉಳಿದ ಇಡೀ ಭಾರತದ ಎಲ್ಲಾ ರಾಜ್ಯಗಳನ್ನೂ ಆತಂಕಿಸಿಬಿಲಾ ಅವನು ಸಮರ್ಥರಾಗುತಿದ್ದರು. ಅಂತಹ ಅವಾಯದ ಬದಲಿಗೆ ನೇ ಪಾಲು ಕೇಳಿದವರಿಗೆ ½ ಪಾಲು ಕೊಟ್ಟು ಪ್ರತ್ಯೇಕಿಸಿಟ್ಟು, ಅವರು ಆಡಚಣೆಯಿಲ್ಲದ ಸಿಕ್ಕಿಕೊಂಡು ತಾವು ಮಾಡಿದ್ದನ್ನು ತಾವೇ ಉಣ್ಣುವಂತೆ ಮಾಡಿರುವ ಇಂದಿನ ವ್ಯವಸ್ಥೆಯೆಂದರೆ ಪೂರ್ಣ ಹಾನಿಗಿ ಜೀವಕ್ಕೆನೇ ಅವಾಯಕರವಾಗಿರುವ ಅಂಗವನ್ನು ಹಿಸರೇಶನ್ ಮಾಡಿಸಿಕೊಂಡು ಬದುಕಿ ಉಳಿದು ಪುಷ್ಟಿಗೊಂಡಂತೆಯೇ! ಈ ಬೆಳವಣಿಗೆಯು ಒಲದಿಂದ ಕಳೆಯು ಹೋದ ಅಂಗವೂ ಪುನಃ ಸಿಸ್ವಿಭಾವಿಕ ಚಿಗುರುವಂತಿದ್ದರೆ ಮಾತ್ರ ಅದಕ್ಕೆ ಸ್ವಾಗತ ಹೊರತು, ಮಹಾ ಸಭೆಯವನ್ನೆನಂತಿಲ್ಲಿ ಕೊಳೆಯುತ್ತಿರುವ ಆ ಅಂಗವನ್ನು ಪುನಃ ಅಂಟಿಸಿಕೊಳ್ಳುವದಂದರೆ ಇಡೀ ದೇಹಕ್ಕೆ ಆ ವಿಷವು ವ್ಯಾಪಿಸಿ ಎಲ್ಲವೂ ಒಟ್ಟಿಗೆ ಪತನಗೊಳ್ಳುವದಂದೇ ಅರ್ಥ. ಆದ್ದರಿಂದಲೇ 'ಈಗ ಪಾಕಿಸ್ತಾನ ನವನ್ನು ಸರಿಗಾಳುಳ್ಳತ್ತಿನೆಂದು ಬಂದೂ ನಿವು ತೀರ್ಮಾನವದಿಲ್ಲ" ಎಂದು ನೆಹರು ವಲ್ಲಭಭಾಯಿಗಳನ್ನುತಿದ್ದಾರೆ.

ಇಷ್ಟು ದೊಡ್ಡ ದುರಭಿಲಾಷೆಯನ್ನು ಕಟ್ಟಿಕೊಂಡಿರುವ ಈ ಮಹಾಸಭೆಯಲ್ಲಿ ಜನತೆಯು ವಿಶ್ವಾಸಕ್ಕರ್ಹರಾದ, ಅಥವಾ ಪೂರ್ವಾಪರ ವಿಚಾರ ಪ್ರಸಿದ್ಧಿಯ ಜನ ನಾಯಕರಾರಾದರೂ ಇದ್ದಾರೆ? ಇರುವರೆ? ಪಂಡಿತ ಮಾಲವೀಯ, ಲಾ.ಲಜಪತ ರೈಗಳಂತಹ ಸುವಿಚಾರಿ ಪ್ರಮುಖರು ಇಂದು ರಾಜಬಲ್ಲಿ ಈ ಸಭೆಯೊಡನೆ ಸಂಬಂಧವಿಟ್ಟುಕೊಂಡುದಿದೆಯಾದರೂ ಅವರು ಅದೇ ಕಾಲದಲ್ಲಿ, ಅದಕ್ಕಿಂತ ಹೆಚ್ಚಾಗಿ ಕಾಂಗ್ರೆಸಿನಲ್ಲಿ ಸೇರಿಕೊಂಡಿದ್ದರಲ್ಲದೆ, ಇವೆಂಡು ಸಂಸ್ಥೆಗಳ ಹಾದಿ ಭಿನ್ನವಾಗುವ ಸಂದರ್ಭಗಳಲ್ಲೆಲ್ಲಾ ಅವರು ಕಾಂಗ್ರೆಸ್ ಹಾದಿಯನ್ನೇ ಹಿಡಿಯುತಿದ್ದರು. ಈಗ ಕೂಲಾ ಡಾ। ಶ್ಯಾಮ ಪ್ರಸಾದ ಮುಖರ್ಜಿಗಳಂತಹ ವಿಚಾರಿಗಳು ಮಹಾಸಭೆಯ ರಾಜಕಾರಣ ಪ್ರವೇಶಕ್ಕೆ ಬದ್ಧ ವಿರೋಧವಿದ್ದು ಭಾರತ ನಾಯಕರ ಸಂಗ್ರಿ ಹಿಡಿದಿರುವ ಪ್ರತ್ಯಕ್ಷ ನಿದರ್ಶನವಿದೆ.

ಮಹಾ ಸಭೆಯು ಉಳಿದವರೆಲ್ಲಾ ಒಂದಲ್ಲೊಂದು ರೀತಿಯ ಆತಿಗಾಮಿಗಳು, ಅಪ್ರಬುದ್ಧರು, ಅರಿವಿಕ್ಕೆ ಬುದ್ಧಿಯವರೇ. ಸಾಮಾನ್ಯ ಮಟ್ಟದ ವಿಚಾರ ಶಕ್ತಿ, ಸಮತೋಲನಾ ಬುದ್ಧಿ, ವಿವೇಕ ಕೂಡಾ ಇಲ್ಲದೆ ಏನೋ ಒಂದು ತಂಪಾ ಇರುವವರು 'ಪ್ರಾಂತಿಕ ಕಾರ್ಯದರ್ಶಿಗಳು'ಗಳಿದ್ದುದೆ ನ್ನೂ ಅಂಥವರುಗಾಂಧೀಜೀ ಕೊಲೆಯ ಹಠಾತ್ ಮಾರ್ಪಾಡಿನಿಂದ ತಮಗೇನಾಗುವದೋ ಎಂಬ ಹೆದರಿಕೆಯೊಂದರಿಂದಲೇ, ತಮ್ಮ ಮಹಾ ಸಭಾ ನೆಂಜನ್ನು ಹೆಚ್ಚಿಸಿಕೊಂಡರೂ ಅಡಗಿಸಿಟ್ಟುಕೊಂಡು ರಾಜೀನಾಮೆ ಕೊಟ್ಟಂತೆ ನಟಿಸಿ, ಭಿನ್ನ ಭಿನ್ನ ಧೋರಣೆಗಳನ್ನು ಪ್ರದರ್ಶಿಸಿ, ಇವರು ಅಂಜಿಕೆಕಾಗಿದವರೇ. ಹೊರತು, ಅತ್ಯಶುದ್ಧಿ ಮಾಡಿಕೊಂಡವರಲ್ಲ ಎಂಬ ನಿಜವೇಷ ಎಲ್ಲರಿಗೂ ತಿಳಿಯುವಂತ ಮಾಡಿರುವುದನ್ನೂನೋಡುವಾಗ ವಿನೋದವೇ ಉಂಟಾಗುತ್ತಿದೆ. ಹಿಂದೂ ಮಹಾಸಭೆಯ ಸ್ವತ್ತಿದರ ಕಾರ್ಯಕರ್ತರಿ ಮಟ್ಟವಾವುದೆಂಬುದಕ್ಕೆ ಬೇರೆ ನಿದರ್ಶನವೇ ಬೇಕೆ.

ಆದ್ದರಿಂದ ಭಾರತ ಸರಕಾರವು ಹಿಂದೂ ಮಹಾಸಭೆಯು ಮೇಲೆ ಮುಟ್ಟುಗೋಲು ಹಾಕಬೇಕಾದುದು ; ಸಮಂಜಸ ಮತ್ತು ಅಗತ್ಯ. ವೇಷ ಬದಲಾಯಿಸಿಕೊಂಡು ಅದರ ಸಂಚಿನಲ್ಲಾದರೆ, ಕಾರ್ಯ ಮಾಡುತ್ತಿರುವವರ ಸಮೇತ ಎಲ್ಲಾ ಕಾರ್ಯಕರ್ತರ ಮೇಲೂ ನ್ಯಾಯಶ್ಚಿಕ್ಕ ನಿಘಿಮಾಡಿ ಒಂಸು ವಿಸ ಮತ್ತು ಕಲ್ಮಷವನ್ನು ನಿವಾರಿಸಿಕೊಳ್ಳುವ ಮೂಲಕ ರಾಷ್ಟ್ರದ ಮಾತೃವರ್ಣವನ್ನು ರಜಿಸ್ಟ್ರೀಕರಿಸಬೇಕಾದುದು ಅಗತ್ಯ. ಜನತೆ ಜೊಂಬಲು ನೈತಿಕ ಧೈರ್ಯ ಪ್ರಮತ್ತು ಆತ್ಮಬಲ ಪಾವುದೂ ಇಲ್ಲದ ಈ ಮಹಾ ಸಭೆಯಿಂದನ್ನು ಹಾದಿಗೆ ಹಚ್ಚಬಹುದು, ಇಂದು ಎಲ್ಲಿಲ್ಲೂ ತಮ್ಮ ಮನೋ ದೌರ್ಬಲ್ಯವನ್ನೇ ಪ್ರದರ್ಶಿಸಿರುವ ಆರ್. ಯಸ್. ಯಸ್. ನವರು ನಿಗಾಕೆಗೆಯಾಕೊಂಡುದ ಕ್ಕಿಂತಲೂ ಸುಲಭದ ಕೆಲಸ.

ಪುನಃ ಒಂದು ತಿಂಗಳು ೧೪೪ನೆ ಸೆಕ್ಷನ್— ಉಡುಪಿಯಲ್ಲಿ ಇಂದು ತಾ 10ರಂದ ಒಂದುತಿಂಗಳ ಕಾಲಕ್ಕೆ ಪುನ 144ನೆ ಸೆಕ್ಷನ್ ಜಾರಿ ಮಾಡಲಾಗಿದೆ. ರಕ್ಷಣಾಬಂಧಿ ಅರ್. ಎಸ್. ಎಸ್. ಕಾರ್ಯಕರ್ತರ ಸಾಗಾಟ ಅದರ ಸಂತಾಪಕರ ಸಭೆ, ಮೆರವಣಿಗೆ ಮೊದಲಾದ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ.

ಶೋಚನೀಯ ನಿಧನ ಕಟ್ಟಾದಿ ಹೈಸ್ಕೂಲಿನ ಸಹಾಯಕ ಉಪಾಧ್ಯಾಯರು ಹೋಲ್‌ಸೇಲ್ ಸ್ಪೋರ್ಟಿನ ಉಡುಪಿ ತಾಲೂಕು ಇನ್ಸ್‌ಪೆಕ್ಟರೂ ಆಗಿರುವ ಶ್ರೀ ಕೆ. ಆರ್. ಶೆಣೈಯವರ ಸೌಭಾಗ್ಯವತಿ ಶ್ರೀಮತಿ ರಾಜೀವಿ ಬಾಯಿಯವರು ಇಂದೇ ತಾ. 9ರಲ್ಲಿ ರಾತ್ರಿ 44ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರ ಅಗಲುವಿಕೆಯಿಂದುಂಟಾದದುಃಖದಲ್ಲಿ ಇವರ ಕುಟುಂಬದೊಡನೆ ಸಹಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲೆಂದು ಕೋರುವೆವು.

ರೇಕಸಿಂಗ್ ಎಡ್ಜ್ಯುಸರಿ ಕಮಿಟಿಗೆ ಶ್ರೀ ಪಿ. ಸೋಮಯ್ಯನವರು ಸ್ಪೆಷಿಡೆಂಟರಾಗಿ ಆರಿಸಲ್ಪಟ್ಟಿರುವರು.

ಮುನಿಸಿಪಲ್ ಕೌನ್ಸಿಲು ಮೊಟಂಗು ಇದೇ ತಾ 3ರಲ್ಲು ಜಯರ್‌ಮೆನ್ ಶ್ರೀ ಪಿ ಉಮೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1947-48 ನೇ ವರ್ಷದ ಆಡಳಿತ ವಂದಿಯನ್ನು ಸರಕಾರವು ವಿಮರ್ಶಿಸಿಬರಿಪ ಟಿಪ್ಪಣಿಗಳನ್ನು ಓದಲ್ಪಟ್ಟಿತು. ಫೂಳುಹಾವಳಿ ರಸ್ತೆಗಳ ಯೋಜನೆಯಕುರಿತು ಕೌನ್ಸಿಲು ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಗಿತ್ತು. ಇದರ ಸಲುವಾಗಿ ಸಹಾಯಧನವನ್ನೂ ಸಾಲ ವನ್ನೂ ಕೇಳಿದರೆ ಅವನ್ನು ಸೆಂಕ್ಷನ್ ಮಾಡುವ ಬಗ್ಗೆ ಕೆಲಸವನ್ನು ಮಾತ್ರ ಮುಂದೊತ್ತಬೇಕೆಂದು ತಿಳಿಸುವಾಗ ಸರಕಾರದ ಧೋರಣೆಯೇ ನೆಂಬುದು ಕೌನ್ಸಿಲಿಗೆ ತಿಳಿಯವಾಗಿದೆ ಎಂಬ ಭಿನ್ನಾಭಿಪ್ರಾಯದ ನಿರ್ಣಯವಾಯಿತು. ಜೋರ್ಡಾ ಹೈಸ್ಕೂಲಿನ ಸುಬ್ಬಿಹೆಬ್ಬಾಳ್ಯರಾಗಿದ್ದ ವಿದ್ಯಾಕ್ಷೇತ್ರದಲ್ಲಿ ತುಂಬಾ ಸೇವೆಯನ್ನು ಸಲ್ಲಿಸಿ ಈಗತಾನೆ ನಿವೃತ್ತರಾದ ಶ್ರೀ ಬೋಟ್ ಭೀಮಾಂಧೀಸಾಂಬಯ್ಯ ಪ್ರಶಂಸಿಸುವ ಶ್ರೀ ಎ ಶಂಭು ಸೆಟ್ಟರ ನಿರ್ಣಯವು ಪಾಸಾಯಿತು.

ವಕೀಲ್ ಶ್ರೀ ಬಿ ಶ್ಯಾಮ ಸೆಟ್ಟರ ನಿಧನ

ಜಿ ಕ. ಜಿಲ್ಲೆಯಲ್ಲಿ ಸುಪರಿಚಿತರೂ ಸೇವಾಪರಾಯಣರೂ ಆಗಿದ್ದ ವಕೀಲ್ ಶ್ರೀ ಬೆಳ್ಳೆ ಶ್ಯಾಮಸೆಟ್ಟರು ಇದೇ ತಾ. 4-1-1949ರಲ್ಲಿ ನಿಧನಗೊಂಡರೆನ್ನಲು ವಿಷಾದಿಸುತ್ತೇವೆ. 70ರ ಮುದಿ ವಯ್ಯಾಯದಲ್ಲಿ ಕೆಲ ಸವಾಯದಿಂದಿದ್ದ ಕಾಯಿಲೆಯು ಅವರ ಜೀವನ ಮುಕ್ತಾಯಗೊಳಿಸಿತು. ಶ್ರೀ ಸೆಟ್ಟರು ತನ್ನ ಜೀವನದ ಉದ್ಯೋಗವನ್ನು ಉಡುಪಿಯಲ್ಲಿ ಆರಂಭಿಸಿ 1912ರಲ್ಲಿ ಕಾಸರಗೋಡಿಗೆ ದೋಗಿ ಅಲ್ಲಿ ಕೊನೆಯವರೆಗೂ ಜಾತಿಸ್ತೀ ವಕೀಲ ನಾಗಿ ಜನಸ್ತೋಯ ಮುಂದಾಳು ಆಗಿದ್ದವರು. ಬಂಬಾ ಯಾನೆ ನಾಡವ ಸಮುದಾಯ ಸಲ್ಲಿಗಾಗಿ ಹಲವು ವಿಧದಿಂದ ಮುಡಿಪಿದವರಿವರು. ಯಸ್.ಎಲ್.ಯಸ್. ಹೋಲಿನ ಸ್ಥಾಪನೆ, ಬಂಟರ ಯಾನೆ ನಾಡವರ ಕಾರ್ಯಾಚರಣೆ ಮತ್ತು ವ್ಯವಸ್ಥೆಗಳಲ್ಲಿ ಶ್ರೀ ಶ್ಯಾಮಸೆಟ್ಟರು ಗಣ್ಯಭಾಗವಹಿಸಿದ್ದರು. ಶ್ರೀ ಸೆಟ್ಟರು ಸಾಮಾನ್ಯ ಪ್ರಜೆಯಾಗಿದ್ದರೂ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಅವರಿಗಿದ್ದ ಅಪಾರ ಜನಸ್ತೋಯ ಮತ್ತು ಅಭಿಮಾನಗಳು ಅವರ ಅಂತ್ಯಯಾತ್ರೆಯಲ್ಲಿ ಜನಸಾಗರವೇ ಹರಿದುಬಂದಿತ್ತೆಂಬುದರಿಂದ ಸ್ಪಷ್ಟವಾಗಿದೆ. ಶ್ರೀ ಸೆಟ್ಟರಿಗೆ ೩ಗಂಡು ೩ಹೆಣ್ಣುಮಕ್ಕಳು, ಸೆಟ್ಟರ ಅತ್ತೆಕ್ಕೆ ಶಾಂತಿಯನ್ನು ಕೊಡಲಿತ್ತೇನೆ. ಅವರ ಮಕ್ಕಳು ಹಾಗೂ ಬಂಧು ಮಿತ್ರರೊಡನೆ ನಮ್ಮ ಸಂತಾಪಸೂಚಿಗಳಿಗಳಿದ್ದೇವೆ.

೧೮49ರಿಂದ
'ಅಂತರಂಗ'ದ ಹೊಸ ಹೆಜ್ಜೆ
ಕನ್ನಡಜಿಲ್ಲೆ ಈ ವರೆಗೆ ಯಾರೂ
ತೋರದ ಬಂಪು ಸಾಹಸ!
ಬೇರೆ ಬೇರೆ ವಿಷಯದಲ್ಲಿ
ನಾನೂರೈವತ್ತು ಪುಸ್ತಕ
೧೩ನೆಯ ಪುಸ್ತಕ—
೧೯೪೯ರ ಬಿರುದಾವಳಿ!
ಯಾವುಯೂರಿಗೆ ಯಾವ ಬಿರುದು
ಎಂಬುದನ್ನು ಅಗತ್ಯ ನೋಡಿರಿ.
೨ನೇ ಪುಸ್ತಕ
ಆ ಅಂದ್ರೆ!
ಜೀವಂತ ಇರುವಾಗಲೇ ಸತ್ತ, ಸತ್ತು
ಬದುಕಿದ ಸುದ್ದೀ ಕತೆ
೩ನೇ ಪುಸ್ತಕ
ಹೈದರಾಬಾದ್ ವಿಜಯ
ಹೈದರಾಬಾದ್ ಪೋಲಿಸ್
ಕಾರ್ಯಾಚರಣೆಯ ಯಶೋಗಾನ.
ಅಂತರಂಗ ಕಾರ್ಯಾಲಯ, ಉಡುಪಿ.

ಡಾಕ್ಟರ್ ಕೊರಡ್ಯಲ್ ವೆಂಕಟರಾಯರ

ಮನೆ-ಮದ್ದು

ಇದೀಗ ಎರಡನೆ ಮುದ್ರಣ ತಯಾರಾಗಿದೆ.

ಬೆಲೆ 2-0-0. ವಿ. ಪಿ. ದ್ವಾರಾ 2-6-0.

ನವಯುಗ ಪ್ರೆಸ್, ಉಡುಪಿ.

ಸ್ತ್ರೀ, ಬಿಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ನುಣ್ಣು ಪಾಲಾಗುತ್ತೆ

ಹೆರಿಗೆ ಆದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕಸ್ಮಿಕವಾಗಿ ಸಂಸಾ ವಿಕಾರಗಳುಂಟಾಗುತ್ತವೆ. ನಸಬೇಳೆದೆ ಯಾ ಆದರ ಆರಂಭ ಉಳಿಸು ಸ್ತ್ರೀ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಬಲಾಪಸ್ಮಾರ, ಮೂಲವಿರೋಧ, ಸ್ತನಗಳ ಬೀಗು, ಸಿಡ್ರಾಸಾರ, ಪಾರಾಂತಿ, ಅಗ್ನಿಮಾಂದ್ಯ ಇತಾದಿ ಒಂದೆರಡು ಯಾ ಹಲವು ವಿಕಾರಗಳು ತಲಡೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ನೋಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಜಂವಿಂಗಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವೂದ ಪ್ರಕೃತಾತ್ಮಾತೆದ ೧೦ ಬಿಟ್ಟಿ ಮತ್ತು ೧೧ ಡಜನು ಪ್ರಸೂತ ಕೆಲ್ಯಾಣ ಗುಟಿ ಇಷ್ಟ ನ್ನ ವೆಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಕಮ್ಮಿ

ಗೃಹಲಕ್ಷ್ಮಿಯ ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಕೆಮಸೀಯ ಕೇಶಕಲಾಪ, ತಂಪು ಮಿಮಿಳು, ಕುಪ್ಪ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆಮ್ಲಲಕೀ ತೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (RLGD)

Kunjal P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಆತಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕರ್ಗ, ಪ್ರದರರೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಳ್ಳೋಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯೆ:—ಹುರಿವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟೆ ಬಾರ್ಜು ೧೨ ಆಣೆ.

ಮೂಲಕರು:—ಜಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಎಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ-ಪಾನಸ್ಸ ಎಲ್ಲರಂಗಸ್ಟ್ ಧಾರವಾಡಳು ವಿಜಾಪುರ ನಂಜಾದೇಶ್ವರ ಮೂರ್ತಿ ಡಾವಣಗೇರಿ ಡಾನಾಡಗೇರಿ:—ಜಾವಡಗೇರಿ ಫ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಪಾಪೇರಿ ಬ್ಯಾಡಗಿ



ಬಾಣಂತಿಯರ ಸಲು ವಾಗಿಯೇ ದೇವ ಮತ್ತು ಪ್ರಕೃತದ ದೇಹಸ್ಥಿತಿಯ ನ್ನು ನಿರ್ಣೈಸಿ ಜಯಾ ಕಿಸಲ್ಪಟ್ಟ ಅಮೋಘ ಪಾವ ಮಧುರದ್ರವ ರಸಾಯನ. ಅಲ್ಪ ಸೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ದಿನ್ನಸ ಬಾಟ್ಲಿಗಳು ಕೆಜ್ಜೆ ಳಿದಿಮೆ ಳುದಿವಸಗಳಿಗೆ ಬರುವವು. ಇಂದರೆ ಕೇವಲ ೪ ರೂಪ್ಯಾಗಳ ಒಂದು ಬಾಣಂತಿತನಕ್ಕೆ ಸಾಕಾಗುವಷ ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ರಾಸ್ತ್ರಿ, ಆಯುರ್ವೇದ ಭೂಷಣ್ಣ, ನಂ.೬ ಕೊಡಿಯಾಲಬೈಲು, ಪ.ಕ.

ಸ್ಥಾನಿಕಸ್ಥರು— ಡಾ| ವಿ. ಕೆ. ತಿಪರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಶ್ರೀ. ಕೊರಡ್ಯಲ್ ಸ್ಮಾರಕ ಸಮಿತಿ ಧನ ಸಹಾಯದ ವಿವರ

ಈ ಮೊದಲು ಪ್ರಕಟವಾದಂತೆ ಜಮಾ ರೂ. 407 8 0

ಶ್ರೀ. ಯು. ಮಂಡಲೀಕ ಶೆಣೈ, ಬಿ. ಎ. ಎಲ್. ಟಿ. ಉಡುಪಿ	15	0	0
ಡಾ| ಕೆ. ಎಲ್. ನಿತಾಳ್, ಉಡುಪಿ	5	0	0
ಶ್ರೀ ಬಿ. ಗೋಪಾಲ ರಾವ್, ಬಾರ್ಕೂರು	2	0	0
ಶ್ರೀ ಸುಬೇರ್ ಸಂಜೀವರಾವ್, ಉಡುಪಿ	1	0	0
(ಶ್ರೀ ಖ. ವೆಂಕಟಕೃಷ್ಣರಾಯರ ಮೂಲಕ ಸಸಾಲದ ಸಹಾಯದ ವಿವರ)			
ಶ್ರೀ. ಪಡುಳುದ್ರು ವೆಂಕಟಕೃಷ್ಣ ರಾವ್, ಪಡುತೋನ್ಸೆ	25	0	0
ಶ್ರೀ. ಶಿವ ಪುಟ್ಟಣ್ಣಯ್ಯ, ವಿಶ್ವಜ್ಞ ಭವನ, ಉಡ್ಪಿ	15	0	0
ಶ್ರೀ. ಎಂ. ವಿ ರಾಮರಾವ್, ಉಡ್ಪಿ ಹೊಟೆಲ್, ಚಿನ್ನಪಟ್ಟಣ	15	0	0
ಶ್ರೀ. ಪಡುಳುದ್ರು ಕೃಷ್ಣಯ್ಯ, ಪಡುತೋನ್ಸೆ	10	0	0
ಶ್ರೀ ಪಿ. ವಿ. ರಾಮಚಂದ್ರ ರಾವ್, ಶ್ರೀಕೃಷ್ಣ ಭವನ, ಕೃಷ್ಣರಾಜ ನಗರ	10	0	0
ಶ್ರೀ. ಎಸ್. ರಾಮದಾಸ ರಾವ್, ಸೆಂಟ್ರಲ್ ಕೆಫೆ, ಶಿವಮೊಗ್ಗಾ	10	0	0
ಶ್ರೀ. ಆರೂರು ವೆಂಕಟರಾಯ, ಉಡುಪಿ	10	0	0
ಶ್ರೀ. ಕಿನ್ನಿ ಶ್ರೀನಿವಾಸರಾವ್, ಆರೂರು	10	0	0
ಶ್ರೀ. ಆರೂರು ಶ್ಯಾನುಭಾಗ್, ಗೋಕುಲನಿವಾಸ, ಉಡುಪಿ	10	0	0
ಶ್ರೀ. ಪಿ. ವಿ. ಆಚಾರ್, ವಕೀಲ್, ಉಡುಪಿ	5	0	0
ಶ್ರೀ. ಟಿ. ಕೆ. ಶೇಷಪ್ಪಯ್ಯ, ಪಡುತೋನ್ಸೆ	5	0	0
ಶ್ರೀ ಟಿ. ಶ್ರೀನಿವಾಸರಾವ್, B. A. B. T. ಪಡುತೋನ್ಸೆ	5	0	0
ಶ್ರೀ ಪಡುಳುದ್ರು ನಾರಾಯಣ ರಾವ್	5	0	0
ಶ್ರೀ ಪಿ. ಸೀತಾರಾಮು ಉಡುಪ, ಮೊಡರ್ನ್ ಕೆಫೆ, ಹನ್ನೂರು	5	0	0
ಶ್ರೀ. ಪಿ. ಕೆ. ಜನಾರ್ಧನರಾವ್, ನುನೋಪರ ಕೆಫೆ, ಶಿವಮೊಗ್ಗಾ	5	0	0
ಶ್ರೀ ಬಿ. ನಾರಾಯಣ ರಾವ್, ಕೃಷ್ಣಭವನ, ಶಿವಮೊಗ್ಗಾ	5	0	0
ಶ್ರೀ ಬಿ. ಗೋಪಾಲಕೃಷ್ಣರಾವ್, ಕೆಮ್ಮಣ್ಣು	5	0	0
ಡಾ| ಟಿ. ಇಸ್ಮಾಯಿಲ್, ಕೆಮ್ಮಣ್ಣು	3	0	0
ಶ್ರೀ ಕೆ. ಕೃಷ್ಣರಾವ್, ಕೃಷ್ಣರಾಜ ನಗರ	2	0	0
ಶ್ರೀ ಟಿ. ಎಲ್, ಉಡುಪ, ತೋನ್ಸೆ ನೆಸ್ಟ್	2	0	0
ಶ್ರೀ ಟಿ. ಜೋಮ್ಮಯ್ಯ ಶೆಟ್ಟ ತೋನ್ಸೆ ನೆಸ್ಟ್,	2	0	0
ಶ್ರೀ ಟಿ. ಗಾಬ್ರೆಲ್ ಲಸ್ಕಾರ, ಪಡುಳುದ್ರು	2	0	0
ಶ್ರೀಮತಿ ಇಂದಿರಾಬಾಯಿ, ಪಡುಳುದ್ರು	2	0	0
ಶ್ರೀ ಕೆ. ಮಹಾಬಲ ಶೆಟ್ಟಿ, ಕೆಮ್ಮಣ್ಣು	1	0	0
ಶ್ರೀ ಟಿ. ಸರ್ವೋತ್ತಮಕಿಣಿ, ಕೆಮ್ಮಣ್ಣು	1	0	0
ಜುಮ್ಲಾ	600	8	0

[ಮುಂದುವರಿಯುವುದು]

ಎಲ್ಲರೂ ಉದಾರ ಸಹಾಯಮಾಡಬೇಕಾಗಿ ವಿನಂತಿ.

ಸರಕಾರಿ ರಿಜರ್ವ್ ಕಾಡುಗಳಿಗೆ ಬೆಂಕಿ ಸಂಭವಿಸದಂತೆ ಎಚ್ಚರಿಕೆ—

ಈ ಕುರಿತು ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರ ರ ಪ್ರಕಟಣೆಯ ಸಾರಾಂಶವು ಹೀಗಿದೆ: ದಕ್ಷಿಣ ಕನ್ನಡ ಡಿವಿಜನಿನಲ್ಲಿ ಸುರಕ್ಷಿತ ಕಾಡುಗಳ ಮಾರ್ಗವಾಗಿ ರಾತ್ರಿಕಾಲದಲ್ಲಿ ಆತ್ಯುತ್ಸಹೋಗುವವರು ಲಾಟೀನುಗಳನ್ನು ಸೂತ್ರಬಯ್ಯಬಯಸುವುದಾಗಿದೆ. ಬೇರೆ ಯಾವ ವಿಧದಲ್ಲಿಯಾದರೂ ಬೆಂಕಿಯನ್ನು ಕೊಂಡುಹೋಗುವ ಯಾವನೆಂಬ-ಯಾ-ಎಲ್ಲಾ ಅಸಾಮಿಗಳ ಮೇಲೆ ನಾವ್ರಾನು ಫೊರೆಸ್ಟ್ ಆಕ್ಟಿನ 21(c)ನೆ ಪ್ರಕರಣದ ಮೇರೆಗೆ ತಕ್ಕೀರನ್ನು ಹೊರಿಸಲಾಗುವುದು. ಇದಕ್ಕನುಸಾರವಾಗಿ ಕಾಡಿಗೆಮಾಡೋಣಾದ ನಷ್ಟದ ಬಗ್ಗೆ ಪರಿಹಾರದ್ರವ್ಯವಾಗಿ ಪಾವತಿಮಾಡಬೇಕಾಗಿ ಶಿಕ್ಷೆವಿಧಿಸುವ ಮೆಜಿಸ್ಟ್ರೇಟರು ವಿಧಿಸಬಹುವಾದ ಹೊಬಲಗನ್ನು ಕೊಡುವುದಲ್ಲದೆ, ಅಂತಿಂಗಳವರೆಗೆ ಸಜೆ-ಯಾ-೫೦ರೂಪಾಯಿ 50 ರ ವರೆಗಿನ ಜುಲುಮಾನೆ-ಯಾ- ಎರಡೂ ಕೂಡಿರುವ ಶಿಕ್ಷೆ ಹೊಂದತಕ್ಕದ್ದು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 138/1947

R. E. P. 566/1948

ವಾದಿ-ಮಂಜುನಾಥಯ್ಯ

ಪ್ರತಿವಾದಿರು-ಕೃಷ್ಣಪ್ಪಯ್ಯ ಕೂಡಾ.

2ನೇ ಪ್ರತಿವಾದಿ ಮಂಜಯ್ಯ ವಾಸುದೇವಯ್ಯನವರ ಮಗ ಧಾರವಾಡಜಿಲ್ಲಾ ಧಾರವಾಡ ತಾಲ್ಲೂಕಿನಲ್ಲಿರುವವ.

4 ಸುಬ್ರಾಯ ಭಟ್ಟ, 5 ವೆಂಕಟ್ರಮಣ ಭಟ್ಟ, ರಾಮಕೃಷ್ಣ ಭಟ್ಟರ ಮಗಂದಿರು ಕುಂದಾಪುರತಾಲೂಕು ಮರವಂತೆಗ್ರಾಮ

ಸದರಿ 2, 4, 5ನೇ ಪ್ರತಿವಾದಿರಿಗೆ.

ವಾದಿಯು O. S. 138/1947ನೇ ದಾವೆಯಲ್ಲಿ ಸಲ್ಲಿಸಿದ ಪಣಗಳ ಬಗ್ಗೆ ಪಡೆದ ಡಿಕ್ರಿಯಲ್ಲಿ ನಮೂದಿಸಿದ R. E. P. 566/1948ನೇ ಅಮ್ಮಜ್ಜಾರಿಯಲ್ಲಿ ಪ್ರತಿವಾದಿರು ಬಾಡ್ತು ಮೂಲನೇಗಿಯ ಹಕ್ಕುದಿ ಆಸ್ತಿಯನ್ನು ಜಪ್ತಿ ನಾಡಿಸಬೇಕಾಗಿ ವಾದಿಯು ಅರ್ಜಿಕೊಟ್ಟರುವುದರಿಂದ ಅಜಾಬ್ತು ನಿಮ್ಮದೇನಾದರೂ ಅಕ್ಷೇಪಣೆಯಿದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾ20-1-1949 ನೇದಿವಸ ಹಗಲು 11ಗಂಟೆಗೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾಡೀತು ಯೆಂಬಆಸಂಗ್ತಿ. ಕೋರ್ಟುಹ್ಯುಂಕ್ಯಕಾರ ಯಾ ಮೂಲಕ ತಿಳಿಸೋಣಾಗಿಯವೆ.

K. Raghunath Shenoi.
Pleader for Plaintiff
Dated 8-1-1949, Coondapoor.

ಮುಂದಿನ ಸುಖ ಸೌಕರ್ಯಕ್ಕಾಗಿ ಇಂದೇ ಮುಂಜಾಗ್ರತೆ ವಹಿಸುವುದು

ಜಾಣತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪವನ್ನಾದರೂ ಉಳಿಸಬೇಕೆನ್ನುವವರಿಗೆ ಅತ್ಯನುಕೂಲವಾದ ಜನತಾ ವಿಮಾಸಂಸ್ಥೆ

ಏ ನ್ಯೂ ಕರ್ನಾಟಕ

ಪ್ರೂವಿಡೆಂಟ್ ಇನ್ಶೂರೆನ್ಸ್ ಕಂಪೆನಿ

ಲಿಮಿಟೆಡ್,

ವಿಮಾವಿವರಕ್ಕೆ ವಿಜ್ಞಾಪನಾಮೂಹಿತಗೂ ಬರೆಯಿರಿ.

ದ. ಕ. ಜಿಲ್ಲಾ ಕೃಷಿಕ ಬಾಂಧವರಿಗೆ ಎಚ್ಚರಿಕೆ.

(ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಕಟಣೆ ಸಾರಾಂಶ)

ಕಳೆದ ವಾರದ ನವಯುಗ ಸಂಚಿಕೆಯಲ್ಲಿ ಶ್ರೀ ಸಂಜೀವನಾಥರು ಆಪರ "ರೈತ ಪಂಚಾಯತಿಗೆ" ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರ ಬೆಂಬಲವನ್ನು ಹಾರೈಸುವಾಗ ಕಾಂಗ್ರೆಸು ಕೃಷಿಕರ ಹಿತಕ್ಕಾಗಿ ಏನೂ ಕೆಲಸಮಾಡಿಲ್ಲ; ಜಾತ್ಯವಲ್ಲದೆ ದ್ವೋಷಮಾಡಿದೆ ಎಂದಲ್ಲಾ ಅಲ್ಲ ಸಲ್ಲದ ಆರೋಪಹೊರಿಸಿ, ಗಾಂಧಿಜಿಯವರ ಪವಿತ್ರ ಹೆಸರಿನ ಮುಸುಕಿನಿಂದ ತನ್ನ ಬೇಳೆ ಬೇಯಿಸಲು ಮುಂದಾಗಿರುವಂತಿದೆ. ಶ್ರೀ ಸಂಜೀವನಾಥರೇ ಮೊದಲಾಗವರು ಆರೂಢಪಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕೈಕೆಳಗೆ ಕೃಷಿಕ ಸಂಘಟನೆಗಾಗಿ ದುಡಿದವರು. ಆದರೆ ಕಾಂಗ್ರೆಸಿನ ಒಕ್ಕ ಯಪಡೆಯು ಜನ ಪರಿಜಯವಾದ ಮೇಲೆ ಇಂದೀಗ ಕಾಂಗ್ರೆಸಿಗನೇ ಜ್ರೋಹ ಬಗೆದು ಆದರ ಕೃಷಿಕ ಸಂಘಟನೆಯನ್ನು ವಿರುದ್ಧವಾಗಿ ತಮ್ಮ ರೈತ ಪಂಚಾಯತನ್ನು ಸ್ಥಾಪಿಸಲು ಹೊರಟಿರುವರು.

ಶ್ರೀ ಸಂಜೀವನಾಥರ ಈ "ರೈತ ಪಂಚಾಯತೆಂ"ಬುದು ಸೋಶಿಯಲಿಸ್ಟ್ ಸಾರ್ಟಿಯ ಕೃಷಿಕ ಸಂಘಟನೆ, ಸೋಶಿಯಲಿಸ್ಟರು ನರ್ಗ ಮೋರ್ಚಾದಲ್ಲಿ ವಿಶ್ವಾಸವಿಲ್ಲದವರು. ಗಾಂಧಿ ನಾದಿಗಳಾದ ಕಾಂಗ್ರೆಸಿಗರಂತೆ ವರ್ಗ ಸಹಕಾರದಲ್ಲಿ ಅವರಿಗೆ ವಿಶ್ವಾಸವಿಲ್ಲ. ಆದರೂ ಶ್ರೀ ಸಂಜೀವನಾಥರು ರೈತ ಪಾರ್ಟಿಯ ಹೆಸರನ್ನು ಕೊಡುವ ಧೈರ್ಯವಿಲ್ಲದೆ, ಗಾಂಧಿಜಿಯ ಹೆಸರನ್ನು ಉಪಯೋಗಿಸಿ, ಆದೇ ಖಾಯಿಲೆಯಲ್ಲಿ ಕಾಂಗ್ರೆಸಿನ್ನು ಹಳಿಸು ರೈತ ಪಂಚಾಯತೆಂಬ ಹೆಸರಿನಿಂದ ಹೊಸ ಕೃಷಿಕ ಸಂಘಟನೆಗೆ ಹೊರಟಿರುವ ರಹಸ್ಯವನ್ನು ಜಿಲ್ಲೆಯ ಕೃಷಿಕ ಬಾಂಧವರು ಚೆನ್ನಾಗಿ ವಿಚಾರಿಸಿ ಎಚ್ಚರದಿಂದಿರಬೇಕೆಂದು ನಿನಂತಿ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು 1934ರ ಇಸವಿಯಷ್ಟೆ ಹಿಂದಯೇ ಒಕ್ಕಲುಹಿತ ಮಸೂದೆಯನ್ನು ತಯಾರಿಸಿ ಇದೀ ಜಿಲ್ಲೆಯಲ್ಲಿ ಆದರ ಪ್ರಚಾರವನ್ನೂ ಆವಶ್ಯಕತೆಗಿಯೇ ಜಿಲ್ಲಾ ಪರಿಷತ್ತೊಂದನ್ನು ಕರೆದು ರೈತರಲ್ಲಿ ಜಾಗ್ರತಿಯನ್ನುಂಟುಮಾಡಿರುತ್ತಾರೆ. ಆದರೆ ಆ ಸಮಯದಲ್ಲಿ ಪರಕೀಯ ಪ್ರಭುತ್ವದೊಡನೆ ಹೋರಾಡುತ್ತಿದ್ದ ಕಾಂಗ್ರೆಸಿಗರಿಗೆ ಆ ಕೆಲಸವನ್ನು ಮುಂದೊತ್ತಲು ಸಾಧ್ಯವಾಗಿಲ್ಲ. 1937ರಲ್ಲಿ ಕಾಂಗ್ರೆಸು ಮಂತ್ರಿ ಮಂಡಲವು ಅಧಿಕಾರಕ್ಕೆ ಬಂದಾಗ ನುತ್ತೊನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಒಕ್ಕಲುಹಿತ ಮಸೂದೆಯ ಪ್ರತ್ಯೆಯನ್ನು ಎತ್ತಿ ಹಿಡಿದು ಪ್ರಬಲ ಪ್ರಜಾಭಿಪ್ರಾಯವನ್ನುಂಟುಮಾಡಿದರು. ಆದರೆ ಸ್ವಲ್ಪ ಕಾಲದಲ್ಲಿಯೇ ಮಂತ್ರಿ ಮಂಡಲವು ರಾಜಿನಾಮೆಕೊಟ್ಟುಬಿಡುವಿನ ಸದ್ರಿ ಪ್ರಯತ್ನವು ಫಲಿಸಲಿಲ್ಲ.

ಇಂದೀಗ 2 ವರ್ಷಗಳಿಂದ ಜಿಲ್ಲೆಯ ಪಲು ಭಾಗಗಳಲ್ಲಿ ಸಭೆ ಸಂಘಟನೆಗಳು ಎಸಬಡಿ ನಡೆಸಲ್ಪಡುತ್ತವೆ ಜೊಂಬಯಿಯಲ್ಲಿ ಕೂಡಾ ಕೃಷಿಕರ ಸಭೆಯೊಂದು ನಡೆದು ಸಂಘವು ಸ್ಥಾಪಿಸಲ್ಪಟ್ಟಿದೆ. ಜಿಲ್ಲೆಯ ಪಲವು ಕಡೆಗಳಲ್ಲಿ ಕೃಷಿಕ ಸಾಖಗಳು ಸ್ಥಾಪಿತವಾಗಿ ಕೆಲಸ ಮಾಡುತ್ತಿವೆ. ಕೃಷಿಕ ಹಿತ ತ್ರಕಟನೆಗಳೂ ಜಿಲ್ಲೆಯಲ್ಲಿಲ್ಲಾ ಪ್ರಕಾಶ ಮಾಡಲ್ಪಟ್ಟಿವೆ

ಕಾಂಗ್ರೆಸು ಕೃಷಿಕರಿಗಾಗಲೀ ಕೆಲಸಗಾರರಿಗಾಗಲೀ ಎಂದೂ ದ್ರೋಹವನ್ನು ಬಗೆಯುವುದಿಲ್ಲ ಬದಲಿಗೆ ಕೃಷಿಕ ಮತ್ತು ಕೆಲಸಗಾರರ ಹಿತ ಸಾಧನೆಯು ದೃಷ್ಟಿಯಿಂದಲೇ ಹಿಂದೆಯೂ, ಇಂದೂ, ಮುಂದೆಯೂ ಅದು ದುಡಿಯುವ ಸಂಸ್ಥೆಯಾಗಿರುವುದು. ಪಲವು ಸ್ವಾಂತಗಳಲ್ಲೀಗ ಜಮಾನ್ದಾರಿ ಪದ್ಧತಿಯು ತೆಗೆದು ಹಾಕಲ್ಪಟ್ಟು ಗೇಣಿ ಹಾಗೂ ಕೃಷಿಯಾಳು ಪದ್ಧತಿಯು ಬದಲಾಯಿಸಲ್ಪಡುತ್ತಿದೆ. ಕಾಂಗ್ರೆಸ್ ಮಂತ್ರಿಗಳು ತಪ್ಪಿ ಬಿದ್ದಲ್ಲಿ ಆಗತ್ಕ ಬಿದ್ದಲ್ಲಿ ಕಿವಿಹಿಂಡಿ ಚಾರಿಗೆ ಹಚ್ಚಲು, ಗಾಂಧಿಜಿಯವರ ಪಟ್ಟ ಶಿಷ್ಯರಾದ ಶ್ರೀಗಳಾದ ಮುರ್ಕಾಲಾ, ಮತ್ತು ಜೆ. ಸಿ. ಕುಮಾರಪ್ಪ ಮೊದಲಾವವರು ಸದಾ ಸಿದ್ಧ ವಿರುವರು. ಶ್ರೀ ಜೆ. ಸಿ ಕುಮಾರಪ್ಪನವರು ಅಧ್ಯಕ್ಷತೆಯಲ್ಲಿ ಕೃಷಿ ಸುಧಾರಣಾ ಕಮಿಟಿಯು ಸ್ಥಾಪಿಸಲ್ಪಟ್ಟಿರುವುದು ಹಿಂದುಸ್ತಾನದ ಎಲ್ಲಾ ಸಂಪತ್ತಿನ ಕೆಲಸ ಮಾಡಿದೆ. ಆದರ ನಿರೀಕ್ಷಣೆಯು ಬೇಗನೆ ಪ್ರಗತಿಯಾಗಲಿದೆ. ಆದನ್ನು ಸ್ವಾಂತಿಕ ಸರಕಾರಗಳು ಜಾರಿಗೆ ತರಲಿವೆ.

ಮದ್ರಾಸ್ ಸರಕಾರವು ಜಮಿನ್ದಾರಿಗಳನ್ನು ತೆಗೆದು ಹಾಕಿ ಇದೀ ಹಿಂದುಸ್ಥಾನದಲ್ಲೇ ಪ್ರಥಮವಾಗಿ ಭೂ ಸುಧಾರಣೆಯ ಸಾಹಸವನ್ನು ಮಾಡಿ ಸರ್ವರ ಪ್ರಶಂಸೆಗೆ ಪಾತ್ರವಾಗಿದೆ. ಮಲಬಾರ್ ಒಕ್ಕಲು ಹಿತ ಮಸೂದೆಯು ತಿದ್ದುಪಡಿಯು ಮಸೂದೆಯು ಈಗ ತಾನೆ ತರಲ್ಪಟ್ಟಿದೆ. ದ. ಕ. ಜಿಲ್ಲೆಗೂ ಬೇಗನೆ ಒಕ್ಕಲು ಹಿತ ಮಸೂದೆ ಬರಲಿದೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ಆದಷ್ಟು ಬೇಗನೆ ಜಿಲ್ಲೆಯ ಕೃಷಿಕ ಕೆಲಸಗಾರರ ಸಭೆಯನ್ನು ಕರೆದು ಜಿಲ್ಲಾ ಕೃಷಿಕ ಸಂಘವೊಂದನ್ನು ಸ್ಥಾಪಿಸಲಿದೆ. ಜಿಲ್ಲೆಯು ಕೃಷಿಕ ಬಂಧುಗಳೆಲ್ಲಾ ಕೇವಲ ವೈಯಕ್ತಿಕ ಮತ್ತು ಪಾರ್ಟಿ ಸ್ವಾರ್ಥ ದೃಷ್ಟಿಯಿಂದ ಕಾಂಗ್ರೆಸಿನ ಹೆಸರಿಗೆ ಕೆಸರೆರಚಲು ಮುಂದಾಗಿರುವ ಕೆಲವರ ಆಸಕ್ತಾಚಾರಕ್ಕೆ ಬಲಿ ಬೀಳದೆ ಕಾಂಗ್ರೆಸಿನ ಕೃಷಿಕ ಸಂಘಕ್ಕೆನ್ನೇ ಬೆಂಬಲ ವಿತ್ತು ಆ ಮೂಲಕ ತಮ್ಮ ಹಿತ ಸಾಧನೆ ಮಾಡಿಕೊಳ್ಳಬೇಕೆಂದು ನಿನಂತಿ.

ಕೊನೆಯದಾಗಿ ಉಡುಪಿಯಲ್ಲಿ ಇದೇ ಬರುವ ತಾ 14ರಲ್ಲಿ ನಡೆಯಲಿರುವ ಉಡುಪಿ ತಾಲೂಕು ರೈತರ ಪರಿಷತ್ತೆಂದು ಕರೆಯಲ್ಪಡುವ ಸಭೆಗೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ಯಾವ ಸಂಬಂಧವೂ ಇಲ್ಲ, ಮಾತ್ರವಲ್ಲದೆ ಕಾಂಗ್ರೆಸಿನ ಸಂಘಟನೆಗೆ ಪ್ರತಿಬಿಂಬ ದ್ವನಿವೆಂದು ಈ ಮೂಲಕ ವಿದಿತಪಡಿಸುತ್ತೇನೆ. ಆದರೆ ನ್ಯಷ್ಟಾಪಕರಾದ ಶ್ರೀ ವಿರಲ್ ದಾಸರವರು ಒಮ್ಮೆ ಕಾಂಗ್ರೆಸಿನ ಆಫೀಸಿನಲ್ಲಿ ಕೆಲಸಮಾಡಲೊಪ್ಪಿ ಹಿರಿಯಡ್ಕದಲ್ಲಿ ಜಿಲ್ಲಾ ಕೃಷಿಕ ಪರಿಷತ್ತೊಂದನ್ನು ಕರೆಯಬೇಕೆಂದಿದ್ದವರು ಆದರೆ ಆ ಮೂಲಕ ಅನರ ಬೇಳೆ ಬೇಯಿಸಲುಸಾಧ್ಯವಾಗದೆ ಅನಂತರ ಜಿಲ್ಲಾ ಕಾಂಗ್ರೆಸ್ ಕಮಿಟಿಯೊಡನೆ ಧಿಕ್ಕರಿಸಿ ಸ್ವತಂತ್ರ ರೈತ ಸಂಘವನ್ನು ಕಟ್ಟಲು ಮುಂದಾದರು. ಇವರು ಎಸ್ಟರಮಟ್ಟಿಗೆ ಕೃಷಿಕರ ಹಿತಸಾಧಕರೆಂಬುದು ಸದ್ರಿ ಪರಿಷತ್ತಿನ ನ್ಯಷ್ಟೆಯಿಂದಲೇ ಸ್ಪಷ್ಟವಾಗುವುದು ಪರಿಷತ್ತಿನ ನ್ಯವಸ್ಥೆಯನ್ನು ನೋಡುವಾಗಲೆ ಅವರಿಗೆ ಕೃಷಿಕ ಸಂಘಟನೆಯು ಸರಿಯಾದ ಕಲ್ಪನೆಯಾವುದೂ ಇದೆಯೇ ಎಂಬುದು ಸಂದೇಹಕರ. ಆದುದರಿಂದ ಕಾಂಗ್ರೆಸಿಗರಾರೂ ಇಂತಹ ಪರಿಷತ್ತಿಗೆ ಸಹಕಾರವೀಯಬಾರದೆಂದು ನಿನಂತಿ.

(ಸಹಿ) ಕೆ. ಕೆ. ಶೆಟ್ಟಿ,
ಪ್ರಧಾನ ಕಾರ್ಯದರ್ಶಿ.

ನೋಟೀಸು

ಕಾಸರಗೋಡು ಡಿ ಮು. ಕೋರ್ಟ್‌ನಲ್ಲಿ

ಸ್ಮಾಲ್ ನಂಬ್ರ 186|1948

C. A ಮುಹಮ್ಮದ —ನಾದಿ.

ಮತ್ತು

P. C. ಅಬ್ದುಲ್ ರಹಿಮಾನ್, ಕಲಂದರ್ ಹಾಜಿ ನುಗ, ಸರ್ ಪೋಸ್ಟ್ ಮಾಸ್ಟರ್ ಜನರಲ್ಸ್, ಉಬ್ರಿ. ಈಗ ಮಂಗಳೂರು, ಪೆರ್ ಪೋಸ್ಟ್ ಆಫೀಸು. ಪ್ರತಿವಾದಿ.

ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಮೋಲ್ಕಂಡ ಸ್ಯಾಜ್ಯವು ತಾರೀಕು 26-1-49 ಕ್ಕೆ ಕೆಸ್ಗೆ ಇಟ್ಟಿರುವ ಸಂಗ್ತಿ ತಿಳಿನೋಟಾನಿಯಿದೆ.

Sd. **P. Ahmad,**
Advocate for plaintiff.

ಕಾಸರಗೋಡು, 8-1-1949

ಫಿಲೊಕ್ಯೂರ್

ಎಂತಹ ಭಯಂಕರ ಮೂಲವ್ಯಾಧಿಯೇ ಇರಲಿ; ಫಿಲೊಕ್ಯೂರ್ ಔಷಧಿಯನ್ನು ಸೇವಿಸಿದರೆ ಎಲ್ಲವೂ ತನ್ನಷ್ಟಕ್ಕೆನೇ ಮಾಯವಾಗುವುದು. ರಕ್ತ ಸುರಿಯುವುದು; ಕಡುಕುಗಳ ಚಲನವಲನ ನೋವಲಾದುವನ್ನು ಸಮಮಟ್ಟದಲ್ಲಿರಿಸುವುದು.

ದಿ ಸುಧಾ ಫಾರ್ಮಸ್ಯೂಟಿಕಲ್ ವರ್ಕ್ಸ್
ಮದ್ರಾಸು ಸಂಸ್ಥಾನದ ಏತರಣ
ಅಧಿಕಾರಿಗಳು:—
ಪೆಸರ್ಸ್ ಯುನೈಟೆಡ್ ಇಂಡಿಯಾ
ಬಿಸಿನೆಸ್ ಬ್ಯೂರೋ,
ರೋಯಲ್ ಮಹಾಲ್, ಉಡುಪಿ
(ದಕ್ಷಿಣ ಭಾರತ)



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲಿ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ವಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಸೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆಕ್ಷಣತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿದಲ್ಲೆಲ್ಲಾ ವಿಶಿಷ್ಟಪ್ರಕಾರವಾಗಿ ಸರ್ವರೋಗಗಳ ರಾಜ್ಞೀವಾನಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರಕೃತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಿದ್ದ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಹೊಲ್ಲಾಂಡ್ ನೇಶದಲ್ಲಿ ಸ್ವಮುಖ ಕಂಪನಿಯಿಂದ ತಯಾರಿಸಿದ್ದಾಗಿದೆ. ವಿಷಮಶೀತ, ಸೆತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ಸಿವಾರಣ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂದ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಯಮೂತ್ರ,-ನೀಮೂತ್ರ, ಆನ್ನಕೋಶ, ಕಲೆಜಿಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿಮ್ಮಾರ್ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಯಸ್ಮಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ರಸ್ತುಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವುದಲ್ಲದೆ ಸೂರೀಯರು ಶಿಪಾಸಾಸ್ತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ "ದೇವಾನುಮೋದಿತ ಔಷಧಿ" ಎಂದು ಕರೆಯುವದರಲ್ಲಿ ಸಂದೇಹವೇನಿಲ್ಲ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಂಗೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಪಾತ್ರಿಗುಣವಾಗುವದು. ಹಲ್ಲಿನೋವು, ಮಕ್ಕಳ ಕಜೋಟ್ಟಿನೋವು ಕಿವಿಗಳ ಉಪದ್ರವ ಮೆದಗಸರ ಮುಟ್ಟುಗುವ ಕಾಲದ ಅಕ್ರಮಗಳು ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಖರ್ಚು. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ 30-0-0 ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಖರ್ಚು. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಪ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಖರ್ಚು. ಒಂದುಡಜನ್ ಪ್ರಪರ್ ಬಾಟ್ಲಿಗಳಿಗೆ ರೂ. 60-0-0 ನಿವಿ. ಪಿ ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ ಪಿ.ಖರ್ಚು.

ಪ್ರಚೆನೆಸಿಸ ಸೆಪ್ಟೆ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಏಳು ಸಪ್ತಂಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲಾ ಜೀವಿನಸ್ಥಿತ್ಯಂತರಕ್ಕೂ ಸಂಜೀವಿನಿಯಂತಿರುವುದೆಂದು ರಾಮನಾಥಿರ್ ವೈದ್ಯರಾಜ ಪಿ. ವೆಂಕಟೇಶಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ತಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿದೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬೊಂಬಯಿ ಸ್ಟಾಕಿಸ್ಟರು:—ಲಕ್ಷ್ಮಾಲಾ ಲಿಮಿಟೆಡ್, 20, ಹಿಲ್ಟ್ ಹನುಮಾನ್ ಲೇನ್, ಬೊಂಬಾಯಿ 2.



ಡಾ॥ ನಾ॥ ಸು॥ ಹರ್ಡಿಕರ್‌ರವರು

ಭಾರತದ ಸಲುವಾಗಿ ಅಮೇರಿಕಾದಲ್ಲಿ ಕೈಲಾಸವಾಸಿ ಲಾಲಾ ಲಜಪತರಾಯರೊಂದಿಗೆ ಪ್ರಚಾರ ಕಾರ್ಯನಡೆಸಿ 1921ರಲ್ಲಿ ಸ್ವದೇಶಕ್ಕೆ ಮರಳಿಬಂದರು ಬಳಿಕ ಮಹಾತ್ಮಾ ಗಾಂಧಿಯವರ ಮುಂದಾಳತನವನ್ನು ಅಂಗೀಕರಿಸಿ ಕಾಂಗ್ರೆಸಿನ ಶಾಂತಿಸೇನೆಯಾಗಿದ್ದ ಹಿಂದೂಸ್ಥಾನೀ ಸೇವಾದಳವನ್ನು 1924ರಲ್ಲಿ ಸ್ಥಾಪಿಸಿದರು. ಇಂದಿಗೂ ಸೇವಾದಳದ ಆಧಾರಸ್ತಂಭವಾಗಿದ್ದಾರೆ. ಡಾ॥ ಹರ್ಡಿಕರರು ತಮ್ಮ ಆರುವತ್ತನೆ ವಯಸ್ಸಿನಲ್ಲಿ ಸೇವಾದಳದ ರಜತೋತ್ಸವವನ್ನು ಸಂಭ್ರಮದಿಂದ ಸಂಭವಿಸಿದರು. ಆಂತೆಯೇ ಸೇವಾದಳದ ಸುವರ್ಣ, ವಜ್ರೋತ್ಸವಗಳನ್ನು ಕಾಣುವಂತೆ ಪರಮಾತ್ಮನು ಅವರಿಗೆ ಸುಪರಮಾಯುಷ್ಯವನ್ನು ಕರುಣಿಸಲಿ!

(ಡಾಕ್ಟರರ ವಿಶೇಷ ಚಟುವಟಿಕೆಗಳು ಮತ್ತು ಪರಿಚಯವನ್ನು ತಿಳಿಯಲೇಕ್ಷಿಸುವವರು ಈಗತಾನೆ ಪ್ರಕಟವಾದ ಸೇವಾದಳ ರಜತೋತ್ಸವ ಸಂಚಿಕೆಯನ್ನೋದುವುದು)

WANTED

"Wanted a Brahmin bride of any sect between 18 and 21 educated preferably up to S.S.L.C. having knowledge of music for a Madhwa widower without encumbrances. Government Engineering service. Monthly income Rs. 500/- Age about 35. Please write with horoscope or details of birth and gotra to Box No 22.

C/o 'Navayuga' Udipi.

ಉಡುಪಿಯ ಶ್ರೀ ಜೋಕಿಮ್ ಅಳ್ವರು ಬೊಂಬಾಯಿ ಶೆರೀಫರಾದರು. ರಾಷ್ಟ್ರೀಯ ಕ್ರಿಸ್ತಿಯಾನಪತ್ರಿಕೆಯ ಸಂಸ್ಥಾಪಕರಾಗಿ 1932ರಲ್ಲಿ ತುಂಗವಾಸವನ್ನು ಆನುಭವಿಸಿದ್ದಾರಾಗೂ ಬೊಂಬಾಯಿ ಫ್ರೀ ಪ್ರೆಸ್ ಪತ್ರಿಕೆಯ ಸಂಪಾದಕರಾದ ಉಡುಪಿಯ ಶ್ರೀ ಜೋಕಿಮ್ ಅಳ್ವರು ಬೊಂಬಾಯಿಯ ತೆರೀಫರಾಗಿ (ಅರಸಲ್ಟ್ಯರಿಯವರು- ಶ್ರೀಯುತರಿಗೆ ನಮ್ಮ ಅಭಿನಂದನೆಗಳು.

ಶ್ರೀ ಅಳ್ವರು ದ. ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಜನಿಸಿದವರು. ಇವರ ಕಾಲೇಜು ಶಿಕ್ಷಣವು ಪುಂಗಳೂರಲ್ಲಾಯಿತು. ಬಳಿಕ ಬೊಂಬಾಯಿ ನಗರದ ಸೈಡೆನಿಯರ್ಸ್ ಕಾಲೇಜಿನಲ್ಲಿ ತಮ್ಮ ಮುಂದಿನ ಶಿಕ್ಷಣ ಪಡೆಯುತ್ತಿದ್ದಂತೆ ಆವರ ಸ್ವತಂತ್ರ ಮನೋವೃತ್ತಿಯ ಕಾರಣದಿಂದ ಕಾಲೇಜಿನಿಂದಹೊರಹಾಕಲ್ಪಟ್ಟರು. ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಇವರು ಪದೇ ಲ ಶಿಕ್ಷಣಪಡೆದರು. ಲಾಕಾಲೇಜಿನ ಪದವಿನ್ನುಸಹ ಪಡೆದರು. ಇವರ ಭಾಷಣ ಶಕ್ತಿಯು ಸರ್ವರ ಮನಸ್ಸನ್ನೂ ಸೂರೆಗೊಳ್ಳುತ್ತಿತ್ತು. ಇವರು ನಡೆಸಿಕೊಂಡು ಬರುತ್ತಿದ್ದ 'ಫೋರ್ಟ್'ಪತ್ರಿಕೆಯಲ್ಲಿ ಜಿವಮೂರ್ ವಸ್ತುತ್ವ ಆಸ್ತಿ ಪ್ರಶ್ನೆಯಮೇಲಿನ ಅವರ ಸಂಪಾದಕೀಯವೇ ಜನಪ್ರಿಯವಾಗಿದೆ. ಅವರ ಪತ್ನಿ ಶ್ರೀಮತಿ ವ್ಯಾಲೆಟ್ ಅಳ್ವರು ಆವರ ಪರವಾಗಿ ಕೋರ್ಟಿನಲ್ಲಿ ವ್ಯವಹರಿಸಿ ಮಾನ ಗೆದ್ದರು.

ಶ್ರೀ ಅಳ್ವರು ಪತ್ರಿಕೋದ್ಯಮದಲ್ಲಿಯೂ ಬಹಳ ಸ್ವಾತಂತ್ರ್ಯ ಸ್ವಭಾವದವರು. ಬ್ರಿಟಿಷರ ರಾಜ್ಯಭಾರದ ಕುರಿತು ಬರೆದ ಲೇಖನಗಳು ಆವರನ್ನು ತೊಂದರೆಗೀಡುಮಾಡಿದ್ದುವು. ಈಚೆಗೆ ಅವರು ಬೆಕೊಸ್ಲೊವಾಕಿಯಾವನ್ನು ಸಂದರ್ಶಿಸಿದರು. ಶ್ರೀ ಅಳ್ವರ ವಯಸ್ಸು ಈಗ 41. ದೇಶಸೇವೆಯಲ್ಲಿ ತನ್ನ ಜೀವನವನ್ನು ಸೈಯಿಸುವಂತೆ ಪರಮಾತ್ಮನು ಅನುಗ್ರಹಿಸಲಿ.

NOTICE

In the Court of the District Munsif of Karkala.

Original Suit No. 493/1948.

Balakrishna Pai and another
---Plaintiffs-
and
Govindappa and another
-Defendants.

To,

The 2nd defendant- Laxman alias Laxminarain Pai, son of Ranga Pai, residing in Karkal Kasba, Karkala Taluk.

Notice is hereby given that the Plaintiffs have filed the above suit to recover principal amount and interest due under the simple mortgage dated 28-10-1937 executed by the 1st defendant in favour of Plaintiffs and the 2nd defendant which stands posted to 28-1-1949 for appearance of the defendants. The decree is prayed for in favour of the plaintiffs and the 2nd defendant. If the 2nd defendant has got any objections he must appear before court at 10 A.M. on 28-1-1949 failing which he will be declared exparte.

K. V. Kamath.
Advocate for Plaintiffs.

Karkala, 7-1-1949.

ಶ್ರೀ. ಬಿ. ಮಂಜಪ್ಪ ಭಂಡಾರಿಗಳ ನಿಧನ ನುಂಗಳೂರು ತಾಲೂಕು ಬಂಟರ ಜಾತಿಯಲ್ಲಿ ಪ್ರಸಿದ್ಧ ಬೈಲುಮನೆತನಕ್ಕೆ ಸೇರಿದವರೂ ಸಬ್ ರಿಜಿಸ್ಟ್ರಾರರಾಗಿ ವಿಟ್ಲ, ಮುಂಜೇಶ್ವರ ಮೊದಲಾದ ಕಡೆಗಳಲ್ಲಿ ತುಂಬ ನೆಸಲ್ಪಡೆದವರೂ ಆದ ಶ್ರೀ. ಬಿ. ಮಂಜಪ್ಪ ಭಂಡಾರಿಗಳು ತಾ 3-1-1949ರಲ್ಲಿ 88 ನೇ ವಯಸ್ಸಿನಲ್ಲಿ ಮೃತಪಟ್ಟರುತ್ತಾರೆ. ಇವರು ಕುಂದಾಪುರದಲ್ಲಿ ಹಿಂದೆ ಹರಡಿದ್ದ ಬಂಟರ ಯಜಮಾನ ಗಾಣದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೃತರು ಸತ್ಕರ್ಮಿಗಳು ಮತ್ತು ಶಾಂತಸ್ವಭಾವದವರಾಗಿದ್ದರು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಧನ್ಯಾಭರಣದ ಮೇಲೆ ಪಡೆದ ಸಾಲವನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅಸ್ಸು. ವ. ಬಡ್ಡಿ ಯಾವುದನ್ನೂ ಈ ತನಕವೂ ಕೊಡದಿರುವುದರಿಂದ ಸದ್ರಿಯವರು ಈಡಿಟ್ಟಿರುವ ಧನ್ಯಾಭರಣಗಳನ್ನು ಇದೇ ತಿಂಗಳ ತಾರೀಕು 29ನೇ ಶನಿವಾರ ಸಂಧ್ಯಾಪ್ಪ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ನಡಿಸಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ವಾಸ್ತು ವಿಳಾಸ	ಪಡೆದ ಮೊಬಲಗು ರೂ. ಆ
219/44-45	ಶ್ರೀ. ಸೈಕನ ಶಂಕರ ಸೇರುಗಾರ. ಸೂರ್ಕುಂದ ಮಂಜಯ್ಯ ಸೇರುಗಾರರ ಮಗ, ಸೇಡಿಮಕ್ಕಿ. ಬೈಂದೂರು.	8/-
127/45-46	,, ಆರೆ ಶಿರೂರು ರಾಮಚಂದ್ರ ಭಟ್ಟ, ಮಂಜಯ್ಯ ಭಟ್ಟರ ಮಗ, ಬೈಂದೂರು.	40/-
274/45-46	,, ಜಿ. ಶಂಕರ ಸೇಟ್, ಬಾಬಯ್ಯ ಸೇಟರ ಮಗ. ಬಂಕೇಶ್ವರ. ಬೈಂದೂರು.	13/-
398/45-16	,, ಮಯ್ಯಾಡಿ ಗದ್ದೆಮನೆ ಸೇಸಯ್ಯ. ನಾರಾಯಣ ಸೇರುಗಾರರ ಮಗ. ಬೈಂದೂರು.	7/-
628/45-46	,, ತಾರಾಪತಿ ಅಲ್ಲಿ ಸಾಹೇಬ. ಸಣ್ಣ ಉಮ್ಮರ ಸಾಹೇಬರ ಮಗ, ತಾರಾಪತಿ. ಪಡುವರಿ. ಬೈಂದೂರು.	8/-
796/45-46	,, ಸಣ್ಣ ಸುಕ್ರ. ಪಂಚಾಯತ್ ಬೋರ್ಡ್ ತೋಟೆ. ಬೈಂದೂರು.	5/-
8/46-47	,, ಆರೆ ಶಿರೂರು ರಾಮಚಂದ್ರ ಭಟ್ಟ. ಮಂಜಯ್ಯ ಭಟ್ಟರ ಮಗ, ಬೈಂದೂರು.	6/-
30/46-47	,, ನಾಕಟ್ಟೆ ಶೇಡಿಟ್ಟಿ, ದಾರ ಸೆಟ್ಟರ ಅಳಿಯ. ಬೈಂದೂರು.	45/-
342/46-47	,, ಪಿ. ಚನ್ನಪ್ಪ, ಫೋರೆಸ್ಟ್‌ಗಾರ್ಡ್. ಬೈಂದೂರು	40/-
373/46-47	,, ಸಾಡ ಮೂಚ. ಅಣ್ಣಿಪ್ಪ ಮೊಗೇರನ. ಅಳಿಯ. ಬೀಸುವಾ ಬೈಂದೂರು.	5/-
595/46-47	--do--	5/-
909/46-47	--do--	5/-
617/46-47	,, ಯು. ಮಂಜುನಾಥ ಸೇಟ. ಸುಬ್ರಾಯ ಸೇಟರ ಮಗ. ಉಪ್ಪುಂದ.	8/-
627/46-47	,, ಪಂಜು ವೈಕಾಳಿ ಹೆಮ್ಮಾಡಿ ಹತ್ತು. ವೆಂಕಟಿನ ಮಗ. ವೈಕಾಳಿ. ಬೈಂದೂರು.	15/-
659/46-47	,, ಹಿಂಬಾಳಿ ಆನಂದ ಸೇಟ. ವೆಂಕಪ್ಪ ಸೇಟರ ಮಗ. ಮಯ್ಯಾಡಿ. ಬೈಂದೂರು.	40/-
686/46-47	,, ಬಿ. ದೇವಣ್ಣ ಸೇಟ. ಅಚ್ಚುತ ಸೇಟರ ಮಗ. ಹೋಟೇಲುವ್ಯಾವಾರಿ. ಬೈಂದೂರು.	25/-
757/46-47	,, ಬಿ. ದೇವಣ್ಣ ಸೇಟ. ಅಚ್ಚುತ ಸೇಟರ ಹೋಟೇಲು ವ್ಯಾವಾರಿ, ಬೈಂದೂರು.	70/-
767/46-47	,, ಬಿ. ಶಂಕರ ಸೇಟ, ಅಚ್ಚುತ ಸೇಟರ ಮಗ. ಹೋಟೇಲು ವ್ಯಾವಾರಿ, ಬೈಂದೂರು.	45/-
793/46-47	,, ಪೈಕನ ತೊಕ್ಕಪ್ಪ. ಮಲ್ಯಯ್ಯ ಸೇರುಗಾರರ ಮಗ, ಸೇಡಿಮಕ್ಕಿ. ಬೈಂದೂರು.	5/-
995/47-48	,, ವೆಂಕ್ಟಯ್ಯ ಗಾಣಿಗ. ತಿಮ್ಮಪ್ಪ ಗಾಣಿಗನ ಮಗ. ಬಂಕೇಶ್ವರ. ಬೈಂದೂರು.	45/-
282/47-48	,, ಜಿ. ರಂಕಪ್ಪ ಸೇಟ. ಬಾಬಯ್ಯ ಸೇಟರ ಮಗ. ಬೈಂದೂರು.	8/-

Office of the Vijaya Bank, Ltd., Byndoor.
Dated 8-1-49

H. Rajeeva Shetty.
Agent

ಏಲಂ ನೋಟೀಸು

The Vijaya Bank, Limited, Karkal.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ-

ಈ ಬೇಂಕಿನ ಪರವಾಗಿ ಇದರ ಏಜೆಂಟ್ ಬಿ. ಜಯರಾಮ ಶೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವಿಜಯಾ ಬೇಂಕಿನಿಂದ ಕಾರ್ಕಳ ಕಸಬೆಯಲ್ಲಿರುವ ಗೋವರ್ಧನ ಶೆಟ್ಟಿಯವರ ಮಗ ಜವುಳಿ ವ್ಯಾಪಾರಿ ರಂಜಾಳ ಜನಾರ್ಧನ ಶೆಟ್ಟಿಯವರು ಗೂಡ್ಸು ಲೋನುಗಳಲ್ಲಿ ಪಡೆದ ಏಜೆಜುಗಳ ಪೈಕಿ, ಬಾಕಿ ಇರುವ ಎರೆಡುಗಳನ್ನು ವಸೂಲು ಕೊಡುವರೇ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ವಸೂಲು ಕೊಡದೆ ಬಾಕಿ ಮಾಡಿ ತೊಂಡಿರುವುದರಿಂದ ಸದರಿ ಗೂಡ್ಸ್ ಲೋನುಗಳಲ್ಲಿ ಆಡವಿಟ್ಟ ಬಾಬ್ತು ಈ ಕೆಳಗೆ ಶೆಡ್ಯೂಲಿನಲ್ಲಿ ವಿವರಿಸಿದ ಸ್ಟಾಲುಗಳನ್ನು ಬೇಂಕಿನ ಕಡೆಯಿಂದ ತಾರೀಕು 19-1-1949 ಬುಧವಾರ ಮಧ್ಯಾಹ್ನ ಗಂಟೆ 10ರಿಂದ ಸದ್ರಿ ಸ್ಟಾಲುಗಳು ನೂರಾಟವಾಗುವ ವರೇಗೂ ಏಜೆಂಟರ ವ್ಯವಹಾರವು ನಿರ್ಣಯಿಸಿದ ನಂತರದ ದಿವಸಗಳಲ್ಲಿ ಬೇಂಕಿಗೆ ಯುಕ್ತ ಕಂಡ ರೀತಿ ವಿಂಗಡಿಸಿದ ಲೋಟುಗಳಲ್ಲಿ ವಾರು ಕರೆದು ಸದರಿ ಬೇಂಕಿನ ಆಫೀಸಿನಲ್ಲಿ ಬಂದಿರುವಂತಹ ಏಲಮಿನಿಂದ ಮಾರಲ್ಪಡೋಣಾಗುವುದು.

ಏಲಂನಿನ ಕರ್ತಗಳು

1) ಅತೀ ಹೆಚ್ಚಿನ ಮೊಬಲಗಿಗೆ ಯಾವಾತನು ವಾರಿಗೆ ನಿಲ್ಲುತ್ತಾನೋ ಆತನ ಹೆಸರಲ್ಲಿ ಮೂರು ದಾರಿಯಿಂದ ಮಾರಾಟವು ಬೇಂಕಿಗೆ ಯುಕ್ತ ಕಂಡೆರೆ ಕಾಯಂ ಮಾಡಲ್ಪಡೋಣಾಗುವುದು. ಏಲಮನ್ನು ಕಾಯಂ ಮಾಡುವ, ವ, ಏನೊಂದು ಕಾರಣ ಕೊಡದೇ ನಿರಾಕರಿಸುವ ವ ಏಲಮನ್ನು ನಿಲ್ಲಿಸುವ ಮತ್ತು ಏಲಮಿನ ಸಮಯದ ದಿವಸವನ್ನು ಮುಂದೂಡಿಸುವ ಹಕ್ಕು ಸಂಪೂರ್ಣ ಬೇಂಕಿಗೆ ಇರುತ್ತದೆ ಅಲ್ಲದೆ ಯುಕ್ತ ಕಂಡರೆ ಬೇಂಕಿನ ಕಡೆಯಿಂದಲೂ ಏಲಮಿನಲ್ಲಿ ಪಡೆಯುವರೇ ಕಂಪೂರ್ಣ ಹಕ್ಕಿರುತ್ತದೆ.

(2) ಪರಬಾಸ್ತುದಾರನು ತನ್ನ ಹೆಸರಲ್ಲಿ ಮ್ಹಾರಾಟವಾದ ಮ್ಹಾಲುಗಳ ಕ್ರಯದ ಪೂರ್ಣ ಏವೇಜನ್ನು ಕೂಡಲೇ ಬೇಂಕಿನ ಕಡೆಯಿಂದ ಏಲಂ ಮಾಡುವ ಅಧಿಕಾರಸ್ಥರವರ ಕೊಟ್ಟು ಪಾವ್ತಿ ಪಡದು ನಿಲಮಿನಲ್ಲಿ ವಹಿಸಿಕೊಂಡ ಮ್ಹಾಲುಗಳನ್ನು ತೆರಿವರಿ ಪಡೆಯತಕ್ಕದ್ದು ಈ ಪ್ರಕಾರ ಏವೇಜನ್ನು ಕೊಡಲಿಕ್ಕೆ ತಪ್ಪಿದಲ್ಲಿ ಸದ್ರಿ ಮ್ಹಾಲುಗಳನ್ನು ಏನಪ ನಿಲಂ ಮಾಡೋಣಾಗುವುದಲ್ಲದೆ ಹಾಗೆ ಕಟ್ಟಿದ ದರಬಾಸ್ತುದಾರರಿಗೆ ಪುನಃ ವಾರಿಗೆ ನಿಲ್ಲುವದೇ ಹಕ್ಕಿರುವುದಿಲ್ಲ.

(3) ಎಲ್ಲಾ ಮ್ಹಾಲುಗಳ ಕುಂದು ಕೊರತೆಗಳಿಗೂ ದರಬಾಸ್ತುದಾರನೇ ಬದ್ಧನಾಗಿರಕ್ಕದ್ದಲ್ಲದೆ, ಬೇಂಕಿನವರು ಏಪ್ಪನ್ಯಾದರೂ ಜವಾಬ್ದಾರರಲ್ಲ.

4) ಈಗಿನ ವಿವರ ಕಾಣಿಸಿರುವ ಏಟಮುಗಳ ಮ್ಹಾಲುಗಳ ಪೈಕಿ ಯುಕ್ತ ತೋರುವ ಏಟಮುಗಳ ಏಲಂಗಳನ್ನು ಕಾರಣ ಕೊಡದೆ ನಿಲ್ಲಿಸಲಿಕ್ಕೂ ಬೇಂಕು ಸಂಪೂರ್ಣ ಅಧಿಕಾರ ಇಟ್ಟುಕೊಂಡಿದೆ

ಲೋನು ನಂಬ್ರ	ಮ್ಹಾಲುಗಳ ವಿವರ	ಗೋಡೌನು ವಿವರ
90 K 7 ; 456 206 7	Lot No [1] ಸೀರೆಗಳು ಮೂವತ್ತ ಮೂರು [2] ಜರಿಯ ಶಾಲುಗಳು ಮೂವತ್ತೆಂಟು. [3] ಜರಿಯ ಜೋತಿಗಳು ಹದಿಮೂರು. [4] ಜೋತಿಗಳು ಮೂವತ್ತೈದು. [5] ಶಾಲುಗಳು ಆರ್ತತ್ತ ಏಮ. [6] ಬಾರ್ಡ ಟವೆಲುಗಳು ಆರ್ತತ್ತು ಮಾತ್ರ. (ಎಲ್ಲಾ ಪೇರ್ಡಲಿಸ್.) Lot No (2) (1) ಸಿಲ್ಕು ಸೀರೆಗಳು 2-(ಎರಡು) ಮತ್ತು [2] ಒಂದೊಂದರಲ್ಲಿ ಏಳೇಳು ಕಣಗಳಿರುವ ಸಿಲ್ಕು ತುಂಡುಗಳು ಏಳುಮಾತ್ರ	ಬೇಂಕಿನ ಆಫೀಸಿನಲ್ಲಿ

Karkala 7-1-49

B Jayarama Shetty.
Agent.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಭೋಗರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರನ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಬು ಅಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕ.ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರೆ, ಕುಂಬಳಕಾಯಿ, ಸಿಹಿಕುಣ್ಣಿ ಬಿಡಬೇಕು.

ದಾಟ್ಟಿ ೧೫ಕ್ಕೆ ಹರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಜಪ್ಪಿದ್ಧಪ್ಪ ಹಾಲಪ್ಪ ಡಾವಣಗೆರೆ,

ಆಯುರ್ವೇದ ಔಷಧಾಲಯ ಗದಗ

ಮಂಗಳೂರು

ದಕ್ಷಿಣ ಕನ್ನಡ ಫೋಸ್ಟಲ್ ಡಿವಿ ಜನ್ ಪೆ. ಕ. ಜಿಲ್ಲೆಯಲ್ಲಿ ಟಪ್ಪಾಲು ಸೌಕರ್ಯಗಳನ್ನು ಹೆಚ್ಚಿಸುವುದು, ಟಪ್ಪಾಲು ಸಾಮಗ್ರಿಗಳಿಗೆ ಬೆಚ್ಚಿನ ನಿಗಾಕೊಡುವುದು, ಸಾರ್ವಜನಿಕ ಆರ್ಜಿಗಳನ್ನು ಪರಿಶೀಲಿಸುವುದು ಮೊದಲಾದ ಉದ್ದೇಶಗಳಿಗಾಗಿ ಈ ಜಿಲ್ಲೆಗೊಂದು ಪ್ರತ್ಯೇಕ 'ಪೋಸ್ಟಲ್ ಡಿವಿಜನ್' ಸ್ಥಾಪಿಸಲ್ಪಟ್ಟಿದೆ. ಇದರ ಕಚೇರಿಯು ಮಂಗಳೂರಲ್ಲಿದೆ.

ಮಹಾಜನ ಸಭೆ ಇದೇ ತಾ|ರಲ್ಲು ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಶ್ರೀ ಎಚ್. ಆರ್ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಆಸ್ಪಾಮಿನ ಗವರ್ನರ್ ಸರ್ ಆರ್ಥರ್ ಜೈದಿಯವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯ ಪಾಯಿತು. ಕಮ್ಯೂನಿಸ್ಟ್, ಸೋಶಿಯಲಿಸ್ಟ್, ಆರ್. ಎಸ್. ಎಸ್. ಚಟುವಟಿಕೆಗಳನ್ನು ಖಂಡಿಸಿ ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ತಿ. ಕೆ ಸೆಟ್ಟಿರು ಭಾಷಣಮಾಡಿ ಜನತೆಯು ಉದ್ಧಾರವು ಕಾಂಗ್ರೆಸ್ ಸಂಸ್ಥೆಯಿಂದಲೇ ಆಗುವುದೆಂದರು ಜನಾರ್ ಬಿ ಎಮ್. ಇದಿನಬ್ಬನವರು ಜಾತೀಯ ಏಕ್ಯತೆಯ ಕುರಿತು ಮಾತನಾಡಿದರು.

ಆರ್. ಸಿ. ಸಿ. ನಿಧಿಯ ವಜ್ರ ಮಹೋತ್ಸವ- ಮಂಗಳೂರು ರೋಮನ್ ಕಥೋಲಿಕ್ ಸಾಯೀನಿರ್ ನಿಧಿಯ 60 ನೆವಾರ್ಷಿಕೋತ್ಸವವು ಇದೇ ತಾ2ರಲ್ಲು ಮಂಗಳೂರು ಬಿಶಪ್ ರೆ| ಡಾ| ಸಿ. ಆರ್. ಫೆರ್ನಾಂಡಿಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಧ್ವಜವು ಅಧ್ಯಕ್ಷರಿಂದ ಆರೋಹಿಸಲ್ಪಟ್ಟನಂತರ ನಿಧಿಯ ಅಧ್ಯಕ್ಷರಾದ ರೆ| ಫಾ| ಸಿ. ಜಿ. ಲೋಬರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಎಲ್. ಸಿ. ಪಾಯಿಸ್, ಬಿ. ವೈ ಕುಂರ ಬಾಳಿಗ, ಎಮ್. ಅಣ್ಣಾಪ್ಪ ಕಾಮತ್ ಮೊದಲಾದವರು ಮಾತನಾಡಿದರು. ಈ ಸಮಾರಂಭದಲ್ಲಿ ಕೊಂಕಣಿ ನಾಟಕ 'ಸಂಯುಕ್ತ ಜೀವನ' ಅಭಿನಯಿಸಲಾಯಿತು.

ಟೆಲಿಗ್ರಾಫ್ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಜನರಲ್ ಆಗಿರುವ ರಾ| ಬ| ಸಿ. ಎಸ್, ಎಮ್. ಸುಂದರಮ್, ಅವರು ಮಂಗಳೂರಿಗೆ ಆಗಮಿಸಿದಾಗ ದ. ಕ. ವಾಣಿಜ್ಯ ಸಂಘದವರು ತಾ. 6ರಲ್ಲು ಅವರೆ ಮುಂದಿಟ್ಟ ಟಪ್ಪಾಲು ಸೌಕರ್ಯಗಳ ಕುರಿತಾದ ಕೇಳಿಕೆಗಳಿಗೆ ಕೊಟ್ಟ ಉತ್ತರದಲ್ಲಿ ನಮ್ಮ ಜಿಲ್ಲೆಗೆ ಈ ಕೆಳಗಿನ ಅಂಜೆಸ್ಕರ್ಯಗಳನ್ನು ಒದಗಿಸುವುದಾಗಿ ತಿಳಿಸಿದರು.

ಬೊಂಬಾಯಿಗೆ ಆತ ಹತ್ತಿರವಾದ ನೆಲ ಮಾರ್ಗವು ಟೆಲಿಗ್ರಾಫ್‌ಗಾಗಿ ಆಗುವಂತೆ ನುಂಗಳೂರು, ಬಂಟ್ವಾಳ, ಬೆಳ್ತಂಗಡಿಗಾಗಿ ನೂಡಿಗೆರೆ ಲೈನ್ ಹೋಡಿಸಬೇಕೆಂಬ ವಾಣಿಜ್ಯ ಸಂಘದ ಸೂಚನೆಯನ್ನು ಶ್ರೀಯುತರು ಒಪ್ಪಿದರು. ಅಲ್ಲದೆ ಮಯೂರ್‌ಲೈನ್ ಮೂಲಕ ಬೊಂಬಾಯಿ ಬೆಂಗಳೂರುಗಳಿಗೆ ವಾರ್ತೆ ಕಳುಹಿಸುವ ವ್ಯವಸ್ಥೆಯನ್ನು ಬಂದು ತಿಂಗಳೊಳಗಾಗಿ ನಾಡಲಾಗುವುದೆಂದರು. ಇಲ್ಲಿ ಟೆಲಿಫೋನ್ ಕೇಂದ್ರಗಳಲ್ಲಾಗುತ್ತ ತೊಂದರೆಗಳನ್ನು ತೋಗಲಾಡಿಸುವುದಕ್ಕಾಗಿ ಹೊಸ ಸಾಧನಗಳನ್ನೂ ಕಳುಹಿಸಲಾಗುವುದೆಂದರು. ಶ್ರೀ ವಿ ಎಸ್. ಕುಶ್ಪರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಕ್ರೊಕ್ಕರ್‌ಮೆಂಟಿಗೆ ಧನ ಸಹಾಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೆಂಟ್ರಲ್ ಕೋಪರೇಟಿವ್ ಸ್ಟೋರ್ಸಿನ ಮೂಲಕ ನಡೆಯುತ್ತಿದ್ದ ಅಕ್ಕಿ ಸಂಗ್ರಹ ಕಾರ್ಯಕ್ಕೆ ಇತ್ತಿಚೆ ಆಭಾವದಿಂದ ಸ್ಥಬ್ಧ ತೊಂದರೆಯಾಗುವು ಸರ್ವವಿದಿತವಷ್ಟೆ. ಆದರೆ ಈಚೆಗೆ ಸುಪ್ರಾಸು ಸರಕಾರವು 35 ಲಕ್ಷ ರೂಪಾಯಿಗಳ ಸಾಲ ಕೊಡುವ ಸಮಾಧಾನವನ್ನು ನೀಡಿದೆಯೆಂದು ಗೊತ್ತಾಗಿದೆ. ಡಿಪೊಗಳಿಗೆ ಅಕ್ಕಿ ಹಾಕಿದವರಿಗೆ ಹಣವಿಕ್ಕಲು ಇನ್ನು ಹೆಚ್ಚಿನ ವಿಳಂಬವಾಗಲಾರದೆಂದೂ ಧೈರ್ಯರೆಲ್ಲ ತಮ್ಮ ಉಳಿತಾಯ ಅಕ್ಕಿಯನ್ನು ಸರಿಯಾಗಿ ಸ್ಟೋರಿಗೆ ಒಪ್ಪಿಸಿಬಿಡಬೇಕೆಂದೂ ನಿರೀಕ್ಷಿಸಲಾಗಿದೆ.

ಕೋಲ್ಡ್ ಸ್ಟೋರೇಜು ಪ್ಲಾಂಟು ಕಲ್ಲಿಕೋಟೆಯಿಂದ ಈಚೆಗೆ ಕರಾವಳಿಯಲ್ಲಿ ಓಡಿಯಲಾಗುವ ಮೀನು ಹಾಳಾಗದಂತೆ ದಾಸ್ತಾನಿಡಲು ಅನುಕೂಲವಾಗುವ ಕೋಲ್ಡ್ ಸ್ಟೋರೇಜು ಯಂತ್ರೋಪಕರಣಗಳನ್ನು ಮಂಗಳೂರಲ್ಲಿ ಇರಿಸಲಾಗುವುದೆಂದೂ ಆ ಬಗ್ಗೆ ಅನಸ್ಕವುಳ್ಳ ಕಟ್ಟಡ ಇತ್ಯಾದಿ ವ್ಯವಸ್ಥೆಗಳಿಗೆ ಒಬ್ಬ ಅಸಿಸ್ಟಾಂಟ್ ಇಂಜಿನಿಯರನ್ನು ನೇಮಿಸಲಾಗಿದೆಯೆಂದೂ ತಿಳಿದು ಬರುತ್ತದೆ. ಈ ಯೋಜನೆಯ ಖರ್ಚು ಹತ್ತು ಲಕ್ಷ ರೂಪಾಯಿಗಳಿಂದೂ ಹೇಳಲಾಗಿದೆ. ಮೀನಿನ ವ್ಯವಸಾಯಗಾರರಿಗೆ ಈ ಸಲಕರಣಿಗಳಿಂದ ತುಂಬ ಸ್ವಯೋಜನವಾಗುವುದೆಂದು ನಿರೀಕ್ಷಿಸಲಾಗಿದೆ.

ವಿಮಾನ ನಿಲ್ದಾಣ ಕೇಂದ್ರ ಸರಕಾರದಿಂದ ನಿರ್ಣಯಿಸಲ್ಪಟ್ಟಂತೆ ಮಂಗಳೂರಿಗೆ ವಿಮಾನ ನಿಲ್ದಾಣ ಬರಲಿದೆ. ಇದಕ್ಕೆ ಸಂಬಂಧಪಟ್ಟ ಇಂಜಿನಿಯರರು ಬೇಗನೆ ಇಲ್ಲಿಗೆ ಬರಲಿರುವರು. ಕುದ್ರು ಪದವಿನ ಸಮೀಪ ಈ ಬಗ್ಗೆ ಸ್ಥಳ ಆರಿಸಲಾಗುವುದೆಂದು ವಾರ್ತೆಯಿದೆ.

ಮುಂಜಿ ವಿದ್ಯಮಾನಗಳ ಪರಿಶೋಧನಾ ಸಮಿತಿಯು ಈಚೆಗೆ ಮಂಗಳೂರಿಗೆ ಬಂದು ಜಿಲ್ಲಾ ವಾಣಿಜ್ಯ ಸಂಘದ ಆಫೀಸಿನಲ್ಲಿ ವಿಚಾರಣೆ ನಡೆಸಿತು. ಮಂಜಿಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸುವ ಬಗ್ಗೆ ಮಂಗಳೂರು ಮುಂಜಿ ಮ್ಹಾಲಕರಸಂಘದ ಶ್ರೀಗಳಾದ ಮೋನಪ್ಪ ಸುವರ್ಣ, ಮ್ಯೊದಿನ್ ಹಾಜಿಯವರೂ ವಾಣಿಜ್ಯ ಸಂಘದ ಕಡೆಯಿಂದ ಶ್ರೀಗಳಾದ ಕೆ. ಕೇಶವ ಶೆಣ್ಯೈ, ಪಿ. ಉಮಾನಾಥ ಭಂಡಾರಿಯವರೂ ಹಾಜರಿನ ಕಾರ್ಯಾನ್ವಯವಾಗಿ ಶ್ರೀಗಳಾದ ಎಫ್. ಡಿ. ಎಕ್ಸ್ಟಾ ಸಂಟೊ, ಜಿ. ಆರ್. ಪಂಡಿತ್, ಪಿ. ಆರ್. ವೆಂಕಟ್ರಾಮಯ್ಯರ್, ಮೇರ್ಟೂ ಆಫೀಸರ್ ಮಿ| ಮೂಡಿ, ಕೊಮಾನ್‌ವೆಲ್ತ್ ಕಾರ್ಯಾನ್ವಯ ಮಿ| ಫೀಲರ್, ಮಿ| ಆಂಡ್ರಾದೆ,ಗಂಗೆಕೆರಿಯ ಶ್ರೀ ಭಾಸ್ಕರ ಕಾಮತ್ ಮತ್ತು ಬಿ ನಾಗೇಶ ಶೆಣ್ಯೈಯವರು ಸಮಿತಿಯಮುಂದೆ ಹಾಜರಹವಾಲೆಗಳನ್ನು ತಿಳಿಸಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧ ದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚ ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಪೇರಿ ಆ ಯೂಚೆಲ್ಲರೆಯಾಗಿಯೂ ಮಾರಿಯುತ್ತವೆ

ಶಲ್ಯಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

1949ನೇ ಇಸವಿಯ
ತರಹವಾರು
ಡೈರಿಗಳು
ದೊರೆಯುತ್ತವೆ

(1) ನವಭಾರತ ಬುಕ್ ಡಿಪೊ, ಉಡುಪಿ

ಸುರತ್ಕಲ್ ವಿದ್ಯಾವಾಹಿನಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ 15ನೇ ಶನಿವಾರ ಸಂಜೆ ಐದುಗಂಟೆಗೆ ಮಂಗಳೂರಿನ ಎಡ್ವೊಕೇಟ್ ಶ್ರೀ ಟಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಮೊಲ್ಲಿ ಬಿಲ್ಲವ ಸಮಾಜ ಸೇವಾಸಂಘದಲ್ಲಿ ಇದೇ ತಾ 2 ರಲ್ಲು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಪ್ರತಿಷ್ಠಾ ದಿನಾಚರಣೆಯು ಜರ್ಲಾ ಬಿಲ್ಲವ ಯೂನಿಯನ್ ಕಾರ್ಯದರ್ಶಿಗಳಾದ ಶ್ರೀ ಬಿ. ಸಾಂಡುರಂಗ ನಪರ ಅಧ್ಯಕ್ಷತೆಯಲ್ಲಿ ಜರಗಿತು. ಬಿಲ್ಲವ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಬಿ ಆರ್. ಶಕ್ಕೇರರು ಪುಸ್ತಕಭಂಡಾರದ ಉದ್ಘಾಟನೆಮಾಡಿದರು. ಶ್ರೀಗುರುವಾದ ಬಾಲು ಅಂಚನ್, ವೀರಪ್ಪ ಸುವರ್ಣ, ರುಕ್ಕಯ್ಯ ನೊಂಡಲಪದವರ ಭಾಷಣಗಳಾದ ಬಳಿಕ ಶ್ರೀ ಗುರುಪೂಜಾ ಪ್ರಸಾದ ವಿತರಣೆಯಾಯಿತು.

ಕುಂದಾಪುರ (ಕೇಸನಮಕ್ಕಿ) ಶ್ರೀ ಕೇಸನಮಕ್ಕಿ ಮುತ್ತಯ್ಯ ಸೆಟ್ಟರು ಇದೇ ತಾ 1ರಲ್ಲು ಪರಲೋಕವಾಸಿಗಳಾದರು. ದಿವಂಗತರು ಪ್ರಸಿದ್ಧ ಪುನೆತನಕ್ಕೆ ಸೇರಿದ್ದು ಬಹಜನರಿಗೆ ಗುರುವಾ ಉಪಕಾರಮಾಡಿದ್ದರಂ ಹೇಳಲಾಗಿದೆ. ಶ್ರೀಯುತರ ಅತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಕುಂಬಳೆ ಜರ್ಲ್ಲಾ ಸಬ್ಜಾಲ್ ಆಫೀಸರ್ ಜನಾಬ್ ಕೆ ಅಬ್ದುರ್ ಗಫೂರ್ ಸಾಹೇಬರು ಇದೇ ತಾ 7ರಲ್ಲು ಇಲ್ಲಿಯ ರೇಶನ್ ಅಂಗಡಿಗಳನ್ನು ಸಂದರ್ಶಿಸಿದರು.

ಅಂಗಡಿ ಮೋಸರು, ಪುತ್ತಿಗೆ, ಮುಗು ಎಂಬ ಗ್ರಾಮಗಳನ್ನು ಸೇರಿಸಿ ಹೊಸತಾಗಿ ಸ್ಥಾಪಿಸಲ್ಪಟ್ಟ ಅಂಗಡಿಮೊಗರು ಪಂಚಾಯತ ಬೋರ್ಡು ಚುನಾವಣೆಯು ಈಚೆಗೆ ಜರ್ಲ್ಲಾ ಪಂಚಾಯತ ಆಫೀಸರ್ ಶ್ರೀ ಕೆ. ವೀರಸೆಟ್ಟರ ನೇತೃತ್ವದಲ್ಲಿ ಜರಗಿತು. ಶ್ರೀಗಳಾದ ಎ ಕೆ. ತೆರೂಲ್ ಸಾಹೇಬ್, ಬಿ. ಕೆ. ಕುಂಞಾಲಿ ಸಾಹೇಬ್, ವಿ ಕಿಂಞಣ್ಣ ರೈ, ಡಿ. ನಾರಾಪ್ಪಯ್ಯ, ಪಿ. ಎ. ಮಹಾಲಿಂಗಯ್ಯ, ಪಿ. ನಾರಾಯಣ ಹೆಬ್ಬಾರ್, ಪಿ. ಸಂಕಪ್ಪ ರೈ, ಪಂಜ, ಪಿ.ಬಾಪುಂಞ ಸಾಹೇಬ್, ಎಮ್. ಅಬ್ದುಸ್ಸಾಹೇಬ್, ಎಮ್. ಶಂಕರನಾರಾಯಣ ರಾವ್, ವೇರಣ ರೈಗಳವರು ಸದಸ್ಯರಾಗಿ ಆರಿಸಲ್ಪಟ್ಟರು.

ಫಿರ್ಕಾ ಡಿವೆಲಪ್‌ಮೆಂಟ್ ಸಭೆಯು ತಾ 5ರಲ್ಲು ಬೆಲ್ಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈನಾರರ ಅಧ್ಯಕ್ಷತೆಯಲ್ಲಿ ಜರಗಿತು.

ಉಪಾಧ್ಯಾಯರ ಸೆಂಟರ್ ಸಭೆ ಮತ್ತು ಪಿಡ್ಡಾಯ ಪಿಕ್ಷಣ ಕಮಿಟಿ ಸಭೆಗಳೆರಡು ತಾ 8ರಲ್ಲು ಶಾಲಾ ಇನ್ಸ್‌ಪೆಕ್ಟರ ಶ್ರೀ ಯಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಫಲಿಮಾರು ಸ್ವಶ್ಚೀಕ ಜೋರ್ಡ್ ಹಾಯರ್ ಎಲಿಮೆಂಟರೀ ಶಾಲಾ ವಜಾರದಲ್ಲಿ ಹಿಂದುಸ್ತಾನ್ ಸ್ಕೌಟು ಸಂಘದವರು ಕಟ್ಟಿ ಮಾಸ್ಟರರ ತರಬೇತಿ ವಿಶಿರವೊಂದನ್ನು ತಾ. 26-12-48ರಿಂದ ತೆರೆದಿದ್ದು ಶಿಬಿರಾಧಿಪತಿಗಳಾಗಿ ಸೇಲಂನಿನ ಶ್ರೀಪಾನ್ ಪಿ. ಯಸ್. ರಂಗನಾಥನ್‌ರವರು ಬಂದಿದ್ದರು. ಸುತ್ತು ಮುತ್ತಲಿನ 35 ಮಂದಿ ಉಧ್ಯಾಪಕರು ಶಿಬಿರವಾಸಿಗಳಾಗಿ ಸೇರಿ, ತಾ 31-12-48ನೇ ದಿನ ಪ್ರೇಕ್ಷಕರ ದಿನಾಚರಣೆಯು ಶ್ರೀ ಯನ್. ಹರಿಶ್ಚಂದ್ರ ಉಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ನಡೆದು, ಜಿಲ್ಲಾ ಕಮಿಷನರ್ ಶ್ರೀ. ಯಮ್. ವೆಂಕಟೇಶ ಸೈಗಳೂ ಪ್ರಾಂತಿಕ ಸಹಾಯಕ ಕಮಿಷನರ್ ಶ್ರೀ. ಯಮ್. ಯಸ್. ಮಾಧವರಾಯರೂ, ಆಭ್ಯಾಸಿಗಳಿಗೆ ಸ್ಕೌಟು ಸಂಬಂಧವಾದ ಉಪದೇಶಗಳನ್ನಿತ್ತು, ಭಾವ ಚಿತ್ರವನ್ನು ತೆಗೆದಬಳಿಕ ಪ್ರದರ್ಶನಗಳೂ ವಿಶೇಷಾವಳಿಗಳೂ ಭಾಷಣಗಳೂ ನಡೆದುವು. ಈ ಶಿಬಿರವು ಅತ್ಯಂತ ಯಶಸ್ವಿಯಾಗುವಂತೆ, ಸಹಕರಿಸಿದವರಿಗೆಲ್ಲಾ ಶ್ರೀ ಬೋಳೂರು ಶ್ರೀನಿವಾಸರಾಯರು ಧನ್ಯವಾದಗಳನ್ನಿತ್ತರು.

ಕೆಲೆಂಡರ್ ಸ್ವೀಕಾರ ಈ ಕೆಳಗಿನವರು ಪ್ರತಿಪೂರ್ವಕ ಕಳುಹಿಸಿರುವ 1949ನೆ ಇಸವಿಯ ಸುಂದರವಾದ ಕೆಲೆಂಡರುಗಳನ್ನು ಅತ್ಯಾದರದಿಂದ ಸ್ವೀಕರಿಸಿದ್ದೇವೆ:- ಮಣಿಪಾಲ ಟೆಕ್ಸ್‌ಟ್ಯೂಬ್ಲ್ಸ್, ಮಣಿಪಾಲ. ಕೆ. ಟಿ. ಹೋಂಗರೆ ಎಂಡ್‌ಕೊ, ಬೊಂಬಾಯಿ; ಹರ್ಷಾ ಪ್ರಿಂಟರ್ಸ್, ಪುತ್ತೂರು. ಶಿವೋತ್ಕರ್ಷ ಪ್ರೆಸ್, ಸತಾರಾ. ನ್ಯೂ ರೋಯಲ್ ಕೆಫೆ, ಉಡುಪಿ. ಶಾಬಾವಿಮರ್ ಪ್ರೆಸ್, ಗದಗ; ಎಸ್. ಎನ್. ನ್ಯೂಸ್ ವಿಜನ್ಸ್, ಉಡುಪಿ.

ಡೈರಿ ಸ್ವೀಕಾರ ಉಡುಪಿಯ ಪಿ. ಎ. ಪೈ ಸಹೋದರರ 1949ನೆ ಇಸವಿಯ ಉತ್ತಮವಾದ ಕರ್ನಾಟಕ ಡೈರಿ ಹಸ್ತಗತವಾಗಿದೆ.

ಬೊಂಬಾಯಿ ಇಲ್ಲಿಯ ಲಲಿತಕಲಾ ಕರ್ನಾಟಕ ನಾಟಕ ಸಭೆಯವರು ಕಳದ ತಾ. 31ರಲ್ಲು ಭಾಂಗವಾಡಿ ಥಿಯೇಟರಿನಲ್ಲಿ 'ಕಲಿಯುಗ' ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ರಾಜಕಾರ್ಯ ಪ್ರಸಕ್ತ ಧರ್ಮ ಪ್ರಕಾಶ ಬಿ. ಯಂ. ಶ್ರೀನಿವಾಸಯ್ಯ ನವರು ಈ ಸಭೆಗೆ ರೂಪಾಯಿ 25/- ನ್ನು ದಾನವಾಗಿ ಕೊಟ್ಟರುತ್ತಾರೆ. ಈ ಸಭೆಯವರು ಶೀಘ್ರದಲ್ಲಿಯೇ ಶ್ರೀ ಎಚ್ ಎಲ್. ಎನ್. ಸಿಂಹರ "ಸಂಸಾರ ನೌಕೆ" ನಾಟಕವನ್ನು ಅಭಿನಯಿಸಲಿರುವರು.

[ಉಳಿದ ಪಾಟದಿಂದ]

ನೊರನವರಿದ್ದು, ಅಖಿಲ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪನವರನ್ನು ಆರಿಸಿಕೊಂಡುದರಿಂದ ಆಂಧ್ರ, ತಮಿಳು ನಾಡುಗಳಂತೆಯೇ ಕರ್ನಾಟಕವೂ ಸಮಾಧಾನಗೊಂಡಿದೆ. ಮಹಾಸ್ವಪ್ನದ ಶ್ರೀ. ಶಂಕರ ರಾವ್ ದೇವೋ ಕಾರ್ಯದರ್ಶಿಯಿರುವುದರಿಂದ ಆದಕ್ಕೊಂದು ತೃಪ್ತಿಯೆದೆ. ಇಂತಹ ಭಾಗಗಳ ಪೈಕಿ, ಕೇರಳ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರು ಮಾತ್ರ ಆರಿಸಲ್ಪಟ್ಟಿರುವುದರಿಂದ ಮಲೆಯಾಳಿಗಳು ಅಸಮಾಧಾನಗೊಂಡಂತಿದೆ.

ಮೇಲಿನ ಕಾರ್ಯಕಾರೀ ಸಮಿತಿಯ ಅವಸರದ ಪ್ರಥಮ ಸಭೆಯು ಇದೇ ತಾ. 9ರಲ್ಲಿ ನೆವಥಿಲ್ಲಿಯಲ್ಲಿ, ಸರ್ದಾರ್ ವಲ್ಲಭಾಯಿಗಳ ಭವನದಲ್ಲಿ ಕೂಡಿದೆ ಆಲ್ಲಿ ಮುಖ್ಯವಾಗಿದ್ದುದು ಜೈಪುರ ಅಧಿವೇಶನಕ್ಕಾಗಿ ಒಂದಿದ್ದು ಸಮಯಾಭಾವದಿಂದ ಚರ್ಚಿಸಲ್ಪಡದಿದ್ದ ಸಮಾರು 150 ಅನ್ಯ ಧಿಕಾರೀ ತಂತ್ರಾವುಗಳ ಇತ್ಯರ್ಥ, ಹಿಂದೂ ಮಹಾಸಭೆಯ 'ರಾಜಕೀಯ ಪ್ರಸ್ತಾವನೆ ನಿರ್ಣಯ'ದಂತಹವುಗಳ ಸಂಪಾರ್ಶ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದರುವುದನ್ನು ನಿಲ್ಲಿಸುವುದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕೆ. ಕೆ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವ್ಯಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸವ್ಯಸಾಗರ	(ಕತೆಗಳು)	,,	0	12	0
ಪ್ರಳಯ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು	(ವಿಡಂಬನೆ)	ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ನೇತನಸಂಗ್ರಾಮ	(ನಾಟಕ)	ಪಿ. ಶೀನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:— ನವಭಾರತ ಪುಸ್ತಕ ಭಂಡಾರ, ಉಡುಪಿ ಸೌ. ಕ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.



ಅಮೃತಾಂಜನ ಕೀಲುನೋವನ್ನು, ತಿರುಕು ನೋವನ್ನು, ಉಳುಕು ಊತವನ್ನು, ಪೆಟ್ಟು ಜಖಮ್ಮುಗಳ ನೋವನ್ನು ಎದೆನೋವು ಥಾಯಗಳು ಬಾಲ ತಕ್ಷಣವಾಗಿ ಶೀತ ನಾಯಿಂದ ಮೂಗಿನ ಬಿಕ್ಕಟ್ಟಾಗಿ ಮೆದುಳು ಎಲ್ಲಾ ತೀಕ್ಷ್ಣಗೊಳಿಸಿ ಕೊಡುವುದು.

REGD.

ಅಮೃತಾಂಜನ ಲಿಮಿಟೆಡ್

ಮಹಡಾನು.

ಕೊಂಬಾಯಿ ಮತ್ತು ಕಲ್ಕತ್ತ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡಾಣೆ 20-1-1949

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ಜಾಹೀರಾತಿಗೆ ಉತ್ತಮ ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೨೧

NAVAYUGA WEEKLY, UDIPI, S. K.

FOUNDER: Hon'ble Mr. A. B. SHETTY, Health Minister, Govt. of Madras.

Vol. 29 No. 21

★ ಮನನೀಯ ಮಾತುಗಳು ★

"ಬಿರುವ ವಾರ ನವಢಿಲ್ಲಿಯಲ್ಲಿ ಸೇರಲಿರುವ, ಇಂಡೋನೇಶಿಯಾ ಸಂಬಂಧದ ಉಶ್ಯಾ ಸಮ್ಮೇಳನವನ್ನು ಕರೆದುದು ಯುರೋಪು ರಾಷ್ಟ್ರಗಳಿಗೆ ಅಥವಾ ಜಿನೀವಂಕಕ್ಕೆ ವಿರೋಧವಾಗಿ 'ಆಸ್ಯಾ ಗುಂಪು' ಕಟ್ಟಿಕೊಳ್ಳುವದಕ್ಕಾಗಿ ಅಲ್ಲವೇನೂ ಅಲ್ಲ. ಆಥವಾ ಯಾವುದೇ ರೀತಿಯಿಂದಾದರೂ ಸಂಯುಕ್ತ ರಾಷ್ಟ್ರ ಸಂಘವನ್ನು ದುರ್ಬಲಗೊಳಿಸಬೇಕೆಂಬ ಇಚ್ಛೆಯಿಂದಲ್ಲ. ಬದಲಿಗೆ ಸಂಯುಕ್ತ ರಾಷ್ಟ್ರ ಸಂಘವನ್ನು ಬಲಗೊಳಿಸುವ ಗುರಿಯೇ ಅದರ ಮುಂದಿದೆ"-ತಾ 13ರಲ್ಲಿ ಪಂಡಿತ ನೆಹರುಗಳಿತ್ತ ಆಶ್ವಾಸನೆ.

"ಕೆಲಸಗಾರರು ತಮ್ಮ ಆವಶ್ಯಕತೆ ಮತ್ತು ಶಕ್ತಿಯನ್ನು ಮನನವಂಕ ಮಾಡಿಕೊಂಡಿರಬೇಕಾದು ಅಗತ್ಯ. ಆದರೆ ಅದೇ ಕಾಲದಲ್ಲಿ ಅವರು ರಾಷ್ಟ್ರದ ಕಡೆಗೆ ತಮ್ಮ ಕರ್ತವ್ಯವೇನೆಂಬುದನ್ನೂ ತಿಳಿದಿರಬೇಕು. ರಾಷ್ಟ್ರೀಯ ಒಕ್ಕಟ್ಟು ಮತ್ತು ಪ್ರಯತ್ನಗಳ ಆವಶ್ಯಕತೆಯು ಈಗ ಇರುವಷ್ಟು ಎಂದೂ ಇರಲಿಲ್ಲ. ಹೊರಗಿನ ಆಪಾಯಗಳಿದಿರಲ್ಲಿ ಸುರಕ್ಷಿತವಾಗಿರುವಂತೆ ಮತ್ತು ದಾರಿದ್ರ್ಯಪೀಡಿತ ಸಾರ್ವಜನಿಕರ ನೈತಿಕ ಹಾಗೂ ಸಾಮಗ್ರಿಶಕ್ತಿ ಸಂವರ್ಧಿಸುವಂತೆ ನಾವು ನಮ್ಮ ರಾಷ್ಟ್ರದ ಬಲವನ್ನು ವೃದ್ಧಿಗೊಳಿಸಿ ಕಟ್ಟಬೇಕಾಗಿದೆ"-ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನಿನ ಮಧ್ಯ ಭಾರತ ಶಾಖೆಯ ಪ್ರಥಮ ವರ್ಷಗಂಠಿಗೆ ಇದೇ ೧೧ರಲ್ಲಿ ಸರ್ದಾರ್ ಪರೇಲರು ಕಳುಹಿದ್ದ ಸಂದೇಶ.

"ರಾಷ್ಟ್ರದಲ್ಲೀಗ ದುಶ್ಚಿಳಗಳು ವ್ಯಾಪಿಸಿಕೊಂಡಿವೆ. ಸ್ತ್ರೀಯರುಬರು ಈರೀತಿ ದುರ್ವರ್ತನೆಗಳಿಗೆ ಕಟ್ಟು ಬಿದ್ದರೆ ಕಾಂಗ್ರೆಸು ನಿಪಾತ ಹೊಂದುವದು ಖಂಡಿತ. ಕಾಂಗ್ರೆಸ್ ಧ್ವಜವು ನಿಷ್ಕಳಂಕವಾಗಿ ಎತ್ತರದಲ್ಲಿ ಹಾರಾಡುವಂತೆ ನಾವು ಮಾಡಲಾರೆವಾದರೆ, ಆಗ ನಾವು ನಮ್ಮ ಹಕ್ಕು ಬಾಧ್ಯತೆಗಳನ್ನು ಅಮೂಲಾಗ್ರ ಕಳೆದುಕೊಳ್ಳುವೆವು. ಗಾಂಧೀವಾದವೆಂಬುದು ತತ್ವತಃ ಕಮ್ಯೂನಿಸ್ಟ್ ವಾದವೇ ಇದೆ. ಆದರೆ ಸರ್ದಾರಿಯನ್ನು ಪಡಿಯಬೇಕೆಂಬುದಿದರಲ್ಲಿ ಸ್ವಸ್ಥವಿರುವದರಿಂದ, ಈ ಮೂಲತ ಗುರಿ ನೇರುವದೆಂದರೆ ನಾವಧಾನವಾಗಿ, ಮಂದ ಹೆಜ್ಜೆಯಿಂದ ಆದರೆ ಖಿಶ್ಚಿಯವಾಗಿಯೂ ಸ್ರಲಯೊಬ್ಬನೂ ಸದಾ ಸರ್ದಾರಿಯಕ್ಕಲೇ ದೂಡುವ ತನ್ನ ಮನಸ್ಸಾಕ್ಷಿಗಾಧೀನನಾಗಿ ವರ್ತಿಸಬೇಕೆಂಬುದೇ ಗಾಂಧಿವಾದ"-ಮದ್ರಾಸಿನಲ್ಲಿ ತೆನಿಕೈ ಸ್ವಾಗತ ಸಮಾರಂಭದಲ್ಲಿ ಕಾಂಗ್ರೆಸ್ ಅಧ್ಯಕ್ಷ ಡಾ| ಪಟ್ಟಾಭಿ.

"ನಮ್ಮ ಮಹಾತ್ಮಾ ಮಹಾತ್ಮಾ ಜೀಯ ನಾಯಕತ್ವದಲ್ಲಿ ನಮ್ಮ ನ-ಯಕರು ಮಾಡಿದ್ದ ತ್ಯಾಗಗಳ ಪರಿಣಾಮವಾಗಿಯೇ ನಾನೀ ದಿನ ಈ ಉಧಿಕಾರಕ್ಕೇರುತಿದ್ದೇನೆ. ಜಂತೆಯೇ ಇದು ನನ್ನ ಕೈಕೆಳಗೆ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಿದ್ದ ವಿವಿಧ ವರ್ಗದ ಉಧಿಕಾರಿಗಳ ಮತ್ತು ಸೈನಿಕರ ಅಮೋಘ ಕಾರ್ಯಗಳ ಸ್ಮರಣೆಯ ಕೂಡಾ. ನಮ್ಮೀ ಸೈನ್ಯವು ಅಸೋಘವಾಗುವಂತೆ ಪ್ರತಿಯೊಬ್ಬನೂ ಏಕಮೇವವಾಗಿ ಕೆಲಸ ಮಾಡುವಿರೆಂದು ಆಶಿಸುತ್ತೇನೆ. ನಾವು ಕೇವಲ ಹಿಂದಿನ ಸಂಪ್ರದಾಯ ಮತ್ತು ಗತ ವೈಭವಗಳಿಗೇನೇ ಕಟ್ಟು ಬಿದ್ದಿರಲಿಚ್ಛಿಸುವದಿಲ್ಲ. ನಮ್ಮ ಸೇನೆಯ ಸುನಾಮವನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲು ನಾನೆಲ್ಲರೂ ದ ಡಿಯಬೇಕು"-ಜನರಲ್ ಕೆ. ಎಮ್. ಕರಿಯಪ್ಪನವರು ಇದೇ ತಾ. 15ರಲ್ಲಿ ಭಾರತದ ಸರ್ವಸೇನಾನಿ ಗದ್ದುಗೆಗೇರುವಾಗ ತನ್ನ ಸೇನೆಗೆ ಹೊಡಿಸಿದ ಆಜ್ಞೆ.

"ಸ್ವತಂತ್ರತ ನಾವು ಅನುಭವಿಸುತ್ತಿರುವುದು ಒಂದು 'ರಾಜ್ಯ'ವನ್ನು ಮಾತ್ರ. 'ಸ್ವರಾಜ್ಯ'ವನ್ನಲ್ಲ. ಸ್ವರಾಜ್ಯದಲ್ಲಿ ಕೋರ್ಟುಗಳು, ಕಾಲೇಜುಗಳು, ಕೌನ್ಸಿಲುಗಳ ಭಾಷೆಯು ಹಳ್ಳಿಯವನಿಗರ್ಥವಾಗುವಂತೆ ಆವೆಲ್ಲವೂ ಮಾತೃಭಾಷೆಯಲ್ಲೇ ಇರಬೇಕು"-ಮದ್ರಾಸಿನ ಪತ್ರಿಕಾಪ್ರತಿನಿಧಿಗಳ ಮುಂದೆ ಡಾ| ಪಟ್ಟಾಭಿ.

"ಪಾಕಿಸ್ತಾನಕ್ಕೆ ಯುದ್ಧ ಬೇಕಾಯಿತು; ಅದರ ರಾಜಿಯನ್ನು ನಾವು ಅವರಿಗೆ ಉಣ್ಣಿಸಿದೆವು. ಈಗ ಅವರಿಗೆ ಜನಮತ ಸಂಗ್ರಹ ಬೇಕಾಗಿದೆ; ಅದನ್ನು ಕೂಡಾ ಅವರಿಗೆ ಒದಗಿಸಲಿದ್ದೇವೆ. ಕಾಶ್ಮೀರಿಗಳ ಬುದ್ಧಿಯು ಫಿರ್ಮಲವಿದ್ದು, ಅವರೆಲ್ಲರೂ ಒಮ್ಮತದಿಂದ ಭಾರತದೊಂದಿಗೆ ಜೋಡಿಹೆಗೊಳ್ಳುವದಕ್ಕೇನೇ ಮತ ಕೊಡುವರೆಂಬ ವೃಥವಿಶ್ವಾಸ ನಮಗಿರುವುದರಿಂದ ಯಾವ ಕಾಲಕ್ಕೆ ಏನೇ ಬಂದರೂ ನಾವು ಆದಕ್ಕೆ ತಯಾರೇ"-ಕಾಶ್ಮೀರದ ಉಪ ಪ್ರಧಾನ ಮಂತ್ರಿ ಗುಲಾಮ್ ಮಹಮ್ಮದ ಭಕ್ಷಿಗಳು ತಾ 12ರಲ್ಲಿ ಅಲ್ಲಿಯ ಸಭೆಯೊಂದರಲ್ಲಿ ಆಡಿದ ಮಾತು.

"ಬ್ರಿಟಿಷ್ ಸೇನೆಗಳು ಕೊರ ನಡೆದೊದನೆ ಆಂತ್ಯಕಾಲಿಕ ಗೊಂದಲ ಸರಪಡೆಯೇ ಉಲ್ಲಿ ಉಳಿಯುವದೆಂಬ ಭವಿಷವಣ್ಣಿಗೆಗಳನ್ನು ಹೆ ಸಿಗೊಳಿಸುತ್ತಾ ಭಾರತದ ಗಡಿಯಲ್ಲಿ ಹಿಂದುಗಳೂ ಮುಸ್ಲಿಮರೂ

[ಉಳಿದ ಮುಂದಿನ ಸಂಚಿಕೆಯಲ್ಲಿ]

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ವೃಜೋಧಿನೀ ಸಂಸ್ಥೆತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಪರಾಭವ ಸಂವತ್ಸರದ 1949 - 1950

ನವಯುಗ ಪಂಚಾಂಗ

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.

ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11 0-0. 100 ಪ್ರತಿಗಳಿಗೆ 20-0-0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ನಿಮ್ಮ ನೆಚ್ಚಿನ
ಸುವಾಸನೆಯ ಸ್ವಾದವುಳ್ಳ
ಪ್ರಭಾತ ಚಾ ಮತ್ತು ಕಾಫಿ
ತಾಜಾ ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR (Niligiris)

ಏನುಮಾಡಲಿಕ್ಕೆ ಯಾ ಕ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಗಾಂಧೀ ಮಾಸ

ತಾ. 16ರಿಂದ 30ರ ವರೆಗೆ ಗಾಂಧೀ ಪಕ್ಷ–ತಾ. 26

ಜನವರಿ ತಿಂಗಳನ್ನು 'ಗಾಂಧೀ ಮಾಸ' ಎನ್ನಬಹುದು. ಇಡೀ ತಿಂಗಳಲ್ಲಿ ಮಹಾತ್ಮರ ಹಾಗೂ ರಾಷ್ಟ್ರದ ನ್ಯಾಣೆ ವಸ್ತು ಆ ಸಂಬಂಧದ ಕಾರ್ಯಾಚರಣೆಗಳ ಹೊಣೆ ಭಾರತೀಯರ ಪಾಲಿಗಿದೆ. ಭಾರತವು ಸ್ವಾತಂತ್ರ್ಯ ಹೋರಾಟದಲ್ಲಿದ್ದ ಹಿಂದಿನ ವರುಷಗಳಲ್ಲಿ ಜನವರಿ ತಾ 26 'ಸ್ವಾತಂತ್ರ್ಯ ದಿನ'ವಾಗಿ ಆಚರಿಸಲ್ಪಡುತ್ತಿದ್ದಿತು. ಕಳೆದ ವರುಷದಿಂದ ಅದು 'ರಾಷ್ಟ್ರೀಯ ಸ್ಮಾರಕ ದಿನಾಚರಣೆ'ಯಾಗಿ ಮಾರ್ಪಟ್ಟಿದೆ. ಈ ವರುಷವಂತೂ ಜನವರಿ ತಾ 26 'ವಿಧಾಯಕ ಕಾರ್ಯಾಚರಣಾ ದಿನ'–ಜನವರಿ ತಾ. 30'ಗಾಂಧೀಜೀ ಬಲಿದಾನದಿನ'ಅಥವಾ 'ಸರ್ವೋದಯ ದಿನ'–ಜನವರಿ ತಾ 16ರಿಂದ 30ರ ವರೆಗೆ 'ಗಾಂಧೀ ಸ್ಮಾರಕ ಪಕ್ಷ'ವಾಗಿ ನಮ್ಮ ಪಾಲಿಗೊದಗಿದೆ. ಇವುಗಳ ಆಚರಣೆ ಮತ್ತಿವುಗಳಲ್ಲಿ ತಾದಾತ್ಮ್ಯ ಹೊಂದುವುದರಿಂದ ಕರ್ತವ್ಯ ಪಾಲನೆ ಮತ್ತು ಕೃತಜ್ಞತಾಪ್ರದರ್ಶನವೆರಡನ್ನೂ ನಾವು ಮಾಡಿದಂತಾಗುವುದು. ಇದ್ದರಿಂದಲೆ ಸಂಬಂಧದ ಅಧಿಕೃತ ಸೂಚನೆಗಳನ್ನು ಇಲ್ಲಿ ಕೊಟ್ಟಿದ್ದೇವೆ.

ಗಾಂಧೀ ಸ್ಮಾರಕ ನಿಧಿ

ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರು ಭಾರತದ ಸರ್ವ ಸ್ತ್ರೀಪುರುಷರೊಂದಿಗೆ ಈ ಕೆಳಗಿನ ವಿನಂತಿಯನ್ನು ಮಾಡಿಕೊಂಡಿದ್ದಾರೆ.

"ಜನವರಿಯು ರಾಷ್ಟ್ರದ ಪಾಲಿಗೆ ಅತ್ಯಂತ ವೇದನಾತ್ಮಕ ಸ್ಮರಣೆಯ ತಿಂಗಳಾಗಿದೆ. ಕಳದ ವರುಷ ಇದೇ ತಿಂ.: 30 ನೇ ತಾರೀಕಿನಲ್ಲಿ ಮಹಾತ್ಮಾ ಗಾಂಧಿಯವರ ಬಲಿದಾನವಾಯಿತು. ಅವರು ತನ್ನ ಅಜೇಯ ಸತ್ಯಾಗ್ರಹಾಸ್ತ್ರದ ಮೂಲಕ ನಾವು ರಾಜಕೀಯ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವಂತೆ ನೆರವಾದುದಷ್ಟೇ ಅಲ್ಲ; ನಮ್ಮ ಜೀವನದಲ್ಲಿ ಹೊಸ ಅಮೂಲ್ಯತೆಗಳನ್ನೂ ತುಂಬಿಸಿದರು; ನಮ್ಮ ಸಾಮಾಜಿಕ ಹಾಗೂ ರಾಜಕೀಯ ರೀತಿ ನೀತಿಗಳನ್ನು ಸುಧಾರಿಸಿ ಅವುಗಳನ್ನು ಸತ್ಯ, ಪ್ರೇಮಗಳ ಪವಿತ್ರಾಸ್ತಿವಾರದ ಮೇಲೆ ಕಟ್ಟಲೆಸಿದರು. ಈ ಗುರಿ ಸಾಧನೆಗಾಗಿಯೇ, ಅವರು ಭಾರತದ ಮೂಕ ಮಿಲಿಯ ಜನತೆಯ ಹಿತಸಾಧಕಗಳಾದ ಹಲವಾರು ವಿಧಾಯಕ ಕಾರ್ಯರೀತಿಗಳನ್ನು ಮುಂದಿಟ್ಟರು. ಗಾಂಧಿಜೀಯ ಈ ಅಮೂಲ್ಯ ತತ್ವಗಳನ್ನು ಊರ್ಜಿತದಲ್ಲಿರಿಸಲು ಅವರ ಈ ಕಾರ್ಯಕ್ರಮಗಳನ್ನು ಮುಂದೊತ್ತಬೇಕೆಂಬ ಮುಖ್ಯೋದ್ದೇಶದಿಂದಲೇ, ಕಳದ ಫೆಬ್ರವರಿಯಲ್ಲಿ 'ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ' ಆರಂಭಿಸಿತು ಬಡ ಜನರ ಪ್ರಯೋಜನಾರ್ಥವಾಗಿ ಆಸ್ಪತ್ರೆಗಳು, ಹೆಂಗಸರು ಮತ್ತು ಮಕ್ಕಳಿಗಾಗಿ ಅನಾಥಾಲಯಗಳ, ಸ್ವಸೂತಿ ಗೃಹಗಳು ಮತ್ತದಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳು, ಕುಷ್ಠ ನಿವಾರಕ ಸಾಧನಗಳು, ಆರೋಗ್ಯ ವಸತಿ ಮುಂತಾದುವು, ಮುಖ್ಯತಃ ಗ್ರಾಮ ವಲಯಗಳಿಗಾಗಿ, ಹಳ್ಳೀ ಕೈಗಾರಿಕೆಗಳಲ್ಲಿ ಮತ್ತಿತರ ಉಪಯುಕ್ತ ಕಲೆ ಕೈಗಾರಿಕೆಗಳಲ್ಲಿ ಶಿಕ್ಷಣ ಮತ್ತು ತರಬೇತಿ, ಮತ್ತು ಇವೆಲ್ಲಾ ಚಟುವಟಿಕೆಗಳನ್ನು ಮುಂದೊತ್ತಲು ಸ್ತ್ರೀ ಪುರುಷರಿಗೆ ತರಬೇತಿ, ಮುಂತಾದ ಉದ್ದೇಶಗಳಿಗೆ ಈ ನಿಧಿಯ ವಿನಿಯೋಗವಾಗಲಿದೆ. ಈ ಕಾರ್ಯವಂತೂ ಅತ್ಯಪಾರವಿದ್ದು, ನಮ್ಮೆಲ್ಲರ ಸಂಯುಕ್ತ ಪ್ರಯತ್ನಕ್ಕಿದು ಕರೆಯೀಯಿತ್ತಿದೆ. ಇದುವರೆಗೆ ಈ ನಿಧಿಗಾಗಿರುವ ಸಂಗ್ರಹವು ಕಡಿಮೆ. ಇದೇ ಜನವರಿ ತಾ 16ರಿಂದ 30ರ ವರೆಗಿನ ಎರಡು ವಾರಗಳನ್ನು ಇಡೀ ರಾಷ್ಟ್ರದಲ್ಲಿ 'ಗಾಂಧೀ ಸ್ಮಾರಕ ಪಕ್ಷ'ವಾಗಿ ಆಚರಿಸಬೇಕೆಂದೂ ಈ ಅವಧಿಯಲ್ಲಿ ಇಮ್ಮಡಿ ಪ್ರಯತ್ನ ಕೈಕೊಂಡು ಅತಿ ಭರದಿಂದ ನಿಧಿಸಂಗ್ರಹಕ್ಕಿಳಿಯಬೇಕೆಂದೂ ನಮ್ಮೆಲ್ಲಾ ಸಮಿತಿಗಳೊಡನೆಯೂ ಕಾರ್ಯಕರ್ತರೊಡನೆಯೂ ನಾನೀಮೂಲಕ ಕೋನೆಯ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ. ಅಂತೆಯೇ, ನಮ್ಮ ರಾಷ್ಟ್ರ ಜನಕನ ಪುಣ್ಯಸ್ಮರಣೆಯ ಕಡೆಗೆ ನಾವು ಸಲ್ಲಿಸಬೇಕಾದ ಜೀವಂತ ಗೌರವವಾಗಿಯೂ, ಯಾವುದರ ಸಾಧನೆಗಾಗಿ ಅವರು ಜೀವನ, ಮರಣವೆರಡೂ ಇದ್ದಿತೋ ಆ ಅಸಾಮಾನ್ಯ ಕಾರ್ಯಭಾರ ನಿರ್ವಹಣಕ್ಕಾಗಿಯೂ ಭಾರತೀಯ ಸ್ತ್ರೀ ಪುರುಷರು, ಶ್ರೀಮಂತರು ಮತ್ತು ಬಡವರು ಈ ನಿಧಿಗೆ ಮುಕ್ತಹಸ್ತದಿಂದ ಸಹಾಯ ಮಾಡಬೇಕೆಂದು ನಾನು ಎಲ್ಲರೊಡನೆಯೂ ವಿನಂತಿಸಿಕೊಳ್ಳುತ್ತೇನೆ. ಈ ಸಹಾಯ ಧನವನ್ನು ಸಮೀಪದ ಪೋಸ್ಟಾಫೀಸಿನಲ್ಲಾಗಲೀ, ಸಂಗ್ರಹಾಧಿಕಾರ ಪಡೆದವರೊಡನಾಗಲೀ ಕೊಡಬಹುದು".

'ಗಾಂಧೀ ವಸ್ತುಪ್ರದರ್ಶನ'

ಗಾಂಧಿ ಮ್ಯೂಸಿಯಮ್ ಒಂದನ್ನು ಸ್ಥಾಪಿಸುವ ಕುರಿತು ಬಾಬು ರಾಜೇಂದ್ರ ಪ್ರಸಾದರು ಈ ಕೆಳಗಿನ ವಿನಂತಿ ಮಾಡಿಕೊಂಡಿದ್ದಾರೆ

"ತೀರಾ ಕಡವಾಗುವ ಮೊದಲೇ ಮಹಾತ್ಮಾ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನೂ ಸಂಗ್ರಹಿಸಿಕೊಳ್ಳುವದು ಅತ್ಯಗತ್ಯವಿದೆ. ತನ್ನ ಚರಿತ್ರೋಚಿತ ಸಾಮಾನ್ಯಗಳನ್ನು ಅಸ್ಸಿ ಮಾಡಿಡಿಹುವ ಭಾರತದ ಅಧ್ಯಾತ್ಮವು ಗಾಂಧಿಯ ಮಾತಿಗೆ ಟೀಕೆಗೀಡಾಗಿದೆ. ಗಾಂಧಿಜೀಯ ಜೀವನ ಮತ್ತು ಕೆಲಸಗಳಿಗೆ ಸಂಬಂಧಿಸಿದ ಅಮೂಲ್ಯ ವಸ್ತುಗಳ ಮಟ್ಟಿಗೂ ನಾವು ಇಂತಹ ಅವರಾಧಿಗಳಾಗದಿರೋಣ. ಒಂದು ಗಾಂಧೀ ಮ್ಯೂಸಿಯಮನ್ನು ಸ್ಥಾಪಿಸಿ ನಡೆಸಿಕೊಂಡು ಬರಬೇಕೆಂದು ಗಾಂಧೀ ಸ್ಮಾರಕ ನಿಧಿಯು ನಿರ್ಣಯಿಸಿದೆ. ಅದರಲ್ಲಿ ವ್ಯಕ್ತಿಶಃ ಗಾಂಧಿಜೀ ಉಪಯೋಗಿಸಿದ್ದ ಮತ್ತು ಅವರಿಗೆ ಸಂಬಂಧಿಸಿರುವ ಚಿರತ್ರಾರ್ಹ ಹಾಗೂ ಭಾವಸೂಚಕ ಮೌಲ್ಯವುಳ್ಳ ಸಾಮಾನ್ಯಗಳೆಲ್ಲವನ್ನೂ ಸಂಗ್ರಹಿಸಿಟ್ಟುಕೊಳ್ಳಬೇಕಾಗಿದೆ. ಮಹಾತ್ಮಾ ಗಾಂಧಿಯವರಿಂದ ಆಥವಾ ಅವರು ಹೇಳಿದಂತೆ ಬರೆಯಲ್ಪಟ್ಟಿದ್ದ ಕಾಗದಗಳು, ಟೀಕನಗಳು ಮತ್ತೆಲ್ಲಾ ಪುಸ್ತಕಗಳು, ನಿಯಾರ್ಡುಗಳಾಗಿರುವ ಅವರ ಸ್ವರಗಳು, ಅವರ ಭಾವಚಿತ್ರಗಳು, ತೈಲ ಚಿತ್ರಗಳು, ವ್ಯಂಗ್ಯಚಿತ್ರಗಳೇ ಮೊದಲಾದುವು. ಮಹಾತ್ಮಾ ಗಾಂಧಿಯವರ ಜೀವನ ಹಾಗೂ ಅವರ ಕಾರ್ಯಗಳಿಗೆ ಸಂಬಂಧಿಸಿದ ಕವಿತೆಗಳು ಮತ್ತು ಜನಪದ ಹಾಡುಗಳು, ಮಹಾತ್ಮಾ ಗಾಂಧಿಯವರಿಂದ ಆಥವಾ ಅವರ ಕುರಿತಾಗಿ ಇರುವ ಎಲ್ಲಾ ಭಾಷೆಗಳ ಎಲ್ಲಾ ಸಾಹಿತ್ಯಗಳ ಮೊದಲಾದುವೆಲ್ಲವನ್ನೂ ಸಂಗ್ರಹಿಸಿಕೊಂಡು, ಕಾದಿಟ್ಟುಕೊಂಡು, ಸಾರ್ವಜನಿಕರಿಗೆ ನೋಡಸಿಗುವಂತೆ ಮಾಡಬೇಕಾಗಿದೆ. ಇವುಗಳ ಸಂಗ್ರಹಕಾರ್ಯ ಇವ ಗಾಯನ್ನು ಶ್ರೀ ಕಾಕಾ ಸಾಹೇಬ್ ಕಾಲೇಲ್ಕರರು ದಯವಿಟ್ಟು ವಹಿಸಿಕೊಂಡಿದ್ದಾರೆ. ಅವುಗಳನ್ನು ಸಂಗ್ರಹಿಸುವ ಮತ್ತು ಸಾಶ್ವತ ಮ್ಯೂಸಿಯಂ ಸ್ಥಾಪನೆಯಾಗುವರೆಗೆ ಅವನ್ನೆಲ್ಲಿ ತನಗನುಕೂಲವಾದ ಸ್ಥಳದಲ್ಲಿ ಜಮಾಯಿಸಿಟ್ಟುಕೊಳ್ಳುವ ಅಧಿಕಾರವನ್ನು ಗಾಂಧಿ ಸ್ಮಾರಕ ಸಮಿತಿಯು ಅವರಿಗಿತ್ತಿದೆ. ಭಾರತದಲ್ಲಿ ಮತ್ತು ವರದೇಶಗಳಲ್ಲಿರುವ ಎಲ್ಲರೂ ತಮ್ಮ ವರವಿಂವೆ ಇರುತಹ ಸಾಮಾನ್ಯಗಳೆಲ್ಲವನ್ನೂ ಕಳುಹಿಸಿ ಆಥವಾ ಕೊನೆಯ ಪಕ್ಷ ಅವರಾದರೂ ಆ ವಸ್ತುಗಳ ಸಂಗ್ರಹ ವ್ಯವಸ್ಥೆ ಮಾಡಲು ಗಾಂಧಿಯವರಿಗೆ ಮುಟ್ಟಿಸಿ ಶ್ರೀ ಕಾಕಾ ಸಾಹೇಬ್ ಕಾಲೇಲ್ಕರರೊಂದಿಗೆ ಸಹಕರಿಸಬೇಕೆಂದು ಅಗ್ರಹಪೂರ್ವಕ ವಿಜ್ಞಾಪನೆ ಒಂದು ಪ್ರತ್ಯೇಕ ಕಮ್ಯೂಸಿಯಂ ಸ್ಥಾಪನೆಯಾಗುವ ವರೆಗೆ ಇವೆಲ್ಲವನ್ನೂ ಬೊಂಬಾಯಿಯ 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮ್'ನಲ್ಲಿ ಮತ್ತು 'ರೋಯಲ್ ಏಸಿಯಾಟಿಕ್ ಸೊಸೈಟಿ'ಯಲ್ಲಿರುವ ಸಾಧಯಾದ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಮಹಾತ್ಮಾ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳ ಸಾಕಷ್ಟು ಸಂಖ್ಯೆ

Greetings and Best Wishes

For a

Prosperous New Year

To

All our Policyholders, Medical Examiners,
Agents and Wellwishers.

From

Kochikar Brothers Ltd,

Chief Agents

The Bombay Life Assurance Co., Ltd,

Calicut, Trivandrum, Mangalore, Coimbatore,
Madras, Bangalore, Madura, Bombay & Udipi.

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಸಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾದಲ್ಲಿ ಸಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಆಥವಾ ಸಂಗ್ರಹ] ಇಲಾಖೆಯು ನಮ್ಮ ಶಾಖೆಗಳುವಲ್ಲಿ ರಪ್ತುಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಟ್ಟಣದ ಆರಕೆಯ ಕ್ಷೇತ್ರಗಳಲ್ಲಿ–ತಮಿಳುನಾಡಿನ ಉತ್ತ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ–ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಪಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕಿಗಳ ಬಗ್ಗೆ ಕಲೆಕ್ಷನ್ ರಪ್ತುಮುಗಳನ್ನು ವಹಿಸಿಕೊಳ್ಳುವಲ್ಲಿ. ನಮ್ಮ ಸಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಶಿಷ್ಟ ಸೇವೆಯ ವ್ಯವಸ್ಥೆಯನ್ನು ಊಪಸಿಸಿರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತವೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿಯುವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಪ್ತುಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಕ್ಷ್ಯ ಲಕ್ಷ್ಯ ದೊರೆಯುವುದು.

The Canara Bank Limited.

ESTD: 1906.

ಈ ಜನವರಿ

ಸ್ಮಾರಕ ದಿನ– ತಾ ೩೦ ಬಾಪೂ ಬಲಿದಾನ ದಿನ

ಪ್ರತಿಗಳನ್ನು ಅಧಿಗಳ ಮುದ್ರಣ ಪ್ರ
ಮುಗಿದು ಹೋಗುವ ಮೊದಲೇ ಸಂ
ಸಬೇಕೆಂಬ ಬಯಕೆ ವಿಶೇಷವಿದ್ದಿದೆ.
ಗಾಗಿ ಭಾರತ ಮತ್ತು ಹೊರದೇಶ
ಳಲ್ಲಿ ಪರಿಶುದ್ಧ ಗಾಂಧೀ ವಾಙ್ಮಯಾಲ
ಗಳನ್ನು ಸಾಕಷ್ಟು ಸಂಖ್ಯೆಯಲ್ಲಿಗೊ
ಸುವ ಬಯಕೆ ಫಲಿಸಲು ಪ್ರಕಟ್ಯವಾಗ
ು. ಆದ್ದರಿಂದ ಮಹಾತ್ಮಾ ಗಾಂಧಿಯ
ರ ಜೀವನ, ತತ್ವ ಮತ್ತು ಚಟುವಟಿಕೆ
ಳಿಗೆ ಸಂಬಂಧಿಸಿದ ತಮ್ಮ ಪ್ರಕಟಿತ
ಗ್ರಂಥಗಳ ಪ್ರತಿಗಳನ್ನು ಶ್ರೀ. ರಾಕಾ ಕಾ
ಲೇಲ್ಕರ್, ಗಾಂಧೀ ಸ್ಮಾರಕ ಸಂಘ,
ಟೌನ್ ಹಾಲ್, ಬೊಂಬಾಯಿ– ಈ ವಿ
ಳಾಸಕ್ಕೆ ಕಳುಹಿಸಿಕೊಡಬೇಕೆಂದು ಸಂಬಂ
ಧಪಟ್ಟ ಗ್ರಂಥಕರ್ತರಲ್ಲೂ ಪ್ರಕಾಶಕರ
ಲ್ಲೂ ವಿಜ್ಞಾಪನೆಯಿದೆ."

ಸ್ಮಾರಕ ದಿನ

"ಜನವರಿ ತಾ ೨೬ನ್ನು ಸ್ವಾತಂತ್ರ್ಯ
ಘೋಷಣೆಯಲ್ಲಿ ಬಲಿಯಾದವು ಪವಿತ್ರ
ಸ್ಮಣೆಯ 'ಸ್ಮಾರಕ ದಿನ'ವಾಗಿ ಆಚರಿಸ
ಬೇಕೆಂದು ಇತ್ತೀಚೆಗೆ ನವಢಿಲ್ಲಿಯಲ್ಲಿ ಸೇ
ರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿ
ನಿರ್ಣಯಿಸಿದೆ. 1929ನೇ ದಶಂಬರದಲ್ಲಿ
ಸೇರಿದ್ದ ಲಾಹೂರು ಕಾಂಗ್ರೆಸು ಪಂಡಿತ
ನೆಹರೂಗಳ ಪ್ರಮುಖವಜಿಯಿಂದ 'ಪೂ
ರ್ಣ ಸ್ವಾತಂತ್ರ್ಯ'ವನ್ನೇ ತನ್ನ ಗುರಿಯಾ
ಗಿ ಸ್ವೀಕರಿಸಿಕೊಂಡ ಮೇಲೆ, ಆ ಮೇಲಿ
ನ ಪ್ರತಿ ಜನವರಿ 26ನೇ ತಾರೀಕನ್ನು
ರಾಷ್ಟ್ರವು 'ಸ್ವಾತಂತ್ರ್ಯ ದಿನ'ವಾಗಿ ಆಚ
ರಿಸಿಕೊಂಡು ಬಂದಿದ್ದಿತು. ಕಳದ ವರುಷ
ಈ ದಿನ ಬರುವ ಮೊದಲೇ ಸ್ವಾತಂತ್ರ್ಯ
ಒಂದಿದ್ದುದರಿಂದ, ಆ ತನಕ 'ಸ್ವಾತಂತ್ರ್ಯ
ಸಾಧಕ ದಿನ'ವಾಗಿದ್ದುದ್ದು. ಕಳದ
ಬಾರಿ 'ಸ್ವಾತಂತ್ರ್ಯ ಸ್ಮಾರಕ ದಿನ'
ಎಂದು ಪಾರ್ಸಿಟ್ಟಿದ್ದಿತು. ಸ್ವಾತಂತ್ರ್ಯ
ಕ್ಕಾಗಿ ಯೋಧಾಡಿ ವ್ಯಾಣ ಬಲಿ ಕೊಟ್ಟವ
ರಿಗೆ ಮತ್ತು ಕಷ್ಟನಷ್ಟಗಳನ್ನು ಅ
ನುಭವಿಸಿದವರಿಗೆ ಶ್ರದ್ಧಾಂಜ
ಲಿಗಾಗಿ ಈ ದಿನವು ಮೀಸಲಾಗಿತ್ತು.
ಈ ವರ್ಷ ಅದು ಮುಖ್ಯತಃ 'ವಿಧಾಯಕ
ಕಾರ್ಯಾಚರಣೆಯ ದಿನ'ವಾಗಿರುವಂತೆ
ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿ
ರ್ದೇಶಿಸಿದೆ. ಸ್ವಾತಂತ್ರ್ಯವನ್ನು ಸಂಪಾದಿ
ಸಿಕೊಳ್ಳಲು ನಾವು ದೀರ್ಘ ಕಾಲ ಹೋ
ರಾಡಬೇಕಾಗಿತ್ತು; ಆ ಅವಧಿಯಲ್ಲಿ ಜನ
ತೆಗೆ ತನ್ನ ಕರ್ತವ್ಯ ಮರೆತು ಹೋಗಿದ
ತೆ ಮೂಡಲು- ಸ್ವಾತಂತ್ರ್ಯ ನಿರ್ಧಾರವ
ನ್ನು ಝಳಪಿಸಿಕೊಳ್ಳಲು.– ಜನವರಿ 26
ಮೀಸಲಿತ್ತು; ಈಗ ಸ್ವಾತಂತ್ರ್ಯ ದೊರೆತಿ
ದೆ. ಆದರೆ ಅದಂ ಸರಿಯಾದ ಸ್ವಯೋಜ
ನ ಪಡೆಯಲು ಈ ವರೆಗಾಗಿಲ್ಲ; ಈ ಸ್ವಾ
ತಂತ್ರ್ಯದ ನಿಜವಾದ ಗುರಿಯಾಗಿರುವ
ಸಾಮಾನ್ಯ ಜನರ ಜೀವನಮಟ್ಟವನ್ನು
ಸುಧಾರಿಸಲಾಗಿಲ್ಲ; ಸ್ವಾತಂತ್ರ್ಯವನ್ನು
ಸಾರ್ಥಕಗೊಳಿಸುವದು ಸ್ವಾತಂ
ತ್ರ್ಯ ಸಾಧನೆಗಿಂತಲೂ ಪ್ರಯಾಸದ ಕಾ
ರ್ಯವಾಗಿ ಕಾಣುತ್ತಿದೆ. ಆದ್ದರಿಂದ ಕಾಂ
ಗ್ರೆಸು ಈ ದಿವಸದಲ್ಲಿ ಎಲ್ಲಾ ಒತ್ತುವೂ ಆ
ಕಡೆಗೆ ಬೀಳಬೇಕೆಂದು ಸಾರಿದೆ. ಕಾಂಗ್ರೆ
ಸ್ ಕಾರ್ಯಕಾರೀ ಸಮಿತಿಯು ನೂಡಿ
ರುವ ನಿರ್ಣಯಾಪೇಕ್ಷೆಯನುಸಾರವಾಗಿ ಕಾರ್ಯ
ದರ್ಶಿಯವರು ಹೊರಡಿಸಿರುವ ಸರ್ಕ್ಯುಲಾ
ರಿನ ಸಾರಾಂಶ ಹೀಗಿದೆ:–

"ಜನವರಿ 26ನ್ನು ನಾವು ನೆನಪು
ದಿನವಾಗಿ ಆಚರಿಸುತಿದ್ದೇವೆ. ರಾಷ್ಟ್ರವು
ಪ್ರತಿ ವರ್ಷವೂ ಸ್ವಾತಂತ್ರ್ಯ ಪ್ರತಿಜ್ಞೆ
ಸ್ವೀಕರಿಸುತ್ತಿದ್ದ ದಿನವಿದು. ಆದ್ದರಿಂದ
ಈ ಸ್ವಾತಂತ್ರ್ಯವನ್ನು ವಿಧಾಯಕ ಕಾ
ರ್ಯರೀತ್ಯಾ ಜನತೆಯ ಸಾಮಾಜಿಕ
ನುತ್ತು ಆರ್ಥಿಕ ಸ್ವಾತಂತ್ರ್ಯದ ರೂಪಾಂ
ತರಿಸುವದನ್ನಾರಂಭಿಸಲು ಈ ದಿವಸಕ್ಕಿಂ
ತ ಯೋಗ್ಯವಾದುದು ಬೇರೊಂದಿರಲಾರ
ದು. ಕಾಂಗ್ರೆಸಿನ ಸಾಮಾಜಿಕ ಕ್ರಾಂತಿಕಾ
ರ್ಯ ಕ್ರಮವು ದೇಶದ ಮೂಲೆವಾಸಿ
ಗೂ ಹಬ್ಬುವಂತೆ ಆ ದಿವಸ ಪ್ರತಿಯೊಂ
ದು ನಗರ ಮತ್ತು ಹಳ್ಳಿಯಲ್ಲೂ ಸರ್ವಜ
ನಿಕ ಸಭೆಗಳು ಸೇರಿ ಕಾಂಗ್ರೆಸಿನ ಆರ್ಥಿಕ,
ಕಾರ್ಯಕ್ರಮಗಳನ್ನು ಮಂಡಿಟ್ಟುಪಡಿಸ
ಬೇಕು. ಮುಖ್ಯತಃ ತರುಣ ಸ್ತ್ರೀಪುರುಷ
ಕಾಂಗ್ರೆಸ್ ಕಾರ್ಯಕರ್ತರು, ಕಳ್ಳ ಸಂತೆ,
ಕಳ್ಳ ಸಂಗ್ರಹ, ದುರ್ವ್ಯವಸ್ಥೆ, ದುಃಶ್ಚಿಟ್ಟಿಗ
ಳ ನಿವಾರಣೆಗೆ ನಡು ಬಿಗಿಯಬೇಕು. ಜೈ
ಪುರ ಕಾಂಗ್ರೆಸಿನಲ್ಲಾದ 'ಸಾರ್ವಜನಿಕ
ಗುಣ ನಡತೆ'ಯ ನಿರ್ದೇಶಗಳಿಗನುಸಾರ
ವಾಗಿ ಎಲ್ಲಾ ಕಾಂಗ್ರೆಸ್ ಕೆಲಸಗಾರರು
ಶಿಸ್ತುಬದ್ಧ ಕಾರ್ಯಾಚರಣೆಗಿಳಿಯಬೇಕು"

ಸರ್ವೋದಯ ದಿನ

ಜನವರಿ ೩೦ ಬರುತ್ತಿದ್ದ; ಬಾಪೂಜಿ
ಯನ್ನು ಒಲಿ ಪಡೆದು ಇಡೀ ರಾಷ್ಟ್ರವನ್ನು
ಜನಾಧಗೊಳಿಸಿದ ಕರಾಳ ದಿನ ಸಮೀಪಿ
ಸುತ್ತಿದ್ದ; ಆ ಬಾಂ ಇಡೀ ದೇಶಕ್ಕಂತಹ
ಸಿಡಿಲನ್ನೆರಗಿಸಿದ ಆ ದಿನ ಮತ್ತೊಮ್ಮೆ
ತಲೆ ಹಾಕುವದು ಇದೇ ಮೊದಲ ಬಾರಿ;
ಗಾಂಧಿಜೀಯ ಬಲಿದಾನದ ಪ್ರಥಮ
ವರ್ಷಾಂತಿಯದು. ಇದನ್ನು ಆಚರಿಸುವ
ಕುರಿತು ಕಾಂಗ್ರೆಸ್ ಕಾರ್ಯಕಾರೀ
ಸಮಿತಿಯು ಮಾಡಿರುವ ನಿರ್ಣಯ– ರಾ
ಷ್ಟ್ರಕ್ಕರ್ಪಿಸಿದ್ದಿ ಶಕ್ತಿ– ಹೀಗಿದೆ:–

"ಮಹಾತ್ಮಾಗಾಂಧಿಯವರು ಹೊರಟು
ಹೋಗಿ ಒಹುತೇಕವಾಗಿ ಒಂದು ವರುಷ
ಕಳೆದುಹೋಯಿತು. ಜನರ ಮರಣವರ್ಥಂ
ತೀ ದಿನ ಜನವರಿ ೨೦ನ್ನ "ಸರ್ವೋದ
ಯ ದಿನ"ವಾಗಿ ಇಡೀ ರಾಷ್ಟ್ರದಲ್ಲಿ ಅ
ತ್ಯಂತ ನಿಷ್ಠೆಯಿಂದಾಚರಿಸಬೇಕು; ಗಾಂ
ಧೀಜೀ ಕಡೆಗೆ ಮತ್ತು ಅವರು ತನ್ನಳಿಯು
ಸ್ಯವಿಡೀ ಬೋಧಿಸಿದಾಗೂ ಆಚರಿಸತೋ
ರಿಸಿದ ತತ್ವಗಳಿಗನುಸಾರವಾಗಿ ಈ ದಿನವು ವರ್ತಿ
ಲಿಬೇಕು. ಸತ್ಯ ಮತ್ತು ಅಹಿಂಸೆಯ
ಮೂಲಕ ರಾಷ್ಟ್ರದ ಎಲ್ಲಾ ಸ್ತ್ರೀ ಪುರು
ಷರೊಳಗೆ ಸಹಭ್ರಾತೃತ್ವ ಮತ್ತು ಒಕ್ಕಟ್ಟು
ಸ್ಥಾಪಿಸಬೇಕೆಂಬ ಮಹಾತ್ಮರ ಮಹಾ
ಸಂದೇಶದ ಕಡೆಗಿನ್ನೇ ಅವಧಿಯಲ್ಲಿ ಮುಖ್ಯ
ವಾಗಿ ಆ ದಿನವನ್ನು ಭಕ್ತಿಸೂರ್ವಕ
ಆಚರಿಸಬೇಕು; ತ್ಯಾಗಶೀಲ ಸೂಲುವಿ
ಕೆ ಮತ್ತು ಸಾಮಾಜಿಕ ಸೇವೆಗಳು ಅಂದಿ
ನ ಕಾರ್ಯಕ್ರಮಗಳಲ್ಲಿರಬೇಕು. "ಸಾ
ರ್ವಜನಿಕ ಸಭೆಗಳೂ ಸೇರಬಹುದು. ಆ
ಸಭೆಗಳಲ್ಲಿ ಈ ಕೆಳಗಿನ ಸಂದೇಶವನ್ನು
ಮಾತ್ರ ಓದತಕ್ಕದ್ದು:—

"ತಲಕಲಾಂತರಗಳಿಂದ ನಜಿದಿದ್ದ ಸ್ವಾ
ತಂತ್ರ್ಯ ಸಂಗ್ರಾಮದ ಸುದೀರ್ಘ ಚರಿತ್ರೆ
ಯಲ್ಲಿ ಭಾರತವು ಹಲವಾರು ವಿಧ ದುಃಖ
ಮತ್ತು ಸುಖ, ಹಲವು ಜಯ ಮತ್ತು ಅ
ಪಜಯಗಳನ್ನು ಅನುಭವಿಸಿದ್ದಿತು. ಆದರೆ
ರಾಷ್ಟ್ರಪಿತನ ಚಿರಂಜೀವಿಗಳೋಳಿ ನಾಯಕತ್ವದ
ಅಡಿಯಲ್ಲಿ ದೀಃಖವೆಂಬುದು ಜನತೆಯ
ನ್ನು ಶುದ್ಧೀಕರಿಸುವ ಸಾಧನವಾಯಿತು-
ಪ್ರತಿಯೊಂದು ಸೋಲೂ ಇಮ್ಮಡಿ ಪ್ರ
ಯತ್ನಗಳಿಗೆ ಪ್ರೇರಣೆ ಮತ್ತು ವಿಜಯದ
ಮುಂಬೆಳಕಾಗಿ ಪರಿಣಮಿಸಿತು. ಇತ್ತೀಚೆ
ಗಿನ ವರುಷಗಳು ಕಠೋರ ಪರೀಕ್ಷಾಕಾಲ
ವತ್ತು ಕಷ್ಟದ ಅವಧಿಯಾಗಿದ್ದುವು. ಆದ
ರೆ ಇಲ್ಲಿಯೂ ಗಾಂಧಿಜೀಯ ಸಂದೇಶವು
ರಾಷ್ಟ್ರವನ್ನು ಉತ್ತೇಜಿಸಿತು. ಈ ವರುಷ
ಗಳು ಅದೊಂದು ಪರಮಾಣದ ಸಾಫಲ್ಯ
ವನ್ನು ತಂದುವು; ತಲಕಲಾಂತರಗಳಲ್ಲಿ
ಹೋರಾಡಿದ್ದ ಮತ್ತು ಕಷ್ಟ ನಷ್ಟಾನು
ಭವಿಸಿದ್ದ ಸ್ವಾತಂತ್ರ್ಯವು ಸಾಧಿಸಲ್ಪಟ್ಟಿ
ತು. ಆದರೆ ಆ ಸಾಧನೆಗೆ ತೆತ್ತ ಬೆಲೆ
ಯೇನೋ ವಿಜಯಕ್ಕೂ ಆತ ಹೆಚ್ಚಿನದು.
ಮಾತೃ ಭೂಮಿಯು ಎಂದಾಗಿ ತುಂಡರಿ
ಸಲ್ಪಟ್ಟಿತು. ಈ ದುರ್ದೈವದ ವಿಘಟನೆ
ಯನ್ನನುಸರಿಸಿ, ಜನತೆಯ ಬುದ್ಧಿಭ್ರಮೆ
ಗೊಂಡು, ಗಾಂಧಿಜೀಯ ಅ
ಮೋಘ ಶಕ್ತಿಗಳಿಗೆ ಅಗೂಸ್ಮೆ
ಗ್ರಹಣ ಒಡಿದಂತಾಯಿತು. ಈ ಕತ್ತಲೆ
ಯನ್ನು ಕೂಡಾ ಗಾಂಧಿಜೀಯ ಹೃದ
ಯೋತ್ಪೈಜಕ ಸಂದೇಶವು ಜ್ಯೋತಿಯಾ
ಗಿ ಬೆಳಗಿಸಲ್ಲದ್ದೆ, ದುಃಖಾವರಿತ ಅಸಂ
ಖ್ಯಾತ ಹೃದಯಗಳಿಗೆ ಅದು ಶಕ್ತಿ ಮತ್ತು
ಸಮಾಧಾನವನ್ನು ಕೊಟ್ಟಿತು. ಆಗಲೇ
ಎಲ್ಲರು ಮೇಲಿನ ಆತಿ ದೊಡ್ಡ ಹೊಡೆತ,
ಯಾವು ಭಾರತದ ಅಜೇಯ ಸ್ಫೂರ್ತಿ,
ಪ್ರೇಮ ಮತ್ತು ನಾಗರಿಕತೆಯ
ಪ್ರತಿಬಿಂಬವೋ? ಅನರೇ ಕೊಲೆ
ಯಾದರು. ಹೀಗಾಗಿ ಭಾರತವು ಯಾವು
ದಕ್ಕಾಗಿ ಅಷ್ಟೆಲ್ಲಾ ಶ್ರಮಿಸಿದ್ದಿತೋ, ಯಾ
ವುದು ದೀರ್ಘ ಹೋರಾಟವೊಂದರ ಪ್ರತಿ
ಫಲವೋ ಆ ಸ್ವಾತಂತ್ರ್ಯವೇ ಸ್ವಾತಂ
ತ್ರ್ಯಸಹಜ ತೇಜಸ್ಸನ್ನು ಬೀರಲಿಲ್ಲ; ಬದ
ಲಿಗದಲ್ಲಿ ಮತ್ತು ವೇದನೆಯನ್ನು ಕವ
ಯಿಸಿತು. ಗಾಂಧಿಜೀಯ ಪವಿತ್ರ ಸ್ಮರಣೆ
ಮತ್ತವರು ಕಲಿಸಿಕೊಟ್ಟ ಸಾಂಕೇತಗಳ ಮೇರಿ
ನ ಭಕ್ತಿಪೂರ್ಣ ನಿಷ್ಠೆಯ ಬಲದಿಂದ ರಾ
ಷ್ಟ್ರವೀ ಘೋರ ಬಿಕ್ಕಟ್ಟನ್ನು ಇದಿರಿಸಿತು.
ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದವನು
ಮತ್ತಿದಕ್ಕೆ ಜೀವ ಬರಿಸಿದವನು ನಮ್ಮನ್ನೆ
ಗಲಿ ಹೋಗಿ ಪೂರ್ಣ ಒಂದು ವರುಷ ಕ
ಳೆಯಿತು. ಈ ಪುಣ್ಯಮ ವರ್ಧಂತಿಯ
ದಿವಸ, ಆ ಮಹಾ ಆತ್ಮಕ್ಕೆ ಅವರೆ
ಮಹಾನ್ ಸಂದೇಶಕ್ಕೂ ನಾವು ಜತ್ಯಂತ
ಭಕ್ತಿವಿಶ್ವಾಸದಿಂದ ತಲೆಬಾಗುತ್ತೇವೆ. ಮತ್ತು ಆ ಪುಣ್ಯಾಣಾಂತನ ಗಂಭೀರ
ಪದ ಪ್ರಕಾಶಕ್ಕನುಗುಣವಾಗಿ ಭಾರತ ಜ
ನತೆ ಮತ್ತು ಮಾನವ ಜನಾಂಗದ ಸೇವ
ಯನ್ನು ಮಾಡುತ್ತು ಹೋಗುತ್ತೇವೆ,
ಎಂದು ಪ್ರತಿಜ್ಞೆ ಮಾಡುತ್ತೇವೆ.

ಗಾಂಧಿಜೀಯ ನಾಯಕತ್ವದಲ್ಲಿ ಅಹಿಂ
ಸಾತ್ಮಕವಾಗಿ ರಾಷ್ಟ್ರದ ರಾಜಕೀಯ
ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ
ನಾವೀಗ, ಜಾತಿ ಮತ ವ್ಯತ್ಯಾಸವಿಲ್ಲದೆ
ಭಾರತದ ಎಲ್ಲಾ ಜನತೆಗೂ ಸಾಮಾನ
ಸಂದರ್ಭ ಮತ್ತು ಪ್ರಗತಿದಾಯಕವಾದ
ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ
ವ್ಯಾಗಿ ಶ್ರಮಿಸಬೇಕಾಗಿದೆ. ಈ ಕಾರ್ಯ
ಕ್ಕೆ ಸಂಸ್ಪಷ್ಟ ಹೊಸ ವಿಧಾನ ಮತ್ತು ವಿ
ಧಾಯಕ ಸ್ಫೂರ್ತಿಯಿಂದ ಮಾತೃಭೂಮಿಯ ಸೇವೆ ಕೈಕೊಳ್ಳುವ ತರುಣಸ್ತೋ
ಮಗತ್ಯವಿದೆ ಭಾಂತಿದ ಜನತೆಗೆ ಸ್ವಾತಂ
ತ್ರ್ಯವನ್ನೇನೋ ದೊರಕಿದೆ. ಆದರೆ ಅದರ ಫ
ಲವನ್ನುಣ್ಣಬೇಕಾದರೆ ಅನರು ಸಮ್ಮ
ವೇಲಿಯ ಹೊಣೆ ಮತ್ತು ಕಾರ್ಯ
ಭಾರಗಳನ್ನು ನಿರ್ವಹಿಸಿಕೊಳ್ಳಬೇಕು.
ಜನತಾಸೇವೆ ಮಾಡುವುದು ಮತ್ತು
ಜನಾಬ್ಧಾರಿ ಕಾರ್ಯಭಾರಗಳನ್ನು ನಿರ್ವ
ಹಿಸುವದೇ ನಮ್ಮ ಅತಿ ಹೆಚ್ಚಿನ ಹಕ್ಕು
ಬಾಧ್ಯತೆಗಳಾಗಿದ್ದುವು, ಮತ್ತು ಮುಂದ
ಕ್ಕೂ ಆಗಬೇಕು. ಹುದ್ದೆ ಅಧಿಕಾರಕ್ಕಾಗಿ ಒದ್ದಾಡುವವರು ರಾಷ್ಟ್ರ
ಕ್ಕೆ ಧಾನಿ ಮಾಡುತಿದ್ದಾರೆ. ವರ್ಗಭೇದ
ಗಳನ್ನೂ ಜನ್ಮ, ಜಾತಿ, ಧರ್ಮ, ವರ್ಗಗಳನ್ನೂ
ಧಿಸಿ ಸಂತಾಪತ್ಯತ್ಯಾಸಗಳನ್ನೂ ನಿವಾರಿಸಿ
ಶಾಂತಿ ರೀತಿಯಿಂದ ವರ್ಗಾಪಹಿತ ನ
ಜಾಸತ್ತಾ ಸಮಾಜವನ್ನು ಸ್ಥಾಪಿಸುವರಿ
ಭಾರತದ ಎಲ್ಲಾ ಜನರೊಳಗೆ ಒಕ್ಕಟ್ಟು
ಮತ್ತು ಸದ್ಭಾವನೆಗಳನ್ನು ನಿರ್ಮಾಣಿಸು
ಕೆಡೆಗೆ ನೇವೆ ಹರಿಯಬೇಕೆಂಬುದೇ ಗಾಂ
ಧೀಜೀ ಒತ್ತಿ ಹೇಳ್ದ ಪಾಠ. ಎಲ್ಲಕ್ಕಿಂತ
ಕುಚ್ಚಾಗಿ ಗಾಂಧಿಜೀ ಕಲಿಸಿದ್ದಿಂದರೆ
ಎಲ್ಲಾ ಸನ್ನಿವೇಶಗಳಲ್ಲೂ ಎಂತ
ಬೆಲೆಯನ್ನಾದರೂ ತೆತ್ತು ಧೈರ್ಯವನ್ನುಳಿ
ರುವ ನೈತಿಕತೆಗೆ ಕಟ್ಟುಬೀಳಬೇಕೆಂಬುದ
ಅವರು ಈ ಸಂದರ್ಭದ ಬೆಳಕಿನಿಂದಲೆ
ಇಂದಿನ ಅಂತರ್ರಾಷ್ಟ್ರೀಯ ಮತ್ತು
ರಾಷ್ಟ್ರೀಯ ಸಂಕಷ್ಟ ಬಿಕ್ಕಟ್ಟುಗಳನ್ನ
ಇದಿರಿಸಿ, ಭಾರತವು ಒನ್ನ ಸ್ವತಂತ್ರ್ಯ
ಮತ್ತು ನೈತಿಕ ಮಟ್ಟದಲ್ಲಿ ಪ್ರಗತಿ ಮಾ
ಡವಂತೆಯೂ, ಗಾಂಧಿಜೀಯು ನಮಗೆ ಬಿ
ಡಗಿಸಿದ್ದ ಭಾರತವನ್ನು ನಾವು
ತನೇಕನಿಷ್ಠೆಯಿಂದ ವ್ಯಯಿಸುತ್ತೇವೆ,

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸ ಪವೀಯುವ ಸ್ವಚ್ಛ ಸಾತ್ವಿಕ ವಾತಾವರಣದಲ್ಲಿ
ಹಿತನಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao. Kunjar.
Manager.

ಚೈನಾ ಸರಕಾರದ ಅಂತಿಮಾವಸ್ಥೆ ★ ಇಂಡೋನೇಶಿಯಾ ಸಮರಸಮಸ್ಯೆ ★

ಭ್ರಾಂತಿಯ ಸಾಲಿನ ಆಂತರಿಕ ಗೊಂದಲಗಳ ಅಪಥಿ ಮುಗಿದು,ವಿದೇಶೀರಂಗದಲ್ಲಿ ಅವು ತನ್ನ ಹಕ್ಕುಬಾಧ್ಯತೆ ಮತ್ತು ಗೌರವಗಳನ್ನು ಉಳಿಸಿಕೊಳ್ಳುವ ಆಂಕವೀಗ ಆರಂಭಿಸಿದಂತಿದೆ. ಕಾಶ್ಮೀರದ ಗುಂಡು ಹಾರಾಟ ನಿಂತು, ಭಾರತ-ಪಾಕಿಸ್ತಾನಗಳೊಳಗಿದ್ದ ಮಿಕ್ಕ ವಿಷಾದಗಳ ಕುರಿತು ಒಂದು ವಿಧದ ಒಪ್ಪಂದವಾಗಿ, ಒಳಗದೆಯಲ್ಲಿ ಎಲ್ಲವೂ ಶಾಂತಗೊಳ್ಳುತ್ತಿದೆ, ಎನ್ನುವಾಗಲೇ ಇಂಡೋನೇಶಿಯಾ ಸಮಸ್ಯೆ ಮತ್ತು ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಕೊಲೆ ಧ್ವಂಸಗಳ ಪರಂಪರೆ ಎದ್ದಿದೆ. ಈ ವಿದೇಶೀ ಸಂಬಂಧದ ಸಂಕಟಗಳ ಪಾಲು ಭಾರತದಷ್ಟೇ ಪಾಕಿಸ್ತಾನಕ್ಕೂ ಇದೆ.

ಜಾಗತಿಕ ರಂಗ

ಭಾಷಾವಾರು ಪ್ರಾಂತರಚನೆಯು ಬೇಡ ಬತ್ತಿದವರು ಆವರು. ಅವನ್ನು ಮೊಳಕೆಯೊಡಿಸಿ, ಬೆಳೆಸಿದವರು ಅವರು. ಅದನ್ನೆ ಅವರು ಇಂದಿನ ಪರಿಸ್ಥಿತಿಯಲ್ಲಿ 'ಈಗ ಸಾಧ್ಯವಿಲ್ಲ' ಎನ್ನುತ್ತಿದ್ದಾರೆ. ನೆಹರು ಅದನ್ನೆ ಅನ್ನುತ್ತಿದ್ದಾರ. ಪಟೇಲ್ ಹಾಗೆ ಹೇಳುತ್ತಿದ್ದಾರೆ. ಇವರಲ್ಲಿ ಯಾರಾತನನ್ನು ಅಲ್ಲಗಳೆಯಲಿ? ನೆಹರು ನಮ್ಮ ಜನಪ್ರಿಯ ಸಾರ್ವಭೌಮ!"ಅರುವತ್ತು ವರ್ಷಸ್ಸು ನನಗೆ ತುಂಬಿತು. ಕೈಯ ಕಂಬೀಲು ಜಾರುತ್ತಿದೆ. ತರುಣವರ್ಗ ಅದನ್ನು ಹಿಡಿದು ಮುಂಬೆಳಗಲು ಮುಂದೆ ಬನ್ನಿ' ಎಂದು ತರುಣರನ್ನು ಅವರು ಕರೆಯುತ್ತಿದ್ದಾರೆ. ಅವರಲ್ಲಿ ಸಂಶಯವೆ! ಪಟೇಲರ ಮಾತನ್ನೂ ಹಲವರು ಟೀಕಿಸಿದರು. ಮುಂಬೈ ಮಹಾರಾಷ್ಟ್ರಕ್ಕೆ ಹೋಗುತ್ತದಂದು, ಸ್ವಾರ್ಥದಿಂದ ಪಟೇಲರು ಈ ನೂಕನ್ನಾಡಿದರಂದು ಅವರ ಅಂಬೋಣ. ಆದರೆ ಇದು ತೀರ ಅನ್ಯಾಯದ ಮಾತು. ಇವತ್ತು ಬಂಬಲ್ಲ, ಎರಡು ಮುಂಬೈಗಳಂಥ ನಗರಗಳನ್ನೂ ಕಟ್ಟಬಲ್ಲ ಶಕ್ತಿಯುಳ್ಳ ವ್ಯಕ್ತಿ ನಮ್ಮಲ್ಲಿ ಇರುವುದಾದರೆ, ಅವರು ಪಟೇಲರೊಬ್ಬರೆ!

ದರ್ ಸಮಿತಿ ಅದೇ ಮಾತನ್ನು ಹೇಳಿದೆ. ಐದಾರು ತಿಂಗಳ ಪ್ರವಾಸದಿಂದ, ದೇಶದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಪರಿಶೀಲಿಸಿ ಸರಕಾರದ ಮುಂದಿಟ್ಟ ಹೇಳಿಕೆ ಇದು. ದೇಶ ಇವತ್ತು ಸಾಮಿರಾರು ಸಮಸ್ಯೆಗಳನ್ನು ಇವಿರಿಸಲಿದೆ. ಈ ಸಂದರ್ಭದಲ್ಲಿ ಪ್ರಾಂತರಚನೆಯ ಪ್ರಶ್ನೆ ಅಮುಖ್ಯ.

ರಾಜಕೀಯ ಪರಿಸ್ಥಿತಿ

ದೇಶದ ಪ್ರಬಲ ಸಮಸ್ಯೆಗಳು ಇನ್ನೂ ಮುಗಿದಿಲ್ಲ. ಸಜಾನು ನುಣ್ಣದೂಡನೆ ಹೃದಯರಾವರ್ತ ಸಮಸ್ಯೆ ತೀರಿದಂತಾಗಲಿಲ್ಲ. ಅಲ್ಲಿಯ ನಿರಾಶ್ರಿತರ, ನೆಲೆದಪ್ಪಿವರ ಪುನರ್ವಸ್ತಿ ಆಗಬೇಕು. ಆರಾತಿಯ ಪರಿಸ್ಥಿತಿಯನ್ನು ನಿರ್ಮೂಲಗೊಳಿಸಬೇಕು! ಕಾಶ್ಮೀರ್ ಯುದ್ಧ ನಿನ್ನ ನೊನ್ನ ಸದ್ಯಕ್ಕೆ ಕೊನೆಗಂಡಿತನ್ನ. ಆದರೆ ಒಂದು ಬಂಡೂಕಾಲು ವರ್ಷಗಳ ನಿರಂತರ ಪರಿಶ್ರಮದಿಂದ ಹೋರಾಟ ನೂಡಿದಾಗ ಉಂಟಾದ ಕಸ್ಟನಷ್ಟಗಳನ್ನು ನಿವಾರಿಸಬೇಕು. ಇನ್ನೂ ಪಾಕಿಸ್ತಾನ ಹಿಂದೂಸ್ತಾನಸರಕಾರಗಳೊಳಗೆ ಯಾವಬಗೆಯ ಶರ್ತಗಳು ಬಂದಿಲ್ಲ; ಇನ್ನೊಂದು ಕಡೆ ಆಹಾರದ ಸಮಸ್ಯೆ. ಕಮ್ಯುನಿಸಮ್ ಪೆಡಂಭೂತವೊಂದುಳಿತೆ! ಒರ್ಯಸ್ಸ್ ಇನ್ನೊಂದೆಡೆ ಪೂರ್ವ ಬಂಗಾಲದ ಹಿಂದೂ ನಿರಾಶ್ರಿತರ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲಿದೆ. ಉಣ್ಣಲು ಅನ್ನವಿಲ್ಲ. ಉಡಲು ಬಟ್ಟೆಯಿಲ್ಲ. ಸಾಲ್ಯ ದಿಕ್ಕಿನಿಂದ ಸರಕಾರವನ್ನು ಉರುಳಿಸಲು ಪ್ರತಿಗಾಮಿ ಶಕ್ತಿಗಳು ಇದಿರುಬರುತ್ತಿವೆ. ಈ ಎಡೆಯಲ್ಲಿ ಪ್ರಾಂತರಚನೆಯ ಕಾತ್ಯ!

ಆರ್ಥಿಕ ಪರಿಸ್ಥಿತಿ!

ಸ್ವಾಂತರಚನೆಯು ಮಾತು ಆಡಿದಷ್ಟು ಸುಲಭವಲ್ಲ. ಅದನ್ನು ನಡೆಸಲು ಹಲವು ಬಗೆಯ ಬೃಹತ್ ಕಮಸ್ಯೆಗಳು ನಮ್ಮನ್ನು ಇದಿರಿಸತ್ತವೆ ಒಂದು ಪ್ರಾಂತ ಆಗಬೇಕೆಂದಾದರೆ, ಮುಖ್ಯ ಪಟ್ಟಣ, ಕೈಗಾರಿಕಾ ಕೇಂದ್ರ, ಬಂದರು-ವಿಶ್ವವಿದ್ಯಾನಿಲಯ-ಇನೆಲ್ಲ ಬೇಕು. ಇವನ್ನೆಲ್ಲ ಸಿದ್ಧಗೊಳಿಸಲು ಕೆಲವು ನೂರು, ಕೆಲವು ಸಾವಿರ, ಕೆಲವು ಲಕ್ಷ ರೂಪಾಯಿಗಳು ಸಾಲವು. ಕೋಟಿಗಟ್ಟಲೆ ಹಣವನ್ನು ನೀರಿನಂತೆ ವೆಚ್ಚಮಾಡಬೇಕಾ ಇವಕ್ಕೆಲ್ಲ ಎಲ್ಲಿಂದ ಹಣ ಬರಬೇಕು? ಬಡಪಶ್ಚಿಗಳಿಂದ ರಿಕ್ಷಿಸಿದನ್ ಮಾಡಿದ ಆಕ್ಸಿಗೆ ಹಣ ಇಲ್ಲದ್ದಿನರಕಾರ ಇಷ್ಟೆಲ್ಲ ಹಣ ಕಾಸನ್ನು ಎಲ್ಲಿಂದ ಸಂಗ್ರಹಿಸಬೇಕು?

ಭೌಗೋಲಿಕ ಸ್ಥಿತಿ

ಉತ್ತರದ ಮುಂಬೈ ಮತ್ತು ದಕ್ಷಿಣದ ಮದರಾಸು ಪಟ್ಟಣಗಳ ಪರಿಸ್ಥಿತಿಯನ್ನು ನೋಡೋಣ ಮುಂಬೈ ಭೌಗೋಲಿಕ ದೃಷ್ಟಿಯಿಂದ ನುರಾಬಿರಿಗೆ ಸಲ್ಲುತ್ತಿದ್ದು. ಮದರಾಸು ತಮಿಳರಿಗೆ, ಆದರೆ ಇವೆರಡು ಪಟ್ಟಣಗಳ ಊರ್ಜಿತಾವಸ್ಥೆಗೆ ಗುಜರಾಥಿ ಮತ್ತು ಆಂಧ್ರರು-ಅನುಕ್ರಮವಾಗಿ- ಕಾರಣರೆಂಬುದನ್ನೂ ಯಾರೂ 'ಅಲ್ಲಗಳೆಯಲಾಗದು. ಮಹಾರಾಷ್ಟ್ರರಿಗೆ ಮುಂಬೈ ಸೇರಿದರೆ ಗುಜರಾಥಿಗಳಿಗೂ ನಷ್ಟ! ಮುಂಬೈಗೂ ನಷ್ಟ! ಮುಂಬೈಗೂ ನಷ್ಟ! ಆದೇ ಆವಸ್ಥೆ ಮದರಾಸಿನಲ್ಲಿ! ಇವನ್ನೆಲ್ಲ ಎದುರಿಸಲು ತೀರದೆ? ಎಂದರೆ ತೀರಬಹುದು. ಆದರೆ ತೀರಬಹುದು ಎಂಬಾಗ ಬಹು ಪ್ರಯಾಸದಿಂದ ಎಂಬುದನ್ನು ನಾವು ಮರೆಯಬಾರದು ಬಹು ಪ್ರಯಾಸದಿಂದ; ಸ್ವಸ್ತತೆಯಲ್ಲಿ ಅಸಾಧ್ಯ!

ಭಾಷೆ!

ನಾಳೆ ಪ್ರಾಂತರಚನೆ ಆಗುವ ಕಾಲಕ್ಕೆ ವಿಶ್ವವಿದ್ಯಾಲಯಗಳಲ್ಲಿ ಸಯನ್ಸು, ಕಲಿಸುವ ಸಿದ್ಧತೆಗಳೆಷ್ಟಾಗಿವೆ? ಎಷ್ಟೋ ಕೆಮಿಸ್ಟ್ರಿ ಪೆಘಮೆಬಿಕ್ಸ್, ಪುಸ್ತಕಗಳು ಅನುವಾದಿಸಲ್ಪಟ್ಟಿವೆ. ಪ್ರಗತಿಯ ರಾಜವೀಥಿಯಲ್ಲಿ ನಾಗಾಲೋಟದಿಂದ ಓಡುತ್ತಿರುವ ಇತರ ರಾಷ್ಟ್ರಗಳೊಡನೆ ನಮ್ಮ ನಾಡು ಹೆಜ್ಜೆಯಿಕ್ಕಬೇಕಾದ್ದರೆ ಇದನ್ನು ನಾವು ಅವಶ್ಯ ಎಂದು ಪರಿಗಣಿಸಬೇಕು. ಸಯನ್ಸ್ ಪುಸ್ತಕಗಳನ್ನೂ ಅನುವಾದಿಸುವ ಕೆಲಸ ಒಂದೆರಡು ಎಂ. ಎ. ಗಳು ಕೂಡಿ, ಒಂದೆರಡು ತಿಂಗಳುಗಳಲ್ಲಿ ತೀರಿಸುವಂಥವಲ್ಲ.

ಮುಂದೇನು?

ಇತ್ತೀಚೆಗೆ ಮನುಸುಬೆದಾರ್ ಬಾರತೀಯ ರಾಜ್ಯಾಡಳಿತದ ಬಗ್ಗೆ ಐವತ್ತು ಅರವತ್ತು ಚಿಕ್ಕಪುಟ್ಟ ಸಂಸ್ಥಾನಗಳಾಗಿ ವಿಂಗಡಿಸಿ, ಒಂದೊಂದು ಸಂಸ್ಥಾನದಲ್ಲಿ ನಾಲ್ಕೈದು ಜಿಲ್ಲೆಗಳಿಗಿಂತ ಹೆಚ್ಚಾಗದಂತೆ, ನಾಡನ್ನು ಭಾಷಾನುಗುಣವಾಗಿ ವಿಂಗಡಿಸುವುದು ಅಡಳಿತ ಕ್ರಮವನ್ನು ಬಹಳ ಸುಲಭಗೊಳಿಸುತ್ತದೆ. ಎಂದಿದ್ದಾರೆ ಮಸ್ಯೂವಾಲರು ಇದಕ್ಕೆ ಪರಿಜನರಲ್ಲಿ ಮನ್ನಣೆಯಿತ್ತಿದ್ದಾರೆ.

ಈ ಎಡೆಯಲ್ಲಿ ದೇಶದ ಘಟನೆ ಸಿದ್ಧವಾಗುತ್ತಿದೆ. ಇಂದಲ್ಲ ನಾಳೆ ಆಶ್ರಿತ ಸಂಸ್ಥಾನಗಳ ಸಮಸ್ಯೆ ಮುಗಿಯುತ್ತದೆ. ಆಗ ಆರ್ಥಿಕ ಮುಗ್ಗಟ್ಟು ಕಡಿಮೆಯಾಗುತ್ತದೆ. ಹೆಚ್ಚಿನ ಸಂಸ್ಥಾನಗಳಿಗೆ, ವಿಶ್ವವಿದ್ಯಾಲಯ ಕೈಗಾರಿಕಾ ಕೇಂದ್ರ, ಮುಂತಾದವೆಲ್ಲ ತಾನಾಗಿಯೇ ದೊರಕುತ್ತದೆ. ಆಪ್ಪರ ತನ್ನಳ ನಮ್ಮ ಸ್ವಾರ್ಥವನ್ನು ಬಿಗಿ ಹಿಡಿದು, ಅಧಿಕಾರಲಾಲಸೆಯನ್ನು ಹಿಂದಿಕ್ಕಿ ತುಸು ತ್ಯಾಗ ವಹಿಸಿಕೊಳ್ಳೋಣ.

—ಆಳ್ವ ಸಂಕಪ್ಪ ಶೆ

ಕರ್ನಾಟಕದಲ್ಲೆಲ್ಲಾ ನೈಶಿಷ್ಟ್ಯಪೂರ್ಣ
ಪತ್ರಿಕೆಯೆಂದು ಶ್ಲಾಘಿಸಲ್ಪಟ್ಟ

ಅಂತರಂಗ
ವಾರ ಪತ್ರಿಕೆಯು
ಇದೀಗ 1949ರಿಂದ
ವಾರಕ್ಕೊಂದು ಪುಸ್ತಕ
ರೂಪವಾಗಿ ಪ್ರಕಟವಾಗುತ್ತಿದೆ.

ಸಂಪಾದಕರು:
ಕೆ. ಎಚ್. ಶೆಟ್ಟಿ ಮತ್ತು ಎಂ. ವಿ. ಹೆಗ್ಡೆ
ನಿರ್ವಾಹಕರು- ಕೆ. ಜೆ. ಶೆಟ್ಟಿ.

ಚಂದಾದಾರರಾಗಿ ಪ್ರೋತ್ಸಾಹಿಸಿರಿ!

ವಾರ್ಷಿಕ ಚಂದಾ ರೂ. 5 0 0 ಆರು ತಿಂಗಳಿಗೆ ರೂ. 3 0 0
ಮಾದರಿ ಪ್ರತಿಗೆ 0 3 0 ಸ್ಟಾಂಪು ಕಳಿಸುವುದು.

ಮೆನೇಜರ್, ಅಂತರಂಗ, ಉಡುಪಿ.

ಏನನ್ನೀಯ ಮಾತುಗಳು

[illegible]ನೇ ಪುಟದಿಂದ ಮುಂದುವರಿದುದು

ನೆರೆಕರೆ ಮೈತ್ರಿ ಧೋರಣೆಯನ್ನು ಚಿರಂ[illegible] ತರುತ್ತಿರುವುದು ಕಾಣಿಸುತ್ತಿದೆ. ಮುಸ್ಲಿಂ ಅಡಳತೆಯಿದ್ದ ಹೈದರಾಬಾದನ್ನು ಏ[illegible] ಪ್ರದರ್ಶನ ಮಾತ್ರದಿಂದ, ಇನ್ನೂ ಹೇ[illegible] ಬಹುದಾದರೆ ಗುಂಡು ಹಾರಾಟವಿಲ್ಲದೇನಿ[illegible] ಕೃತಶಪಡಿಸಿಕೊಳ್ಳಲು ಕಳದ ಮಳೆಗಾಲ[illegible] ಲ್ಲೇ ಭಾರತಕ್ಕೆ ಸಾಧ್ಯವಾಯಿತು. ಕಾಶ್ಮೀರದ ಅಜಾತೀಯರುಯುದ್ಧವನ್ನು ನಲ್ಲಿ ಕೊಳ್ಳುವ ಇಂದಿನ ಭಾರತ-ಪಾಕಿಸ್ತಾನ ಒಪ್ಪಂದವೆಂಬುದು, ದೇಶ ವಿಭಜನಾನಂತರ ಉಳಿದಿದ್ದ ಅತಿ ದೊಡ್ಡ ಸ್ಫೋಟಪ್ರದನ್ನು ನಿವಾರಿಸಿಕೊಂಡದ್ದಾಗಿರುವುದರ ಶಾಶ್ವತ ಸಾಮ್ಯವಸ್ಥೆಯು ಭರವಸೆನ್ನದು ಮೂಡಿಸಿದ.ಹಿಂಗಿಗಾಗಿ ಹೊಸವ[illegible] ವು ಲೋಕದ ಒಂದು ಮೂಲೆಯಲ್ಲಿ[illegible] ಶಾ ಜ್ಯೋತಿಯನ್ನು ಬೆಳಗಿಸುತ್ತಾ ಬ[illegible] ಭಿಸಿದೆ; ಸಂಯುಕ್ತ ರಾಷ್ಟ್ರ ಸಂಘಕ್ಕೆ [illegible] ಗತ್ಯ ಬಿದ್ದಿದ್ದ ಒಂದು ಪಡಯವನ್ನು [illegible] ಸೊರಕಿಸಿದೆ. ಈ ಪದ್ಧತಿಯು ಇಂದೋ[illegible] ಶಿಯಾ, ಪೆಲಸ್ತೈನ್ ಮತ್ತು ಬರ್ಲಿನ್‌ಗಿ[illegible] ವ್ಯಾಪಿಸಿಕೊಳ್ಳಲಿ"-ಅನೆಂಕಿದ 'ಜವ[illegible] ಕ್ರೀಟ್ ಕ್ರಾನಿಕ್ಲ್' ಪತ್ರಿಕೆಯ ಸಂಪಾದಕೀಯ.

"ತುಟಿ ರಂಗು ಅಥವಾ ಧಕ.ವಧಿಕ ಲೇಪನಗಳಿಂದ ಮುತಿ ಸೌಂದರ್ಯ ವೃದ್ಧಿಯಾಗದು. ಸದಭ್ಯವನೆಯ ಕಸ[illegible] ಮಿವೇ ಚಂದ. ಅದೇ ರೀತಿ ಭಾರತ ಸೌಂದರ್ಯ ತೋಭಿತವಾಗಬೇಕಾದ[illegible] ನಾವೆಲ್ಲರೂ ಸೌಂದರ್ಯತೆ, ಸದ್ಭಾವನೆ[illegible] ಳನ್ನು ಬೆಳೆಯಿಸಿಕೊಳ್ಳೋಣ"-ಬೊಂಬಾ[illegible] ಯಲ್ಲಿ ಗವರ್ನರ್ ಜನರಲ್ ರಾಜಾಜಿಯ ಮಾತು.

"ನಾವೇನೂ ಡಚ್ಚರನ್ನು ದ್ವೇಷಿಸು[illegible] ದಿಲ್ಲ. ನಾನು ದ್ವೇಷಿಸುವದೆಂದರ ವಸಾ[illegible] ತುಶಾಹಿವ್ಯವಸ್ಥೆಯನ್ನು ಸಾಮ್ರಾಜ್ಯಶಾಹಿಗಳನ್ನು ಮಾತ್ರ. ನಾನು ಡಚ್ ಜನತೆಯನ್ನು ತಿಕ್ಕಾಗಿ ದ್ವೇಷಿಸಬೇಕು? ಈಗ, ತಮ್ಮ ಸ್ವಾತಂತ್ರ್ಯಕ್ಕಾಗಿ ಒದ್ದಾಡುತ್ತಿ[illegible] ಇಂಡೋನೇಶಿಯಾ ಜನತೆಯಂತೆಯೇ [illegible] ಕಡಾ ೨೮೦ಷ್ಟು ಡಚ್ಚರೂ ವಸಾಹತು[illegible] ಹಿಗೆ ಬಲ ಬಿದ್ದಿದ್ದಾರೆ. ನಾನು ಸ್ವತಂ[illegible] ರಾಷ್ಟ್ರಗಳ ಜಾಗತಿಕ ಸಹೋದರತ್ವ[illegible] ನ್ನು ಬಯಸುವವ"-ಡಚ್ಚರಿಗೆ ಸೆರೆಯಾ[illegible] ವ ಮೊದಲು ಇಂಡೋನೇಶಿಯದ ರಿ[illegible] ಕ್ ಅಧ್ಯಕ್ಷ ಡಾ! ಸೋಯಕರ್ನೋ ಅ[illegible] ದ್ದ ಹೇಳಿಕೆ.

"ಗಾಂಧಿಜೀಯ ತ್ಯಾಗಗಳಿಂದಿಗೂ [illegible] ಸ್ಫಲವಾಗಲಾರವು. ಜಂಗೃತ ಕಾಶ್ಮೀರದ ಮೂಲಕ ಆವರ ಹಿಂದೂ ಮುಸ್ಲಿಮ್ [illegible] ಕೃತಾ ಶಿತ್ವಗಳು ಪೂರ್ಣ ವಿಜಯ ಸಾ[illegible] ವಂದಿಸಲಿವೆ. ನಮ್ಮ ಧೋರಣೆ ಕೂಡಾ [illegible] ಕ್ಯ ಮತ್ತು ಪ್ರೇಮದ ಅಸ್ತಿವಾರವನ್ನೆ[illegible] ಆಧರಿಸಿದ.ದ್ವೇಷಪೂರಿತ ಪ್ರತೀಕಾರಕ್ಕೆ[illegible] ಬೇಡರೆಂದು ಅದು ಬೇಡುತ್ತದೆ. [illegible] ಆತ್ಮಾ ಗಾಂಧಿಯವರ ಬೋಧ[illegible] ಆದಲ್ಲಿ. ಭಾಂತದಲ್ಲಿರುವ ಪ್ರತಿಯೊಬ್ಬ [illegible] ಮುಸ್ಲಿಮನ ಪ್ರಾಣ, ಸೊತ್ತು, ಗೌರವ [illegible] ಳ ನಿಮ್ಮ ಕೈಯಲ್ಲಿ ಸುರಕ್ಷಿತವಿವೆ ಎಂ[illegible] ಅಭಯವನ್ನು ಕಾಶ್ಮೀರವು ನಿಮ್ಮಿಂ[illegible] ಯಾಚಿಸುತ್ತಿದೆ"-ಕಾತಿಯಲ್ಲಿ ಕಾಶ್ಮೀರದ [illegible] ನಾಯಕ ಶೇಕ್ ಅಬ್ದುಲ್ಲಾರ ಮಾತು.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡಾಣೆ 27-1-1949

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮ್ಯಾನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-1-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮ್ಯಾನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೨೨

NAVAYUGA WEEKLY, UDIPI, S. K.
FOUNDER: Hon'ble Mr. A. B SHETTY, Health Minister, Govt. of Madras.

Vol 49
No. 22

★ ಜನತಾ ರಂಗದ ಒಳನೋಟ ★

ಭಾರತದ ಸರ್ವಸಾಮಾನ್ಯ ರಾಜಕೀಯ ವಿಷಯವು ಈ ವರೆಗೂ ಕಳಚಿದೆಯೆಂದು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಕೂಡಲೆಯುದಿರದು. ಇದೇ ಲೋಕಕ್ಕೇನೇ ಆದರ್ಶಪ್ರಾಯವಾದ ಗಾಂಧಿಜೀಯ ನಾಯಕತ್ವ, ಮತ್ತು ಅವರ ಒತ್ತಿನ ಕೆಲ ಮಂದಿ ಧುರೀಣರ ಯೋಗ್ಯತೆಗಳನ್ನು ಬಟ್ಟಬಯಲುಶಿವವುಗಳಲ್ಲಿ ಹೊಟ್ಟು ಕಂಡುಬರಿಸಿಕ್ಕು ತಿರಳು ತೋರುವುದಿಲ್ಲ.

ಕೇತಿಕಾಮಿಗಳಿದ್ದಷ್ಟು ಸಂಖ್ಯೆಯಲ್ಲಿ ಕಾರ್ಯನಿಷ್ಠರಿಲ್ಲ– ಸಂದರ್ಭಸಾಧ್ಯತೆಗೆ ಹೆಚ್ಚಿಗೆ ಹೋಗದು ಸಾರ್ವಜನಿಕಹಿತ ದೃಷ್ಟಿಯುಳ್ಳವರು ಕಡಿಮೆ– ತನ್ನ ಮನಸ್ಸಾಕ್ಷಿಯನ್ನೂ ಜನತೆಯನ್ನೂ ವಂಚಿಸುವವರೇ ಎಲ್ಲೆಲ್ಲೂ ಕಾಣಿಸುತ್ತಿದ್ದಾರೆ ಹೊರತು ಸ್ವಪ್ನವಾದ ಧ್ಯೇಯ ಧೋರಣೆಗಳಿಗೆ ಸಂಪೂರ್ಣ ಕಟ್ಟುಬಿದ್ದವರು ಅತ್ಯಪರೂಪ— ಇದು ಹಿಂದೀ ರಾಜಕೀಯದ ಸರ್ವಸಾಮಾನ್ಯ ದೃಶ್ಯ.

ಅಜ್ಞಾನ ಮತ್ತು ನಿಸ್ಸಹಾಯಕ ಸ್ಥಿತಿಯನ್ನು ದುರುಪಯೋಗಿಸಿ, ತಮ್ಮ ಸ್ವಾರ್ಥ ಸಾಧಿಸಿಕೊಳ್ಳವದು ಸುಲಭವೆಂಬುದರಿಂದಲೇ ಇಂತಹ ಅರಸ್ಥಾರ ಸದ್ಯಶಪಕ್ಷಗಳೂ ವ್ಯಕ್ತಿಗಳೂ ತಲೆಯೆತ್ತಿದೆ; ಇವುಗಳ ದೆಸೆಯಿಂದಾಗಿ ಸಾರ್ವಜನಿಕ ರಂಗದಲ್ಲಿ ಹೊಸಹೊಸ ಕೆರ ಕುಳಗಳು ಉದ್ಭವಿಸಿ ಮೊದಲೇ ಮೂಕರಾಗಿರುವ ಸಾರ್ವಜನಿಕರು ತೀರಾ ಗಲಿಬಿಲಿಗೊಳ್ಳುವಂತಾಗಿದೆ.

ನೆಯಾವರಿಸಿಕೊಳ್ಳುತ್ತಾ ಹೋಗಿ ಜನತಾ ಭವನೆಯನ್ನು ಬಹುಮಟ್ಟಿಗೆ ಮೂಲೆಗೆ ಬಿಡಿದೆ. ಆ ಜಾತೀಯತೆಯ ಪ್ರಭಾವವು ಕುತ್ತತದಿಯನ್ನು ಮುಟ್ಟಿ, ಪರಮಾವಧಿ ವಿಜಯಗಳಿ ಆದ ಮೇಲೆ ಈಗ ಅದು ಒಣ್ಣಿ ಸಾಧ್ಯವಾಗಿಂಡು ತಣ್ಣಿದಂತಿದೆ ಹೊರತು ಸೇ.ಕ ನೆಲಹಿಡಿದಿದೆ ಎನ್ನಲಾಗುವದಿಲ್ಲ.

ಸರ್ವೋದಯ

ಕೊಂಗ್ರೆಸ್ ಧ್ಯೇಯದ ಉತ್ತಮ ಸಚಿತ್ರ ವಾರಪತ್ರಿಕೆ
ಪ್ರತಿ ಶನಿವಾರ ಮಂಗಳೂರಿನಿಂದ ಹೊರಡುವುದು.

ಸಂಪಾದಕರು { ಕೆ. ಕೆ. ಶೆಟ್ಟಿ
ಯನ್. ಯಸ್. ಕಿಲ್ಲೆ

ಜಾಹೀರಾತನ್ನಿತ್ತು ಮತ್ತು ಚಂದಾದಾರರಾಗಿ ಪ್ರೋತ್ಸಾಹಿಸಲಿಚ್ಛಿಸುವವರು ವಿಳಾಸಮಾಡಿ ಈ ಕೆಳಗಿನ ವಿಳಾಸಕ್ಕೆ ಕೂಡಲೆ ಬರೆಯಬೇಕಾಗಿ ವಿನಂತಿ.

ವಾರ್ಷಿಕ ಚಂದಾ ಹಣ: 6-0-0
ವಿದೇಶೀಯರಿಗೆ 6-8-0 ಅಂಚೆ ವೆಚ್ಚ ಸಮೇತ
ಬಿಡಿ ಸಂಚಿಕೆ 0-2-0

ಸರ್ವೋದಯ ಕಾರ್ಯಾಲಯ,
ಹೆಂಪನಕಟ್ಟೆ, ಮಂಗಳೂರು.

ಸಮಸ್ಥಿತಿಗೆ, ತನ್ಮದೇ ಆದ ಬಣ್ಣ ಬಳಿದು ಅದನ್ನು ಮಸಕುಗೊಳಿಸಿ ತೋರಿಸುವದೇ ಹೆಚ್ಚಿನ ಪಕ್ಷ ಸಂಸ್ಥೆಗಳ ಉದ್ಯಮವಾಗಿದೆ. ಭವ್ಯ ಭವಿಷ್ಯವನ್ನು ಸಾಧಿಸಿಕೊಳ್ಳಲಶಕ್ಯವಾಗಿರುವ ಈ ಕಾಲನೇ ಹೀಗೆ ಅನಾವ್ಯಯವಾಗುತ್ತಿದೆ. ಈಗ ಜನತೆ ಮಂಕಾಗಿರುವಂತೆಯೇ ನಿಜವಾದ ಜನ ಹಿತಸಾಧಕ ಉಪಕರಣಗಳೂ ಮಣ್ಣುಪಾಲಿದು ಹೋಗಿವೆ ಎಂಬ ಅನುಮಾನವುಂಟಾಗುತ್ತಿದೆ.

ನಿರ್ವಿಕಾರ ಬುದ್ಧಿಯಿಂದ ರಾಷ್ಟ್ರದ ಇಂದಿನ ವಾತಾವರಣದ ಭಾಯಾಚಿತ್ರ ತೆಗೆಯೋಣ:-

ಜನಮನವನ್ನು ಜಾತೀಯತಾ ಭಾವನೆಯೂ ರಾಷ್ಟ್ರದಲ್ಲೆಲ್ಲಾ ಆರ್. ಯಸ್. ಯಸ್. ಜಂಧವರ ಸಂಖ್ಯೆ ಮತ್ತು ಚಟುವಟಿಕೆ ಹೆಚ್ಚಿದ ಪರಿಮಾಣದಲ್ಲಿರುವಂಗ್ರೆಸ್ ಪಕ್ಷಗಳ ಸಂಖ್ಯೆ ಮತ್ತು ಪ್ರಭಾವ ತಗ್ಗಿದೆ. ಕೆಲಸಗಾರ ವರ್ಗದ ಸಂಘಕ್ಕೆ ಕೆಲವು ಕಮ್ಯೂನಿಸ್ಟರಂಥವರಿಂದಾಗಿ ಕಾಂಗ್ರೆಸಿಗರಿಂದ ಆಗಿಲ್ಲ.

ಈಗ ಕೂಡಾ ಧನಿಕಾಂಧತೆಯ ಕಡೆಗೆ ಸಾಮಾನ್ಯಭೂತಿಯರುವವ್ಯ ಬಡ ಜನರ ಅಧಃಪತನ ಅಭಿವೃದ್ಧಿಯು ಕಿಂಚಿತ್ತೂ ಲಕ್ಷ್ಯವಿಲ್ಲದೆ ಆರ್. ಯಸ್. ಯಸ್. ನಂತಹ ಭವಿಷ್ಯದಂತಹ ಮತ ಮಂಕು ಸಂಸ್ಥೆಯು ತನ್ನ ಮುಸ್ಲಿಂ ದ್ವೇಷದ ಪ್ರಚಿಫಲವಾಗಿಯೇ ನೆಲಮಾಲಾಗುತ್ತಿರುವುದನ್ನು ಕಂಡು ರಾಷ್ಟ್ರದ ಕೆಲವರ ಹೃದಯ ಕರಗಿ, ಸಂಧಾನ ಸಮಜಾಯಿಸುವಿಕೆಯ ಹೆಸರಿನಿಂದ ಅವರು ಆ ಸಂಸ್ಥೆಗೆ ಕೈಕೆ.ಡಲು ಮುಂದೆ ಬಂದಿರುವದನ್ನೂ ಇದೇ ರೀತಿಯ ಸಹಾನುಭೂತಿ, ಆ ಧೋರಣೆ ಸಂಧಾನ ಸ್ವಯಕ್ಷವಾತ್ರದೂ ಕೂಲಿಗಾರ ಸಂಘ ಸಂಸ್ಥೆಗಳ ಪರವಾಗಿ ನಡೆಯದಿರುವುದನ್ನೂ ನೋಡಬಹುದು.

ಕಮ್ಯೂನಿಸ್ಟರಂಥವರು ರಾಷ್ಟ್ರೀಯ ಸಂಸ್ಕಾರವನ್ನು ತಮ್ಮಲ್ಲಿ ಅಪಾಹಾಸೆ ಮಾಡಿಕೊಂಡು ಸ್ವದೇಶ ಅಧಃಪತನ ತಮ್ಮ ಕಾಲಡಿ ಮಾತಾವರಣದ ಮೇಲೆ ಅಸಕ್ತಿ ಬಿಡದೆ ವಿದ್ವಂಸಕ ವಿಧ ನಗಳನ್ನೇ ಅನುಸರಿಸಿರುವುದರಿಂದ ಜಾತೀಯ ಹರೆಂಬುದೇನೋ ನಿಜ; ಆದರೆ ಅವರು ತಮ್ಮ ಉದ್ದೇಶ ಸಾಧನೆಗೊಂದು ನೆವನವಾಗಿ ಯಾದರೂ ಎತ್ತಿಕೊಂಡಿರುವ ಮಜದೂರ ವರ್ಗದ ಶೋಚನೀಯ ಸ್ಥಿತಿಗತಿಗಳು ಸುಧಾರಿಸಲ್ಪಡಲೇ ಬೇಕೆಂಬ ಕುರಿತಾ ಆಕ್ಷೇಪಿಸುವವರಿಲ್ಲ ಬೆಂಡ್ಡ ಜ್ಯೋತಿಗಳು ಬೇರಿರಲಾರವು. ಈ ನ್ಯಾಯವನ್ನು ಉದ್ದೇಶಪೂರ್ವಕವಾಗಿ ಮರೆತು ಕಮ್ಯೂನಿಸ್ಟ್ ನಿರ್ನಾಮದ ನೆವನದಿಂದ ಆದರ ಜತೆಯಲ್ಲೇ ರೈತ ಮಜದೂರರ ನ್ಯಾಯವಾದ ಬೇಡಿಕೆಗಳನ್ನೂ ನಿರ್ಲಕ್ಷಿಸಿ, ಅಭಿವೃದ್ಧಿಗೆ, ಕಳ್ಳ ಸಂತೆಯವರಿಗೆ, ಶ್ರೀಮಂತ ವರ್ಗಕ್ಕೆ, ನೆವ್ಯುದಿಯನ್ನು ದೊಂಕಿಸಿಕೊಟ್ಟು ಕಾಳ ತರಿ ಒಂದಲ್ಲೊಂದು ಕಾಲದಲ್ಲಿ ಚೈನಾದ ಅವ್ಯವ್ಯವೇ ಭಾರತಕ್ಕೂ ಒದಗುವ ಅಪಾಯವಿದೆ.

ಅವರೆಲ್ಲ ಸಂಮ್ಯಾಕ ಸಮಾಜದಗಳಿಗೆ ಪ್ರತ್ಯೇಕ ಮತದಾನದ ಹಕ್ಕಿನಂತೆ, ರಾಜಕೀಯದಲ್ಲಿ ಜಾತಿ, ಮತವೆಂಬುದರ ಭಾಯೆ ಕೂಡಾ ವಿನ್ನೆಡೆ ಹೊಂದದೆ ಪ್ರಜೆಗಳೆಲ್ಲರೂ ಸಮಾನರೆಂಬ ವಿಚಾರ

(ಇನ್ನೇ ಪುಟ ನೋಡಿರಿ)

ನಿಮ್ಮ ಮೆಚ್ಚಿನ
ಸುವಾಸನೆಯ ಸ್ವಾದವುಳ್ಳ
ಪ್ರಭಾತ ಚಾ ಮತ್ತು ಕಾಫಿ
ತಾಜಾ ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR (Niligiris)

ವಿವಿಧಾಡಳಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಸ್ಥಾಪನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಸರ್. ತೇಜ ಬಹದೂರ್ ಸಪ್ರುಗಳ ನಿಧನ.

ಸರ್. ತೇಜ್ ಬಹದೂರ್ ಸಪ್ರುಗಳು ಇದೇ ತಾ 20ನೇ ರಾತ್ರಿ 11-30 ತಾಸಿಗೆ ಅಲಹಾಬಾದಿನಲ್ಲಿ ತನ್ನ 74ನೇ ವಯಸ್ಸಿನಲ್ಲಿ ತೀರಿಕೊಂಡರು. ಭಾರತದ ಮಿತವಾದಿ ಪ್ರಮುಖರಲ್ಲಿ ಅಗ್ರಗಣ್ಯನೊಬ್ಬ ರಾಜಕೀಯಾದ.ನೈಮ್ಯ ರಾಜಕೀಯ ವ್ಯವಹಾರ-ರಾಜ್ಯ ರಚನಾ ಚಾತುರ್ಯ-ಕಾಯದೇ ಕಾನೂನು ಹಾಗೂ ಸಂಬಂಧದ ವಾದ ಪ್ರತಿಭೆ-ಯಾವ ಸೆಳೆತವೂ ಇಲ್ಲದೆ ತುಂಬಿ ತುಳುಕುತ್ತಿದ್ದ ಉಚ್ಚ ಸಂಸ್ಕಾರ ಮತ್ತು ಸಭ್ಯತೆ-ಈ ಮಟ್ಟಿಗೆ ಮೊದಲಿಗನನ್ನಿಸಿದ್ದ ಸುಪುತ್ರನನ್ನು ಭಾರತವು ಕಳಕೊಂಡಿತು.

ಸಪ್ರು ಜೀವನ

ತಲೆಮಾರುಗಳಿಗೆ ಮೊದಲೇ ಢಿಲ್ಲಿಯಲ್ಲಿ ನಿಂತಿದ್ದ ಕಾಶ್ಮೀರೀ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದವರಾದರು. ಇವರ ಅಜ್ಜನೌಕರಿಯಲ್ಲಿದ್ದ ಅಲಿಘಾರಿನಲ್ಲಿ 1875ನೇ ದಶಂಬರ್ 8ರಲ್ಲಿ ತೇಜ್ ಬಹದೂರ್ ಸಪ್ರುಗಳ ಜನನವಾಯಿತು. ಶಿಕ್ಷಣವೆಲ್ಲಾ ಮುಗಿದು ವಕಾಲತ್ ಪರೀಕ್ಷೆ ಕೊಟ್ಟು ಆಧಿಕಾರದಲ್ಲಿ ಮೊರದಾಬಾದಿನಲ್ಲಿ ವಕಾಲತ್ ನಡೆಸಿದ್ದರು; ಆ ಮೇಲೆ ಅಲಹಾಬಾದಿಗೆ ಬಂದು 1898ರಲ್ಲಿ ಅಲಹಾಬಾದ್ ಹೈ-ಕೋರ್ಟಿನ ವಕೀಲರಾದರು. ಕೆಲವೇ ವರುಷಗಳಲ್ಲಿ ಅವರು ಭಾರತದ ಅತಿ ಸಮರ್ಥ ವಕೀಲರೆನ್ನಿಸಿದರು. ಆವರ ವಾದ ಪ್ರತಿಭೆ ಮತ್ತು ಕಾನೂನು ಪ್ರಾಥಮಿಯ-ನ್ನು ನೋಡಿಸುವಂತಹದಿಲ್ಲ ವೆಂಬ ನಂಬಿಕೆ ಹುಟ್ಟುವಂತಾಗಿ ಅತ್ತ ಲಾಹೋರು, ಇತ್ತ ಮದ್ರಾಸ್ ಹೈ ಕೋರ್ಟುಗಳ ವರೆಗೂ ತೇಜ್ ಬಹದೂರರ ಕೀರ್ತಿ ವ್ಯಾಪಿಸಿಕೊಂಡಿತು; ಅವರ ವಕಾಲತಿನ ಬೇಡಿಕೆಗಳು ಬರಹತ್ತಿದುವು. 1916ರಲ್ಲಿ ದೇಶವನ್ನೆಲ್ಲಾ ಆಕರ್ಷಿಸಿದ್ದ 'ವಾಕಫ್ ಮೊಕದ್ದಮೆ'ಯಲ್ಲಿ ತೇಜ್ ಬಹದ್ದೂರರು ತೋರಿಸಿದ ಅಗಾಧ ಪ್ರೌಢಿಮೆಯ ನಂತರವಂತೂ ಅಖಿಲ ಭಾರತದ ಅಗ್ರಗಣ್ಯ ವಕೀಲರಲ್ಲೊಬ್ಬನನ್ನಿಸಿಕೊಂಡರು. ಅದರಲ್ಲೂ ವಕೀಲ್ ಸಪ್ರುಗಳ ವೈಶಿಷ್ಟ್ಯವೊಂದು ಅವರನ್ನು ಮಿಕ್ಕೆಲ್ಲರಿಗಿಂತ ವಿಂಗಡಿಸಿಟ್ಟಿದ್ದಿತು. ಪತ್ರಿಕಗಳ ಮೇಲೆ ಸರಕಾರವು ಹೂಡಿದ್ದ ಎಷ್ಟೋ ಮೊಕದ್ದಮೆಗಳಲ್ಲಿ ತೇಜ್ ಬಹದೂರರು ಹಲವು ಪತ್ರಿಕೆಗಳ ಕಡೆಯಿಂದ ಧರ್ಮಾರ್ಥ ವಕಾಲತ್ ನಡೆಸಿದ್ದರು; ಹಣದ ಆಭಾವದ್ಯಪೆಸೆಯಿಂದ ಒಂದು ನ್ಯಾಯವು ಮೂಲೆಪಾಲಾಗುವದೆಂಬು ತೋರಿದಾಗಲೆಲ್ಲಾ, ಹಾಗಾಗಿ ಬಿಡಬಾರದೆಂದು ವಕೀಲೀ ಆಂಗಿ ತೊಟ್ಟು ನಿಲ್ಲಲು ಸಪ್ರುಗಳು ತಯಾರಿದ್ದರು, ಕೆಂಪು ಕೋಟೆಯಲ್ಲಾಗಿದ್ದ ಚರಿತ್ರಾರ್ಹ ಆರುವಾದ್ ಹಿಂದ್ ಫೌಜು ತ್ರಿನಾಯಕರ ಪರವಾಗಿ ರಚಿಸಲ್ಪಟ್ಟ ವಕೀಲೀ ಮಂಡಲಿಯಲ್ಲಿ ಶ್ರೀ ಭುಲಾಭಾಯಿ ದೇಸಾಯಿ, ನೆಹರು, ಕಟ್ಜು, ಆಸಫ್ ಆಲಿಗಳೊಂದಿಗೆ ಸರ್. ತೇಜ್ ಬಹದೂರ್ ಸಪ್ರುಗಳಿದ್ದರು.

ಮಂದಗಾಮೀ ನಾಯಕ.

ಸರ್. ಸಪ್ರುಗಳು ವಕೀಲರಾಗಿ ಕೀರ್ತಿ ಕೇಳಿದ್ದಕ್ಕಿಂತ— ಜನ ಸೇವೆ ಮಾಡಿದ್ದ ಕ್ಕಿಂತ— ರಾಜಕೀಯ ನ್ಯಾಯವಾದಿಯಾಗಿ ಮಾಡಿರುವ ಕೆಲಸ ಮತ್ತು ಸೇವೆ ಅತ್ಯಮೋಘವಾದುದು. ಕಾಯದೇಶೀರ ವ್ಯವಹಾರಗಳ ಸಾಕಾರ-ಉದ್ಧ ಸಂಸ್ಕಾರ ಮತ್ತು ನಾಗರಿಕತೆಯ ಪ್ರತಿಮೂರ್ತಿ-ಸೌಮ್ಯ ಪ್ರಗತಿಯ ಆರಾಧಕ ಮತ್ತು ಸಂಚಾಲಕನಾಗಿದ್ದ ಸರ್ ತೇಜ್ ಸ್ವಾತಂತ್ರ್ಯಕ್ಕಾಗಿ "ಕಾಯದೇ ಭಂಗ" "ಅಸಹಕಾರ"ಮುಂತಾದ ಹೋರಾಟಗಳಿಗೆಳೆದಿದ್ದುದೂ, ಆ ವುಗಳಿಗೆ ಸದಾಕಾಲ ಅತಿ ದೂರದಲ್ಲಿದ್ದುದೂ ಸ್ವಾಭಾವಿಕ. ಆದರೆ ಅವರ ರಾಷ್ಟ್ರ ನಿಷ್ಠೆ ಮತ್ತು ದೇಶಭಕ್ತಿಯು ಎಂದೂ ಯಾವ ಕಾಂಗ್ರೆಸಿಗನಿಂದಲೂ ಪ್ರಶ್ನಿಸಲ್ಪಟ್ಟಿದಿಲ್ಲ. ಮಿಕ್ಕ ಮಂದಗಾಮೀ ನಾಯಕರಿಗಿಂತ ಸರ್. ತೇಜ್ ಬಹದೂರರು ತಮಗೆ ನೇರವಾದುದು ಹೆಚ್ಚಿಗೆ ಎಂಬುದನ್ನು ಕಾಂಗ್ರೆಸ್ ನಾಯಕರು ತಿದ್ದಾರೆ ಕಳದೆಂಡು ವರುಷಗಳಿಂದಲೂ ಸರ್. ತೇಜರು ಆನಾರೋಗ್ಯದಿಂದ ಹಾಸಿಗೆ ಹಿಡಿಯದಿರುತ್ತಿದ್ದರೆ, ಭಾರತದ ಇಂದಿನ ರಾಜ್ಯಾಂಗರಚನಾ ಕಾರ್ಯದಲ್ಲಿ ಅವರು ಅತಿ ಮುಖ್ಯ ಭಾಗ ವಹಿಸುತಿದ್ದರೆಂಬುದು ನಿಸ್ಸಂದೇಹ. ನೆಹರು, ಪಟೇಲರು ಸಲಹೆ ಮತ್ತು ಸಹಾಯಕ್ಕಾಗಿ ಜೀಲೆಯವರಿಗಿಂತ ಹೆಚ್ಚಾಗಿ ಸರ್. ತೇಜ್ ಬಹದೂರರ ಕಡೆಗೆ ನೋಡುವರೆಂತಾಗುತಿತ್ತು. ಆದರೆ ದುರ್ದೈವವಶಾತ್ ಭಾರತದ ಪಾರತಂತ್ರ್ಯ ರೋಗ ನಿವಾರಣೆಗೊಳ್ಳಲಾರಂಭಿಸುವಾಗಲೇ ರೋಗ ಪೀಡೆಗೊಳಗಾಗಿದ್ದ ಸರ್. ತೇಜ್ ಕೊನೆಗೆ ಎದ್ದು ಹೋದರೇ ಹೊರತು ಎದ್ದು ಬರಲಿಲ್ಲ!

ಘನಸ್ಥಾನಾಪನ್ನ.

1912ರಿಂದಲೂ ಸರ್. ತೇಜ್ ಬಹದೂರರು ಭಾರತದ ರಾಜಕೀಯದಲ್ಲಿ ದುಡಿಯುತ್ತಾ ಬಂದಿದ್ದರು. ಪ್ರಥಮತಃ ಸಂಯುಕ್ತ ಪ್ರಾಂತೀಯ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯನಾದರು. ಆ ಮೇಲೆ 'ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್' ಸದಸ್ಯನಾದರು. 1920ರಲ್ಲಿ ಭಾರತ ಸರಕಾರದ ಕಾನೂನು ಸದಸ್ಯನಾಗಿ ನೇಮಕಗೊಂಡಿದ್ದರು. "ಮತ ಪದ್ಧತೀ ಕಮಿಶನ್" ನ ಸದಸ್ಯನಾಗಿ ಕೆಲಸ ಮಾಡಿದ್ದರಲ್ಲದೆ ಲೋರ್ಡ್ ಸೆಲ್ಬೊರ್ನ್ ಸಮಿತಿಯ ಮುಂದೆ ಸಾಕ್ಷ್ಯವೀಯಲು ಹಿಂದೀ ಮಂದಗಾಮೀ ಶಿಷ್ಟ ಮಂಡಲದಲ್ಲಿ ಸೇರಿ ಲಂಡನಿಗೆ ಹೋಗಿದ್ದರು. ಮಂದಗಾಮಿಪಕ್ಷದಲ್ಲಿ ಸೇರಿಕೊಂಡ್ಯುಆದಿಯಿಂದಲೂ ಅದರ ಆತ್ಯಂತ ಪ್ರಭಾವಶಾಲಿ ನಾಯಕರಲ್ಲೊಬ್ಬನಾಗಿದ್ದು, ಎರಡು ಬಾರಿ ಆ "ಲಿಬರಲ್ ಫೆಡರೇರಿನಿನ" ಅಧ್ಯಕ್ಷನಾಗಿ ಕೆಲಸ ಮಾಡಿದ್ದರು. 1923ರಲ್ಲಿ ಲಂಡನಿನಲ್ಲಿ ನೇರಿದ್ದ ಸಾಮ್ರಾಜ್ಯ ಸಮ್ಮೇಲನಕ್ಕೆ ಭಾರತ ಸರಕಾರವು ತನ್ನ ಪ್ರತಿನಿಧಿಯಾಗಿ ಕಳುಹಿಸಿದ್ದುದು ಸರ್ ತೇಜರನ್ನು. 1924ರಲ್ಲಿ 'ಮಡ್ಡಿಮೇನ್ ಸುಧಾರಣಾ ಪರಿಶೀಲನಾ ಸಮಿತಿ'ಗೆ ಸರಕಾರವು ಸೇರಿಸಿಕೊಂಡದ್ದೂ ಸರ್. ಸಪ್ರುಗಳನ್ನೇ. ಭಾರತದ ಸ್ವರಾಜ್ಯ ಸಂಬಂಧವಾಗಿ ಲಂಡನಿನಲ್ಲಿ ನೇರಿದ ಮೂರು ದುಂಡುಮೇಜು ಸಮ್ಮೇಲನಗಳಗೂ ಸರ್. ತೇಜ್ ಬಹದೂರ್ ಸಪ್ರುಗಳು ಪ್ರತಿನಿಧಿಯಾಗಿದ್ದರು. ಅಂತೆಯೇ 'ಜೈಂಟ್ ಪಾರ್ಲಿಮೆಂಟರೀ ಸಮಿತಿ'ಯ ಮತಸಾಲ್ಯವುಳ್ಳ ಗಣ್ಯನಾಗಿದ್ದು, ಈ ತನಕವೂ ಅಸ್ತಿತ್ವದಲ್ಲಿರುವ '1935ನೇ ಭಾರತ ರಾಸನ' ತಯಾರಿಯಲ್ಲಿ ಸರ್. ಸಪ್ರುಗಳ ಕೈವಾಡವು ಬಹಳವಿದ್ದಿತು. ಹಲವು ಪ್ರಾನುಪ್ಯ ಸಮ್ಮೇಲನಗಳ ಅಭ್ಯೇಕ್ಷತೆಯನ್ನೂ ಸರ್. ತೇಜ್ ಬಹದೂರ್ ವಹಿಸಿದ್ದರು.

ಪ್ರಮುಖ ಸಂಧಾನಕರ್ತ

ಮಂದಗಾಮಿ ಪಕ್ಷದ ಇತರ ನಾಯಕರೊಂದಿಗೆ ಮತಭೇದಗೊಂಡು 1931ರಲ್ಲಿ ಆ ಪಕ್ಷದಿಂದ ದೂರವಾದ ಸಪ್ರುಗಳು ಕೊನೆಯ ವರೆಗೂ ಸಕ್ರಾಂತೀತ, ಆದರೆ ಸರ್ವಮಾನ್ಯ ಪ್ರಮುಖನಾಗಿದ್ದರು. ಸರ್. ಸಪ್ರುಗಳು ಜೀವಿಸಿದ್ದಕಾಲ ಬೇರೆ, ಅವರಿಗೆ ಹೇಳಿಸಿದ್ದಕಾಲ ಬೇರೆಯಾಗಿದ್ದುದರಿಂದ ಅವರ ಯೋಗ್ಯತೆ ಸರ್ವ ಪ್ರಥಮ ಸ್ಥಾನ ಪಡೆಯಲಿಲ್ಲ. ಸ್ವಾತಂತ್ರ್ಯ ಹೋರಾಟ ಯುಗದಲ್ಲೇ, ಆ ಕೋಲಾಟದ ಸ್ಫೂರ್ತಿಯಿರದ ಇವರ ಜೀವನವು ಸಂಪಕ್ವವಸ್ಥೆಯಲ್ಲಿದ್ದಿತು. ಆ ಸ್ವಾತಂತ್ರ್ಯ ದೊರೆತು, ಸ್ವಾತಂತ್ರ್ಯ ರಚನೆ, ವ್ಯವಸ್ಥಾ ಪಾಲನೆ ಮತ್ತು ಅಧ್ಯತೆಯ ಅವಶ್ಯಕತೆ ಬೀಳುವ ಕಾಲ ಬರುವಾಗ ಅವೆಲ್ಲವೂ ಇದ್ದ ಈ ಮಹಾನುಭಾವ ಹೊರಟು ಹೋದರು. ಆದರೂ ಸರ್. ಸಪ್ರುಗಳ ವಿಶೇಷ ವ್ಯಕ್ತಿತ್ವವು ತನಗೆ ಪ್ರತಿಕೂಲವಿದ್ದ ಆ ಕಾಲದಲ್ಲೂ ಅನನ್ಯಸ್ಥಾನ ಗಳಿಸಿಕೊಂಡ ನಿದರ್ಶನಗಳಿವೆ. ಆಕ ಪ್ರಜಂಡಉಪ್ಪಿನ ಸತ್ಯಾಗ್ರಹವೆಬ್ಬಿಸಿ, ಯೆರವಾಡಾ ಸೆರೆಮನೆ ಸೇರಿದ್ದ ಗಾಂಧಿಜೀ ಮತ್ತು ವೈಸರಾಯಿ ಲೋರ್ಡ್ ಇರ್ವಿನರ ನಡುವೆ ಓಡಾಡಿ, ಪೂರ್ವ ಪಶ್ಚಿಮದಷ್ಟು ಸರಪ್ಪಂ ವಿರೋಧವಿದ್ದ ಕಾಂಗ್ರೆಸ್ ಮತ್ತು ಸರಕಾರಗಳ ನಡುವೆ ಒಂದು ಮಧ್ಯ ಗೆರೆ ಕಂಡು ಹಿಡಿದು ಸಂಧಾನ ಮಾಡಿಸಿ ಜಾಕಿದವರು ಡಾ. ಜಯಕರರ ಜತೆಗೂಡಿ ಸರ್. ತೇಜ್ ಬಹದೂರರೇ. ಅದರ ಸಪ್ರದಾಮವಾಗಿಯೇ ಚರಿತ್ರಾರ್ಹ "ಗಾಂಧೀ-ಇರ್ವಿನ್ ಒಪ್ಪಂದ" ವಾಯಿತು. ಎರಡನೇ ದುಂಡು ಮೇಜು ಸಮ್ಮೇಲನಕ್ಕೆ ಗಾಂಧಿಯವರು ಹೋಗುವಂತಾಯಿತು. ಆ ಮೇಲೆ 1942ರ 'ಕ್ವಿಟ್ ಇಂಡಿಯಾ' ಚಳವಳಿದಲ್ಲಿ ಗಾಂಧಿಜೀ ಮೊದಲಾದ ಕಾಂಗ್ರೆಸಿಗರೆಲ್ಲರೂ ಜೈಲು ಪಾಲಾಗಿ ರಾಷ್ಟ್ರವು ಅನಾಯಕ ಸ್ಥಿತಿಯಲ್ಲಿದ್ದಾಗ ಢಿಲ್ಲಿಯಲ್ಲಿ ಪಕ್ಷಾತೀತ ಪ್ರಮುಖರ ಸಮ್ಮೇಲನ ನೇರಿಸಿ, ಕಾಂಗ್ರೆಸಿಗರ ಬಿಡುಗಡೆಗಾಗಿ ಬೆಳವಳಿಸಿದವರು ಸರ್. ಸಪ್ರುಗಳೇ. ಇಂತಹ ಕಾರ್ಯಗಳಲ್ಲಿ ಸರ್. ತೇಜರಿಗಿದ್ದ ಯೋಗ್ಯತೆ ಬೇರಾರಿಗೂ ಇರಲಿಲ್ಲವೆನ್ನಬಹುದು. ಬ್ರಿಟಿಷ್ ಸರಕಾರಕ್ಕೆ ಇವರ ನ್ಯಾಯ ಬುದ್ಧಿ, ಸಂಸ್ಕಾರ ಮೇಲ್ಮೆ ಮತ್ತು ಮಿತಗಾ ಮಿತ್ವದ ಮೇಲೆ ನಂಬಿಕೆಯಿದ್ದಂತೆಯೇ ಕಾಂಗ್ರೆಸಿಗರಿಗೆ ಇವರ ದೇಶಪ್ರೇಮ ಮತ್ತು ರುಪ್ಪ ವ್ಯವಹಾರದ ಕುಂತು ಅಚಲ ವಿಶ್ವಾಸವಿದ್ದುದರಿಂದ ಇವರ ನಾಡಿಗೆ ಇಕ್ಕಡೆಯವರಿಂದಲೂ ಬೆಲೆ ಬರುತಿತ್ತು. ರಾಜಕೀಯ, ಕಾನೂನು, ಮತ್ತು ಅಧಿಕಾರ ರಂಗಗಳಲ್ಲಿ ಮಾತ್ರ ಸರ್. ತೇಜರು ಸ್ಥಾನ ಮಾನ ಗಳಿಸಿಕೊಂಡಿದ್ದುದ್ದಲ್ಲ, ಸಾಹಿತ್ಯ ರಂಗದಲ್ಲೂ ಅವರು ದುಡಿದಿದ್ದಾರೆ. ಬ್ರಾಹ್ಮಣನಿದ್ದರೂ ಸಂಸ್ಕೃತದಲ್ಲಲ್ಲದ ಪ್ರಾಥಮಿ ಅವರಿಗೆ ಉರ್ದು ಮತ್ತು ಪರ್ಶಿಯನ್ ಭಾಷೆಗಳಲ್ಲಿದ್ದಿತು. ಅಲಹಾಬಾದಿನ ಅವರ ಮನೆಯೆಂಬುದು ಉರ್ದು ಪಂಡಿತ ಮುಸಲ್ಮಾನರ ಆಶ್ರಯಸ್ಥಾನವಾಗಿದ್ದು, ಹಿಂದೂ ಮುಸ್ಲಿಂ ಭಿನ್ನತೆಯನ್ನೇ ತನ್ನ ಜೀವನವಾನದಲ್ಲರಿಯದ ಸ್ನೇಹಿಳಂಕಿದ್ದರು ಸರ್. ಸಪ್ರು. ಔದಾರ್ಯ, ದೊಡ್ಡ ಮನಸ್ಸು, ಸಮಾನತ್ವ, ಶಾಂತಿವ್ಯವಹಾರ, ಸಹನೆ ಮತ್ತು ಸರ್ವತೋಮುಖ ಪ್ರತಿಭೆಯು ಮೂರ್ತಿಯಾಗಿದ್ದ ಸರ್. ತೇಜ್ ಬಹದೂರರ ವಿಯೋಗದಿಂದ ಭಾರತ ಜನತೆಯ ಒಂದು ಅಮೂಲ್ಯ ಸ್ಥಾನ ನಿಜಕ್ಕೂ ಬರಿದಾಯಿತು. ತನ್ನ 35ನೇ ವಯಸ್ಸಿನಲ್ಲೇ ಪತ್ನಿಯನ್ನು ಕಳಕೊಂಡಿದ್ದ ಸರ್. ತೇಜರು ಮೂರು ಗಂಡು ಮಕ್ಕಳಲ್ಲಿ ಹಿರಿಯವ ಅಲಹಾಬಾದ್ ಹೈ ಕೋರ್ಟಿನ ಜಡ್ಜ್-ಎರಡನೆಯವ ಅಲಹಾಬಾದ್ ಹೈಕೋರ್ಟಿನ ಒರ್ವ ಬ್ಯಾರಿಸ್ಟರ್- ಮೂರನೆಯವ ಐ. ಸಿ. ಎಸ್- ಅಧಿಕಾರಿ. ಇವರಿಗೆ ಇಬ್ಬರು ಹೆಮ್ಮಕ್ಕಳಿದ್ದು ಮಕ್ಕಳ ಮಕ್ಕಳ ದೊಡ್ಡ ಕುಟುಂಬವಿದೆ. ಓರ್ವ ಘನವಂತ ಕಳದುಹೋದ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಸಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಶಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರುಪಾಯಿಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ- ಪೋಣಸಿಪಂಕಿರುವ ನಮ್ಮ ಶಾಖೆಗಳು ದಪ್ಪುಡದ ಆದಕೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕ ಪಕ್ಕ ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೈಪ್ಲವಾಟೆಗಳಿರುವಲ್ಲಿ-- ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವ್ಯೆಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರುಪಾಯಿಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತವೆ- ಅದರಿಂದ ನಿಮಗೆ ಸಮಯವೂ, ಹಣವೂ ಉಳಿಯುವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಪಾಯಿಗಳ ಕದಿಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ಹರಿಯುವುದು.

The Canara Bank Limited.

ESTD: 1906.

ಮದ್ರಾಸ್ ಶಾಸನ ಸಭೆಯಲ್ಲಿ--

ಕಳೆದ ದಿನಗಳಲ್ಲಿ ಮದ್ರಾಸಿನ ಶಾಸನ ಸಭೆಗಳಲ್ಲಿ ಕೆಲವು ಪ್ರಾಮುಖ್ಯ ಮಸೂದೆಗಳು ಮಂಜೂರಾಗಿವೆ; ಇನ್ನು ಕೆಲವು ಮುಂದೆ ಬಂದಿವೆ. ಮಂಜೂರಾಗಿ ಹೋದ 'ಕುದುರೆ ಜೂಜಿನ ಪ್ರತಿಬಂಧಮಸೂದೆ' 'ಅಳಿಯ ಸಂತಾನ ಮಸೂದೆ' ಮುಂತಾದುವುಗಳಿಗೂ ಪೂರ್ವಸಿದ್ಧತೆಯಾಗಿರುವ ವಿಧೇಯಕಗಳನ್ನೂ 'ಎಂಡೋಮೆಂಟ್'ನೊಳಗೆ ಸೇರಿಸಿಕೊಳ್ಳುವ ಮಸೂದೆಯಂಥವುಗಳಿಗೂ ಕೆಲವಾರು ವಿಶೇಷಾಸಕ್ತಿಯನ್ನು ನಿರ್ಮಿಸಿವೆ. ಶಾಸನ ಸಭೆಗಳ ಕಾಂಗ್ರೆಸ್ ಪಕ್ಷೀಯರ ಸಭೆಯಲ್ಲಿ ಮಸೂದೆಗಳ ಪೂರ್ವ ತಯಾರೀ ಚರ್ಚೆಗಳು ಸಾಕಷ್ಟು ನಡೆದಿದ್ದುವು. ದಕ್ಷಿಣ ಕನ್ನಡದ ವಿಧಾನಾ ಪ್ರತಿನಿಧಿಯು ಕುರಿತು ಶ್ರೀ ಕೆ. ಆರ್. ಕಾರಂತರು ಸರಕಾರದ ಲಕ್ಷ್ಯವನ್ನೆಳೆದಿದ್ದರೆಂದೂ, 'ಸಂಗ್ರಹಿತ ಧಾನ್ಯಗಳ ಸಂರಕ್ಷಣೆಯಾಗುವಂತೆ ಸರಕಾರವು ಯೋಗ್ಯ ಲಕ್ಷ್ಯವಿಡಬೇಕಾಗಿದೆ' ಎಂದು ಆಹಾರ ಮಂತ್ರಿ ಡಾ। ಯಸ್. ಯಸ್. ರಾಜನರು ಆಶ್ವಾಸನೆಯಿತ್ತರೆಂದೂ ತಿಳಿದುಬರುತ್ತದೆ.

ಅಳಿಯ ಸಂತಾನ ಮಸೂದೆ

ಈ ಮೊದಲೇ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಪಾಸಾಗಿದ್ದ 'ಅಳಿಯ ಸಂತಾನ ಮಸೂದೆ'ಯು ಯಾವ ವಿರೋಧವೂ ಇಲ್ಲದೆ ಇದೇ ತಾ 18ರಲ್ಲಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲೂ ಮೂರನೇ ವಾಚನವೆ ಮುಗಿಸಿ ಮಂಜೂರಾಗಿದೆ. ಈ ಮಸೂದೆಯನ್ನು ಚರ್ಚೆಗೆತ್ತಿಕೊಳ್ಳುವ ಸೂಚನೆ ಮುಂಬಿಡುತ್ತಾ ಕಾನೂನು ಮಂತ್ರಿ ಮತ್ತು ಇದರ ಪರಿಶೀಲನಾ ಸಮಿತಿ ಅಧ್ಯಕ್ಷರಾಗಿ ದ. ಕ. ಜಿಲ್ಲೆಯವರಾದ ಅಳಿಯ ಸಂತಾನ ಸಂರಕ್ಷಣಾ ಮಸೂದೆ' ಯೀಗ ಕ್ರಮ ಪ್ರಕಾರ ಮದ್ರಾಸ್ ಕೌನ್ಸಿಲು ಮತ್ತು ಎಸೆಂಬ್ಲಿ, ಎರಡರಲ್ಲೂ ಪಾಸಾಗಿದೆ. ಇನ್ನು ನಿಯಮಬದ್ಧವಾಗಿ ಗವರ್ನರ್ ಹಾಗೂ ಗವರ್ನರ್ ಜನರಲರ ಸಹಿ ಬಿದ್ದು ಅದು ಕಾನೂನಾಗಿ ಜಾರಿಗೆ ಬರುವುದೊಂದೇ ಬಾಕಿ. ಕೇವಲ ದಕ್ಷಿಣ ಕನ್ನಡ ಜಿಲ್ಲೆಯ ಅಳಿಯ ಸಂತಾನ ಕಟ್ಟಳೆಗಾಚರಿಸುವ ಜನತೆಯ ಪಾಲಿಗೆ ದಿದ್ದರೂ ಈವರ್ಗದವರ ಜೀವನವಿಧಾನಗಳಿಗೇನೇ ಸಂಬಂಧಿಸಿದ ಈ ಮಸೂದೆಗೆ ಮದ್ರಾಸಿನ ಶಾಸನ ಸಭೆಗಳಲ್ಲಿ ಯಾವ ವಿರೋಧವೂ ಇರಲಿಲ್ಲ. ಕಲಮುವಾರಾಗಿ ಅನ್ನೆ ಸವಿವರ ಪರಿಶೀಲನೆ ನಡೆಸುವ ಆವಶ್ಯಕತೆ ಕೂಡಾ ಬೀಳಲಿಲ್ಲ. ಮಿಕ್ಕವರಿಗಷ್ಟೊಂದು ಹಾಗೂ ಅನಾಸಕ್ತಿಯ ವಿಷಯವಾಗಿರುವ ಈ ಸಂಧಾರಣೆಯ ಸಂಬಂಧ ದಕ್ಷಿಣಕನ್ನಡದ ಸದಸ್ಯರಿಗೆ ಮಾತ್ರ ಅಂಥದೆಲ್ಲರೂ ಒಹುತೇಕವಾಗಿ ಏಕಭಿಪ್ರಾಯದಲ್ಲದ್ದಿದರೆನ್ನಬಹುದು. ಈಗ ಮಂಜೂರಾಗಿರುವ ಮಸೂದೆಯ ರೂಪರೇಷೆಯನ್ನರಿಯಲು ಇದಕ್ಕೆ ಸಂಬಂಧಪಟ್ಟ ಜನರು ಇಲ್ಲಿ ಚಡಪಡಿಸುತ್ತಿರುವುದು ಮೇಲಿಂದ ಸಂಬಂಧಿಸಿದ ಜನಸಾಮಾನ್ಯರಿಗೂ ಅದರ ಸರಿಯಾದ ಸರಿಚಿಯವನ್ನು ಸರಕಾರದಲ್ಲಿ ಮಾಡಿಕೊಡುವವರ್ತವ್ಯವಿತ್ತೆಂಬುದು ಒಡೆದು ತೋರುತ್ತಿದೆ. ಹೀಗೇಕೆ ಮಾಡಿಲ್ಲವೋ ತಿಳಿಯದ!

ಹಿಂದೂ 'ಎಂಡೋಮೆಂಟ್ಸ್' ಮಸೂದೆ

'ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ಧರ್ಮಾರ್ಥಗಳ (ತಿದ್ದುಪಡಿ) ಮಸೂದೆ'ಯೊಂದನ್ನು ಮದ್ರಾಸ್ ಸರಕಾರವು ತಯಾರಿಸಿದ್ದು ಅದು ಶಾಸನಸಭೆಯ ಮುಂದಿಬರುವ ಮೊದಲು ಕ್ರಮಬದ್ಧವಾಗಿ ಶಾಸನಸಭಾ ಕಾಂಗ್ರೆಸ್‌ಪಕ್ಷೀಯ ಸದಸ್ಯರ ಸಭೆಯಲ್ಲಿ ಪರ್ಯಾಲೋಚಿಸಲ್ಪಡುತ್ತಿದೆ. ಈ ನೂತನ ಮಸೂದೆಯ ಪ್ರಕಾರ ಪ್ರಾಂತ್ಯದ ಎಲ್ಲಾ ಮಠಗಳ ಸಮೇತ, ಎಲ್ಲಾ ಧಾರ್ಮಿಕ ಉಂಬಳಿ ಸದ್ಧ ಸಂಸ್ಥೆ ಮತ್ತು ದೇವಸ್ಥಾನಗಳ ಪ್ರತ್ಯಕ್ಷಾಧಿಕಾರ ವಹಿಸುವ ಹಕ್ಕು ಸರಕಾರದ್ದಾಗತ್ತದೆ. ಇದಕ್ಕೆ ಕಾಂಗ್ರೆಸ್ ಪಕ್ಷದ ಶಾಸನ ಸಭಾ ಸದಸ್ಯರಲ್ಲಿ ಹಲವರು ಪುಬಲಾಪ್ಷೇಸವನ್ನು ಹೂಡಿದ್ದಾರೆ. ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೀವ್ರವಾದ ವಿವಾದಗಳು ನಡೆದಿವೆ ಘಟನಾ ಸಮಿತಿಯೀಗ ತಯಾರಿಸುತ್ತಿರುವ ಹೊಸ ರಾಜ್ಯಾಂಗ ಶಾಸನದ ಮೂಲ ಭೂತ ಹಕ್ಕು ಬಾಧ್ಯತೆಗಳ ರಕ್ಷಣಾ ಕಲಮುಗಳನ್ನೇ ಈ ಮಸೂದೆಯು ವಿರೋಧವಿದೆಯೆಂದು ಶ್ರೀ. ಎ. ವೈದ್ಯನಾಥ ಅಯ್ಯರಂತಹ ಕಾಂಗ್ರೆಸ್ ಎಂ. ಎಲ್. ಎ. ಗಳು ಪ್ರಬಲವಾಗಿ ಪ್ರತಿಭಟಿಸುತ್ತಿದ್ದಾರೆ. ಮಠಗಳ ಪರವಾಗಿ ಶ್ರೀಗಳಾದ ಟಿ. ಆರ್. ವೆಂಕಟರಾಮ ಶಾಸ್ತ್ರಿ, ಎಸ್. ವಂದಾಚಾರಿ, ಅಲ್ಲಾಡಿ ಕೃಷ್ಣ ಸ್ವಾಮಿ ಅಯ್ಯರ್, ಯಸ್. ಚಂದ್ರ ಶೇಖರ ಅಯ್ಯರ್, ಕೆ. ಬಾಲ ಸುಬ್ರಹ್ಮಣ್ಯಂ ಅಯ್ಯರಂತಹ ಪ್ರತಿಷ್ಠಾವಂತರು ಪ್ರಧಾನಮಂತ್ರಿ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರನ್ನು ಭೇಟಿಯಾಗಿ, ಸವಿವರವಾದ ವಿನ್ನವತ್ತಳೆಯೊಂದನ್ನೊಪ್ಪಿಸಿದ್ದಾರೆ. ಈಗಮುಂದೆ ಬಂದಿರುವ ಎಂಡೋಮೆಂಟ್ ಮಸೂದೆಯಿಂದ ಮಠಗಳು ಸರಕಾರದ ಅಧೀನ ಶಾಖೆಗಳಾಗಿ ಮಾರ್ಪಡುವವೆಂದೂ ಅವುಗಳ ಪಾವಿತ್ರ್ಯಮತ್ತು ಘನತೆಗಳೆಲ್ಲಾ ಮಾಯವಾಗಿ ನವೆಂದೂ, ಹಿಂದೂ ಜನತಾಂಗಕ್ಕೆ ಅವುಗಳ ಮೇಲಿರುವ ಗೌರವ ಮತ್ತು ಭಕ್ತಿಗೆ ದೊಡ್ಡ ಧಕ್ಕೆ ಕೊಟ್ಟಂತಾಗುವವೆಂದೂ ನಿವೇದಿಸಿಕೊಂಡಿದ್ದಾರೆ. ಈ ಶಾಸನವು ತಮ್ಮ ಅಸ್ತಿತ್ವಕ್ಕೇನೇ ಸಿಡಿಲಿನಂತೆರಗುವದೆಂಬ ಭೀತಿಯಿಂದ ವಿರಾಧಿನತಗಳೆಲ್ಲಾ ಚಳವಳಿಸಹಸ್ತರಾಗುವದು ಕಾಣಿಸುತ್ತಿದೆ 'ಅಬಲ ಭೂತ ಸನಾತನ ಧರ್ಮಾಜಾಣ ಸಂಘ'ದಸ್ಯಾಪಕರೂ ವ್ಯವಸ್ಥಾಪಕರೂ ಆಗಿರುವ ಶ್ರೀ ಸತ್ಯಾನಂದ ಸರಸ್ವತೀ ಸ್ವಾಮಿಗಳವರು 'ಯಾವ ಕಾರಣದಿಂದಾದರೂ ಈ ಮಸೂದೆ ಮುಂದೆ ಬಂದರೆ, ಯಾರ ಮೇಲಾ ಯಾವ ದುರ್ಭಾವನೆಯನ್ನೂ ಇಡದೆ ಸರಕಾರೀ ಕಾರ್ಯಾಲಯದಿಂದಲ್ಲೇ ಕಾಲತ್ತು, ನನ್ನೀ ಸ್ಥೂಲ ಶರೀರವನ್ನು ಜೀವಂತ್ಯ ಬಿಟ್ಟು ಹೋಗುವ ವರೆಗೂ ಶ್ರಮವನ್ನು ಕೂಡಾ ತ್ಯಜಿಸದೆ ಉಸಿರಾಡುವವರೆಗೂ ಸೆಣಸುತ್ತೇನೆ' ಎಂದು ತನ್ನ ರವಷ ಜಾಹೀರು ಮಾಡಿದ್ದಾರೆ. ಮಠಗಳ ಇಂದಿನ ದುರವಸ್ಥೆಯ ಮತ್ತು ದುರ್ಗತಿಯನ್ನು ನಿವಾರಿಸಲು ಈ ಮಸೂದೆಯು ಅಗತ್ಯವೆಂದೂ, ಹೊಸ ರಾಜ್ಯಾಂಗ ಶಾಸನದ 'ಧಾರ್ಮಿಕ ಸ್ವಾತಂತ್ರ್ಯದ ಅಥವಾ 'ಮೂಲಭೂತ ಹಕ್ಕು'ಗಳ ಕಲಮಿಗೆ ಇದು ವಿರೋಧವಲ್ಲವೆಂದೂ ಸರಕಾರದ ವಾದವಿದೆ. ವಿರಾಧಿಸಿಲಿಗಳ ಪರವಾಗಿ ಕಾಂಗ್ರೆಸ್ ಸದಸ್ಯರ ಮೂಲಕವೂ ಮುಂದೆ ಬಂದಿರುವ ಇಂದಿನ ಪ್ರಬಲ ವಿರೋಧದಿದಿರಲ್ಲಿ ಇದರ ಭವಿಷ್ಯ ಹೇಗಾಗುವದೋ ನೋಡಲಿಕ್ಕಿದೆ. ಮಠಗಳಲ್ಲಾಗುತ್ತಿರುವ ಇಂದಿನ ಅನಾಚಾರ, ಅನಾವ್ಯಯಗಳನ್ನು ಕಾಣುವಾಗ ಅವುಗಳ ಮೇಲೆ ಎಂತಹ ಕಠೋರ ಅಂಕುಶ ಬೀಳುವದೂ ಹೆಚ್ಚಲ್ಲವನ್ನಿಸುತ್ತಿದೆ.

ಕುದುರೆದ್ಯೂತ ಪ್ರತಿಬಂಧ

ಈ ಬಾರಿಯ ಮದ್ರಾಸ್ ಎಸೆಂಬ್ಲಿಯು ಮಂಜೂರು ಮಾಡಿಕೊಂಡಸುದ್ರಾಸ್ ಸಿಟಿ ಪೋಲೀಸ್ ಮತ್ತು ಜುಗಾರಿ (ತಿದ್ದುಪಡಿ) ಮಸೂದೆಯು' ಇನ್ನೊಂದು ಮುಖ್ಯ ಸುಧಾರಣೆ. ಇನ್ನದು ಕೌನ್ಸಿಲಿನಲ್ಲಿ ಮಂಜೂರಾಗಿ ಈ ಮೇಲೆ ಶಾಸನಾನಾಗಲಿದೆ. ಈ ಮಸೂದೆಯನ್ವಯ ಕುದುರೆ "ರೇಸಿ"ನ ಮೇಲೆ ಹಣ ಕಟ್ಟುವದು ನಿಷೇಧಿಸಲ್ಪಡುತ್ತದೆ. ತಪ್ಪಣಿಗಾಮವಾಗಿ ಮದ್ರಾಸ್ ಪ್ರಾಂತ್ಯದಲ್ಲಿ 'ಕುದುರೇ ರೇಸ್' ಎಂಬುದು ನಿಂತಂತೆಯೇ ಸರಿ. ಕುದುರೇ ರೇಸಿನಲ್ಲಿ ಹಣವಾಗಿ ಕಟ್ಟಲ್ಪಡುವ ಹಣದ ಒಂದಂಶವು ದೊರೆಯುವುದರಿಂದಾಗಿಯೇ ಕುದುರೇ ಜೂಜಿನ ವ್ಯವಸ್ಥೆಯಿದೆ; ಆ ಜುಗಾರಿಯೊಂದೇ ಜನರನ್ನು ಆಕರ್ಷಿಸುತ್ತಿದೆ; ಮತ್ತು ಪಂದ್ಯಕ್ಕಾಗಿ ಹೇರಳ ಹಣವ್ಯಯವಿಸಿ ಅತ್ಯುತ್ತಮ ವರ್ಗದ ಕುದುರೇ ಸಾಕೋಣವಿರುವುದು ಇದೊಂದರ ದೆಸೆಯಿಂದಲೇ. ಆದನ್ನೇ ನಿಲ್ಲಿಸಿಬಿಡುವದರಿಂದ ಇವೆಲ್ಲಾ ಆಕರ್ಷಣವಸ್ತು ಜನತಾ ಸ್ಫೂರ್ತಿಯೂ ಮಾಯವಾಗುವದೆಂದೂ ಉತ್ತಮ ವರ್ಗದ ಬೀಜದ ಕುದುರೆಗಳು ಕೂಡಾ ಇಲ್ಲದಂತಹ ಅಪತ್ತೊದಗುವದೆಂದೂ ಆಕ್ಷೇಪಗಳು ಕೇಳಿಬರುತ್ತಿವೆ. "ಇದೊಂದು ಜುಗಾರಿ; ದುರ್ವ್ಯಯ. ಸಂದ್ಯದ ಕುದುರೆಗಳ ಮೇಲೆ ಹಣ ಕಟ್ಟುವ ದ್ಯೂತವನ್ನು ನಿಲ್ಲಿಸಬೇಕೆಂದು ದೊಡ್ಡ ಚಳವಳ ನಡೆಸಿದೆ" ಎಂದೆಲ್ಲಾ ಸರಕಾರವು ಅದರ ಪ್ರತಿಬಂಧಕ್ಕೆ ಕಾರಣ ಕೊಟ್ಟಿದೆ. ಕುದುರೇ ಜೂಜಿನ ಮೇಲೆ ಸರಕಾರದ ನಿಶ್ಚಿತ ತೆರಿಗೆಯಿದ್ದುದರಿಂದ್ಯಆದನ್ನೀರೀತಿ ತಡೆಗಟ್ಟಿ ಸರಕಾರವು ತನ್ನ ಒಂದು ಉತ್ಪನ್ನವನ್ನೇ ರದ್ದುಪಡಿಸಿಕೊಂಡಿದೆ. ಆದ್ದರಿಂದ ಇದು ಜನತಂತ್ರದೃಷ್ಟಿಯಿಂದ ಮುಂತರಲ್ಪಟ್ಟ ಪುರುಷಾರ್ಥಕೆಯೆಂಬುದು ನಿರ್ವಿವಾದ. ಈ ಮಸೂದೆಯ ಚರ್ಚೆಯ ವೇಳೆ ಎಸೆಂಬ್ಲಿಯಲ್ಲಿ ಓರ್ವ ಸದಸ್ಯರೇ ಹೇಳಿದಂತೆ "ಕುದುರೇ ಜೂಜಿನಲ್ಲಿ ಸರ್ವಸ್ವವನ್ನೂ ಕಳಕೊಂಡು ಆತ್ಮಹತ್ಯೆ ಮಾಡಿಕೊಂಡವರು" ಬಹಳಿದ್ದು. "ಹೀಗೆಯೇ ವಿವಿಧ ಕಾರಣಗಳಿಗಾಗಿ—ಪರೀಕ್ಷೆಯಲ್ಲಿ ನಾಪಾಸಾದಂತಹ ಸಣ್ಣ ಸುಟ್ಟ ಕಾರಣಗಳಿಗಾಗಿಯೂ—ಆತ್ಮಹತ್ಯೆ ಮಾಡಿಕೊಳ್ಳುವವರಿಲ್ಲವೇ" ಎಂದಿದ್ದಕ್ಕೆ ಅಡ್ವಕೇಟ್ ಜನರಲ್ ಉತ್ತರ ಬಂದಿವೆ. ಆದರೆ 'ಕುದುರೇ ಹಂದ್ಯ'ದಲ್ಲಿ ಹಣ ಕಟ್ಟುವದು ಜುಗಾರಿಯಲ್ಲವಾದರೆ, 'ಇನ್ಸೈಟ್' ಎಲೆಗಳ ಮೇಲೆ ಕಟ್ಟುವದು ಮಾತ್ರ ಜುಗಾರಿ ಹೇಗೆ?' ಎಂಬ ಪ್ರಶ್ನೆಯೂ ಬರುತ್ತಿದೆ ಈ ಕುದುರೇ ಜೂಜಿನ ಕೆಲವು ಪ್ರೇಕ್ಷಕರಿಗೆ ಅದರಲ್ಲಿ ದಕ್ಷಿಣ ಕನ್ನಡದ ಹಿಂದುಳಿದ ಜನತೆಯಲ್ಲಿ ಸರ್ವವ್ಯಾಪಿಯಾಗಿರುವ ಕೋಳಿ ಜೂಜನ್ನು ಪ್ರತಿಬಂಧಿಸುವ ಶಾಸನವೂ ಇದೇ ರೀತಿ ಬಂಧನಕಾರಿಯಾದು ಅತ್ಯಗತ್ಯ. ಸರಕಾರ ಮತ್ತು ಶಾಸನ ಸಭೆಗಳಲ್ಲಿ ನವ್ಯ ಜಿಲ್ಲೆಯ ಪ್ರತಿನಿಧಿಗಳಾಗಿರುವವರು, ಈ ಸಂಬಂಧವಾಗಿ ಸ್ಪಂದಿಸಬಾರದೇ?

ಚೈನಾ ಸಂಧಾನ ಸಾಧನೆಗಾಗಿ ಚಿಯಾಂಗರ ಅಜ್ಞಾತವಾಸ

ಜಾಗತಿಕ ರಂಗದಲ್ಲಿ, ಮತ್ತು ವಿಶೇಷತಃ ಆಸ್ಯಾದ ಪಾಲಿಗೆ ಚಿಯಾಂಗ್ ಪತನ ಸನ್ನಿಹಿತವಾಗಿರುವ ಚೈನಾದ ಅಂತರ್ಯುದ್ಧವೂ, ಆಸ್ಯಾ ರಂಗದಲ್ಲಿ ಇಂಡೋನೇಶಿಯದಲ್ಲಿ ಡಚ್ಚರು ನಡೆಸಿರುವ ಆಕ್ರಮಣವೂ ಪ್ರಾಮುಖ್ಯತೆ ಪಡೆದಿವೆ. ಟ್ರೂಮೇನ್ ರು ತನ್ನ ಅಧ್ಯಕ್ಷತೆಯ ದ್ವಿತೀಯಾಧ್ಯಾಯವನ್ನಾರಂಭಿಸಿರುವುದು-ಯೆಹೂದಿಗಳ ಇಸ್ರಾಯೆಲ್ ಸರಕಾರವನ್ನು ಹುಟ್ಟಿಸುವ ಬಿಸುಕ್ಕಿರುವ ರಹಸ್ಯದ ಕೈವಾಡದಿರಿಲ್ಲಿ ಪೆಲಸ್ತೈನ್ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಬಗೆ ಯೂವುದೆಂದು ಆಂಗ್ಲೋ ಅಮೆರಿಕನರು ಚಿಂತೆಗೀಡಾಗಿರುವುದು-ಇಲ್ಲಲ್ಲಿ ಹೊಸಹೊಸ ಗೊಂದಲಗಳು ತಲೆಯೆತ್ತುತ್ತಿರುವುದು-ಕಾಣಿಸುತ್ತಿವೆ. ನವ ಫಿಲ್ಲಿಯಲ್ಲಿ ಒಂಡಿತ ನೆಹರುಗಳ ನೇತೃತ್ವದಲ್ಲಿ ಜಯಶೀಲವಾಗಿ ನಡೆದಿರುವ, ಡರ್ಬ್ ಆಸ್ರಮಣ ವಿರೋಧೀ ಆಸ್ಯಾ ರಾಷ್ಟ್ರಗಳ ಸಮ್ಮೇಳನವು ಆಸ್ಯಾದಲ್ಲ ಮುಂಡಿರುವ ನವಜಾಗೃತಿಗೂ, ಅಖಿಲ ಆಸ್ಯಕ್ಕೆ ಮಾರ್ಗದರ್ಶಿಯಾಗುವ ಭವಿಷ್ಯವು ಸ್ವತಂತ್ರ ಭಾರತಕ್ಕೆಪೆಯೆಂಬುದಕ್ಕೂ ನಿದರ್ಶನ. ಅಂತೆಯೇ ನಿಯೋಜಿತ ಸೈಲ್ಯೆ ಸುಮುಖ್ಯ. ಭೋಪಾಲದಂತಹ ಕೆಲವು ಸಂಸ್ಥಾನಗಳ ಒಳತಂಟೆ, ಆರ್. ಯಸ್. ಯಸ್. ಗೂಂಡಲ ವಿಸರ್ಜನೆಯುಂದೆದ್ದಿರುವ ಪರಿಸ್ಥಿತಿ, ಶಾಶ್ವತರದ ಭವಿಷ್ಯ ರಚನಾ ವಿಧಾನಗಳಲ್ಲಿ ಪಾಕಿಸ್ತಾನದ ಭಿನ್ನಾಭಿಮತ ಮತ್ತಿತರ ಒಳಸಮಸ್ಯೆಗಳು ಭಾರತದ ಪಾಲಿಗಿನೆ ಅಂತೂ ಇತ್ತೀಚೆಗಿನ ಲೋಕ ವಿದ್ಯಮಾನಗಳಲ್ಲಿ ಬಿರುಕು ಮತ್ತು ಘರ್ಷಣೆಗಳೇ ಹೆಚ್ಚಾಗಿ ಕಾಣಿಸುತ್ತಿವೆ.

ಚೈನದ ರಾಜೀಯತ್ನ

ಚೈನದಲ್ಲಿ ಚಿಯಾಂಗ್ ಕೈ-ಶೇಕ್ ಸರಕಾರದ ವಿಜಯ ಭರವಸೆಯಿಂದೋ ಳೆದು ಹೋಗಿದ್ದು, ಅವರ ಕೂಮಿಂಟಾಂಗ್ ಸರಕಾರದ ಬುಡಕ್ಕೆನೇ ಕುಠಾರ ಚಾಚಿಕೊಂಡು ಬಂದುದರಿಂದ ಹೊಸ ವರುಷವನ್ನೇ ಚಿಯಾಂಗರು ರಾಜೀಯಾಚನೆಯೊಂದಿಗೆ ಆರಂಭಿಸಿದ್ದರು. ಚಿಯಾಂಗ್ ಸರಕಾರದ ಈ ರಾಜೀ ಸೂಚನೆಗಳು ನಿಜಕ್ಕೂ ಸೋತ ಸೂಚನೆಗಳೇ ಇದ್ದುದರಿಂದ ಕಮ್ಯೂನಿಸ್ಟರು ಚಿಯಾಂಗರ ಸರ್ವನಾಶಹಾರ ಮಾತುವ ಎಂಟು ಶರ್ತಗಳನ್ನು ಮುಂದಿಟ್ಟಿದ್ದರು. ಆದರಲ್ಲಿ ಚಿಯಾಂಗರ ಸಮೇತ ನಾನ್ಕಿಂಗ್ ಅಧಿಕಾರಿಗಳನ್ನು ಯುದ್ಧಾಪರಾಧಿಗಳೆಂದು ಗಣಿಸಿ, ಶಿಕ್ಷಿಸುವ ಶರ್ತವೂ ಒಂದು. ಇವುಗಳಿಗೆ ಪ್ರತಿಯಾಗಿ ಚಿಯಾಂಗ್ ಸರಕಾರದಿಂದ ಕೂಡಲೇ ನಿಶ್ಶರ್ತವಾಗಿ ಇಕ್ಕಡೆಯವರೂ ಗುಂಡುಹಾರಾಟಗಳನ್ನು ನಿಲ್ಲಿಸಬೇಕು; ಆ ವೇಳೆ ಇಕ್ಕಡೆಯವರ ಪ್ರತಿನಿಧಿಗಳು ಸಂಧಾನ ಮಾತುಕತೆಗೆ ತೊಡಗಬೇಕು.— ಎಂಬ ಸೂಚನೆ ಹೋಯಿತು. ಇದನ್ನು 'ಕೊಮಿಂಟಾಂಗಿನ ಕಪಟ ನಾಟಕ'ವೆಂದೂ 'ಸಾಮ್ರಾಜ್ಯಶಾಹಿ' ಚಿಯಾಂಗ್ ಸರಕಾರಕ್ಕೆ ಶಾಂತಿಬೇಕಾಗಿಲ್ಲವೆಂಬುದಕ್ಕೆ ನಿದರ್ಶನ'ವೆಂದು ಕಮ್ಯೂನಿಸ್ಟರು ಛೀಗಳೆದು ಬಿಟ್ಟರು. ಹೇಗಾದರೂ ಕಮ್ಯೂನಿಸ್ಟರೊಂದಿಗೆ ಸಂಧಾನ ಮಾಡಿಕೊಂಡರೇನೇ ಚೈನವೂ ಮತ್ತು ತನ್ನ ಉಳಿಗಾಲವೆಂಬುದು ಚಿಯಾಂಗರ ಚೆತವಾಗಿರುವ ಚಿಯಾಂಗ್ ಕೈಶೇಕರು, ತಾನು ಅಧಿಕಾರ ಬಿಟ್ಟು ದೂರ ಹೋಗುವದರಿಂದ ಈ ಸಂಧಿ ಸಾಧನೆಗನುಕೂಲವಾಗಬಹುದೆಂದು ರಾಜಧಾನಿ ನಾನ್ಕಿಂಗನ್ನು ಬಿಟ್ಟು ಚಿಕಿಯಾಂಗ್ ಪ್ರಾಂತ್ಯದಲ್ಲಿರುವ ತನ್ನ ಹುಟ್ಟೂರಾದ ಫೆಂಘುವಾಕ್ಕೆ ಹಾರಿದ್ದಾರೆ. ಅವರ ಸಹೋದರರ ಸಮೇತ ಸುಮಾರು ೩೫ ಮಂದಿ ಪರಮಾಪ್ತರೂ ನಾನ್ಕಿಂಗನ್ನು ಬಿಟ್ಟು ಚಿಯಾಂಗರ ಬೆನ್ನು ಹಿಡಿದು ಹೋಗಿದ್ದಾರೆ. ಜನರಲಿಸಿಮೋ ಚಿಯಾಂಗ್ ಕೈಶೇಕ್ ತನ್ನ ಪದವಿಗೆ ರಾಜೀನಾಮೆಯೊಪ್ಪಿಸಿಲ್ಲವಾದರೂ ಸನ್ಯಕ್ಕೆ ಅಧಿಕಾರದ ಎಲ್ಲಾ ಸಂಬಂಧವನ್ನೂ ಕಡಿದುಕೊಂಡು ಅಜ್ಞಾತವಾಸ ಸ್ವೀಕರಿಸಿದ್ದಾರೆ ಇದೇನೂ ಸೋತ ಪಲಾಯನ ಪರಿಪಿದುದಲ್ಲ; ತನ್ನ ಮೇಲೆ ಕವ್ಯೂನಿಸ್ಟರಿಗಿರುವ ಕೆಂಡಗಣ್ಣಿನಿಂದ ತಪ್ಪಿಸಿಕೊಂಡು, ಅವರೊಡನೆ ಸಂಧಾನ ಸಾಧಿಸುವ ಅನುಕೂಲವಾತಾವರಣ ನಿರ್ಮಿಸಬೇಕೆಂದೇ ಚಿಯಾಂಗರು ಈ ಪರಾರಿ ವಿದ್ಯೆ! ಕಳೆದ ದಶಂಬರದಲ್ಲೇ ಸಾಹಾಯ ಯಾಚನೆಗೆಂದು ಅಮೇರಿಕಕ್ಕೆ ಹೋಗಿದ್ದ ಸತಿ ಚಿಯಾಂಗರೂ ಈಗ ಅಲ್ಲಿಂದ ಚೈನಕ್ಕೆ ಮರಳಿ ತನ್ನ ಗಂಡನನ್ನು ಸೇರಿಕೊಂಡಿರುವರೆಂದು ತಿಳಿದು ಬರುತ್ತದೆ. ಅಧ್ಯಕ್ಷ ಚಿಯಾಂಗರು ನಿವೃತ್ತರಾಗಿ ಹೊರಟು ಹೋದ ಬೆನ್ನಲ್ಲೇ ಉಪಾಧ್ಯಕ್ಷ ವೀ. ಟ್ಸುನ್ ಬೆನ್ ಅಧ್ಯಕ್ಷಾಧಿಕಾರ ವಹಿಸಿಕೊಂಡು ಕಮ್ಯೂನಿಸ್ಟರು ಮುಂದೊಡ್ಡಿದ್ದ ಆ ಎಂಟು ಕಠೋರ ಶರ್ತಗಳನ್ನಾಧರಿಸಿಯೇ ಸಂಧಾನ ಮಾತುಕತೆಯಾರಂಭಿಸಲು ತಾವು ತಯಾರೆಂಬ ಜಾಹೀರು ಮಾಡಿಬಿಟ್ಟರೆ. ಮತ್ತಾ ರಾಜೀ ಮಾತುಕತೆ ನಡೆಸಲು ಐದು ಮಂದಿಯ ಪ್ರತಿನಿಧಿ ಮಂಡಲಿಯೊಂದನ್ನು ನೇಮಿಸಿದ್ದಾರೆ. ಚಿಯಾಂಗರ ಅಧಿಕಾರ ನಿವೃತ್ತಿಯು ಅಮೇರಿಕದ ಹಂಚಿಕೆಗನುಸಾರವಾಗಿ ನಡೆಯಿತೆಂದೂ, ಇನ್ನೂ ಸಂದರ್ಭ ಬಂದಾಗ ಅಧಿಕಾರಕ್ಕೆವರು ಪುನಃ ಮರಳಬಹುದೆಂದೂ, ಒಟ್ಟಿನ ಮೇಲೆ ಕೊಮಿಂಟಾಂಗಿನ ಅಪ್ರಾಗತಿಕರ ನಾನ್ಕಿಂಗ್ ಸರಕಾರಕ್ಕೆ ಯಥಾರ್ಥ ಪ್ರಜಾಸತ್ತಾ ಶಾಂತಿಯ ಬಯಕೆಯಿಲ್ಲವೇ ಇಲ್ಲವೆಂದೂ ಕಮ್ಯೂನಿಸ್ಟರು ಅಭಿಪ್ರಾಯ. ಸಂಧಾನ ಪ್ರಯತ್ನಗಳ ಅದ್ಯತ್ಯವೇನಾಗುವದೋ ನೋಡಲಿಕ್ಕಿದೆ.

ಚಿಯಾಂಗ್ ಕೈಶೇಕ್

ಈಗ ಅಧಿಕಾರ ನಿವೃತ್ತರಾಗಿರುವ ಚಿಯಾಂಗ್ ಕೈಶೇಕರು ಕಳದ ೨೬ ವರುಷಗಳಿಂದಲೂ, ಲೋಕದ ಏದನೇ ಒಂದಂಶ ಜನರಿರುವ ಅಖಿಲ ಚೈನದ ಸರ್ವಾಧಿಕಾರಿಯಾಂತಿದ್ದರು. ಚೈನೀ ರಾಷ್ಟ್ರೀಯ ಸಂಕಾದ ಅಧ್ಯಕ್ಷ ಮತ್ತು ಚೈನೀ ಸೇನೆಯ ಸರ್ವ ಸೇನಾನಿಯಾಗಿದ್ದವರು. ಜಪಾನ್ ಯುದ್ಧ, ಅಂತರ್ಯುದ್ಧಗಳ ದೆಸೆಯಿಂದ ಚಿಯಾಂಗರಿಗೆ ತನ್ನ ಅಧಿಕಾರದ ಅವಧಿಯಲ್ಲಿ ಬೇರೆ ಕಡೆಗೆ ಲಕ್ಷ್ಯವೀಯುವ ಬಿಡುವೇ ಸಾಕಷ್ಟು ದೊರೆತಿಲ್ಲವೆಂಬುದು ನಿಜವಿದ್ದು, ನಮ್ಮ ಇಂದಿನ ಭಾರತ ಸರಕಾರದ ವಾದದಿಂದಲ್ಲಿ ಚಿಯಾಂಗರ ವರ್ತನೆಯೂ ಕ್ಷಮ್ಯವಿಸ್ಪಸಂತಹದೇನೋ ನಿಜ ಆದರೆ ಅವರು ಅಮೇರಿಕದ ಪಕ್ಷಪಾತಿಯಿದ್ದು, ಚೈನವನ್ನು ಅಮೆರಿಕ ಮತ್ತು ಬ್ರಿಟನಿನ ಮಾರ್ಕೆಟಾಗಿ ಮಾರ್ಪಡಿಸಿದ್ದರೆಂಬುದನ್ನೂ ಬಂಡವಾಳ ರಾಹು ವರ್ಗದ ಹಿತಸಂಬಂಧಗಳನ್ನೆಷ್ಟೇ ಸುಗಮಗೊಳಿಸಿ ಜನಸಾಮಾನ್ಯರನ್ನು ಕಡೆಗಣಿಸಿದ್ದರೆಂಬುದನ್ನೂ ಮರೆಯಲಾಗುವದಿಲ್ಲ; ಅವರ ಮನೋವೃತ್ತಿಯೇ ಹೀಗಿದ್ದುದು ಎಂದಿಗೂ ಪ್ರಮಾಣಿಕ ವೈಯಕ್ತಿಗತ ಗುಣ ನಡತೆಗಳಲ್ಲಿ ಚಿಯಾಂಗರಷ್ಟು ಸದೃಢ ಹಾಗೂ ಸ್ವಚ್ಛತೆಯಿದ್ದ ನಾಯಕರು ಚರಿತ್ರೆಯಲ್ಲೇ ಅಪರೂಪವೆನ್ನಬೇಕು. ಅವರ ಅಧಿಕಾರ ಪ್ರಶ್ನಾತೀತವಿತ್ತು; ಅವರ ಸಂಕಲ್ಪಶಕ್ತಿ ಅಭೇದ್ಯವಿದೆ ಸುರಾಪಾನ, ಧೂಮಪಾನ ಮತ್ತಿತರ ವ್ಯಸನ ಭಾವನೆಗಳಾವುವೂ ಚಿಯಾಂಗರಿಗಿಲ್ಲ. ಮೇಲಾಗಿ ಒಡಂಬಡನೆಯೇ ಅರಿಯದ ಸರಳಜೀವಿಯಾಗಿದ್ದರೆ. 'ನನ್ನಲ್ಲಿ ರಾಜಕೀಯ ಮಹತ್ವಾಕಾಂಕ್ಷೆಯೇನೂ ಇಲ್ಲ. ನನ್ನನ್ನೇ ರಾಜಕೀಯ ಭಾರವನ್ನು ಕಳಗಿಳಿಸಿ ಬಿಡುವ ಸಂದರ್ಭವೊದಗಿದರೆ ನಾನಾದನ್ನಿಟ್ಟು ಬಿಡುತ್ತೇನೆ" ಎಂದು ಎರಡು ವರುಷಗಳಿಗೆ ಮೊದಲೇ ಹೇಳಿದ್ದರು. ಕೂಮಿಂಟಾಂಗ್ ಪಕ್ಷದಿಂದ ಎರಡು ಬಾರಿ ಅಧ್ಯಕ್ಷನಾಗಿ ಆರಿಸಲ್ಪಟ್ಟ ಕಾರ್ಯ ನಿರ್ವಹಿಸಿದ್ದ ಚಿಯಾಂಗ್ ಕೈಶೇಕರು ಕಳದ ವಾಷದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರಿಯಾಗಲೊಲ್ಲನೆಂದಿದ್ದರು. ಅದರ ಜೈನದ ಹಿರಿಯ ಮುಂದಾಳುಗಳು ಆ ಸ್ಥಾನಕ್ಕೆ ಬೇರೆ ಕೃವರು ಬೇಕಲ್ಲವೆಂದು ಬಹುವಿಧ ಬೇಡಿದ್ದರಾದರೂ ಚುನಾವಣೆಗೆ ನಿಂತು ಗೆದ್ದು, ಮೊದಲನೇ ಚುನಾಯಿತ ಎನೆಂಬ್ಲಿಯಲ್ಲಿ ವ್ಯಂಜಲ ಬಹುಮತ ಪಡೆದು ಅಧ್ಯಕ್ಷನಾಗಿದ್ದರು.

ಸತಿ ಚಿಯಾಂಗರು--ನೀ ಲಿಂಗ್ ಸೂಂಗರು--ಸನ್‌ಯೆಟ್‌ಸೆನರ ಪತ್ನಿಯ ತಂಗಿ. ಇವರ ಮದುವೆ 1928ರಲ್ಲಾಗಿದ್ದು ಅಂದಿನಿಂದ ಮೇಡಮ್ ಚಿಯಾಂಗರು ಗಂಡನ

ಹೊಸ ವರ್ಷದ ಶುಭಾಶಯ

ಠೇವಣಾತಿದಾರರಿಗೆ ಅತ್ಯಾಕರ್ಷಕ ದರಜ

ಬಡ್ಡಿ ಮತ್ತು ಭದ್ರತೆ

ಹದಿನೇಳು ವರ್ಷಗಳ ಸಾರ್ಥಕ್ಯ ಅನುಭವ

ನಿರಮಿ ಠೇವಣಾತಿ

ಮೂರು ತಿಂಗಳಿಗೆ	....	....	3%
ಆರು ,,	....	....	3½%
ಹನ್ನೆರಡು ,,	....	....	3½%
ಇಪ್ಪತ್ತ ನಾಲ್ಕು ,,	....	....	4%
ಪಾವತಿಯಾಗಿರುವ ಭಂಡವಾಳ	....	....	ರೂ. 4,01,600.
ಕ್ಷೇಮ ನಿಧಿ	....	....	,, 98,000
ಒಟ್ಟು ವಹಿವಾಟು ಭಂಡವಾಳ	....	....	,, 40,65,000.

(ಸಾರವಿಸ್ತೆ ಸರಯಾಗಿ)

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ.
ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ
ನಮ್ಮ ಶಾಖೆಗಳಿವೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುವು.

ವಿಜಯ ಬೇಂಕ್ ಲಿಮಿಟೆಡ್
THE VIJAYA BANK, LIMITED.
H. O. MANGALORE.

ಡಚ್ ಆಕ್ರಮಣ ತಡೆದಿಡಲು ದಿಲ್ಲಿ ಸಮ್ಮೇಲನದ ನಿರ್ಣಯ

ಸರಿ ಮಿಗಿಲೆನಿಸಿ ಜೈನೀ ಸರಕಾರದ ಕಾರ್ಯಭಾರ ನಿರ್ವಹಿಸಿದ್ದಾರೆ. 1931ರಲ್ಲಿ ಚಿಯಾಂಗ್ ಕೈಶೇಕ್‌ರು ಕೈಬಿಟ್ಟ ಮತಕ್ಕೆ ಸೇರಿ, ಆಗಲೇ "ಇನ್ನು ಅಂತರ್ಯುದ್ಧ ಕೊಡಲಾರೆ" ಎಂದಿದ್ದರು. ಆದರೆ ಕಳದ ವರುಷ ಕಮ್ಯೂನಿಸ್ಟರೊಡನೆ ಬಾಡೂಟಾಡಿ ಹೋರಾಟಕ್ಕೆ ಸಿದ್ಧಿಬೇಕಾಗಿ ಬಂದಾಗ ಹೇಳಿದ್ದರು. 'ನಾನು ಕಳದ ಹತ್ತು ವರುಷಗಳಲ್ಲಿ ಬಹಳ ಪ್ರಮಾದಗಳನ್ನು ಮಾಡಿದ್ದೇನೆ; ಆದರೆ ಆ ಪೈಕಿ ತೀರಾ ಕಳವೆಯದ್ದೆಂದರೆ ಜಾಪಾನ್‌ದೊಡನೆ ಯುದ್ಧ ನಡೆದಿದ್ದಾಗ ಜೈನಾದ ಕಮ್ಯೂನಿಸ್ಟರ ಕಡೆಗೆ ನಾನು ತೋರಿಸಿದ ಸಹನೆ".

ಜಾಗತಿಕ ವಿದ್ಯಮಾನಗಳು

ದಕ್ಷಿಣಾಫ್ರಿಕದ ದರ್ಬಾನ್‌ನಲ್ಲಿ ಹಿಂದೀಯರ ಮೇಲೆ ಆಫ್ರಿಕಾನರು ನಡೆಸಿದ ಗೊಂದಲವೆಲ್ಲಾ ಈಗ ಪೂರ್ಣ ಮಾಯವಾಗಿ ಆ ನಗರ ಶಾಂತವಾಗಿದೆ. ಹಿಂದೀಯರು ಆಲ್ಲಿಯ ತಮ್ಮ ಮನೆಗಳಿಗೆ ಮರಳಹತ್ತಿದ್ದಾರೆ. ದರ್ಬಾನ್ ಗಲಭೆಗೆ ದಕ್ಷಿಣಾಫ್ರಿಕ ಸರಕಾರವೇ ಜವಾಬ್ದಾರಿಯೆಂದು ಆಲ್ಲಿಯ ಹಿಂದೀ ಕಾಂಗ್ರೆಸಿಗರಂದಿದ್ದಾರೆ. ಮಲಾನ್ ಸರಕಾರವಾದರೋ ಈ ಗೊಂದಲದಿಂದ ಎಳ್ಳಷ್ಟು ಬುದ್ಧಿ ಮಾರ್ವಾಟಿಗೊಳ್ಳದೆ ಹಿಂದೀಯರೇ ಮೊದಲಾದ ಯುರೋಪೇತರ ಜನರ ಹಕ್ಕು ಬಾಧ್ಯತೆಗಳನ್ನು ಅಪಹರಿಸಿ ಪ್ರತ್ಯೇಕಿಸಿಡುವ ತನ್ನ ಧೋರಣೆಯನ್ನು ಮುಂದೊತ್ತುವ ನಿರ್ಧಾರವನ್ನು ಸಾರಿದೆ. ಮಾಜೀ ಪ್ರಧಾನ ಮಂತ್ರಿ ಮತ್ತು ಈಗ ವಿರುದ್ಧ ಪಕ್ಷದ ನಾಯಕರಾಗಿರುವ ಜನರಲ್ ಸ್ಮಟ್ಸ್‌ರು ಆಲ್ಲಿಯ ಎಸೆಂಬ್ಲಿಯಲ್ಲಿ ಮಲಾನ್ ಸರಕಾರದ ಮೇಲೆ ಅವಿಶ್ವಾಸ ಸೂಚನೆ ತರಲಿದ್ದಾರೆ.

ಸಿಲೋನಿನ ಪಾರ್ಲಿಮೆಂಟಿನಲ್ಲಿಯೂ ಭಾರತೀಯರಿಗೆ ಮತ್ತು ಪಾಕಿಸ್ತಾನಿಗಳಿಗೆ ಹಕ್ಕು ಬಾಧ್ಯತೆ ನಿರಾಕರಿಸುವ 'ಹಿಂದೀಯ ಮತ್ತು ಪಾಕಿಸ್ತಾನೀ ನಿವಾಸಿಕರ (ನಾಗರಿಕ ಹಕ್ಕು ಬಾಧ್ಯತಾ) ಮಸೂದೆ' ಮಂಜೂರಾಗಿದೆ. ಈ ಮಸೂದೆಯು ಕಾರಿತು ಭಿನ್ನಾಭಿಪ್ರಾಯವಿದ್ದಿರೂ ಸಿಂಹಳದಲ್ಲಿರುವ ಭಾರತೀಯರು ಸಿಂಹಳೀಯರೊಂದಿಗೆ ಸಹಕರಿಸಿ ವರ್ತಿಸಬೇಕೆಂದೂ ಭಾರತ ಮತ್ತು ಸಿಲೋನುಗಳೊಳಗಿನ ಅನ್ಯೋನ್ಯ ಸಂಬಂಧವನ್ನು ಉಳಿಸಬೇಕೆಂದೂ ಆಲ್ಲಿ ಭಾರತದ ಹೈಕಮಿಶನರಾಗಿರುವ ಶ್ರೀ ವಿ. ವಿ. ಗಿರಿಯವರು ಉಪದೇಶಿಸಿದ್ದಾರೆ.

ಅಮೇರಿಕಾಧ್ಯಕ್ಷ ಟ್ರುಮೇನರು ತಮ್ಮ ಅಧ್ಯಕ್ಷತೆಯ ಎರಡನೇ ಅವಧಿಯ ಉದ್ಘಾಟನೆ ಮಾಡುತ್ತಾ ಭಾವೀ ಅಮೆರಿಕದ 'ಶಾಂತಿ ಮತ್ತು ಸ್ವಾತಂತ್ರ್ಯ' ಯೋಜನೆಯನ್ನು ವಿವರಿಸಿದ್ದಾರೆ. ಮಾರ್ಷಲ್ ಯೋಜನೆಗಿಂತ ವಿಸ್ತಾರವಾದ 'ಜಾಗತಿಕ ಹೊಂ ವ್ಯವಹಾರ' ಯೋಜನೆಯೊಂದನ್ನು ತಯಾರಿಸಿ ಬೇಟನ್ ಅಮೆರಿಕದ ಮತ್ತು ಆಸ್ಟ್ರೇಲಿಯ ಅನ್ಯಾದ ಮನರ್ರಜನೆಗೆ ನೆರವಾಗುವ ಹೊಂಚಿಕೆ ತಯಾರಾಗುತ್ತಿದೆ.

ದಿಲ್ಲಿಯ ಆಸ್ಯಾ ಸಮ್ಮೇಲನ

ಇದೇ ತಾ 20ರಿಂದ 23ರ ವರೆಗಿನ ನಾಲ್ಕು ದಿವಸ ನವದಿಲ್ಲಿಯಲ್ಲಿ ಜರಗಿದ 18 ಆಸ್ಯಾ ರಾಷ್ಟ್ರಗಳ ಮತ್ತು ನ್ಯೂಜೀಲೇಂಡ್, ಆಸ್ಟ್ರೇಲಿಯಗಳ ಸರಕಾರೀ ನಾಯಕರ ಸಮ್ಮೇಲನವು ಆಸ್ಯಾದ ಚರಿತ್ರೆಯಲ್ಲೇ ಹೊಸತೆನ್ನ ಬಹುದು. ಇದರಿಂದಾಗಿ ಆಸ್ಯಾದ ರಾಷ್ಟ್ರಗಳೊಳಗೆ ಪರಸ್ಪರ ಸಹೋದರಿ ಭಾವ ಬೆಳೆಯಿತಲ್ಲದೆ, ಅವೆಲ್ಲವೂ ಒಕ್ಕೆಟ್ಟನಿಂದ ಕಾರ್ಯಕ್ಕಿಳಿಯುವಂತೆ ಮಾಡುವ ಒಂದು ಸಂಬಂಧ ವ್ಯವಸ್ಥೆಯೂ ಕಿಲ್ಲಿ ಆಗಿದೆ. ಆಸ್ಯಾದೊಂದು ರಾಷ್ಟ್ರವಾದ ಇಂಡೋನೇಶಿಯದಲ್ಲಿ— 1946ರ ವರೆಗೆ ಭಾರತದಲ್ಲಿ ಬ್ರಿಟಿಷರು ಅಧಿಕಾರಸೂತ್ರ ಹಿಡಿದುಕೊಂಡಿದ್ದಂತೆಯೇ, ಅಧಿಕಾರ ನಿರ್ವಹಿಸುತ್ತಾ ಬಂದಿದ್ದ ಯುರೋಪಿನ ಸಣ್ಣ ರಾಷ್ಟ್ರ ಹೊಲ್ಲೆಂಡು, ಅಲ್ಲಿಯ ರಿಪಬ್ಲಿಕನ್ ಸರಕಾರದ ಮೇಲೆ ಆಕ್ರಮಣ ಹೋರಾಟ ಕೈಗೊಂಡಿರುವದನ್ನು ಆಸ್ಯಾ ಖಂಡದ ಆಫ್ರಿಕಾತರೆಂದು ಗಣಿಸಿ ಇಂಡೋನೇಶಿಯಕ್ಕೆ ನೆರವಾಗುವ ಉದ್ದೇಶದಿಂದ ಸೇರಿದ್ದ ಸಮ್ಮೇಲನವಿದು. ನವದಿಲ್ಲಿಯಲ್ಲಿ ಈ ಸಮ್ಮೇಳನ ಕರೆದವರೂ, ಅದರ ನಾಯಕತ್ವ ವಹಿಸಿದವರೂ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರೇ. ಭವಿಷತ್ಕಾಲದಲ್ಲಿ ಆಸ್ಯಾದ ಮಂಡಾಳುತ್ವ ವಹಿಸುವ ಯೋಗ್ಯತೆ ಭಾರತಕ್ಕೆಂಬುದರ ಮುಂಬೆಳಕಾಗಿ ಈ ವಿಶೇಷ ಸಂದರ್ಭದಲ್ಲಿ ಈ ಸಮ್ಮೇಳನ ಸೇರಿದ್ದಿತು. ಆಸ್ಯಾ ರಾಷ್ಟ್ರಗಳ ಸರಕಾರಗಳು ಏಕೋದ್ದೇಶದಿಂದ ಈ ರೀತಿ ಒಟ್ಟಾದುದು ಚರಿತ್ರೆಯಲ್ಲಿ ಇದೇ ಮೊದಲೆಂದು ತಿಳಿದು ಬರುತ್ತದೆ. ನವಢಿಲ್ಲಿಯ ಕೌನ್ಸಿಲ್ ಆಫ್ ಸ್ಟೇಟ್ ಭವ್ಯ ಭವನದಲ್ಲಿ ಸರಕಾರಿಸಹಜ ವೈಭವ ಮತ್ತು ಕ್ರಮ, ಫಲಸಿಗಳಿಗನುಸಾರವಾಗಿ ಈ ಸಮ್ಮೇಲನ ಸೇರಿದ್ದಿತು. ಅಫ್ಘಾನಿಸ್ತಾನ್, ಬರ್ಮ, ಸಿಲೋನ್, ಚೈನಾ, ಈಜಿಪ್ಟ್, ಇರಾನ್, ಇರಾಕ್, ಲೆಬನನ್, ನೇಪಾಲ್, ಪಿಲಿಪ್ಪಾಯಿನ್ಸ್, ಸೌದಿ ಅರೇಬಿಯಾ, ಸಿರಿಯಾ, ಯೆಮಾನ್, ಪಾಕಿಸ್ತಾನ್, ಭಾರತ ಮತ್ತು ಆಸ್ಟ್ರೇಲಿಯಾ, ನ್ಯೂಜೀಲೇಂಡ್ ರಾಷ್ಟ್ರಗಳ ಪ್ರತಿನಿಧಿಗಳು ಸಮ್ಮೇಲನ ಭಾಗಿಗಳಾಗಿದ್ದರು. ಪ್ರಾರಂಭ ಭಾಷಣವಿತ್ತ ಪಂಡಿತ ನೆಹರು ಗಳು ಆ ಸಮ್ಮೇಲನದ ಉದ್ದೇಶವನ್ನು ಸ್ಪಷ್ಟೀಕರಿಸಿದರು. ಇಂಡೋನೇಶಿಯಾ ಆಕ್ರಮಣ ನಿವಾರಣೆ, ರಾಷ್ಟ್ರಗಳನ್ನು ಭದ್ರತಾ ಕೌನ್ಸಿಲ್‌ಗೆ ಸೂಚಿಸುವಪು-ಅಭ್ಯರ್ಜನೆಯು ಸಂಬಂಧಪಟ್ಟವರಿಂದ ಮಾನ್ಯವಾದರೆ ಆಲ್ಲಿ ಶಾಂತಿ ವ್ಯವಸ್ಥಾ ಸ್ಥಾಪನೋಪಾಯಗಳನ್ನು, ಅವಾನ್ಯವಾದರೆ ಮುಂದಿನ ಕಾರ್ಯ ವಿಧಾನವನ್ನು ಸೂಚಿಸುವುದು-ಆಸ್ಯಾ ರಾಷ್ಟ್ರಗಳೊಳಗೆ ಒಕ್ಕಟ್ಟು ಸಮರ್ಥಪಕ ಸಂಬಂಧ ಸೂತ್ರಗಳನ್ನು ರಚಿಸಿಕೊಳ್ಳುವ ಪ್ರಮುಖ ಧೋರಣೆಯೇ ತಮ್ಮದೆಂದರು. ಸಂಯುಕ್ತ ರಾಷ್ಟ್ರ ಸಂಘದ ನಿಬಂಧನಾಜಾಕಟ್ಟನ್ನಾಧರಿಸಿಯೇ ಈ ಸಮ್ಮೇಳನ ಸೇರಿದೆಯಲ್ಲದೆ ಅದಕ್ಕೆ ಅಥವಾ ಯೂರೋಪಿಯನ್ ರಾಷ್ಟ್ರಗಳಿಗೆ ವಿರುದ್ಧವಾಗಿ ಜನಾಂಗ ಘರ್ಷಣೆಯನ್ನು ಸಲು ಇದು ಸೇರಿಲ್ಲವೆಂದು ಮಂದಟ್ಟು ಮಾಡಿ, "ಗತಕಾಲದ ಮೈತ್ಯ ಸನ್ನಿಹಿತ ವಸಾಹತುಶಾಹಿಯು ಹೊಸತಾಗಿ ಹೆಡೆಯೆತ್ತಿ ನಮ್ಮ ಸಹೋದರೀ ರಾಷ್ಟ್ರದ ಸ್ವಾತಂತ್ರ್ಯ ನುಂಗಲು ಹೊಮ್ಮಿಯಾಗಿರುವುದನ್ನು ಪ್ರತಿಭಟಿಸಲೇ ಬೇಕು; ದಬ್ಬಾಳಿಕೆಯಿದಿರು ಎಂದಿಗೂ ದೊಡ್ಡಾಳುರು ಮಂತ್ರಿಲ್ಲ" ಎಂದು ಕಂಠೋಕ್ತವಾಗಿ ಹೇಳಿದರು. ಆನೇಲೆ ಸಂಡಿತ ನೆಹರುಗಳೇ ಸರ್ವ ಸಮ್ಮತಿಯಿಂದ ಅಧ್ಯಕ್ಷರಾಗಿ ಆರಿ ಇಲ್ಲಟ್ಟು ನಾಲ್ಕು ದಿನಗಳ ಕಾರ್ಯಕ್ರಮವನ್ನು ಜಯಶೀಲವಾಗಿ ನೆರವೇರಿಸಿದರು. ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳೂ ಡಚ್ ಆಕ್ರಮಣದ ವಿರುದ್ಧವಾಗಿ ಪಂಡಿತ ನೆಹರೂ ಅಭಿಪ್ರಾಯವನ್ನೇ ಪುಷ್ಟೀಕರಿಸಿ, ಮುಂದಿನ ಕಾರ್ಯ ವಿಧಾನಗಳ ಕುರಿತು ಸವಿವರ ಚರ್ಚೆ ನಡೆದಿತ್ತು. ಧೋರಣೆಗನುಸಾರವಾಗಿ ಮೂರು ಮುಖ್ಯ ನಿರ್ಣಯಗಳಾಗಿವೆ. ಇಂಡೋನೇಶಿಯಾ ಸ್ವಾತಂತ್ರ್ಯ ರಕ್ಷಣೆಗಾಗಿ ಎಂಟು ಶರ್ತಗಳ ಕಾರ್ಯವಿಧಾನವೊಂದನ್ನು ಅಂಗೀಕರಿಸುವಂತೆ ಭದ್ರತಾ ಕೌನ್ಸಿಲಿಗೆ ಶಿಫಾರಸು ಮಾಡಿದುದು ಮೊದಲನೇ ನಿರ್ಣಯ. ಈ ನಿರ್ಣಯವನ್ನು ಆಸ್ತಿತ್ವಕ್ಕೆ ತರುವಂತೆ ನೋಡಲು ಸಮ್ಮೇಲನ ಭಾಗಿಗಳಾದ ರಾಷ್ಟ್ರಗಳು ತಮ್ಮೊಳಗಿನ ಪ್ರಚಲಿತ ವ್ಯವಹಾರ ಮಾರ್ಗಗಳ ಮೂಲಕ ಪರಸ್ಪರ ಸಂಬಂಧ ಏಟ್ಟುಕೊಂಡು ಜಾಗ್ರತರಾಂಬೇಕೆಂಬುದು ಎರಡನೇ ನಿರ್ಣಯ. ಸಂಯುಕ್ತ ರಾಷ್ಟ್ರ ಸಂಘದ ಸತ್ರ ಚೌಕಟ್ಟಿನೊಳಗಡೆಯಲ್ಲೇ, ತಮ್ಮೊಳಗೆ ಪರಸ್ಪರ ವ್ಯವಹಾರ ನಡೆಸುವ ಒಂದು ಯೋಗ್ಯ ಕೂಟಯಂತ್ರ ರಚಿಸಿಕೊಳ್ಳುವ ಮಾತುಕತೆಗಳನ್ನು ಈ ಸಮ್ಮೇಲನ ಭಾಗಿ ರಾಷ್ಟ್ರಗಳು ನಡೆಸಬೇಕೆಂಬುದು ಮೂರನೇ ನಿರ್ಣಯ. ಇಂಡೋನೇಶಿಯಾದ ಸಂಬಂಧವಾಗಿ ಸಮ್ಮೇಲನವು ಭದ್ರತಾ ಕೌನ್ಸಿಲಿಗೆ ರವಾನಿಸಿದ್ದ ಎಂಟು ಶರ್ತಗಳು ಹೀಗಿವೆ:-ಇಂಡೋನೇಶಿಯಾ ರಿಪಬ್ಲಿಕನ್ ನಾಯಕರನ್ನೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕು; ರಿಪಬ್ಲಿಕ್ ಸರಕಾರವು ಅನಿಯಂತ್ರಣವಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲಾಗುವ ವ್ಯವಸ್ಥೆ ಮಾಡಬೇಕು; ದಶಂಬರ್ 18ರ ಮೊದಲು ರಿಪಬ್ಲಿಕನರು ವಶವಿಡ್ಡ ಭಾಗಗಳನ್ನೆಲ್ಲಾ 1949ನೇ ಮಾರ್ಚಿ 15ರ ಮೊದಲು ರಿಪಬ್ಲಿಕನ್ ಸರಕಾರಕ್ಕೆ ಒಪ್ಪಿಸಬೇಕು; ಕೂಡಲೇ ಸಶಸ್ತ್ರ ಸೇನೆಗಳ ಮೇಲಿನ ಅಧಿಕಾರ ಸಮೇತ ಪೂರ್ಣಾಧಿಕಾರವುಳ್ಳ ಮಧ್ಯಂತರ ಸರಕಾರವನ್ನು ಆಲ್ಲಿ ರಚಿಸಬೇಕು. ಭದ್ರತಾ ಕೌನ್ಸಿಲಿನ ಸೂಚನೆಯಂತೆ ಡಚ್ ಸರಕಾರ ಮತ್ತು ಭದ್ರತಾ ಕೌನ್ಸಿಲು ಸೂಚಿಸುವ ಬೇರಾವುದೇ ಸಂಸ್ಥೆಯ ಅಭಿವೃತ ಕೇಳಿ ವಿದೇಶ ಧೋರಣೆ ರೂಪಿಸುವ ಅಧಿಕಾರ ಆ ಪರ್ಯಾವಧಿ ಸರಕಾರಕ್ಕಿರಬೇಕು. 1949ನೇ ಒಕ್ಟೋಬರ್ 1ರೊಳಗೆ ಫೆಡರಾ ಸಮಾಜ ಚುನಾವಣೆ ಮುಗಿದು 1950ನೇ ಜನವರಿ 1ರೊಳಗೆ ಇಡೀ ಇಂಡೋನೇಶಿಯ ಕ್ಕೆ ಪೂರ್ಣಾಧಿಕಾರವನ್ನು ವರ್ಗಾಯಿಸಬೇಕು. ಈ ಶರ್ತಗಳಿಗೆ ಯಾವುದೇ ಪಕ್ಷದ ನಿರಾಕರಣೆ ಬಂದರೆ ಭದ್ರತಾ ಕೌನ್ಸಿಲು ತಕ್ಕ ಕಾರ್ಯ ಕೈಕೊಳ್ಳಬೆಕು, ಅದಕ್ಕೆ ಸಮ್ಮೇಲನ ಭಾಗಿ ರಾಷ್ಟ್ರಗಳ ಸಂಪೂರ್ಣ ಬೆಂಬಲವಿದೆ.

ದಿಲ್ಲಿ ಸಮ್ಮೇಲನವು ಮೇಲಿನ ಸ್ಪಷ್ಟ ನಿರ್ಧಾರ ಮಾಡಿ ಜಯಶೀಲವಾಗಿ ಜ. 23ರಲ್ಲಿ ಮುಗಿದಿದೆ. ಆತ್ತ ಇಂಡೋನೇಶಿಯ ವಿರುದ್ಧ ತೀರಾ ನಡಲಾದ ನಿರ್ಧಾರಕ್ಕೆ ಸೂಚನೆಯೊಂದನ್ನು ಪರಿಸಲ್ಲಿಸುವ ಭದ್ರತಾ ಕೌನ್ಸಿಲು ಇದನ್ನು ಅತ್ತ ಎಸೆದು ದಿಲ್ಲಿಯ ಆಸ್ಯಾ ಸಮ್ಮೇಲನ ಮುಂದಿಟ್ಟಿರುವ ಈ ಸೂಚನೆಯನ್ನು ಎತ್ತಿಕೊಳ್ಳುವುದೋ ನೋಡಲಿಕ್ಕಿದೆ!

THE CRESCENT INSURANCE CO., LTD.
(Estd. 1919.)
Head Office:- **Bombay,** Branch at:- **Mangalore.**
Offers every convenience for Life Assurance.
"Will your earnings continue after death?"
"Yes, if you insure them"
"By means of life Assurance you can continue your income after retirement, or for the benefit of your dependents after your death".
"In case of death the Bank pays what you have saved, the Assurance company pays what you had hoped to save"
The safest and best life office of long standing fame.
Best terms for agents offered.
K. P. Bhavanishanker Shetty,
Branch Manager,
The Crescent Insurance Co., Ltd.
Jayant Building, Maidan Road,
MANGALORE.
M. Sunderram Shetty,
Managing Director.

THE
Canara Banking Corporation Ltd.
(Incorporated in India)
Estd 1906
HEAD OFFICE. UDIPI, S. I.

SEASON DEPOSITS.

For Rs 2,000/- and over are now accepted at all Offices of the Bank at the following rates:-
3 & 4 Months ... @ 2½ % p. a.
5 & 6 Months .. @ 2¾ % p. a.

ಗುರುವಾರ, ಉಡುಪಿ, ೨೬-೧-'೪೮

ಜನವರಿ 30

ಬಾಹುಜೇ ಬಲಿದಾನವಾಗಿ ಒಂದು ವರುಷ ತುಂಬುತ್ತಿದೆ. ರಾಷ್ಟ್ರಪಿತನ ನಶ್ವರ ಕಾಯವನ್ನು ಬಲಿಪಡೆದ ಜನವರಿ 30ನೇ ತಾರೀಕು ಬರುವ ಅದಿತ್ಯವಾರ ಎರಡನೇ ಬಾರಿ ಬರಲಿದೆ. ಮಹಾತ್ಮರ ಬಲಿದಾನದ ಪ್ರಥಮ ವರ್ಧಂತಿ ಬರುತ್ತಿದೆ.

ಆ ದಿನವನ್ನು ಭಾರತೀಯರು-ಯಾಕೆ, ಇಡೀ ಜಗತ್ತೇ-ಎಂದೂ ಮರೆಯುವಂತಿಲ್ಲ. ಭಾರತೀಯರಿಗಂತೂ ಅಂದಿನ ನೆನಪು ಮುಸುಕಾಗುತ್ತಾ ಹೋಗುವ ಬದಲಿಗೆ ಸ್ಪಷ್ಟಗೊಳ್ಳುತ್ತಾ ಬರುತ್ತಿದೆ ಗಾಂಧಿಜೀಯಲ್ಲದ ಒಂದು ವರುಷವನ್ನು ರಾಷ್ಟ್ರ ಹೇಗೆ ಕಳೆದುಬೇ ಒಂದು ಸೋಜಿಗ, ಅದೇ ಒಂದು ಮಹತ್ಸಾಧನೆ, ಎಂಬಂತೆ ತೋರುತ್ತಿದೆ. ಇದೇನೂ ಗಾಂಧಿಜೀಯ ನೇತೃತ್ವದ ಅಂಧಭಕ್ತಿಯ ಮಾತಲ್ಲ; ವಸ್ತುಸ್ಥಿತಿಯ ಧ್ವನಿ. ಗಾಂಧಿಜೀ ನಮ್ಮ ಇಂದಿನ ಸ್ವಾತಂತ್ರ್ಯದ ನಿರ್ದೇಶಕರಾಗಿದ್ದುದಷ್ಟೇ ಅಲ್ಲ; ರಾಷ್ಟ್ರಜೀವನ ಜಾಲಕತ್ವ ಅವರ ಕೈಯಲ್ಲಿದ್ದಿತು; ರಾಷ್ಟ್ರದ ಪ್ರತಿಯೊಂದು ವಿಭಾಗದಲ್ಲೂ 'ಗಾಂಧಿತ್ವ' ಜೀವಾಳದಂತೆ ಬೆರೆತಿದೆ. ಆದ್ದರಿಂದ ಗಾಂಧಿಯಿಲ್ಲದ ಭಾರತದ ಬಾಳುವಯೂ 'ಶಿತಿಕಾಗಿ ಸಂನ್ಯಿಗೆ ಸಲಂತತಹದೇ; ಗಾಂಧಿಯಿಲ್ಲದ ಭಾರತದ ಬಾಳುವೆ ಬೇರಾಗಿಬಹುದೆಂಬ ನಿರೀಕ್ಷೆಯಿಂದಲೇ ಅವರ ಎದೆಗೆ ಗುಂಡು ನುಗ್ಗಿತೆಂದ ಮೇಲೆ 'ಗಾಂಧಿಯೇ ಭಾರತ'ವಾಗಿದ್ದರೆಂಬುದರಿಂತ, ತಾವು ವರ ವೈರಿಗಳಂದು ಕಟ್ಟಿಕೊಂಡವರು ಕೂಡಾ ಒಪ್ಪಿಸಿಸುವಂತಿಲ್ಲ. ಆದರೆ ಗಾಂಧಿ-ರಾಷ್ಟ್ರವಾಗಿಸೇ ಮಹಾತ್ಮ-ಎಂದೂ ಸಾಯುವವರಲ್ಲವಾದ್ದರಿಂದಲೇ ರಾಷ್ಟ್ರವೂ ಇದ್ದಂತಿದೆ; ದೇಹದಂತಿ ಮಹಾತ್ಮನಿಗಿಂತ ಈ ಒಲಿದಾನ ವಾತ್ಮನ ವರ್ಚಸ್ಸು ಹೆಚ್ಚಿನದಾದ್ದರಿಂದಲೇ ಕಳದ ಒಂದು ವರುಷದಲ್ಲಿ ಭಾರತವು ನಿಜಕ್ಕೂ ಹಲವು ಪ್ರಥದ ವಿಜಯಗಳನ್ನು ಗಳಿಸಿದ; ರಾಷ್ಟ್ರ ದೊಗಿನ ಗೌಂದಲಗಳೆಲ್ಲ ಬಹುತೇಕವಾಗಿ ನಿಂತುಹೋಗಿವೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ದೇಶಿಸಿದಂತೆ ಜನವರಿ 30, ಆ ಮಹಾತ್ಮನ ಪುಣ್ಯಸ್ಮರಣೆಗಾಗಿ ಮೀಸಲಿಡಬೇಕಾದ ದಿನ; ಆದರ ವಾಪಿತ್ಯಕ್ಕನುಸರಣವಾಗಿ ಪರೋಕ್ಷವಾಗಿ ಗಾಂಧಿಜೀತತ್ವವಲಂಬಿ ಕಾರ್ಯಗಳನ್ನು ಮಾಡಬೇಕಾದ ದಿನ ನಿಜಕ್ಕೂ ದುಃಖದ ದಿನವಲ್ಲ. ಮಹಾತ್ಮರು ಅಮರರಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು; 79ನೇ ಪ್ರಾಯದಲ್ಲಿದ್ದ ಗಾಂಧಿಜೀ ಇದ್ದಷ್ಟು ವರುಷ ಮತ್ತೂ ಉಳಿಯಲಿದ್ದರೆಂಬ ನಿರೀಕ್ಷೆಯೇನೂ ಇರಲಿಲ್ಲ. ಗಾಂಧೀ ವಿಯೋಗವು ಒಂದು ದಿನ ಆಗಲೇಬೇಕಿದ್ದಿತು, ಒದು ಮಹಾತ್ಮನಿಗೆ ಹೇಳಿಸಿದ ರೀತಿಯಲ್ಲೇ ಆಯಿತೆಂಬುದು. ನಿಜಕ್ಕೂ ಸಮಾಧಾನದ ವಿಷಯ ಲೋಕದ ವಿವಿಧ ರೀತಿಯ ಕಲ್ಮಷ ನಿವಾರಣೆಯಲ್ಲೇ ಕ್ಷಣ ಕ್ಷಣವೂ ವ್ಯಯವಾಗಿದ್ದ ಆ ಜೀವನಕ್ಕೆ ಒಪಿಲ ಭಾರತೀಯರು ಮತ್ತು ಇಡೀ ಜಗತ್ತಿನ ಹೃದಯ ವನ್ನೊನ್ನೆಗೇ ತೆರೆಯಿಸುವಷ್ಟು ಗಟ್ಟಿಲದ ಮರಣ-ಸಾರ್ಥಕ ವರಣ-ಒದಗಿಬಂದ ರಲ್ಲಿ ಸತ್ಯಕ್ಕೂ ಧನ್ಯತೆಯಿದೆ.

ನಿಜ; ದೇಹಧಾರೀ ಮಹಾತ್ಮನಲ್ಲಿಲ್ಲ, ಒಂದು ದೊಡ್ಡ ಅಭಾವವು ಭಾರತದ ಜನಜೀವನದಲ್ಲಿ ಒಡೆದು ತೋರುತ್ತಿದೆಯೆಂಬುದು ಸತ್ಯ. ಇದರ ಕಹಿ ಅನುಭವವು ಇಂದಿನ ರಾಷ್ಟ್ರ ನಾಯಕರಿಗೆ ಹೆಚ್ಚಾಗಿ ಆಗುತ್ತಿರಬಹುದು; ತಲೆ ಕೆಡಿಸುವ, ಹೃದಯ ಕುಗ್ಗಿಸುವ ವಿಶೇಷ ಸನ್ನಿವೇಶಗಳು ಕೊಡಗಿದಾಗ, ತಮಗೆ ಸರ್ವಾಧಾರ ತೋರಿಸುತ್ತಿದ್ದ, ತಮ್ಮಲ್ಲಿ ಸಚೇತನ ತುಂಬಸುತಿದ್ದ ಅಮೃತ ಹಸ್ತವೊಂದು ಕಾಣೆಯಾಗಿರುವ ನೋವು ಅವರ ಎದೆಯನ್ನು ಚುಚ್ಚುತ್ತಿರಬಹುದು; ಆಂತೆಯೇ ಅಖಿಲ ರಾಷ್ಟ್ರದ ಜನತೆಗೂ ಗಾಂಧಿಜೀ ಸಂದರ್ಭಾನುಸಾರ ಕೊಡುತ್ತಿದ್ದ ಆನೇಕ ಉಪದೇಶಗಳನ್ನು ಕೇಳಿ, ಪ್ರಸಂಗೋಚಿತವಾಗಿ ಸಾಧಿಸುತ್ತಿದ್ದ ಮಾನವತೀತ ಮಹತ್ಕಾರ್ಯಗಳನ್ನು ಅನುಭವಿಸಿ, ಸಧ್ಯಕಿರುವ ನವಚೇತನ ಪಡೆಯುವ ಪ್ರಯತ್ನಗಳೇ ತಪ್ಪಿ ಹೋಗಿದೆ. ಆದರೆ ಮಹಾತ್ಮರು ಯಾವ ಸಂದರ್ಭದಲ್ಲಿ ಹೇಗೆ ಹೇಳುತ್ತಿದ್ದರು, ಎಂಬುದನ್ನು ಈಗಲೂ ಅರಿತುಕೊಳ್ಳಲಂಗುವಷ್ಟು ಅವರ ಧ್ಯೇಯ ಧೋರಣೆ, ತತ್ವಗಳು ಸರ್ವಕಾಲಿಕವಿವೆ. ನೋಲಾಗಿ ಕಠಿಣ ಸನ್ನಿವೇಶಗಳುದಗಿದಾಗಲೆಲ್ಲಾ ಅಖಿಲ ರಾಷ್ಟ್ರದ ಜವಾಬ್ದಾರಿಯನ್ನ ತಾನೊಬ್ಬನೇ ಹೊರುತಿದ್ದ ಮಹಾತ್ಮ ಮಾ ಹೋಗಿ ಭಾರತೀಯರು ತಮ್ಮ ಹೊಣೆಗಾರಿಕೆ ಬಗ್ಗೆ ತಾವೇ ನಿರ್ಧರಿಸಬೇಕಾದ ಕಾಲ ಬಂದುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಮಹಾತ್ಮರ ಬಲಿದಾನಕ್ಕಾಗಿ ದುಃಖಿಸುವ ಬದಲಿಗೆ ಅವರ ತತ್ವಗಳನ್ನು ಆಚರಣೆಗೆ ತರುವ ಕರ್ತವ್ಯಭಾರ ಮಾತ್ರ ಬಿದ್ದಿದೆ.

ಬರುವ ಅದಿತ್ಯವಾರ, ಜನವರಿ ತಾ 30 ರಲ್ಲಿ ಬಾಪೂಜಿ ಬಲಿದಾನದ ಪ್ರಥಮ ವರ್ಧಂತಿಯನ್ನು ಕಾಂಗ್ರೆಸ್ ನಿರ್ದೇಶದಂತೆ ಪ್ರತಿಯೊಂದು ಕಡೆಯವರೂ, ಪ್ರತಿಯೊಬ್ಬರೂ ಆ ಪುಣ್ಯಾತ್ಮರಿಗೆ ಹೇಳಿಸಿದ ರೀತಿಯಲ್ಲಿ ಆಚರಿಸಲಿ; ಆ ಬಲಿದಾನಿ ಮಹಾತ್ಮನ ಸ್ಮರಣೆಯಂತೆಯೇ ಅವರ ಬೋಧನೆಗಳನ್ನೂ ಹೃದಯದಲ್ಲಿ ಶಾಶ್ವತವಾಗಿ ಪ್ರತಿಷ್ಠಿಸಿಕೊಂಡು, ಅದರಂತೆ ವರ್ತಿಸುವೆನೆಂಬ ಪ್ರತಿಜ್ಞೆಯ, ಮತ್ತಾ ಕಾರ್ಯಾರಂಭದ ದಿನವನ್ನಾಗಿ ಮಾಡಲಿ ಜನವರಿ ತಾ.೩೦ನ್ನ. 'ಗಾಂಧೀ ಸ್ಮಾರಕ ನಿಧಿ'ಯನ್ನು ತುಂಬಿಸಿಕೊಡುವುದಕ್ಕೂ 'ಗಾಂಧೀ ತತ್ವ'ಗಳ ಜೀವಂತ ಸ್ಮಾರಕಗಳಾಗಿ ಸ್ವತಃ ತುಂಬಿಕೊಳ್ಳುವುದಕ್ಕೂ ಆ ದಿನವನ್ನು ಉಪಯೋಗಿಸೋಣ. ಮಹಾತ್ಮಾ ಗಾಂಧಿಯವರೀಗ ಹುತಾತ್ಮ ಗಾಂಧಿಯಾಗಿರುವಂತೆಯೇ ಅವರ ಮೇಲಿನ ಭಕ್ತಿ ಗೌರವ ಮತ್ತು ಜೈಕಾರಗಳೂ ಕಾರ್ಯರೂಪ ಧರಿಸಲಿ.

ಮದ್ಯಪಾನ ನಿರೋಧ ಕಾನೂನು ಮತ್ತು ಆಯುರ್ವೇದ

ಶ್ರೀ ಪಿ ಜನಾರ್ದನ ನಾಯ್ಕರು, ಮೆನೇಜಿಂಗ್ ಡೈರೆಕ್ಟರ್, ಭುವನೇಂದ್ರ ಪ್ರಿಂಟರ್ಸ್ ಲಿ

1947ನೇ ಇಸವಿಯ ಆಗೋಸ್ತು ತಿಂಗಳ ಆದಿಯಿಂದ ನಮ್ಮ ಜಿಲ್ಲೆಯಲ್ಲಿ ಸಮಗ್ರ ಮದ್ಯ ನಿರೋಧ ಕಾನೂನು ಜಾರಿಗೆ ಬಂದ ಬಳಿಕಾಗ್ಯಾತು ಆಯುರ್ವೇದ ಶಾಸ್ತ್ರೀಯರೀತ್ಯಾ ತಯಾರಿಸಲ್ಪಡುವ ಅಸವಗಳ ಮೇಲೆ ಇರುವ ನಿರ್ಬಂಧಗಳ ವಿಷಯವಾಗಿ ವೈದ್ಯ ಕೀಯ ವೃತ್ತಿಗೆ ಮದ್ಯಪಾನ ನಿರೋಧ ಕಾನೂನು ಸಲಿಂದ ಧಕ್ಕೆತಗಲದಂತೆ ಅವುಗಳನ್ನು ಹೊರ್ತುಗೊಳಿಸಬೇಕಾಗಿ ಮಾನ್ಯ ಸರಕಾರದೊಡನೆ ಜಿಲ್ಲೆಯ ಸಂಘ ಸಂಸ್ಥೆಗಳು ನಿವೇದಿಸಿಕೊಂಡಾಗ್ಯೂ ಈ ವಿಶಯವಾಗಿ ನಮ್ಮ ಪ್ರಜಾಸರಕಾರವು ಗಮನಕೊಡದಿರುವುದು ತೋಚಣೀಯ ಸಂಗತಿಯಾಗಿದೆ. ಸರಕಾರದ ಈ ರೀತಿಯ ಧೋರಣೆಯನ್ನು ಖಂಡಿಸಿ ನಮ್ಮ ಇಡೀ ಸ್ವಾತಂತ್ರ್ಯದಲ್ಲಿ ಅಲ್ಲಲ್ಲಿ ಸಭೆಗಳು ಜರುಗಿ ಆಯುರ್ವೇದ ಔಷಧಿಗಳನ್ನು ಸದ್ರಿ ಕಾನೂನಿನಿಂದ ಹೊರ್ತುಗೊಳಿಸಬೇಕಾಗಿ ಗೊತ್ತುವಳಿಗಳನ್ನು ಮಾಡಿ ಮಾನ್ಯ ಸರಕಾರದೊಡನೆ ನಿವೇದಿಸಿಕೊಂಡ ಸಂಗತಿಗಳು ಆಗಾಗ್ಗೆ ದೈನಿಕ ಪತ್ರಿಕೆಗಳಲ್ಲಿ ಕಂಡುಬರುತ್ತಿದೆ ಆದರೆ ಸ್ವತಂತ್ರ ಹಿಂದುಸ್ಥಾನದಲ್ಲಿ ಪ್ರಜಾ ಸರಕಾರವು ಸ್ಥಾಪಿಸಲ್ಪಟ್ಟು ಪ್ರಾಜ್ಞೀನಕಾಲ ದಿಂದ 1947ನೇ ಇಸವಿಯ ಸೆಪ್ಟಂಬರ್ ತಿಂಗಳ್ಲಿ ನಮಗೆ ಸ್ವಾತಂತ್ರ್ಯವು ಹೊರಕುವವರೆಗೆ ನಮ್ಮ ಹಿಂದುಸ್ಥಾನದ ಎಲ್ಲಾ ಪೇಟೆ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಪ್ರಧಾನವಾಗಿ ರೂಢಿಯಲ್ಲಿದ್ದ ಆಯುರ್ವೇದ ವೈದ್ಯಕೀಯ ಘಾತಕವಾದ ಕಾನೂನನ್ನು ನಮ್ಮ ಮುವಾಸ್ ಪ್ರಾಂತ್ಯದ ಮಾನ್ಯ ಸರಕಾರವು ಜಾರಿಗೆ ತಂದು ಸದ್ರಿ ಕಾನೂನಿನಿಂದ ಸಂಭವಿಸಬಹುದಾದ ತೊಂದರೆಗಳ ವಿಶಯವಾಗಿ ಸದ್ರಿ ವೈದ್ಯಕೀಯ ವೃತ್ತಿಯವರಿಂದಲೂ ಸಂಘ ಸಂಸ್ಥೆಗಳಿಂದಲೂ ನಿವೇದನೆಗಳು ಹೋದಾಗ್ಯೂ ಆ ವುಗಳ ವಿಷಯವಾಗಿ ನಿರ್ಲಕ್ಷ್ಯ ಧೋರಣೆಯನ್ನು ತಾಳಿದುದು ತುಂಬಾ ವಿಷಾದಕರ ಸಂಗತಿಯಾಗಿದೆ.

ಪೆಚ್ಚಿನ ಪ್ರಮಾಣದಲ್ಲಿ ಮಾದಕ ಪದಾರ್ಥಗಳು ಸೇರಿಕೊಂಡಿದ್ದು ಮದ್ಯಪಾನಕ್ಕೆ ಅಂಟಿಕೊಂಡಿದ್ದ ಜನರಿಗೆ ಅಕಸ್ಮಾತ್ತಾಗಿ ಔಷಧಿ ರೂಪವನ್ನು ತಾಳಿದ ಸೇಯಗಳನ್ನು ಸದ್ರಿ ಕಾನೂನಿನಿಂದ ವಿನಾಯಿತಿಗೊಳಿಸಿದುದು, ಮತ್ತು ಮಾದಕ ಪದಾರ್ಥ(Alcohol) ದಿಂದಲೇ ತಯಾರಿಸುವ ಜೇಕಿ ವಿಧದ ಔಷಧಿಗಳನ್ನು ಅವುಗಳಲ್ಲಿ ಸೇರಿಕೊಂಡಿದ್ದ ಮಾದಕ ಪದಾರ್ಥದ ಆಂಶದ ಮೇಲೆ ತೆರಿಗೆಯನ್ನು ಮಾತ್ರ ವಸೂಲಿಸುವಾ ಪದ್ಧತಿಯನ್ನು ಮಾತ್ರ ಇಟ್ಟುಕೊಂಡು ವಿನಾಯಿತಿಗೊಳಿಸಿದುದು, ಆಸವಗಳಿಗೆ ತಯಾರಿಕೆಯಲ್ಲಿ ಉತ್ಕೃಷ್ಟವಾಗಿ ಅತ್ಯಲ್ಪ ಪ್ರಮಾಣದಲ್ಲಿ ಯಾದರೂ ಅವುಗಳಲ್ಲಿ ಮಂದಕ ಪದಾರ್ಥವು ಸೇರಿಬಿಡುತ್ತವೆಂಬ ನೆವದಿಂದ ಇವುಗಳಿಗೆ ಮದ್ಯಪಾನ ನಿರೋಧಕಾನೂನು ಅನ್ವಯಿಸಿದುದು ನೋಡುವಾಗ್ಗೆ ನಮ್ಮ ಪ್ರಜಾಸರಕಾರವು ನಮ್ಮ ಆಯುರ್ವೇದ ಪದ್ಧತಿ, ಗಣಾಪ್ರಪಾರ ಮಾಡುವ ಧೋರಣೆಯನ್ನು ಸಂಶಯಿಸುತ್ತಿದೆಂದು ಸ್ಪಷ್ಟವಾಗುತ್ತದೆ. ಆದರೆ ಆಸವಾರಿಷ್ಟಗಳಲ್ಲಿ ಮಾದಕ ಪದಾರ್ಥವು ಸೇರಿಕೊಂಡಿರುತ್ತದೆಂದು ಒಂದೇ ವಿಶಯದಿಂದ ಅವುಗಳನ್ನು ಅನುಲಿಗಾಗಿ ಉಪಯೋಗಿಸಬಹುದೆಂದು ಮಾನ್ಯ ಸರಕಾರದವರು ಧೋರಣವನ್ನು ತಾಳಿದುದು ಮತ್ತು ಪೆಚ್ಚಿನ ಪ್ರಮಾಣದ ಅಮಲುಪದಾರ್ಥಗಳು ಸೇರಿರುವ ಔಷಧಿಗಳನ್ನೂ ಪಯೋಗಗಳನ್ನೂ ವಿನಾಯಿತಿಪಡಿಸಿದುದು ಈ ರೀತಿಯ ವಿಚಿತ್ರ ಧೋರಣೆಯನ್ನು ನಮ್ಮ ಮಾನ್ಯ ಸರಕಾರದವರು ತಳಿದುದು ತುಂಬಾ ಹಾಸ್ಯಾಸ್ಪದವಾಗಿದೆ. ಆದ ಕಾರಣ ಇನ್ನಾದರೂ ನಮ್ಮ ಸರಕಾರವು ನ್ಯಾಯವಾದ ರೀತಿಯಲ್ಲಿ ತೀರ್ಮಾನಿಸುವುದೇ?

(ಮುಂದುವರಿಯುವುದು)

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!
ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ನಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.
ವುಡ್‌ಲ್ಯಾಂಡ್ಸ್, ಉಡುಪಿ
WOODLANDS, UDIPI.
Brahmins Boarding & Lodging
Sadananda Rao, Kunjoor,
Manager.

ಸದ್ಯದ ಒಳಗೊಂದಲಗಳು

ನಿಯೋಜಿತ ರೈಲ್ವೇ ಮುಷ್ಕರ

ತಮ್ಮ ಸಂಬಳ, ಭತ್ತೆಗಳ ಹೆಚ್ಚಳ ವತ್ತು ಇತರ ಬೇಡಿಕೆಗಳನ್ನು ಮುಂದಿಟ್ಟು ಅಖಿಲ ಭಾರತ ಮುಷ್ಕರವನ್ನಾರಂಭಿಸುವ 'ಎಸ್ಮರ್ ಮತ ಸಂಗ್ರಹ'ವನ್ನು ಆ. ಭಾ. ರೈಲ್ವೇ ಕೆಲಸಗಾರರ ಫೆಡರೇಶನು ಶ್ರೀ ಜೈಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಕೈಗೊಂಡಿದೆಯಷ್ಟೆ ? ಇದೇ ತಾ. 21ರಲ್ಲಿ ಆ ಫೆಡರೇಶನಿನ ಕಾರ್ಯಕಾರೀ ಸಮಿತಿಯು ಶ್ರೀ ಜೈ ಪ್ರಕಾಶರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಸೇರಿ, ಅದರ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ಸದಸ್ಯರೊಳಗೆ ತೀವ್ರ ಭಿನ್ನಾಭಿಪ್ರಾಯ ತೋರಿ ಬಂದು ಯಾವ ನಿರ್ಧಾರವೂ ಆಗಿಲ್ಲ. ಮುಷ್ಕರ ಸಂಬಂಧದ ನಿರ್ಧಾರವು ಫೆಬ್ರವರಿ ತಾ. 16ರಲ್ಲಿ ಸೇರಲಿರುವ ಫೆಡರೇಶನಿನ ಜನರಲ್ ಕೌನ್ಸಿಲಿನಲ್ಲೇ ಆಗಲೆಂದು ಮುಂದುವರಿಸಲ್ಪಟ್ಟಿದೆ. ಈ ನಡುವೆ ಸರಕಾರವು ರೈಲ್ವೇ ಕೆಲಸಗಾರರಿಗೆ ತಿಂಗಳಿಗೆ 10 ರೂಪಾಯಿ ಅಧಿಕ ತುಟ್ಟಿಭತ್ತೆಯನ್ನು ಜಾಹೀರು ಮಾಡಿದೆ. ಇದರಿಂದ ರೈಲ್ವೇ ಕೆಲಸಗಾರರಾಗಲೀ, ಒಪ್ಪಂತೆಯೇ ಮುಷ್ಕರ ಮತ ಸಂಗ್ರಹಿಸುವ ಟಪ್ಪಾಲು ತಂತೀ ಮುತ್ತೆಗಳ ನೌಕರರಾಗಲೀ ಸಮಾಧಾನಗೊಂಡಿಲ್ಲ. ಪೂರ್ಣ ತಿಂಗಳ ಪ್ರಥಮ ವಾರದಲ್ಲಿ ಹೊಸ ರೈಲ್ವೇ ಕೆಲಸಗಾರ ಮಹಾಮಂಡಲದ ಸಹಯೋಗದ ಪರಮಾಗಿ ರಾಜೀ ಮಾತುಕತೆ ನಡೆಯಲಿದೆ. ಕಮ್ಯೂನಿಸ್ಟ್ ಸದಸ್ಯರು ಸರಕಾರದೊಡನೆ ಸಂಧಾನಕ್ಕೆಳೆಯುವದಕ್ಕೂ ಜೈಪ್ರಕಾಶ್ ನಾರಾಯಣರ ಧುರೀಣತ್ವಕ್ಕೂ ಬದ್ಧ ವಿರೋಧವಿದ್ದಾರೆ. ತಮ್ಮ ಬೇಡಿಕೆಗಳು ಮಟ್ಟಿಗೆ ಒಪ್ಪುತ್ತ ವಿದ್ದರೂ ಮುಷ್ಕರಕ್ಕೆಳೆಯುವ ಕುರಿತು ಕೂಲಿಗಾರ ಸಂಘದೊಳಗೇನೇ ಭಿನ್ನಾಭಿಪ್ರಾಯಗಳಿವೆ.

ಕಲ್ಕತ್ತದ ಗೊಂದಲ

ಜನವರಿ ತಾ. 18ರಲ್ಲಿ 144ನೇ ಸೆಕ್ಷನ್ ಮುರಿದು ಹೊರಡಲಿದ್ದ ಕಲ್ಕತ್ತೆಯ ೬ ಎಳಸರಿ ಯುವಕರ ಸುರಪಣೆಗಳನ್ನು ಪೋಲೀಸರು ಪಡೆದಾಗ, ಅವರ ಮೇಲೆ ಕಲ್ಲು ಇಟ್ಟಿಗೆಗಳೂ ಬೋಂಬುಗಳೂ ಒಗಯಲ್ಪಟ್ಟವೆಂದೂ ಪೋಲೀಸರು ಗುಂಡು ಹಾರಿಸಿ ಒಟ್ಟಿಗೆ ೨ ಮಂದಿ ಸತ್ತು 45 ಮಂದಿ ಜಖಂಗೊಂಡು 200 ಕ್ಕೂ ಮಿಕ್ಕವರು ದಸ್ತಗಿರಿಯಾಗಿದ್ದಾರೆಂದೂ ಹಿಂದಿನ್ಯದು ಪೋಲೀಸರಿಗೂ ಜನಮಾನಗಳಿಗೂ ನಡುವೆಂದೂ ಪ್ರಕಟವಾಗಿದೆ. ತಾ. 18 ಮತ್ತು 19 ಎರಡು ದಿನಗಳಲ್ಲೂ ಗಲಭೆ ಮತ್ತು ಗುಂಡಿನೆತೆಗಳಾಗಿವೆ. ಪಂಡಿತ ನೆಹರುಗಳು ಕಲ್ಕತ್ತಕ್ಕೆ ಬಂದ ಆ ದಿನವೇ ಅವರು ವಿಮಾನ ನಿಲ್ದಾಣದಿಂದ ಬರುವ ಹಾದಿಯಲ್ಲಿ ಕೆಲವರ ಪ್ರೇರಣೆಯಂತೆ ನಿರಾಶ್ರಿತರು ಅಡ್ಡಗಟ್ಟಿ ಮಳುಗಿದ್ದರಂತೆ. ಅಧಿಕಾರಗಳು ಹಾದಿಯನ್ನೇ ಬದಲಾಯಿಸಿದ್ದರು. ಆ ಮೇಲೆ ಸುಮಾರು 5000 ನಿರಾಶ್ರಿತರು ನೆಹರುಗಳ ಭೇಟಿಗೆಂದು ಅವರು ಉಳಿದಿದ್ದಲ್ಲಿಗೆಹೋಗಿ ವ್ವರಂತೆ ಅವರು ತಮ್ಮ ನಾಲ್ಕೈದು ಮಂದಿ ಪ್ರತಿನಿಧಿಗಳನ್ನೇ ನೆಹರುಗಳ ಬಳಕಳುಹಿಸಬೇಕೆಂದು ಪೋಲೀಸ್ ಅಧಿಕಾರಿಗಳು ಕೇಳಿ ಕೊಂಡರೂಷಿವರೊಪ್ಪಲಿಲ್ಲ. ಆ ಮೇಲೆ ತಾ 18ರಲ್ಲಿ ಮುನಃ ಈ ಗಲಭೆಗಳು. ಈಗ ಕಲ್ಕತ್ತೆ ಶಾಂತವಾಗಿದೆ ಗಲಭೆಗಳ ಕುರಿತು ಸರಕಾರವು ವಿಚಾರಣೆ ನಡಿಸಲಿದೆ.

ಆರ್. ಯಸ್. ಯೆಸ್. ಗೊಂದಲಿ ಮುಗ್ಧಾಯ

ಸುಮಾರು ಒಂದೂವರೆ ತಿಂಗಳ್ಲಿ ದೇಶದ ಆ ಮೂಲೆಯಂದೀ ಮೂಲೆಯವರೆಗೆ ಸತ್ಯಾಗ್ರಹ ನಾಮಧಾರಿ ಗೊಂದಲನೆಬ್ಬಿಸಿ, ಕೊನೆ ಕೊನೆಗೆ ಪೂರ್ಣ ನೆಲಹಿಡಿಯುತ್ತಾ ಬಂದಿದ್ದ ಆರ್.ಯಸ್ ಯಸ್. ಚಳವಳವನ್ನು ನಿಶ್ಶಸ್ತ್ರವಾಗಿ ನಿಲ್ಲಿಸಲಾಗಿದೆಯೆಂದು ಜನವರಿ ತಾ. 21ರಲ್ಲಿ ನಾಗಪುರದ ಸಿಯೋನಿ ಜೈಲಲ್ಲಿರುವ ಆರ್. ಯಸ್. ಯಸ್. ನಾಯಕ ಶ್ರೀ. ಎಸ್. ಯಸ್. ಗೋಲ್ವಾಲ್ಕರರು ಪ್ರಕಟಿಸಿದ್ದಾರೆ. ಹಲವರ ಪ್ರೇರಣೆಯಂತೆ ಪೂನೆಯ ಶ್ರೀ ಕೇತ್ಕರರು ಡಾ| ಪರಾಂಜಪೆ, ಡಾ| ಹಡ್ಗೇಕರ್, ಡಾ| ಜಯಕರರ ಸಲಹೆಯಮ್ಮ ಪಡೆದುಕೊಂಡು,ಢಿಲ್ಲಿಗೆ ಹೋಗಿ ಶ್ರೀ. ಗೋಲ್ವಾಲ್ಕರರೊಡನೆ ಸುತಾರಾಡುವ ಸಮ್ಮತಿಯನ್ನು ಸರ್ದಾರ್ ಪಟೇಲರಿಂದ ಪಡೆದು ತಾ 12 ಮತ್ತು ತಾ 19 ರಲ್ಲಿ ಎರಡು ಬಾರಿ ಗೋಲ್ವಾಲ್ಕರರೊಡನೆ ಮಾತಾಡಿ ಚಳವಳ ಹಿಂದೆಗೆಯಲೊಪ್ಪಿಸಿದರು. ಬಹುಮ್ಯಾರ ಪರಿಸ್ಥಿತಿಯೊಂದಿಗೆ ಸರಕಾರವೇ ಈ ಸಂಧಾನವನ್ನು ಆರಂಭಿಸಬೇಕೆಂದು ಶ್ರೀ ಗೋಲ್ವಾಲ್ಕರರು ಪ್ರಭುಮತ: ವಾದಿಸಿದ್ದರೂ, 'ಯಾವುದೇ ಶರತ್ತಿನ ಸೊಲ್ಲು ಮುಂದೆ ಬರಕೂಡದು; ಸರಕಾರಕ್ಕಿಲ್ಲಿ ಕೆಲಸವೇ ಇಲ್ಲ'-ಎಂದು ಸರ್ದಾರರು ಕಂಠೋಕ್ತವಾಗಿ ಹೇಳಿದುದರಿಂದ ಕೊನೆಗೆ ನಿಶ್ಯರ್ತವಾಗಿ ಚಳವಳ ರದ್ದು ಪಡಿಸಿಕೊಳ್ಳಲು ಶ್ರೀ ಗೋಲ್ವಾಲ್ಕರರೊಪ್ಪಿದರೂ. ಆರ್. ಯಸ್. ಯಸ್ ಸಂಘದ ನಿಬಂಧನೆಗಳನ್ನು ಪ್ರಕಟಿಸುವದಕ್ಕೂ ಶ್ರೀ ಗೊಳ್ವಾಲ್ಕರೊಪ್ಪಿರುವರೆಂದು ತಿಳಿದುಬರುತ್ತದೆ ಇತೀ ರಾಷ್ಟ್ರದಲ್ಲಿ ಸುಮಾರು 30ರಿಂದ 35 ಸಾವಿರದ ವರೆಗೆ ಆರ್. ಯಸ್. ಯಸ್ ಮಂದಿ ದಸ್ತಗಿರಿಯಾಗಿದ್ದಾರೆಲ್ಲೆ, ಅದಕ್ಕೂ ಹೆಚ್ಚಿನವರು ಹೊಡೆತಗಳಿಗೀಡಾಗಿರಬಹುದು. ಅಧಿಕ ಸಂಖ್ಯೆಯಲ್ಲಿ ಶಾಲಾ ವಿದ್ಯಾರ್ಥಿಗಳೇ ಇದರಲ್ಲಿದ್ದುದರಿಂದ ಅಂಥವರು ಪರೀಕ್ಷೆಗೆ ಕುಳಿತುಕೊಳ್ಳದಂತಾಗಿದೆ; ಸರಕಾರೀ ನೌಕರಿಯಲ್ಲಿದ್ದ ಹಲವರು ಕೆಲಸ ಕಳಕೊಂಡಿದ್ದಾರೆ.

ಭೋಪಾಲ ಸಂಸ್ಥಾನದಲ್ಲಿ ಅಲ್ಲಿಯ ನವಾಬರು ತನ್ನ ಕೈಗೊಂಬೆ ಮಂತ್ರಿಗಳನ್ನು ಕಟ್ಟಿಕೊಂಡು ಜನರ ಹಕ್ಕು ಬಾಧ್ಯತೆಗಳನ್ನು ಹತ್ತಿಕ್ಕಿ, ಜನತಾ ಚಳವಳಗಳ ಮೇಲೆ ಕರೋರ ದಬ್ಬಾಳಿಕೆಯನ್ನು ನಡೆಸುತ್ತಿರುವ ಕುರಿತು ಸರ್ದಾರ್ ಪಟೇಲರು ನವಾಬರನ್ನು ಎಚ್ಚರಿಸಿದ್ದಾರೆ. "ಇನ್ನು ಐದು ವರುಷಗಳವರೆಗೆ ಯಾವ ಅಂತರಿಕ ಗೊಂದಲವನ್ನೂ ಎಬ್ಬಿಸದೆ ರಾಷ್ಟ್ರದ ಪುನರ್ನಿರ್ಮಾಣಕ್ಕೆ ಅವಕಾಶವನ್ನಾಡಿರಿ" ಎಂದು ಸರ್ದಾರರು ಭೂಪೇಯರನ್ನು ವಿಜ್ಞಾಪಿಸಿಕೊಂಡಿದ್ದಾರೆ.

ಬಾಪೂಜೀ ಬಲಿದಾನ ವರ್ಧಂತಿ ಅಥವಾ 'ಸರ್ವೋದಯದಿನ'ದ ಆಚರಣೆ

ಮಹಾತ್ಮಾ ಗಾಂಧಿಯವರ ಬಲಿದಾನದ ಪ್ರಥಮ ವರ್ಧಂತಿ ಇದೇ ತಾ 30.1-49ಕ್ಕೆ ಅಧಿತ್ಯನಾರವನ್ನು ಕೃತಕಾಡಂಬರವಿಲ್ಲದೆ, ಗಾಂಧೀಜೀ ತತ್ವನಿಧಿಗನುಸಾರವಾಗಿ ನೂಲು ವದು, ಗ್ರಾಮ ಪುನರ್ನಿರ್ಮಾಣ, ಗ್ರಾಮೋದ್ಯ ಭವೃದ್ಧಿ, ಜನಜಾಗ್ರತಿ ಪ್ರಚಾರ, ಮುತ್ತರ ವಿಧಾಯಕ ಕಾರ್ಯಗಳಿಂದ ಇಂದೂ 'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ'ಗೆ ಧನ ಸಹಾಯ ಮತ್ತು ಸಂಗ್ರಹ ಮಾಡುವ ಮೂಲಕವೇ ಆಚರಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ದೇರಿಸಿದೆ ಈ ದಿನ ನಡೆಯುವ ಸಾರ್ವಜನಿಕ ಸಭೆಗಳಲ್ಲಿ ಭಾಷಣವೇನೂ ಇಲ್ಲದೆ, ಕಾಂಗ್ರೆಸ್ ಕಮಿಟಿ ಕಯಾಂಗಿರುವ ಸಂದೇರವನ್ನಷ್ಟೇ (ಕಳದ ವಾರದ ನವಯುಗದಲ್ಲಿ ಪ್ರಕಟವಾಗಿದೆ) ಓದತಕ್ಕದ್ದೆಂದೂ ಕಾಂಗ್ರೆಸ್ ನಿರ್ಣಯವಿದೆ.

ಉಡುಪಿಯ ಕಾರ್ಯಕ್ರಮ—ಉಡುಪಿಯಲ್ಲಿ ಇದೇ ತಾ 30ನೇ ಆದಿತ್ಯವಾರ 2ಘಂಟೆಗೆ ಟೌನ್‌ಹಾಲ್‌ನಲ್ಲಿ ನಿಸರ್ಗ ಹಾಲ್'' ನಲ್ಲಿರುವಲ್ಲಿ ಉಡುಪಿ ತಾಲೂಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಾಳೆಬೈಲು ಬೀಡು ಕೃಷ್ಣಯ ಜೆಡ್ಡಿಯವರು ಧ್ವಜಾರೋಪಣ ಮಾಡುವರು. ಆ ಮೇಲೆ ಡಾ| ಸುಂದರರಾಮ ಶೆಟ್ಟಿಗಳ ಅಧ್ಯಕ್ಷತೆಯಲ್ಲಿ 2½ ಘಂಟೆಯಿಂದ 4½ ಘಂಟೆಯವರೆಗೆ ಸಾರ್ವಜನಿಕ ಸಾಲಾ ಏಕೆ—4½ಯಿಂದ 6ರ ವರೆಗೆ ಶ್ರೀ ಬಿ. ರಾಮಾ ದಾಸ ಶೆಟ್ಟಿ ಮತ್ತು ಪಾರ್ಟಿಯವರ ರಾಷ್ಟ್ರಗೀತೆ ಮತ್ತು ಗಾಂಧೀ ಗೀತೆಗಳು-ಕಾಂಗ್ರೆಸಿನ ಸಂದೇರವಾಚನ-ಧ್ವಜಾವರೋಹಣ ಇತ್ಯಾದಿ. ಈ ಕಾರ್ಯಕ್ರಮಗಳಲ್ಲಿ ಎಲ್ಲರೂ ಸದಭಿಮಾನಿಗಳಾಗಬೇಕೆಂದೂ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಧನ ಸಂಗ್ರಹಿಸಲು ದೇರ ಸೇವಕಿಯರು ಮನೆಮನೆಗೆ ಬರುವಾಗ, ಅವರು ಆ ಸ್ಮಾರಕ ನಿಧಿಯು ಅಧಿಕೃತ ಪ್ರತಿನಿಧಿಗಳಿಂದವರಿಂದೆ ಎಲ್ಲರೂ ಮುಕ್ತ ಹಸ್ತದಿಂದ 'ಗಾಂಧೀ ನಿಧಿ'ಯ ತಮ್ಮ ಪಾಲನ್ನು ಆದಷ್ಟು ಬೇಗ ಕೊಡಬೇಕೆಂದೂ ಉಡುಪಿ ತಾಲೂಕ್ ಕಾಂಗ್ರೆಸ್ ಕಮಿಟಿಯ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರು ವಿಜ್ಞಾಪನೆ ಯಿದೆ.

ಪರೀಕ್ಷಣಾ ಕಾಲಕ್ಷೇಪ ಇದೇ ತಾ 30 ರಂದು ಏನು ದಿನಗಳತನಕ ರಾತ್ರಿ 9ರಿಂದ 11½ ಕಾಸಿನವರೆಗೆ ಶ್ರೀ ಅನಂತೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಬೆಂಗಳೂರಿನ ಶ್ರೀ ಗೋಪಾಲದಾಸ ಸಮಿತಿಯವರಿಂದ ಕಾಲಕ್ಷೇಪವು ಶ್ರೀ ಕಲ್ಕೂರ ವೈಸಾಚಾರ್ಯರಿಂದ ನೊಗಲಾಗಿ ಹತ್ತು ಸಮಸ್ತ ಭಜನಾವಾರಾತ್ರಿಯದಲ್ಲಿ ಜರಗಲಿರುವುದು. ಸುಹೃಜ್ಜನರು ಭಾಗಿಗಳಾಗಬೇಕಾಗಿ ಸುಬುಧಜನ ವರ್ಗದ ವಿನಂತಿಯಿದೆ.

ನಡೆಯುವ ಚಿತ್ರ

ಫಿಲ್ಮ್‌ಸ್ಥಾನದವರ

"ಶಿಕಾರಿ"

ವೀರಾ, ಪಾರೂ, ಆಶೋಕ್ ಕುಮಾರ್.

ಮುಂದಿನ ಬದಲಾವಣೆ

ಎ. ವಿ. ಯಂ. ಪವರ

"ವಿಟ್ಟು" (ನಾವಿಬ್ಬರು)

ಮಹಾಲಿಂಗನವ್, ಜೀವಿಕನುಲಾ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ದಿ ಕೊರ್ಡಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ. 1-8-0; ಟಪ್ಪಾಲು ಖರ್ಚಾಗಿ ರೂ 1-13-0

ಶ್ರೀ. ಯು. ಜೆ ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕವ್ಯವಹಾರ ಬೋಧಿನಿ-

ವ್ಯವಹಾರಜ್ಞಾನದರ್ಪಣ

ಅತ್ಯಂತ ಅನಿವಾರ್ಯವೂ ಉಪಯೋಗೀ ಪುಸ್ತಕ

ಬೆಲೆ ರೂ. 1-8-0; ಟಪ್ಪಾಲು ಖರ್ಚಾಗಿ ರೂ 1-13-0

ಪ್ರತಿಗಳು ಸಿಗುವ ಪ್ರಮುಖ ಸ್ಥಳಗಳು:

1. ಸ್ಕೂಲ್ ಬುಕ್ ಕಂಪೆನಿ, ನಂಗಳೂರು, 2. ನವಭಾರತ ಬುಕ್ ಡಿಪೊ, ಉಡುಪಿ. 3. ಸ್ವತಂತ್ರ ಭಾರತ ಬುಕ್ ಕಂಪೆನಿ ಪೋಸ್ಟ್, ಬೋಂಬಾಯಿ. 4. ಎಂ. ಎಸ್. ಮಯ್ಯ ಪುತ್ರರು ೦ ನವಯುಗ ಪ್ರೆಸ್, ಉಡುಪಿ 6. ಜಯರಾಮ ಪಡಿಯಾರ, ಕಲ್ಯಾಣಪುರ.

ಅಮೃತಾಂಜನ ತೈಲದಿಂದ, ಕಡುವೇದನೆ, ಕಾಯಿಲೆ ಕೂಡಲೆ ಗುಣ, ಶುಷ್ಕ, ಕಲ್ಲು ನಾರದೆನಗೆ ಎಂದೆನಿಸುವ ಭೂಯಗಳು ಬಾಧೆ ಕೊಳ್ಳುತ್ತಿರಾ, ಬೇಗ ಬಿಸಿ ಮುಂತಾದ ಬೇಕಲ್ಲಬಾಕ್ಕ ನೋವಿನ ನಿವಾರಣಾ ಎಲ್ಲ ರೋಗಗಳಿಗಾಗಿಯೂ

REGD.

ಕಪ್ಪು ಕಂಪೆನಿ ಮತ್ತು ಸಣ್ಣ ಸಣ್ಣ ಕಲ್ಯಾಕ್ಷರ

ಅಮೃತಾಂಜನ ಲಿಮಿಟೆಡ್

ಮಹಲಾಸು.

ಟೂಲಾಯಿ ಮತ್ತು ಕಲ್ಯಾಕ್ಷ-

ಬ ಕನ್ನಡ

ಅಡ್ಯನಡ್ಕ ಯೂನಿಅಡ್ಕ ಎಂಬ ಕಾಡಿನಲ್ಲಿ ಜನಾಬ್ ಮಹಮ್ಮದ್ ಬ್ಯಾರಿಯವರು ಒಂದು ಹುಲಿಯನ್ನು ಕೊಂದಿರುವರು.

ಶೆಲ್ವ ಸತ್ಯನಾರಾಯಣ ನೇಕಾರರ ಸಹಕಾರ ಸಂಘದ ಬಿಲ್ಲರೆ ವಸ್ತ್ರವ್ಯಾಪಾರದ ಶಾಖೆಯೊಂದನ್ನು ಬದಿಯಡ್ಕದಲ್ಲಿ ಈಚೆಗೆ ಶ್ರೀ ಈಳಂತೋಡಿ ಕೃಷ್ಣ ಭಟ್ಟರು ಹಸ್ತಗಿಂದ ತೆರೆಯಲ್ಪಟ್ಟಿದೆ.

ಪುತ್ತೂರು ಮಂಗಳೂರಿನ 'ನವಜೀವನ' ವ್ಯಾಯಾಮ ಶಾಲೆಯ ಶಾಖೆಯೊಂದು ಈಚಿಗೆ ಇಲ್ಲಿ ತೆರೆಯಲ್ಪಟ್ಟಿದ್ದು ಜಾತಿ ಮತ ಭೇದವಿಲ್ಲದೆ ಸರ್ವರಿಗೂ ಇದರಲ್ಲಿ ಪ್ರವೇಶ ವಿದೆ.

ಕುಂಬಳೆ:– ತಾ 20ರಲ್ಲಿ ಕೃಷಿಇಲಾಖೆಯ ಸಹಾಯಕ ಡೈರೆಕ್ಟರ್ ಶ್ರೀ ವಿಜಯ ರಾಘವಾಚಾರ್ಯರು ಜಿಲ್ಲಾ ಕೃಷಿಕಾರ್ಯ ಅಸೀಸರ್ ಶ್ರೀ ಕೆ. ಜಿ. ಭಂಡಾರಿಗಳೊಂದಿಗೆ ಬಂದು ಮಾದರಿ ಕೃಷಿಕ್ಷೇತ್ರಗಳನ್ನು ಕಂಡು, ಬರುವ ವರ್ಷ ಇಲ್ಲಿ ಪ್ರಾರಂಭಿಸಬೇಕಾದ ಕೃಷಿಕಾರ್ಯಗಳನ್ನು ನಿಶ್ಚಯಿಸಿರುವರು.

ತಾ 21ರಲ್ಲಿ ಕೃಷ್ಣನೆಂಬವನು ಸಮುದ್ರದಲ್ಲಿ ನೋಡಿಸಿಕ್ಕಿದ ಒಂದು ದೊಡ್ಡ ಮತ್ಸ್ಯದ ಬಾಲವನ್ನು ಹಿಡಿದಾಗ ಮೀನು ಅವನನ್ನು ಕಚ್ಚಿ ಸಮುದ್ರಕ್ಕೆಳೆದೊಯ್ಯಲಾರಂಭಿಸಿದರೂ ಅದನ್ನು ನೋಡಿ ಸಮೀಪದಲ್ಲಿದ್ದ ಜನರು ಅವನನ್ನು ತಡೆದು ಹಿಡಿದು ಅವನನ್ನು ಬದಿಸಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರೂ ಸಂಜೆ ಅವನು ತೀರಿಹೋಗಿರುವನೆಂದೂ ತಿಳಿದುಬರುತ್ತದೆ.

ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ರಥೋತ್ಸವವು ತಾ. 10-2-49ರಿಂದ 15-2-49ರ ತನಕ ಜರಗಲಿರುವುದು. ತಾ 13ಕ್ಕೆ ರಥಾರೋಹಣ, ತೆರೆದೀಪಾದಿಗಳು ಜರಗಲಿವೆ. ಸರ್ವರಿಗೂ ಸ್ವಾಗತವಿದೆಯೆಂದು ಒಡಲ್ತೆ ಮೊಕ್ತೇಸರರ ಶ್ರೀ. H. ಕೇಶವ ಹೆಗ್ಡೆರು ತಿಳಿಸುತ್ತಾರೆ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಧಾರವಾಡ, ಬೆಳಗಾಂವ

ಬಾಳಿಕೂರು:– ಶ್ರೀ ಪಂಜಲಿಂಗೇಶ್ವರ ಕೃಷ್ಣಾಷ್ಟಮೀ ಉತ್ಸವದ ಕನ್ನಡ ಕಲಾರಂಗ ನಂಬಿಪಾ ಬಾರಕೂರು ಇವರು ತಮ್ಮ ಜನ್ಮ ಸ್ಥಳವಾದ ಬಾರಕೂರಿನಲ್ಲಿ ಇದೇ ತಿಂಗಳ ಅಂತ್ಯದೊಳಗೆ, ಕರ್ನಾಟಕದ ಪ್ರಸಿದ್ಧರಾದ ನಟನಟಿಯರಿಂದೊಡಗೂಡಿ, ತಮ್ಮ ಅತ್ಯಮೋಘವಾದ ನಾಟಕಗಳನ್ನು ಅಡಲಿರುವರು ಎಂತ ತಿಳಿದು ಬರುತ್ತದೆ.

ಮೂಡಬಿದ್ರೆ ಜೈನ್ ಪ್ರೌಢ ಪಾಠಶಾಲೆಯ ಸಥರ್ಂತ್ಯೋತ್ಸವವು ಇದೇ ತಾ 29 ನೇ ರವಿವಾರ ಸಂಜೆ 6 ಗಂಟೆಗೆ ಶ್ರೀ ಕೋಟಿ ರಾಮಯ್ಯಸ್ವಾಮಿ ಕಾರಂತರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಮೂಲ್ಕಿ ಮೂಲ್ಕಿ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಬಿ. ಸದಾಶಿವ ರಾವ್ ಅವರು ಕುಂದಾಪುರ ಜ್ಯೂನಿಯರ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೂ, ಸಹಾಯಕ ಉಪಾಧ್ಯಾಯರಾದ ಶ್ರೀ ಕೆ. ಸಂಜೀವ ಶೆಟ್ಟಿರು ಬೈಂದೂರು ಹೈಸ್ಕೂಲಿನ ಹೆಡ್ಮಾಸ್ಟ್ರರಾಗಿಯೂ ವರ್ಗಾಯಿಸಲ್ಪಟ್ಟಿರುವುದರಿಂದ, ಅವರನ್ನು ಬೀಳ್ಕೊಡುವ ಸಮಾರಂಭವು ಆ ಶಾಲಾ ಆಡಳಿತಕ ವೃಂದದ ವತಿಯಿಂದ ಈಚೆಗೆ ಶ್ರೀ ಸುರತ್ಕಲ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಪಾಣೆ ಮಂಗಳೂರು ಕಳೆದ ತಾ 11 ರಲ್ಲು ಪಾಣೆ ಮಂಗಳೂರು ಕಸ್ಬಾ ಗ್ರಾಮ ಸ್ವರಾಜ್ಯ ಸಭೆಯು ನ. ಕ. ಜಲ್ಲಾ ಪಂಚಾಯತ ಆಫೀಸರ್ ಶ್ರೀ ಕೆ ತೀನ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಿ ಈ ಗ್ರಾಮದ ಪಂಚಾಯತ ಬೋರ್ಡಿಗೆ ।। ಸದಸ್ಯರು ಚುನಾಯಿಸಲ್ಪಟ್ಟರು. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯು ಫೆಬ್ರವರಿ 3ರಂಗಳ ತಾ ಪಂಚಾಯತ ಕೋರ್ಟಿನ ಕಟ್ಟಡದಲ್ಲಿ ಬೆಳಿಗ್ಗೆ 10 ಗಂಟೆಗೆ ಜರಗುವುದಾಗಿ ತಿಳಿದುಬರುತ್ತದೆ.

ಬಾಳ್ಕೂರು ಶ್ರೀ ಭಂಡಾರಕೆರೆ ಮಠದಲ್ಲಿ ಎಂದಿನಂತೆ ಈ ಜಾರಿಯೂ ರಥಸಪ್ತಮಿ, ಭೀಷ್ಮಾಷ್ಟಮಿ ಮತ್ತು ನುಡ್ಯನವಮಿ- ಮೂರು ದಿವಸಗಳಲ್ಲಿ ಶ್ರೀ ಭಂಡಾರಕೆರೆ ಮಠದ ಶ್ರೀಪಾದಂಗಳವರ ನೇತೃತ್ವದಲ್ಲಿ ಧಾರ್ಮಿಕ ಉಪನ್ಯಾಸಗಳು, ಪೂಜ್ಯ ಗ್ರಂಥಗಳಲ್ಲಿ ಪರೀಕ್ಷೆ, ಹರಿಕಥಾ ಕಾಲಕ್ಷೇಪಾದಿ ಕಾರ್ಯಕ್ರಮಗಳು ಜರಗಲಿರುವುವು.

ಕಾರ್ಕಳ ದ. ಕ. ಜಿಲ್ಲಾ ಹೆಲ್ತ್ ಕಾನ್ಫರೆನ್ಸು ಫೆಬ್ರವರಿ 3ರಂಗಳ ತಾ 19 ಮತ್ತು 20 ರಲ್ಲು ನುಡ್ಯಾಸಿನ ಕೆಪ್ಟನ್ ಜೆ. ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗುವುದು. ಮದ್ರಾಸಿನ ಹೆಲ್ತ್ ಮಿನಿಸ್ಟರ್ ಶ್ರೀ ಎ. ಬಿ. ಶೆಟ್ಟಿರು ಪರಿಷತ್ತಿನ ಉಘ್ಘಾಟನೆ ಮಾಡುವರು. ಪತ್ರಪ್ರದರ್ಶನವನ್ನು ಮದ್ರಾಸಿನ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಅವರು ತೆರೆಯುವರು.

ಕುಂದಾಪುರ ವಿ. ಪಿ. ಮನಿಯಾರ್ಡರ್ ಫಾರ್ಮಿನಲ್ಲಿಯು ರೂಪ್ಯಾ 73-8-0 ನ್ನು ರೂಪ್ಯಾ 23 8-0 ಎಂದು ಜಮಾ ಬರೆದು ಬಟ್ಟಾವಣೆ ಲಫೀಸಿನಲ್ಲಿ ಜಮಾ ನಿರಾಕರಣೆ ಮೂಲ ಅಂಕೆಯನ್ನೇ ಬರಯಿಸಿದ ತಪ್ಪಿನಾಗಿ ಕುಂದಾಪುರ ಸೋಸ್ಟಾಫೀಸಿನ ಕ್ಲಾರ್ಕ್ ಗೋವಿಂದ ಎಂಬವರಿಗೆ ರೂಪ್ಯಾ ಆರುವತ್ತು ಜುಲುಮಾನೆ ಮತ್ತು ಕೋರ್ಟು ನುಮಿಯುವನಸಕ ರಿಕ್ಷೆ ವಿಧಿಸಲಾಯಿತು.

ಒಂದೇ ವರ್ಷದಲ್ಲಿ
ನೊನಲು ಮುದ್ರಣದ ಪ್ರತಿಗಳೆಲ್ಲಾ ಮುಗಿದು
ಇದೀಗ ಎರಡನೆ ಬಾರಿ ಪ್ರಕಟವಾಗಿದೆ—
ಡಾ| ಕೊರಡ್ಕಲ್ ವೆಂಕಟರಾಯರ
ಮನೆ-ಮದ್ದು
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಮತ್ತು
ಸ್ಕೂಲ್ ಬುಕ್ ಏಂಡ್ ಲಿಟರೇಚರ್ ಸೊಸೈಟಿ, ಮದ್ರಾಸು,
ಇವರಿಂದ ಬಹುಮಾನ ಪಡೆದ ಅತ್ಯುಪಯೋಗೀ ಪುಸ್ತಕ.
ಈ ಪುಸ್ತಕದಲ್ಲಿ, ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇವೆ. ಹೆರಿಗೆ ಮಾಡಿಸುವ ವಿಧಾನವನ್ನು ವಿಸ್ತಾರವಾಗಿ ಹೇಳಿದೆ.
ಬೆಲೆ ರೂ. 2—0—0. ಟಪ್ಪಾಲು ದ್ವಾರ 2—6—0.
(1) ನವಭಾರತ ಬುಕ್ ಡಿಪೊ, ಉಡುಪಿ, ಆಥವಾ
(2) ನವಯುಗ ಪ್ರೆಸ್, ಉಡುಪಿ.

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ
ವಿರೋಧಿ ಸಂವತ್ಸರದ (1949 - 1950)
ನವಯುಗ ಪಂಚಾಂಗ
ನಿತ್ಯ ಸಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.
ಪ್ರತಿ 1ಕ್ಕೆ 0-5-0. 25 ಪ್ರತಿಗಳಿಗೆ 6-4-0. 50 ಪ್ರತಿಗಳಿಗೆ 11 0-0. 100 ಪ್ರತಿಗಳಿಗೆ 20-0-0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.
ಮೆನೇಜರ್, ನವಯುಗ ಪ್ರೆಸ್, ಉಡುಪಿ.

ಕನ್ನಡ ಸಾಹಿತ್ಯ ಪರಿಷತ್ತು

ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಭಾರತದ ಮಟ್ಟಿಗೆ ಪ್ಲಿಸ್ಸಾಯಿಯವರದ ನಿಯೋಜಿತ ರೈಲ್ವೇ ಮತ್ತು ತಂತಿ ಟಪ್ಪಾಲು ಕೆಲಸಗಾರ ಮುಷ್ಕರ ಹೇಗಾಗುವದೆಂಬ ಆತುರದ ಪ್ರಶ್ನೆಯುಳಿದಿದೆ. ಕೇಂದ್ರ ಸರಕಾರದ ಸಂಚಾರ ವಹಿವಾಟು ಖಾತೆಯ ಮಂತ್ರಿ ಮಿ. ಕೆಡ್ಗಾಯಿಗಳು ತನ್ನೊಡನೆ ವ್ಯವಸಿವಲ್ಲಿ ಸಂಧಾನಿಸಿದ್ದ ಮಧ್ಯಾಸಿನ ಅವಿಲ ಭಾರತ ಟಪ್ಪಾಲು ಜವಾನರ ಮತ್ತು ಕೆಳವರ್ಗದ ನೌಕರರ ಸಂಘದ ಅಧ್ಯಕ್ಷ ಶ್ರೀ ಟಿ. ಯಸ್. ರಾಮಾನುಜಮರನ್ನು ಕೊನೆಯದಾಗಿ "ಸರಿ. ನೀವು ಮುಷ್ಕರ ಹೂಡುವದು ಯಾವಾಗ?" ಎಂದಾಗ ಆವರು "ಮುಷ್ಕರ ಮಾಡುವಂತೆ ಸ್ವತಃ ಕಿಡ್ಡಾಯಿ ನಾ ಹೇಬರೇ ನನಗೆ ಹೇಳುವ ವರೆಗೆ ನಾವ ದಿನ್ನು ಹೂಡುವದಿಲ್ಲ" ಎಂದು ಉತ್ತರಿಸಿದ್ದರು. ಮದ್ರಾಸ್ ನಗರದಲ್ಲಿ ಸಿಟಿ ಬಸ್ ಮುಷ್ಕರವಿಗ ನಡೆದಿದೆ. ಸೆಕುಂದರಾಬಾದಿನಲ್ಲಿ ಎರಡು ದಿನ ಮುಷ್ಕರ ನಡೆಸಿದ ರೈಲ್ವೇ ಕೆಲಸಗಾರರು ನೇತಾಜಿ ಗವರ್ನರ್ ಶ್ರೀ ಧರಿಯವರ ಮಾತಿಗೇ ಆಶ್ವಾಸನೆಯನ್ನು ಮನ್ನಿಸಿ, ಕೆಲಸಕ್ಕೆ ಇಳಿದಿದ್ದಾರೆ. ದೇಶ ವಿಭಜನೆಗಿನ ಮುಷ್ಕರ ಜ್ವರದಿಂದ ಸಂತಾಪಗೊಂಡ ಪ್ರಧಾನ ಮಂತ್ರಿ ನೆಹರುಗಳು ಜನವರಿ ತಾ. 28ರಲ್ಲಿ ಲಕ್ನೋವಿನ ಪ್ರಚಂಡ ಸಾರ್ವಜನಿಕ ಸಭೆಯ ಮುಂದೆ ಭಾಷಣ ಮಾಡುತ್ತಾ, ಗೊಂದಲ ನಿರ್ಮಾಪಕರಿಗೆ ಸ್ಪಷ್ಟ ಎಚ್ಚರಿಕೆಯನ್ನು ಕೊಟ್ಟಿದ್ದರು. "ಜನತೆ ರಾಷ್ಟ್ರದಲ್ಲಿ ಶಾಂತಿಯನ್ನು ಉಳಿಸಿ, ಹೊಸತಿಂಗಿ ಸಂಪಾದನೆಗೊಂಡಿರುವ ಸ್ವಾತಂತ್ರ್ಯವನ್ನು ಸುಭದ್ರಗೊಳಿಸುವಂತೆ ರಾಷ್ಟ್ರೀಯ ಸರಕಾರಕ್ಕೆ ಬೆಂಬಲವಾಗಬೇಕು. ಲೋಕದ ಕಣ್ಣಿದಿರಲ್ಲಿ ನಮ್ಮ ಮಾತೃಭೂಮಿಯ ಘನತೆ ಹಗ್ಗುವಂತೆ ಮಾಡುವ ಕೆಲಸಕ್ಕೆ ಯಾರೂ ಕೈಹಾಕಬಾರದು. ಪ್ರದರ್ಶನ ಮತ್ತು ಮುಷ್ಕರಗಳ ದೆಸೆಯಿಂದ ಸಾರ್ವಜನಿಕ ಶಾಂತಿಭಂಗವಾಗುತ್ತಿದೆ; ಆರ್ಥಿಕ ಪುನರುತ್ಥಾನದ ಎಲ್ಲಾ ಪ್ರಯತ್ನಗಳನ್ನೂ ಹಾಳುಗೆಡವಿ, ಸಾಮಾನ್ಯ ಜನತೆಗೆ ಇನ್ನೂ ಹೆಚ್ಚಿನ ಕಷ್ಟನಷ್ಟಗಳನ್ನು ಆವು ಒಡ್ಡುತ್ತಿವೆ. ನಾನು ಅಧಿಕಾರದಲ್ಲಿರುವ ವರೆಗೆ ಕೇಡೀಜನರು ಅರಾಜಕ ಸ್ಥಿತಿ ನಿರ್ಮಿಸಲು ಎಂದಿಗೂ ಬಿಡಲಾರೆ; ಅಗತ್ಯ ಬಿದ್ದರೆ ಅಂಥವರನ್ನು ಕಠೋರಹಸ್ತದಿಂದ ಮರ್ದಿಸುವದೇ ಸರಿ. ಕಾನೂನು ಮತ್ತು ವ್ಯವಸ್ಥೆ ಹಾಳಾಗಿ, ಸೋಲೀಸ್ ಮತ್ತು ಸೈನ್ಯಗಳ ಸ್ಥಾನವಾನ ತಗ್ಗಿಸುವ ಪ್ರಯತ್ನ ಸಲ್ಲವಾಗಿ, ಅಧಿಕಾರದ ಮೇಲ್ಬೀಳುವ ಅಂತಕ ಹೊಡತಗಳನ್ನು ನಿಲ್ಲಿಸಲು ಸರಕಾರವು ಖಚಿತ ಕಾರ್ಯಾಚರಣೆ ಕೈಕೊಳ್ಳುವದು. ಸರಕಾರೀ ಯಂತ್ರದ ನಿರಾತಂಕ ಚಲನೆಯನ್ನು ತಡಿಗಟ್ಟುವವನ್ನೇ ತಮ್ಮ ಗುರಿಯಾಗಿ ಇಟ್ಟುಕೊಂಡಿರುವ ಕಮ್ಯೂನಿಸ್ಟೇತರ ಸಣ್ಣ ಪಂಗಡಗಳೊಡ್ಡುವ ಬಲೆಯೆಳ್ಳಿ ನಿರಾಶ್ರಿತರು ಬೀಳಬಾರದು. ದೇಶ ವಿಭಜನೆಯ ಪ್ರತಿಕ್ರಿಯೆಯಲ್ಲಿ ಸುಮಾರು ೬೦ ಲಕ್ಷ ಜನರನ್ನು ಕೆಲಸಕ್ಕೆ ಹಚ್ಚಿದೆವು ಪಟ್ಟಿದ್ದುವು; ಲೋಕ ಚರಿತ್ರೆಯಲ್ಲೇ ಅನನ್ಯವಾದ ಮಹಾ ಸಮಸ್ಯೆಯನ್ನು ಆವು ಸಮರ್ಥವಾಗಿ ನಿರ್ಮಿಸಿವೆವು; ಜಾಗರೂಕತೆಯಿಂದಿದ್ದರೆ ಇನ್ನೂ ಸುಕಾಕ್ಷಣವೆಯೂ ಇರುವ ಬೇಕಾದಾಗಿದ್ದ ಸರಕಾರದ ಎಲ್ಲಾ ಲಕ್ಷ್ಯವೂ ಆತ್ಮ ಶಕ್ತಿಯೂ, ಈ ನಿರಾಶ್ರಿತರ ಪುನರ್ವಸತಿ ಮತ್ತು ಹೊಸ ವ್ಯವಸ್ಥೆಯ ಕಡೆಗೆ ಸಲೆಯಲ್ಪಟ್ಟಿತು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಯೋಧನೆ ಮತ್ತು ಸಂಘಟನೆಯಲ್ಲಿ

(ಒನೇ ಪುಟ ನೋಡಿರಿ)

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ನೀಲ್ಲರಗತಿಯ
ಬ್ರಾಹ್ಮಣರ ಊಟಿ ವಾಸ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao. Kanoor.
Manager.

NOTICE

Is hereby given that the right of collecting fees in the Municipal Markets, Cart Stands, Jutka Stand, Mutton Stalls and Slaughter House, for the year 1949-50 will be sold by public auction by the Commissioner on Monday the 14th February 1949 at 3 p.m. in the Municipal Office Udipi. The sale is subject to the rules in force.

Further particulars or information may be obtained from the Municipal Office, Udipi on all working days during office hours.

V. Balagangadharan.
Commissioner
Municipal Office, Udipi, Dated 31-1-1949

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ:-

1949-50ನೇ ವರ್ಷದಲ್ಲಿ ಉಡುಪಿ ಮುನ್ಸಿಪಾಲಿಟಿಯ ಆಡಳಿತಕ್ಕೆ ಒಳಪಟ್ಟ ಮಾರ್ಕೆಟುಗಳು, ಗಾಡಿ ಜೋಕ, ಜಟ್ಕಾ ಜೋಕ, ಮಟನ್ ಸ್ಟೋಲ್ಸ್ ಮತ್ತು ಸಗಣಿ ಗೃಹದಲ್ಲಿ ವರಿ ವಸೂಲು ಮಾಡುವ ಹಕ್ಕನ್ನು ಮುನಿಸಿಪಲ್ ಕಮಿಶನರವರು ತಾ 14-2-1949ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಮುನಿಸಿಪಲ್ ಆಫೀಸಿದಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಉಡುಪಿ ಮುನಿಸಿಪಲ್ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ತಿಳಿದುಕೊಳ್ಳಬಹುದು.

ವಿ. ಬಾಲಗಂಗಾಧರನ್,
ಕಮಿಶನರ
ಮುನಿಸಿಪಲ್ ಆಫೀಸು, ಉಡುಪಿ,
ತಾ. 31 1 1949

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS.

For Rs. 2,000/- and over are now accepted at all Offices of the Bank at the following rates:-
3 & 4 Months ... @ 2½ % p. a.
5 & 6 Months .... @ 2¾ % p. a.

ಗುರುವಾರ, ಜನವರಿ ೩-೧-'೫೦

ಪ್ರಾಣಿಬಲಿ ನಿಷೇಧ

ದೈವದೇವರುಗಳ ಪ್ರಸನ್ನತೆಗೆಂದು ಗುಡಿ ದೇವಾಲಯಗಳಲ್ಲಿ ಪ್ರಾಣಿಬಲಿಯನ್ನು ಕೊಡುವ ಶಾಸನವನ್ನು ಬೇಕಾಯಿದೇಶೀರ ಗೊಳಿಸಿ ಮದ್ರಾಸ್ ಶಾಸನ ಸಭೆಯಲ್ಲಿ ಮಂಜೂರಾಗಿದೆ. ಗಾಂಧೀಜಿಯ ಆಪ್ತಶಿಷ್ಯ ಆಚಾರ್ಯ ವಿನೋಬಾ ಭಾವೆಯವರಿಂದ ಶ್ಲಾಘನೆ ಪಡೆದ ಈ ಸುಧಾರಣೆಗಾಗಿ ಮದ್ರಾಸ್ ಸರಕಾರವು ಸಾಧಕರ್ಕೂ ಅಭಿನಂದನಾರ್ಹವಿದೆ. ರಕ್ತಾಹಾರ ಮನ್ನಾ ಮಾಡಲ್ಪಟ್ಟ ಭೂತ ದೇವತೆಗಳ ಮನಸ್ಸು ಹೇಗೆ ನಿಲ್ಲುವದೋ ಎಂದು ಅಜ್ಞ ಜನತೆಯಲ್ಲಿ ಒಂದು ವಿಧದ ತಳಮಳವೇಳಬಹುದು; ಆದರೆ ಹಾಗೆ ಸಿಟ್ಟಿಗೇಳುವ ದಿವ್ಯ ದೇವರುಗಳಿಗೆ ಅವುಗಳ ತುತ್ತನ್ನು ತೋರಿಸಿ ಭಕ್ತರಾದವರು ಕೊಡದ್ದು ಬಿಡಲಡ್ಡಿಯಿಲ್ಲ. ಭೂತಗಳಿಗೆ ದಕ್ಷಾಹಾರದಂತೆಯೇ ಪಾನದ ಜಟ್ಟೂ ಇದ್ದಿತು; ಅದಿಲ್ಲದೆ ಒಂದೂವರೆ ವರುಷವಾಗುತ್ತಾ ಯಾವದೆನ್ನುವ ಗಂಟಲಾರಿ ಸಹ್ಯ ತೋರಿಬಂದಿರಲಿಲ್ಲ. ಹಾಗಾದರು ಅಜ್ಞ ಜನರನ್ನು ಅಮಲು ಭೂತ ನಿಜಭೂತ ಇವೇಷರಿಂದಲೂ ಗೊಳಿಸಿದ ಪುಣ್ಯವೇ ಇದು! ಇನ್ನು ಪ್ರಾಣಿಬಲಿ ಶಪ್ಪುವದರ ಪರಿಣಾಮ ಕೂಡಾ ಅದಕ್ಕೆಂತ ಹೆಚ್ಚಿನದಾಗದು. ಅದ್ದರಿಂದ ಈ ಕುಂತು ದೆವ್ವ ದೇವತೆ, ಭೂತ ಪ್ರೇತಗಳ ಮೇಲೂ ಕನಿಕರಪಡಬೇಕೆಂಬ ಅರ್ಥವಲ್ಲ; ಅಂಧಶ್ರದ್ಧೆಯ ಕೈ ಕಣ್ಣನ್ನಿಕ್ಕಿಸುವ ವಿಧ್ವಂಸಕ್ಕೆ ಸಿಲುಕಿದ ಕಾನೂನು ಭಂಗವಾಗಬಹುದಾದ ಇನ್ನು ಕೆಲವರಿಗೂ ಕಲಿಯಬರುವ ಅವುಗಳಿಂದ ಬಲಿಪಶುವಿದ್ದೇವೆಂಬ ಹೆದರಿಕೆಗೂ ಅವಕಾಶವಿಲ್ಲ. ತಾವುಗಳ ವರ್ಗಕ್ಕೆನೇ ಸೇರಿತಕ್ಕ ಸಂಘ, ಸಂಸ್ಥೆಗಳವರು ಕಲಿತು ಕೊಂಡರೂ ಭೂತ ಪ್ರೇತಗಳು ಈ ತನಕ ಗಾಂಧೀಜಿಯ ಸತ್ಯಾಗ್ರಹವನ್ನು ಕಲಿಯದಿದ್ದವೊಂದು ಸಂದೇವವೇ ಸರಿ! ಅತಿ ಪುರಾತನ ಕಾಲದಿಂದಿದ್ದ ಸಂಪ್ರದಾಯ ಸೊಂದಕ್ಕೆ ಆತಂಕ ಬಗುವಾಗ ಅಜ್ಞ ಜನರ ಹೃದಯ ಕ್ಷೋಭೆಸುವದು ಸ್ವಾಭಾವಿಕ; ಆದರೆ ಇಂತಹ ಅಜ್ಞ ಜನಗಳನ್ನು ಈ ರೀತಿ ಕದಡುವವರೂ ಒಂದು ಶಿಕ್ಷಣವೇ! ಆದ್ದರಿಂದ ಈ ಸುಧಾರಣೆಯನ್ನು ಎಲ್ಲರೂ ಸ್ವಾಗತಿಸಬೇಕು. ಎಂತಹ ಟೀಕೆ, ಆರೋಪಗಳಿಗೆ ತಲೆಕೊಡಬೇಕಾಗಿ ಬಂದರೂ ಹಿಂಜರಿಯದೆ ಸರಕಾರವು ಜನಜೀವದದಲ್ಲಿ ಬೇರುಬಿಟ್ಟಿರುವ ಇಂತಹ ಅಂಧಶ್ರದ್ಧೆಗಳನ್ನು ಶಾಸನ ಮುಖಾಲ ನಿರ್ಮೂಲಿಸುತ್ತಾ ಹೋಗಬೇಕು; ಧಾರ್ಮಿಕಾಚರಣೆಗಳಲ್ಲಿ ಸರಕಾರ ಕೈ ಹಾಕಬಾರದು, ಎಂಬ ಅಸ್ಪರ್ಶತಾ ಧರ್ಮವೂ, ಪರಧರ್ಮೀಯರಪ್ಪೀ ಇಲ್ಲ, ಪರದೇಶೀಯರೂ ಆಗಿದ್ದ ಬ್ರಿಟಿಷರಾಡಳಿತೆಯಲ್ಲಿ ಮಾತ್ರ ಮಾನ್ಯ; ನಮ್ಮ ಸರಕಾರವು ನಮ್ಮ ಜನ ಜೀವನದ ಕೊಳಕುಗಳ ಕಡೆಗೆ ಕಣ್ಣುಚ್ಚಿ ಕುಳಿತುಕೊಳ್ಳಬೇಕೆಂಬ ನಿರ್ಬಂಧವಿಲ್ಲ; ಅಂತಹ ಅನ್ಯಾಯಕ್ಕೆ ನ್ಯಾಯವಲ್ಲ. ಬೇಳಗೆಟಕದುದನ್ನು ಮುಳ್ಳಿನಿಂದ ಕೀಳು ವಂತೆಯೇ ಸಾಮಾಜಿಕ ಸುಧಾರಣೆಯಿಂದಾಗದುದನ್ನು ಶಾಸನ ಮೂಲಕ ಸಾಧಿಸಲು ಸರಕಾರ ತಯಾರಿರಬೇಕು.

ಈ ಹುಬ್ಬಾಟಗಳು

ಗಾಂಧಿಜೀ ಕಲಿಸಿದ 'ಸತ್ಯಾಗ್ರಹ' 'ಕಾಯದೇ ಭಂಗ' ಅಸ್ತ್ರಗಳಿಗೆ ಈ ಕಾಲದಲ್ಲಿ ಗಾಂಧೀ ಧೋರಣೆಯ ಬದ್ಧವಿರೋಧಿಗಳು ಕೂಡಾ ಕೈಯಿಕ್ಕುತ್ತಿರುವುದನ್ನು ಕಾಣುತ್ತಿದ್ದೇವೆ. ಭಾರತೀಯರಲ್ಲಿ ಯಾರೇ ಇರಲಿ, ಅವರಿಗೆಂತಹದುರ್ಬುದ್ಧಿಯಾರಿಂದಲೇ ಬಂದಿರಲಿ -ಸಾರ್ವಜನಿಕ ಕಾರ್ಯಾಚರಣೆಯು ವಿಧಾನಗಳನ್ನು ಸಾತ್ರ ಅನರಿವಿರೆನ್ನದೆ ಎಲ್ಲರೂ ಗಾಂಧಿಜಿಯಿಂದಲೇ ಕಲಿಯಬೇಕಾಗಿದೆ! ಅದರೆ ವಿರುದ್ಧಗಾಮಿಗಳ ಮಾತಂತಿರಲಿ- ಸ್ವತಃ ಗಾಂಧಿಜಿಯ ಶಿಷ್ಯಂದಿರೆನಿಸುವವರೂ ಶಿಸ್ಯರಾಗಲಿಚ್ಛಿಸುವವರೂ ಗುರು ಕಲಿಸಿದ ಪಾಠವನ್ನು ಕಸ್ಪು ತಪ್ಪಾಗಿ ಅಚರಿಸುವ ನಿದರ್ಶನಗಳು ತೋರಿಬರುತ್ತಿವೆ. ಹೈಪರಿಬಾದಿನಲ್ಲಿ ೧೮೫ ಕಾರ್ ಶಿತ್ಯಾಗ್ರಹ ನಡೆಯುತ್ತಿದ್ದ ಕಾಲವಲ್ಲಿ ಅದರ ಶಮನಕ್ಕೆಂದು ಗಾಂಧೀಶಿಷ್ಯ ಪ್ರೊ. ಭನ್ಸಾಲಿಗಳು ಕೈಕೊಂಡಿದ್ದ ಉಪವಾಸಕ್ಕರ್ಥವಿರಲಿಲ್ಲ. ಭೋವಾಲದಿಂದ ಮತ್ತು ಮುದ್ರಾಸಿನಿಂದ ಮತ್ತೆರಡು 'ಅನ್ನ ಸತ್ಯಾಗ್ರಹ'ದ ವಾರ್ತೆ ಬಂದಿದೆ. ಭೋವಾಲದ ಪ್ರಜೆಗಳ ಅಭಿಮತ ವಿರೋಧವಾಗಿ ನವಾಬರು ಕೈಗೊಂಬೆಗಳೆಂಬ ಅಪವಾದ ಬರುವಂತೆ ಮೊನ್ನೆ ಯವರೆಗೂ ಅವರ ಮಂತ್ರಿಮಂಡಲದಲ್ಲಿದ್ದ ನಾಲ್ವರು ಕಾಂಗ್ರೆಸ್ ಮಂತ್ರಿಗಳೂ ರಾಜೀನಾಮೆ ಕೊಟ್ಟು ನವಾಬರೇ ಇಷ್ಟೇ ತಾ.31ರಲ್ಲಿ ಅಡಳಿತೆ ನಿರ್ವಹಿಸಲು ತೊಡಗಿದ್ದಾರೆ. ಭೋವಾಲದ ನವಾಬರ ಈ ಅಟ ವೀರ್ಯ ಕಾಲ ನಡೆಯದು; ನಿಜಾಮನಿಂದಾಗದುದು ನವಾಬನಿಂದಾಗದು! ಸಂಗತಿ ಹೀಗಿರುವಾಗ ರಾಜೀನಾಮೆಯೊಪ್ಪಿಸಿರುವ ಪ್ರಧಾನ ಮಂತ್ರಿ ಪಂಡಿತ ಚತುರ ನಾರಾಯಣ ಮಾಲವೀಯರು, "ಭೋವಾಲದ ಪ್ರತಿಯೊಂದು ಮನೆಗೂ ಶಾಂತಿ ಮತ್ತು ಐಕ್ಯವನ್ನು ತಂದೊಡ್ಡುವದಕ್ಕಾಗಿ 21 ದಿನಗಳ ಉಪವಾಸ ಕೈಕೊಳ್ಳುತ್ತೇನೆ" ಎಂದು ಸರೋಷದಲ್ಲಿ ದಿನ ಜಾಹೀರುಮಾಡಿದ್ದಾರೆ. "ಗಾಂಧೀ ಪಾತ್ರಧಾರಿಯಾಗಿ ಪ್ರದರ್ಶನಕ್ಕೆ ನಿಲ್ಲುತ್ತೇನೆ" ಎಂದವರು ಹೇಳಿತ್ತಿದ್ದರೆ ಗಾಂಧಿಜಿಗತಪ್ರೀತಿಯ ಒಂದು ಸತ್ಯವನ್ನಾದರೂ ಅಡಿದಂತಾಗುತ್ತಿತ್ತು! ಮದ್ರಾಸ್ ಸರಕಾರವು ಎಸೆಂಬ್ಲಿಯ ಮುಂದೆ ತಂದು ನಿರ್ಧರಿಸಿರುವ, ಮಠ ದೇವಾಲಯಗಳ ಸಂಬಂಧದ ಎಂಡೋಮೆಂಟ್ ಮಸೂದೆಗೆ ವಿರೋಧವಾಗಿ 'ಅಖಿಲ ಭಾರತ ಸನಾತನ ಧರ್ಮಾಚರಣ ಸಂಘ'ದ ಸ್ಥಾಪಕ ಸ್ವಾಮಿ ಸತ್ಯಾನಂದ ಸರಸ್ವತಿ ಎಂಬವರು ಜನವರಿ ತಾ. 24ರಿಂದ ಮದ್ರಾಸಿನಲ್ಲಿ 'ಕೊನೆತನಕ' ಉಪವಾಸ ಕುಳಿತಿದ್ದಾರೆ. ಈಗ "ಸಂಸ್ಥೆ" ಯಾಗಿರುವ ಕಾನು ಆಗಿಕೆ ವಿ. ಗಣಪತಿಯಾಗಿ 1922ರಿಂದಲೂ ಕಾಂಗ್ರೆಸ್ ಕಲಸ ಮಾಡಿದ್ದೇನೆಂದೂ ತನಗೆ ಸುಮಾರು ೬ ಲಕ್ಷ ರೂಗಳ ಆಸ್ತಿ ಸೊತ್ತುಗಳಿವೆಯೆಂದೂ ಈ ಮಹಾನ್ ಭಾವನ ಅಂಬೋಣ. ಇಂತಹ ಮನ್ಯರಿಂಗಳಂದ ಹುಚ್ಚಾಟದ ವಿವಿಧ ರೂಪಗಳನ್ನೆರಿಯಬಹುದಲ್ಲದೆ, ಬೇರೇನಾದರೂ ಅರ್ಥವಿದೆಯೆ? "ಸದುದ್ದೇಶ ಸಾಧನೆಗಾಗಿ, ಶುದ್ಧ ಹೃದಯದಿಂದ, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ" ಕೈಕೊಳ್ಳಬೇಕೆಂದು ಗಾಂಧಿಜಿ ನಿರ್ದೇಶಿಸಿದ್ದ ನಿರಾಹಾರ ಸತ್ಯಾಗ್ರಹ, ಕಾಯದೇಭಂಗ ಸತ್ಯಾಗ್ರಹಗಳನ್ನು ಈ ರೀತಿ ಅಣಕಿಸುವವರು ಕಂಡು ಬಿಸಿಪ್ಪಿರುವುದು ಏನಾದರೂ.

ಇಂತಹ ಅಪಹಾಸ್ಯಕಾರ್ಯವರ್ತನೆಗಳಿಂದ ಜನತೆ ವಂಚಿನಿಲ್ಲಬಾರದು; ಒಪ್ಪವನ್ನಲ್ಲದೆ ಒಳಗೆ ನೋಡಲು ತಿಳಿಯದವರೆಂಬ ಅಪವಾದಕ್ಕೀಡಾಗಬಾರದು. ಅಜ್ಞಾನೀ ನೈದ್ಯನ ಔಷಧ ಸೇವನೆಗಂಜುವಂತೆಯೇ ಇಂತಹ 'ಗಾಂಧೀ ಶಿಷ್ಯ'ರ ವರ್ತನೆಗಳನ್ನೂ ಆಕ್ಷೇಪಿಸಬೇಕು.

ನೆಹರು ಸಂದೇಶ—

"ನಾವೆಲ್ಲರೂ ನಮ್ಮ ಕಣ್ಣು, ಕಿವಿ ಮತ್ತು ಹೃದಯವನ್ನು ತೆರೆದುಕೊಂಡು, ಅತ್ಯಂತ ಭಕ್ತಿವಿಧೇಯತೆಯಿಂದ ಮಹಾತ್ಮಾ ಗಾಂಧೀ ಚಿಂತನೆಮಾಡೋಣ. ಅವರು ಯಾವುದಕ್ಕಾಗಿ ಇದ್ದರು, ಮತ್ತು ನಾನೇನು ಮಾಡಬೇಕೆಂದು ಅವರು ಬಯಸಿದ್ದರು, ಎಂಬುದರ ಕಡೆಗೇನೇ ಮಿಕ್ಕೆಲ್ಲಕ್ಕಿಂತ ಹೆಚ್ಚಿಗೆ ನಮ್ಮ ಯೋಚನೆಯಿರಲಿ. ಲೋಕದ ರಾಷ್ಟ್ರಗಳಗೆಲ್ಲಾ ನಾವು ಹೇಳುವ ಮಾತು- ನಮಗೆ ನಿಮ್ಮೊಡನೆ ಜಗಳವಿಲ್ಲ; ಲೋಕದ ಎಲ್ಲಾ ಜನತೆಯ ಸ್ವಾತಂತ್ರ್ಯ ಮತ್ತು ಏಕಸಾಷ್ಟನಾ ಮಹತ್ಕಾರ್ಯದಲ್ಲಿ ನಾವು ನಿಮ್ಮೆಲ್ಲರ ಮೈತ್ರಿಬದ್ಧ ಸಹಕಾರವನ್ನಷ್ಟೆ ಬಯಸುತ್ತೇವೆ. ಅನ್ಯಂ ಮೇಲೆ ಆಧಿರಂ. ಚಲಾಯಿಸುವ ನಿರ್ಬಂಧ ಸಾಧಿಸಲು ನಾವಲ್ಲ; ಅದರೆ ನಾವು ನಮ್ಮ ಸ್ವತಂತ್ರತೆಯನ್ನಾ ನಮ್ಮ ಸರ್ವಶಕ್ತಿಯಿಂದ ಯಾರಿಗೂ ನಮ್ಮ ಸೇವಸ್ವನ್ನು ಕೊಟ್ಟುದರೂ ರಕ್ಷಿಸಿಕೊಳ್ಳುವೆವು". ಎಂದು ಪಂಡಿತ ನೆಹರುಗಳು ತಾ. 30ರಲ್ಲಿ ಆಕಾಶವಾಣಿಯಲ್ಲಿ ಘೋಷಿಸಿದರು.

Notice

ಕುಂದಾಪುರ ಡಿ. ಎಮ್. ಕೋರ್ಟ್‌ದಲ್ಲಿ
R. I. A. 1872/48; O. S. 270/48.
A. S. 208/49

ನಾದಿನಿ: ಮೈನರ್ ನರಸಿಂಹ ಕೊಡ.
ಪ್ರತಿವಾದಿನಿ: ರಾಮಚಂದ್ರನರು ಮಗ್ಳು (ಪೋಕ) ಕೊಡ.

ಸದ್ರಿ ದಾವೆಯ 2ನೇ ಪ್ರತಿವಾದಿ ನಾಗಮ್ಮ ಮಗ್ಳು ಮತ್ತು 4ನೇ ಪ್ರತಿವಾದಿ ಮೈನರ್ ಸುಬ್ರಾಯನ ಗಾರ್ಡಿಯನ್ ಕಾಮಿ ಗಂಗಮ್ಮ ಕೊಡಾ ಇವರಿಗೆ ಈ ಮೊಲ್ಕು ತಿಳಿಯಪಡಿಸುವುದೇನೆಂದರೆ-

ಸದ್ರಿ ದಾವೆಯಲ್ಲಿ ವಾದಿ ಗುಜಾಕ್ಕಾಪ್ರ ಪ್ರಲಯನು ಮಿಕ್ಕ ಪ್ರತಿವಾದಿಗಳಿಂದ ಬಯಸುತ್ತಿರುವ ಸ್ವತ್ತಿಗಳನ್ನು ಬಾವನಾಡಿಕೊಳ್ಳುವ ಬಗ್ಗೆ ಪ್ರಾಂ ಕಾನೂನಿನ ದಾವಿಲಾಸಾಹಿತ್ಯ R. I. A. 1872/48ನೇ ಧ್ವನಿಲೆ ಮಿಕ್ಕ ಅರ್ಜಿ ಇವರಿಗೆ 12-4-49ಕ್ಕೆ ತಪ್ಪಿಗೆ ಇತ್ಯರ್ಥವಾದಾಗಿ ಯದೆಂದು ಸಂಗತಿ ಈ ಮೊಲ್ಕು ತಿಳಿಸೋಣಾಗಿದೆ. ಅಕಾರಣ ಸದ್ರಿ ಪ್ರತಿವಾದಿಗಳು ಕಡೆಯಿಂದ ಆಕ್ಷೇಪಣೆಇದ್ದಲ್ಲಿ ಸದ್ರಿ ತಾರೀಖಿನಲ್ಲಿ ಕೋರ್ಟಿನಲ್ಲಿ ಜ್ಯೂಡಿಯಲ್ ಕೂಳ್ಳಿತಕ್ಕದ್ದು.

By order of the court
(ಸಹಿ) M. M. Urai,
Advocate for Plaintiffs
Coondapoor 1-2-49

"ತಮಿಳು ದೇಶಗಳಲ್ಲಿ ವರುಷಗಟ್ಟಲೆ ನಡೆದರೆ ಆದು ತಮಿಳು ಚಿತ್ರ ವಾದಕಾರಣ-ಆದರೆ ಮಂಗಳೂರಲ್ಲಿ 10 ವಾರ ನಡೆಯುವದೆಂದರೆ ಸ್ಪತಃ ಒಬ್ಬನೂ 10 ಸಲ ನೋಡಬೇಕೆಂದೇ ಸ್ವಚ್ಛವಾಗುವುದಲ್ಲವೇ"?
ಅದ ಕಾರಣ ನಾವೂ ನೀವೂ ಇಬ್ಬರೂ ನೋಡೋಣ.

'ನಾವೀರ್ವರು We Two'
ತಮಿಳು ಚಿತ್ರ.
ಟಿ. ಆರ್. ಮಹಾಲಿಂಗಮ್, ಬಿ. ಆರ್. ಪಂತಲು, ಕೆ. ಸಾರಂಗಪಾಣಿ, ಟೀಬಿ ಪದ್ಮಾವತಿ, ಪಿ. ಎ. ರಾಜಲಕ್ಷ್ಮೀ, ಕೆ. ಆರ್. ಚಿಲ್ಲಂ ನೊವಲಾದವರು.

ಮುಂದಿನ ಬದಲಾವಣೆ
ಸ್ಕಾಕಾಡವರ
"ಭಕ್ತ ಧ್ರುವ"
ಶಕಿಕಾಪೂರ್, ಜೀವನ್.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬಾಪೂ ಭಸ್ಮವಾದ ಸ್ಥಳದಲ್ಲಿ ಜನವರಿ 30!

(ಹಿನ್ನೆ ಪುಟದಿಂದ)

ರ್ಯಗಳನ್ನು ಕೈಗೊಂಡು ಜನಶ್ರಿತ ಜನಶರಧಿಯ ಸುಮಾರು ಮುಖ್ಯಾಲಂಶ– ಸಾಧಾರಣ 45 ಲಕ್ಷ ಮಂದಿ– ಇಷ್ಟರಲ್ಲೇ ಸಂಯುಕ್ತ ಪ್ರಾಂತ್ಯ ಮತ್ತಿತರ ಕಡೆಗಳಲ್ಲಿ ಕುಡಿಸ್ಥಾಪನೆ ಗೊಂಡಿದ್ದಾರೆ. ಉಳಿದವರೂ ನಿಸ್ಸಂದೇಹವಾಗಿ ಇನ್ನು ಅಶ್ಯಲ್ಪ ಕಾಲದೊಳಗೆ ಯೋಗ್ಯ ವ್ಯವಸ್ಥೆ ಹೊಂದಲಿದ್ದಾರೆ. ಈ ಕಾರ್ಯವೆಷ್ಟು ಅಗಾಧವೆಂಬುದನ್ನು ಬಹುಶಃ ನಮ್ಮ ಜನರು ಅರಿತಿಲ್ಲ. ಪೆಲೆಸ್ತೈನಿನಲ್ಲಿ ಸುಮಾರು 6 ಆಥವಾ 7 ಲಕ್ಷ ಜನರು ಮಾತ್ರ ನಿರಾಶ್ರಿತರಾದಾಗ, ಸಂಯುಕ್ತ ರಾಷ್ಟ್ರ ಸಂಘದ ಮತಿಯಿಂದ ಹೊರ ಸ್ರಪಂಚದಿಂದಲೇ ಹೆಣ ಸಹಾಯ ಸಂಗ್ರಹಿಸಬೇಕಾಯಿತು. ಇಲ್ಲಿ ಭಾರತ ಬಲ್ಲಾದರೋ ಸರಕಾರವು ಹೊರಗಿನ ಯಾವ ಸಹಾಯವನ್ನೂ ಬಯಸದೆ, ಆ ಕೃತ್ಯ ಕಷ್ಟದ ಹಾಗೂ ಅಗ್ನಿ ಪರೀಕ್ಷೆಯ ಕಾಲದಲ್ಲಿ ಅದು ವಿಶಾಕೆಯಾಗಿ ಅನಾಥ ಸಮಸ್ಯೆಗಳನ್ನು ಬಿಡಿಸಬೇಕಾದ್ದಿತ. ಭಾರತದಂಥಹ ಒಂದು ಪ್ರಜಾ ಸರಕಾರವು– ಜನತೆಯ ಜೀವನ ಮಟ್ಟವನ್ನು ಮೇಲಕ್ಕೆತ್ತುವ ಗುರಿಯಿಟ್ಟುಕೊಂಡಿರುವ ಸರಕಾರವು – ಜನತೆಯ ಸಹಕಾರವಿಲ್ಲದೆ ಸಾಗಲಾರದು. ರಾಷ್ಟ್ರದಲ್ಲಿ ಕಾನೂನು ಮತ್ತು ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಏಕೋದ್ದೇಶದಿಂದಿದ್ದ ಹಿಂದಿನ ಪೋಲೀಸ್ ರಾಜ್ಯದಂತಲ್ಲ ಇಂದಿನ ಸರಕಾರ. ಏಲಾ ಡಿನಿಂದಿಗೆ ತೊಡಗುವಲ್ಲು, ಅತ್ಯಪಸಂದ ಸಮಸ್ಯೆಗಳನ್ನು ಶೀರ್ಘನಿರ್ಣಯಿಸಿಕೊಳ್ಳುವಂತೆ ಸರಕಾರಕ್ಕೆ ಸಹಾಯ ಕರಾಗುವದಿಲ್ಲ; ಒದಲಿಗೆ ಅವರು ಕಂಟಕಗಳನ್ನೊಡ್ಡುತ್ತಿದ್ದಾರೆ. ಕಳದ ಕೆಲವು ದಿನಗಳಲ್ಲಿ, ಇಂತಹ ಕೆಲವಿತನಗಳ ದಿಸೆಯಿಂದ ಲಕ್ನೋ ನಗರದಲ್ಲಿ ಕಟ್ಟೆ ಹೆಸರು ಬಂದಿದೆ (ಈ ಜೊತ್ತಿನಲ್ಲಿ ಸಭೆಯು ಒಂದು ಮೂಲೆಯಲ್ಲಿ ದೊಡ್ಡ ಗದ್ದಲವೆದ್ದಿತು. ಸಭಿಕರಷ್ಟು ಬಲವಾಗಿ ದೂಡಿಕೊಂಡು ನಿರಾಶ್ರಿತರೊತ್ತಾ ಯಿ ಎಂದು ತಿಳಿದು ಪಂಡಿತ ನೆಹರು ಅವರು ಗಟ್ಟಿಯಾಗಿ ಹೇಳಿದರು) ಈ ನಗರದಲ್ಲಾ ಆಥವಾ ಈ ಪ್ರಾಂತ್ಯದಲ್ಲಿ ಇರಲು ನಿರಾಶ್ರಿತರಿಗೆ ಇಷ್ಟವಿಲ್ಲದಿದ್ದರೆ ಅವರು ಹೊರಗೆ ಹೋಗಬಹುದು. ಅದರ ಅವರು ದುರ್ನಡತೆ ಪ್ರದರ್ಶಿಸಿದರೆ, ಅಥವಾ ತಂಟೆ ಮಾಡಿದರೆ ಅವರನ್ನು ಜೈಲಿಗೆ ಕಳಿಸಲಾಗುವದು. ಸರಕಾರಕ್ಕೆ ಇವರೆಗೂ ನಿರಾಶ್ರಿತರು ಮೇಲೆ ಪೂರ್ಣ ಸಹಾನುಭೂತಿಯಿದ್ದರೂ ದುರ್ನಡತೆಯವರ ಮೇಲಾವ ಸಹಾನುಭೂತಿಯೂ ಇಲ್ಲವೆಂದು, ಇವರು ಈ ವಿಷಯವನ್ನು ಮನಗಂಡು ಮಿತಿಯಿಂದಿರಬೇಕು. ಸಮಾಜಸ್ವಾಸ್ಥ್ಯರಿರಲಿ, ಬೇರೆಯವರೇ ಇರಲಿ, ಸಾರ್ವಜನಿಕ ಆಂದೋಲನಗಳು ಮತ್ತು ಪೋಲೀಸರನ್ನು ಹೊಡೆದು ಹಾಕಿ ಗೂಂಡಾಲ ರ್ವಿಸುವೆವೆಂದು ಎದ್ದರೆ ಖಂಡಿತಾಗಲು ಸಹಿಸಿಕೊಂಡು ಬಿಡುವಂತಿಲ್ಲ; ಅಂತಹ ಚಳವಳಿಗಳನ್ನು ನಿರ್ಮೂಲಿಸಲು ಕಠಿಣ ಹೆಜ್ಜೆಕೈಕೊಳ್ಳಲಾಗುವದು. ಈ ದೇಶದಲ್ಲಿ ದುರ್ನಡತೆಯವರ ಕೈ ಮೇಲಾಗಿ, ಅವರು ಗೊಂದಲ ನಿರ್ಮಿಸಲಾಗುವ ಪರಿಸ್ಥಿತಿಯೊಂದನ್ನು ಒಂದೇ ಒಂದು ದಿನ ಸಹಿಸುವದಕ್ಕೂ ನಾನು ತಯಾರಿಲ್ಲ"– ಎನ್ನುತ್ತಾ ಪಂಡಿತ ನೆಹರುಗಳು ಸಂಯುಕ್ತ ಪ್ರಾಂತ್ಯದಲ್ಲಿ ಒಂದು ತಿಂಗಳೆಂದಲೂ ನಡೆಯುತ್ತಿರುವ ಜಿಲ್ಲಾ ಬೋರ್ಡು ಫ್ರಾಸ್ಕರ ಮಸ್ಯರವನ್ನು ಖಂಡಿಸಿದರು. "ಶಾಸ್ತ್ರಾಧ್ಯಾಯರ ಮೇಲೆ ಮತ್ತವರ ಬೆಂಡಿಕಗಳ ಮೇಲೆ ಸರಕಾರಕ್ಕೆ ಸಹಾನುಭೂತಿಯಿದೆ. ಅವರ ಜೀವನ ಸ್ಥಿತಿ ಸುಧಾರಿಸುವ ಸರ್ವ ಪ್ರಯತ್ನ ಮಾಡಲಾಗುವದು. ಆದರೆ ಬೇಕಾಯಿದೆಶೀರ ವರ್ತನೆಯಿರಲೇ ಬಾರದು. ಅಧ್ಯಾಪಕ ಮಂಡಲವೂ ತಂಟೆಖೋರರ ಸೂತ್ರದ ಗೊಂಬೆಗಳಾಗಿರಕೂಡದು; ಅದು ಅವರ ಸ್ವಹಿತಕ್ಕೇನೇ ಹಾನಿಕರ. ಅಧ್ಯಾಪಕರು ತಮ್ಮ ಈಗಿನ ಥೋರಣೆ ಬದಲಾಯಿಸದಿದ್ದರೆ ಮಕ್ಕಳ ಶಿಕ್ಷಣಕ್ಕಾಗಿ ಅನ್ಯ ವ್ಯವಸ್ಥೆಗಳನ್ನು ಸರಕಾರ ಮಾಡಬೇಕಾಗುವ ಎಮ್ಮ. ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಲಾಗದವರ ಕೈಗೆ ನಾವು ನಮ್ಮ ಮಕ್ಕಳನ್ನು ಒಪ್ಪಿಸಲಾರೆವು. ಮಕ್ಕಳಿಗೆ ಓದು ಬರಹ ಕಲಿಸಿ ಕೊಡುವುದಷ್ಟೇ ಅಲ ಪಾಧ್ಯಾಯರ ಕೆಲಸವಲ್ಲ–ವಿದ್ಯೆಯನ್ನು ತಲಿಸಲಿಕ್ಕಿದೆ. ನೈತಿಕಾಚರಣೆಗಳನ್ನೂ ರೂಪಿಸಲಿಕ್ಕಿದೆ" ಎಂದರು. ಇನ್ನೊಂದು ವರು ಷದೊಳಗೆ ನಡೆಯುವ ಚುನಾವಣೆಯಲ್ಲಿ ಜನರು ತಮಗೆ ಬೇಕಾದವರನ್ನು ಆರಿಸಿಕೊಳ್ಳಬಹುದೆಂದೂ ಪ್ರಕೃತ ರಾಷ್ಟ್ರದ ಉತ್ಪನ್ನವನ್ನು ಹೆಚ್ಚಿಸುವ ಕಡೆಗೇನೇ ಸರ್ವರೂ ಲಕ್ಷ್ಯ ಕೊಡುವದು ಅತ್ಯಗತ್ಯವೆಂದೂ ನೆಹರುಗಳು ಒತ್ತಿ ಹೇಳಿದರು.

ಬಾಪು ವಾರ್ಷಿಕ

ಗಾಂಧೀಜೀ ಬಲಿದಾನವಾದ ಜನವರಿ ತಾ. 30ನ್ನು ರಾಷ್ಟ್ರವು ತನ್ನ ಪಿತೃನ ಶ್ರಾದ್ಧಕ್ಕೆ ಸಹಜವಾದ ಭಕ್ತಿ ಮತ್ತು ನಿಷ್ಠೆಯಿಂದ ಕೇತಾನೆ. ಪ್ರಾರ್ಥನೆಗಳ ಮೂಲಕವೇ ಆಚರಿಸಿದೆ. ದೇಶದ ಮೂಲೆ ಮೂಲೆಯ ಊರುಗಳಲ್ಲೂ ಈ ಪುಣ್ಯ ಸ್ಮರಣೆಯಾಗಿದೆ. ಗಾಂಧೀಜೀಯ ಪ್ರಾಣಪಕ್ಷಿ ಅಕಸ್ಮಾತ್ ಹಾರಿದ–ಅವರ ರಕ್ತ ಬಿದ್ದ–ಅವರ ದೇಹ ಬೂದಿಯಾದ ನವಢಿಲ್ಲಿಯ ಸ್ಥಳಗಳಂತೂ ಆ ದಿನ ಮಹಾ ಯಾತ್ರಾಸ್ಥಳಗಳಾಗಿದ್ದುವು. ತನ್ನ ಕೊನೆಯ ದಿನ 1948ನೇ ಜನವರಿ 30ನ್ನು ಮಹಾತ್ಮಾ ಗಾಂಧಿ ಪ್ರಾರಂಭಿಸಿದ್ದ ಹೊತ್ತಿಗೆ ಅತಿ ಮುಂಜಾನೆ 3–30 ತಾಸಿಗೆ ಗಾಂಧೀಜೀ ನೆಲಕ್ಕುರುಳಿದ ನವ ಢಿಲ್ಲಿಯ ಬಿರ್ಲಾ ಭವನ ವರಂದ ಸ್ಥಳದಲ್ಲೇ ವಿಶೇಷ ಪ್ರಾರ್ಥನೆ ನಡೆಯಿತು. ಪಂಡಿತ ನೆಹರು ಮತ್ತಿತರ ಗಾಂಧೀ ಶಿಷ್ಯ ಶಿಷ್ಯೆಯರು ಪ್ರಾರ್ಥನಾಭಾಗಿಗಳಾಗಿದ್ದರು. ಗಾಂಧೀಜೀಯ ಕೊನೆಯ ರಕ್ತ ಬಿದ್ದ ಆ ಪವಿತ್ರ ಸ್ಥಳವು ಸಿಮೆಂಟ್‌ನಿಂದ ವಜ್ರಚ್ಛಲ್ಪಟ್ಟು ಸುಣ್ಣ ದಿನ್ನೆಯಾಗಿ ನಿಂತಿದ್ದಿತು; ಹೂಗಳು, ಚಂದನ ಮತ್ತು ದೀಪ ಧೂಪಗಳಿಂದ ಘಮಘಮಿಸುತಿತ್ತು.

ಭೌದ್ಧ ಮಂತ್ರ, 'ನಾಮೋ'ದೊಂದಿಗೆ ಪ್ರಾರ್ಥನೆಯಾರಂಭಿಸಿ ಎರಡು ಮಿನಿಟುಗಳ ಮೌನಾಚರಣೆಯಾಯಿತು. ಆ ಮೇಲೆ ಉಪನಿಷತ್ತು, ಗೀತಾ, ಕುರಾನ್, ಪ್ರಾರ್ಥನೆಗಳಾಗಿ 'ವೈಷ್ಣವಜನತೊ" "ರಮಧುನ್" ಹಾಡಲ್ಪಟ್ಟವು.

ಪ್ರಾರ್ಥನೆಗಳೆಲ್ಲಾ ಮುಗಿದ ಮೇಲೆ ಎಲ್ಲರೂ ಮೌನವಾಗಿ ಆ ಸಿಮೆಂಟ್ ದಿನ್ನೆಗೆ ತಲೆ ಬಾಗಿದರು. ಗಾಂಧೀಜೀ ಬಲಿದಾನ ಸಮಯ 'ಜನವರಿ 30, 1948 ಅಪರಾಹ್ನ 5-17' ಎಂದೂ, ಗುಂಡು ತನ್ನೆದೆ ಕೊರೆದಾಗ ಗಾಂಧೀಜೀ ಉಚ್ಚರಿಸಿದ ಕೊನೆಯ ಪದ 'ಹ್ಯಾರಾಮ್, ಹ್ಯಾರಾಮ್" ಎಂಬುದನ್ನೂ ಅದರಲ್ಲಿ ಬರೆಯಲಾಗಿದೆ. ಗಾಂಧೀಜೀಯನ್ನು ದಹನಮಾಡಿದ ರಾಜಘಾಟಿಂತೂ ದಿನ ಭಾರತದ ವೆಗಂಡಿಗೆಯಾಗಿ. ಬಾಪೂಪ್ಟಿದ್ದಿತು. ಮುಂಜಾನೆ 6 ಘಂಟೆಗೆ ಭಗವದ್ಗೀತಾಪಠನೆಯು ಆರಂಭದಿಂದ ಅಪರಾತ್ರಿ ಮವರೆಗೆ 10 ಲಕ್ಷಕ್ಕೂ ಮಿ.ಕ್ಕಿದ ಸರ್ವ ಜಾತಿಮತಗಳ ಜನರು, ರಾಜಘಾಟಿಗೆ ಬಂದು ಬಾಪೂ ಸಮಾಧಿಯನ್ನು ಸಂದರ್ಶಿಸಿ ಹೋಗಿದ್ದರು. ಅಲ್ಲಿ ನಡೆಯುತ್ತಿದ್ದ ಪ್ರಾರ್ಥನೆಯು ಪ್ರಪಂಚದ ಪಾವನ್ನೇ ಶ.ದ್ಧೀಕರಿಸಬಲ್ಲುದೆಂಬಷ್ಟು ಹೃದಯಸ್ಪರ್ಶಿಯಿದ್ದಿತು. ಜಮುನಾ ತಟದ ಪುಣ್ಯಭೂಮಿ ಸಮಾಧಿಗೆ ಹೋಗಿ ಬರುವ ಹಾದಿಗಳಿಗೆ ಸರಿಗೇ ಮತ್ತು ಮರದ ಬೇಲಿಗಳೂ ಸ್ವಯಂಸೇವಕ ಸೇವಕೆಯರಿಂದಾಗೂ ಪೋಲೀಸ್ ಮತ್ತು ಸೈನಿಕರ ಶಿಂತ ಬಂದೋಬಸ್ತುಗಳೂ ಇದ್ದುವು ಹೆಚ್ಚಿನವರು ಹೂಗಳನ್ನು ತಂದಿದ್ದರು; ಸಮಸ್ಥಿಯಿದ್ದ ಕಾಂಕ್ರೆಟ್ ಪೀಠವು ಹೂದಿನ್ನೆಯಾಗಿ ಮಾರ್ಪಟ್ಟಿದ್ದಿತ; ಕೆಲವರು ಅದರ ಮೇಲೆ ನಾಣ್ಯಗಳನ್ನೂ ಸುರಿದುದಿದೆ ತಮ್ಮ ಮಕ್ಕಳನ್ನೆತ್ತಿಕೊಂಡು ಬಂದನ್ನು ಅವುಗಳ ಕೈಯಿಂದ ಸಮಾಧಿಗೆ ಹೂವುಗಳನ್ನು ಏರಿಸಿ ಕೃತಕೃತ್ಯರಾದೆವೆಂದು ಧಾವಿಸುವ ತಾಯಿ ಯರು —ಕೂಡಲು ಬಿಚ್ಚಿಕೊಂಡು'ಘೋಷಿಸಿ ರಾಷ್ಟ್ರಪಿತ ಮಹಾತ್ಮಾ' ಹಾಡುತ್ತಾ ಬರುವ ಸಹಸ್ರಾರು ಯಾತ್ರಿಕರು — ನಾಲ್ಕು ಮೂಲೆಯಲ್ಲಿ ವಿರುಗುತ್ತಿರುವ ಪಾತ್ರೆಗಳಿಂದ ಧೂಪದ ಹೊಗೆ ಎಬ್ಬಿಸುತ್ತಾ ಸತ್ಯ ಅಹಿಂಸೆಯ ಲೋಕಪಿತೃವಾಗಿ ನಿಂತಿದ್ದ ನವಾಧಿರಾಜಘಾಟನ್ನು ಪ್ರಪಂಚದ ಯಾತ್ರಾಸ್ಥಳವಾಗಿ ನೂರ್ಪಡಿಸಿದ್ದುವು. ವರಂದಲ್ಲಿ 500ಕ್ಕೂ ಮಿಕ್ಕಿದನೂಲುವವು 36 ಘಂಟೆಗೂ ಸೂತ್ರಯಜ್ಞದಲ್ಲಿ ಭಾಗಿಗಳಾಗಿದ್ದರು. ನೆಹರು, ಪಕೇ ಮೊದಲಾದ ನಾಯಕರು ಅದರಲ್ಲಿ ಭಾಗವಹಿಸಿದ್ದರು.

ಉಡುಪಿ

ಭಾಷಣ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಕಮಿಟಿ ಸದಸ್ಯರೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಘಟನಾಸಮಿತಿಯ ಮೆಂಬರುಮಾ ಆದ ಶ್ರೀ ಎಸ್. ನಿಜಲಿಂಗಪ್ಪನವರು ಇಂದೇ ತಾ. 5ರಲ್ಲಿ ಸಂಜೆ ಉಡುಪಿಗೆ ಬರುವರು. ಮರು ದಿನ ತಾ 6ನೆ ವಿದಿಕ್ಕಾನ ಬೆಳಿಗ್ಗೆ 9 ಗಂಟೆಗೆ ಬೋರ್ಡು ಹೈಸ್ಕೂಲ್ ಜನಾನಮಂದಿರದಲ್ಲಿ ಜರಗುವ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಲಿರುವರು.

ಕಟಪಾಡಿ ಶ್ರೀ ವೇಂಕಟರಮಣ ಸ್ವಾಮಿ ಹೈಸ್ಕೂಲಿನ ಚತುರ್ಥ ವಾರ್ಷಿಕೋತ್ಸವವು ಈ ತಿ. ಮಾಧವ ಪೈ, ಎಂ.ಎ., ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ತಾ 10-2-49ಕ್ಕೆ ಜರಗಲಿರುವುದು.

AN APPEAL

The South Kanara District Health Conference, 1949.

The District Health Conference comes off for the first time in this District on the 19 & 20th Feb. 1949 at Karkal. It is to tackle the various Public Health problems facing the District like **Malaria, Filariasis, Consumption, Leprosy etc**

THE CONFERENCE WILL BE OPENED BY THE

MINISTER FOR PUBLIC HEALTH MADRAS

AND

PRESIDED OVER BY

Capt G. SHRINIVAS MURTHY, B. A., B. L., M. B. C. M., **of Madras.**

Exhibition and lectures by eminent men from various places are arranged.

Free lodging will be provided for the delegates coming from outside. Boarding on reasonable rates are arranged. The reception committee member-ship fee is Rs 5/- & upwards. All are requested to take part and promote the public health of the District.

P. Ramachandra Rao, B. A. B. L., Secretary.

H S. Hussein B.A.B.L., M.L.A., Chairman,

Reception Committee

5 ರೂಪಾಯಿಗೆ **50** ಪುಸ್ತಕಗಳು

ವಿವರಕ್ಕೆ ಬರೆಯಿರಿ:–
ಮೆನೇಜರ್, ಅಂತರಂಗ ಕಾರ್ಯಾಲಯ,
ಉಡುಪಿ.

ರೇಲ್‌ವೇ ಮಂತ್ರಿಗಳೊಡನೆ ಅರಿಕೆ

ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿಗಳಾದ ಮಾನ್ಯ ಶ್ರೀ ಎ ಬಿ. ಶೆಟ್ಟಿ, ಮಾಜಿ ಕರ್ನಾಟಕ ಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತ್, ಡಾ। ಯು. ಪಿ. ಮಲ್ಯ, ಶ್ರೀಗಳಾದ ಎಲ್. ಪಿ. ಬ್ಯಾಸ್, ವಿ ಎಸ್. ಕುಡ್ವ ಇವರನ್ನೊಳಗೊಂಡ ಒಂದು ಶಿಷ್ಟಮಂಡಳಿಯು ನಮ್ಮ ಜಿಲ್ಲೆಯ ಅಭಿವೃದ್ಧಿಯ ಕುರಿತು ಭಾರತದ ರೇಲ್‌ವೇ ಮಂತ್ರಿಗಳಾದ ಮಾನ್ಯ ಶ್ರೀ ಸಂತಾನಂರನ್ನು ಕಳೆದ ತಾ 24ರಂದು

ಸುತ್ತೂರು: ಡಿ. ಮು. ಕೋರ್ಟ್ ಸೆಲ್ಲಿ

O S-No- 254, 1948

ದಯ್ಯಕ್ಕು ಹೆಂಗ್ಸು- ನಾ. ಬ
ರಾಮಣ್ಣ ಗೌಡ ಕೂಡಾ- ಪ್ರತಿವಾದಿರು.

3ನೇ ಪ್ರತಿವಾದಿ- ಚಿನ್ನಸ್ವಗೌಡ, ತಿಮ್ಮಸ್ವಗೌಡರ ಮಗ, ಕುಟುಂಬದ ಯಜಮಾನ ಆಡಕ್ಕೆದಾಗ, ಸುತ್ತೂರು ತಾಲ್ಲೂ ಬಿಳಿನೆಲೆ ಗ್ರಾಮ ಸೂಜ್ಲು ಎಂಬಿವೆ- ಇವರಿಗೆ,

ನಾದಿಳು, 1ನೇ ಪ್ರತಿವಾದಿಯು ಸುಕ್ಕಿನ ಸ್ತರಾಸ್ತಿ ಜವಾಬ್ದಾರಿಯಿಂದ, 2, 3ನೇ ಪ್ರತಿವಾದಿರ ಕುಟುಂಬಕ್ಕಾದ ಯಾವತ್ತು ಪರಾಧೀನ ಜವಾಬ್ದಾರಿಗಳ ಉಜ್ರು ಶಿಕ್ಷೆ, ತನಗೆ ಗತ ಪ ಹುಂಡಣ ವರ್ಷ 1 ರ ಆಕ್ಟಿ ಮುಂದಿ 6, ತೆರಿಗಿನ ಕ್ಯಾ 150, ಆಡಿಕೆ ಸುಣ 5ರಂತೆ ಅಕೆಯ ಜೀವಾಂತ್ಯದ ವರೆಗೆ ಜೀವನಾಂಶ ಸಿಗಬೇಕೆಂತ ಮೇಲ್ಕಂಡ ದಾವೆಯನ್ನು ದಾಕ್ಲು ಮಾಡಿರುತ್ತಾಳೆ. ಸದ್ರಿ ದಾವೆಯಲ್ಲಿ ನಿಮಗೇನಾದರೂ ಉದಾಹರಿಸುವ ಆಗತ್ಯನಿದ್ದರೆ ಸದ್ರಿ ದಾವೆಯು ವ್ಯಾಜ್ಯಯಾಪ ತಾ. 9-2-1949ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ ಗಂಟೆ 11 ಕ್ಕೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದಂತೆಯೂ ತಪ್ಪಿದ್ರೆ ನಿಮ್ಮನ್ನು ಶಿಕ್ಷಾ ಮಾಡಿ ತೀರ್ಮಾನಿಸಲಾಗುವುದೆಂತಲೂ ಕೋರ್ಟಿನ ಆಜ್ಞಾಂ ಕ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

(Sd.) **N. V Kolathaya,**
Vakil for Plaintiff-

Puttur, 28-1-49.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿಸುಪ ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಶೀಲ ಫಾರ್ಮಸಿ, ಬೆಳಗಾಂವ

ಕಂಡು ಕೆಲವು ನಿವೇದನೆಗಳನ್ನು ಒಪ್ಪಿಸಿತು. ಮದ್ರಾಸಿನ ಪಬ್ಲಿಕ್ ವರ್ಕ್ಸ್ ಖಾತೆಯ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಅವರೂ ಹಾಜರಿದ್ದರು.

ಶಿಷ್ಟಮಂಡಳಿಯ ಬೇಡಿಕೆಗಳು ಹೀಗಿವೆ- (೧) ಕೊಚ್ಚಿಯಲ್ಲಿರುತಕ್ಕ ಒಂದು ಹಡ್ಡಿನ ಹೂಳುತೆಗೆಯುವ ಹಡಗ (Dredger) ನನ್ನು ಕೆಭ್ರವರಿಯಿಂದ ಮೇ ವರೆಗೆ ಮಂಗಳೂರಲ್ಲಿ ಇರಿಸಿದರೆ ಮಂಗಳೂರ ಬಂದರಿನ ಅಭ್ಯುದಯಕ್ಕೆ ಅನುಕೂಲವಾದೀತು ಎಂಬ ಅರಿಕೆಯನ್ನು ಮಂತ್ರಿಗಳು ಪರಿಶೀಲಿಸುವುದಾಗಿ ಉತ್ತರಿಸಿದರು. (೨) ಕೇಂದ್ರ ಸರಕಾರದವರು ರಚಿಸಲಿರುವ ರಾಜಮಾರ್ಗದ ನಮ್ಮ ಜಿಲ್ಲೆಯ ಭಾಗದಲ್ಲಿ ಸಿಗತಕ್ಕ ಪೊಳಿಗೆಗೆ ಸಂಕ ಹಾಕಿಸಬೇಕೆಂಬ ಬೇಡಿಕೆಗೆ ಮಂತ್ರಿಗಳು ಪರಿಶೀಲಿಸುವುದಾಗಿ ಹೇಳಿದರು. ನಮ್ಮ ಜಿಲ್ಲೆಯಲ್ಲಿ ಹಾದುಹೋಗತಕ್ಕ ರಾಜರಸ್ತೆ-ಕರಾವಳಿಯಲ್ಲಿ ಹಾದುಹೋಗದೆ ಹೆದ್ರಿ-ಕಾರ್ಕಳ ಮೂಡಬಿದ್ರಿ-ವಿಟ್ಲ-ಕಾಂಜಗಾಡ್ ಮಾರ್ಗವಾಗಿ ಸಾಗುವುದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಮಾರ್ಗ ವಿಸ್ತರಣದ ಹೊಣೆಯನ್ನು ಬೋಂಬಾಯಿ ಸರಕಾರ ನಿರಾಕರಿಸಿದ್ದರಿಂದ ಹೀಗಾಯಿತೆಂದು ಗೊತ್ತಾಗಿದೆ. ಈ ರಾಜಮಾರ್ಗವು ಪೆಚ್ಚಟ್ಟಿಲ್ಲಿ ಕೇಂದ್ರ ಸರ್ಕಾರವು ಕೆಲವು ಭಾಗಗಳಲ್ಲಿ ಸಂಪೂರ್ಣ ಹೊಸದಾಗಿ ನಿರ್ಮಿಸಬೇಕಾಗಿರುವುದರಿಂದ ಅದಕ್ಕೆ ಬೇಕಾಗುವ ಹಣವನ್ನು ಕೇಂದ್ರ ಸರ್ಕಾರವೇ ಒದಗಿಸಬೇಕೆಂದು ಮಂತ್ರಿಗಳು ಅಭಿಪ್ರಾಯಪಟ್ಟರು.

ಉಡುಪಿ

ಹುತಾತ್ಮರ ದಿನಾಚರಣೆಯು—

ಕಳೆದ ತಾ 26ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿಯು ಆಶ್ರಯದಲ್ಲಿ ರಥಬೀಧಿಯಲ್ಲಿ ಜರಗಿತು. ಶ್ರೀ ಕೆ. ಶ್ರೀನಿವಾಸ ಶೆಣೈಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಮ್. ವಿ. ಹೆಗ್ಡೆಯವರು ಬಾಪೂಜಿ ಅವರ ಸಂದೇಶವನ್ನೆತ್ತಿ ನೆನಪನ್ನು ತ್ಯಾ ಕಾಂಗ್ರೆಸಿಗೆ ಬೆಂಬಲವೀಯುವುದು ಪ್ರತಿಯೊಬ್ಬನ ಕರ್ತವ್ಯವೆಂದರು. ಶ್ರೀ ಪಾರಾಯಣಾಸ ಶೆಣೈ ಮತ್ತು ಪಾರ್ಟಿಯವರ ಲಾವಣಿಗಳಿದ್ದುವು. ಹುತಾತ್ಮರ ಆತ್ಮಶಾಂತಿಗಾಗಿ ಮೌನ ಪ್ರಾರ್ಥನೆ ನಡೆಯಿತು.

ದಿ ಕ್ರಿಸೆಂಟ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ 1919.)

ಹೆಡ್ ಆಫೀಸ್:— ಬೊಂಬಾಯಿ, ಶಾಖೆ ಕಚೇರಿ:— ಮಂಗಳೂರು

ನೀವು ವಿಮಾ ಮಾಡಿಸಲಿಗೆ ಸರ್ವ ಸೌಕರ್ಯಗಳನ್ನು ಒದಗಿಸಿ ಕೊಡುವುದು.

"ನಿಮ್ಮ ಮರಣಾನಂತರವೂ ನಿಮ್ಮ ಸಂಪಾದನೆಯು ಸಾಧ್ಯವೇ?"
"ಆಹುದು, ಇನ್ಶೂರ್ ಮಾಡಿದರೆ ಮಾತ್ರ ಸಾಧ್ಯ".

"ನೀವು ನಿಮ್ಮ ಕೆಲಸದಿಂದ ನಿವೃತ್ತರಾದರೂ ಅಥವಾ ನಿಮ್ಮ ಮರಣಾನಂತರ ನಿಮ್ಮನ್ನವಲಂಬಿಸಿರುವ ಕುಟುಂಬಕ್ಕೂ ಹಣ ಸಿಗಬೇಕೆಂದಿದ್ದರೆ ಜೀವ ವಿಮಾ ಮಾಡುವುದೊಂದೇ ಸುಲಭ ಉಪಾಯ"

"ಮರಣ ಉಂಟಾದ ಸಂದರ್ಭದಲ್ಲಿ ಬೇಕಾಗಿರುವ ಎಷ್ಟು ಹಣ ವಿಪಾಜಿಟ್ ಇಟ್ಟಿದ್ದಿರೋ ಅಷ್ಟೇ ಹಣ ಸಿಗುವುದು. ಆದರೆ ಇನ್ಶೂರ್ ಮಾಡುವಾಗ ಎಷ್ಟು ಹಣ ಸಿಗಬೇಕೆಂದು ಬಯಸಿದಿರೋ ಅಷ್ಟೇ ಹಣವನ್ನು ಇನ್ಶೂರೆನ್ಸ್ ಕಂಪೆನಿಯು ಜೀವಪರ್ಯಂತವಲ್ಲಾಗಲಿ ವ ಅಕಸ್ಮಿಕ ಮರಣಾನಂತರವಾಗಲಿ ಕೊಡುವುದು."

ಇನ್ಶೂರ್ ಮಾಡುವವರಿಗೆ ಉಕ್ತಿಮ ಮತ್ತು ಭದ್ರತೆಯುಳ್ಳ ವಿಮಾ ಪಂಪೆನಿ

ಉತ್ತಾಹಿ ವಿದೂಂಟರಿಗೆ ಆಕರ್ಷಕ ಸಂಬಳಸೌಲತ್ತುಗಳನ್ನು ಕೊಡಲಾಗುವುದು.

ಕೆ. ಪಿ. ಭವಾನಿಶಂಕರ ಸೆಟ್ಟಿ,
ಟ್ರಾಂಚ್ ಮೆನೇಜರ್,
ದಿ ಕ್ರಿಸೆಂಟ್ ಇನ್ಶೂರೆನ್ಸ್ ಕೊ. ಲಿಮಿಟೆಡ್.
ಜಯಂತ್ ಬಿಲ್ಡಿಂಗ್, ಮೈದಾನ್ ರೋಡ್,
ಮಂಗಳೂರು

ಎಮ್. ಸುಂದರರಾಮ ಶೆಟ್ಟಿ,
ಮೆನೇಜಿಂಗ್ ಡೈರೆಕ್ಟರ್,

ಒಂದೇ ವರ್ಷದಲ್ಲಿ

ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದು
ಇದೀಗ ಎರಡನೆ ಬಾರಿ ಪ್ರಕಟವಾಗಿದೆ—
ಡಾ। ಕೊರಟ್ಟಿಲ್ ವೆಂಕಟರಾಯರ

ಯುನಿ-ಯುದ್ಧ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಮತ್ತು
ಸ್ಕೂಲ್ ಬುಕ್ ಎಜೆನ್ಸಿ ಲಿಮಿಟೆಡ್, ಸೊನ್ನೆಪ್ಪ, ಮದ್ರಾಸು,
ಇವರಿಂದ ಬಹುಮಾನ ಪಡೆದ ಅತ್ಯುಪಯೋಗೀ ಪುಸ್ತಕ.

ಈ ಪುಸ್ತಕವಲ್ಲ, ಮಕ್ಕಳು, ಕೆಂಗಸರು, ಗರ್ಭಿಣಿಯರು, ಇತರರು ಎಲ್ಲಾ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಜೊತೆಗೆ ನೂರಿಸುವ ವಿಧಾನವನ್ನು ವಿಸ್ತಾರವಾಗಿ ಹೇಳಿದೆ.

ಬೆಲೆ ರೂ. **2-0-0** ಟಿಕ್ಕಾಲು ದ್ವಾರ **2-6-0**

(1) ನವಭಾರತ ಬುಕ್ ಡಿಪೊ, ಉಡುಪಿ, ಆಥವಾ
(2) ನವಯುಗ ಸ್ಟೋರ್ಸ್, ಉಡುಪಿ.

ನಗರ ಸಭೆಯು ಕಳೆದ ತಾ 29ರಲ್ಲು ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ಜ. ಒ. ಗಳು ರಿಕಾರ್ಡು ಮಾಡಲು ಡುವು, ಕಾಸ್ಮಲಿನಪ್ರೊಸೀಡಿಂಗ್ಸನ್ನು ಜಿಲ್ಲಾ ಗಜೆಟಿನಲ್ಲಿ ಪ್ರಿಂಟ್ ಮಾಡಬೇಕೆಂದು ತಂದ ಶ್ರೀ ಆರ್. ಎ. ಸ್ಯಾನಿನ್ಸ್‌ರ ಠರಾವು ಒಮ್ಮತದಿಂದ ಸಾಸಾಯಿತು.

ಹೊಸ್ಪೆಲ್‌ಜೇ ಸ್ಥಳೀಯ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದ ದಿನಾಚರಣೆಯು ಇದೇ ತಾ 5ನೇ ರವಿವಾರ ಸಂಜೆ 5 ಗಂಟೆಗೆ ಶ್ರೀ. ರೋಚಿ ಫೆರ್ನಾಂಡಿಸ್ ಅವರ ಅಧ್ಯಕ್ಷತೆಯಲ್ಲಿ ಜರಗುವುದು.

ಗಾಂಧಿಜೀ ಪುಣ್ಯ ದಿನವು ಕಳೆದ ತಾ30 ರಲ್ಲಿ ಸ್ಥಳೀಯ ಬೋರ್ಡು ಹೈಸ್ಕೂಲಿನ ಪೀಪಲ್ಸ್ ಹಾಲಿನಲ್ಲಿ ಡಾ। ಎಸ್. ಆರ್. ಸೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ. ಬಾಳ್ಕಟ್ಟಿ ಬೀಡು ಕೃಷ್ಣಯ್ಯ ಹೆಗ್ಡೆಯವರಿಂದ ಧ್ವಜಾರೋಹಣ, ಸ್ತ್ರೀ ಪುರುಷರು, ಬಾಲ ಬಾಲಕಿಯರಿಂದನೂಲುವಿಕೆ, ಶ್ರೀ ಪರೋಡಿ ರಾಮದಾಸ ಪೈ ಮತ್ತು ಪಾರ್ಟಿ ಮತ್ತಿತರ ಬಾಲೆ, ಸಂಘಗಳೇ ಮೊದಲಾದವುಂದ ಭಾಷಣ, ಹಾಡು ಇನ್ನಿತರ ಪದ್ಯ ಪಠನ, ಕಾಂಗ್ರೆಸ ಸುದೇಶ ಓದೂಣ, ಮೌನ ಪ್ರಾರ್ಥನೆ ಇತ್ಯಾದಿ ಕಾರ್ಯಕ್ರಮಗಳಾದುವು.

ಕಲಾವೃಂದದಲ್ಲೂ ಶ್ರೀ. ಎಸ್. ಎ ಸೈಗಳವರ ಅಧ್ಯಕ್ಷತೆಯಲ್ಲಿ ಗಾಂಧಿಜೀ ಪುಣ್ಯ ದಿನವು ಸೂತ್ರಯಜ್ಞ ಮತ್ತು ಗೀತಾ, ಪಠನಗಳಿಂದ ಜರಗಿತು. ತಾ 27ರಲ್ಲಿ ಕಲಾವೃಂದದವರು ಹಾರ್ದನಹಳ್ಳಿಯಲ್ಲಿ ದಿನಾಚರಿಸಿದರು.

ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿಯೂ ಸರ್ವೋದಯ ದಿನಾಚರಣೆಯು ಶಿಕ್ಷಕ ವೃಂದದ ಹೈಸ್ಕೂಲಿನ ಮುಖ್ಯ ಉಪಾಧ್ಯಾಯ ಶ್ರೀ. ಯು. ಶಿವರಾಯರ ಅಧ್ಯಕ್ಷತೆಯಲ್ಲಿ ಭಜನೆ, ಲಾವಣಿ, ರಾಷ್ಟ್ರಗೀತ, ಸಂಗೀತಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಪ್ರೌಂದರದಾಸರ ಪುಣ್ಯತಿಥಿಯು ಕಳೆದ ತಾ 27ರಂದ 29ರ ತನಕ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ಭಜನೆ, ಸಂಗೀತ, ಹರಿಕಥಾಪ್ರವಚನ, ಉಪನಿಷತ್ಪಾರಾಯಣಗಳಿಂದ ಆಚರಿಸಲ್ಪಟ್ಟಿತು.

ಮುದ್ದಣ ಸ್ಮಾರಕೋತ್ಸವವು- ತಾ 27ರಲ್ಲು ಸಂಜೆ ಮಣಿಪಾಲ್ ಸೈನ್ಸ್ ಕಾಲೆಯಲ್ಲಿ ಕರ್ನಾಟಕ ಸಂ[illegible]ಲ್ಲಿ ಶ್ರೀ ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಎನ್. ರಾಜಗೋಪಾಲ ಕೃಷ್ಣರಾಯರೇ ಮೊದಲಾದವರು ಕವಿತಿಲಕ ಮುದ್ದಣನವರ ಜೀವನ ಚರಿತ್ರೆಯನ್ನೂ ಅವರು ಬರೆದ ಕಾವ್ಯಗಳನ್ನೂ ಪರಿಚಯಿಸಿ ಭಾಷಣಮಾಡಿದರು. ಮುದ್ದಣನವರ ಕಾರ್ಯಕ್ಷೇತ್ರವಾದ ಉಡುಪಿಯಲ್ಲಿ ಅವರ ಸ್ಮಾರಕವೊಂದನ್ನು ನಿರ್ಮಿಸಬೇಕೆಂದು ಅಭ್ಯಗತ್ಯವೆಂದೂ ಆ ಬಗ್ಗೆ ಪಂಡಿತ ಸಂಘದವರು ಸುಂಪಾಗಬೇಕೆಂದೂ ಅಧ್ಯಕ್ಷರು ಸೂಚಿಸಿದರು.

ಅನೃತಾಂಜನ ತಲೆವೇದನೆ ತಿರುವೇದನೆ, ಉಳುಕು ಸುತ್ತಿಗೆ, ಭುಜ ಹಲ್ಲು ವೇದನೆಗೂ ಎದೆನೋವಿಗೂ ಘಾಯಗೆಲು ಬಾಸಿ ಕೊಳ್ಳುವುದು. ವಿಷಮುಂತಾದವೆ ಪಕ್ಷವಾತ, ನೊಡಿ ಮೊದಲಾದ ಎಲ್ಲ ರೋಗಳಿಗೂ ಸಿದ್ಧ

REDG

ಸಣ್ಣಹುಳುಕಡ್ಡಿ ಮದ್ದುನಮ್ಮಲ್ಲಿಸಿಕ್ಕುತ್ತದೆ

ಅನೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

1948ನೇ ಇಸವಿಯ ಜೂನ್ ತಿಂಗಳಲ್ಲಿ ಮಾನ್ಯಮಂತ್ರಿ ಶ್ರೀ. ಎಮ್. ಭಕ್ತವತ್ಸಲಮ್ ಇವರ ಅಧ್ಯಕ್ಷತೆಯಲ್ಲಿ ಪ್ರಾಂತ್ಯದ ಆಯುರ್ವೇದ ವೈದ್ಯರ ಮತ್ತು ಔಷಧಿಕಾರ ಕಾರ್ಬಾನೆಗಳ ಪ್ರತಿನಿಧಿಗಳ ಸಭೆಯು ಮದ್ರಾಸ್ ಸೆಕ್ರೆಟೇರಿಯಟಿನಲ್ಲಿ ಜರಗಿತು. ಸದ್ರಿ ಸಭೆಗೆ ಆರೋಗ್ಯಮಂತ್ರಿ ಶ್ರೀ. ಎ. ಬಿ. ಶೆಟ್ಟಿ ಮತ್ತು ಕಾಯದೆ ಮಂತ್ರಿ ಶ್ರೀ. ನೂಥ ವಮೇನನ್, ಪ್ರೊಹಿಬಿಶನ್ ಕಮಿಶನರ್ ಮತ್ತು ಸದ್ರಿ ಖಾತೆಯ ಕೆಲವು ಉದ್ಯೋಗಸ್ಥರು, ಮತ್ತು ಆಯುರ್ವೇದಿಕ್ ಕಾಲೇಜಿನ ಹಿಂದಿನ ಮತ್ತು ಇಂದಿನ ಪ್ರಿನ್ಸಿಪಾಲರು ಕೂಡಾ ಹಾಜರಿದ್ದರು. ಸಭೆಗೆ ಹಾಜರಿದ್ದ ವೈದ್ಯಬಂಧುಗಳಲ್ಲನೇಕರು ಆಸವಾರಿಷ್ಟಗಳೇ ಮೊದಲಾದ ಕೃಷಿಯಲ್ಲಿ ಉತ್ಪನ್ನವಾಗುವ ಆಸವಾರಿಷ್ಟಗಳಲ್ಲಿ ಮದ್ಯಸಾರವಿರುವುದರಿಂದ ಅವುಗಳನ್ನು ಸದ್ರಿ ಕಾಯದೆಯ ಕೆಳಗೆ ತಂದಿರುವುದರಿಂದ ಆಗುವ ತೊಂದರೆಗಳನ್ನು ಹೇಳಿಕೊಂಡರು. ಆಯುರ್ವೇದ ಔಷಧಗಳ ತಯಾರಿಕೆಯಲ್ಲಿ ಆಲ್ಕೋಹೋಲ್ ಉಪಯೋಗವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಕೆಲವರು ಅಭಿಪ್ರಾಯಪಟ್ಟರು. ಆಲ್ಕೋಹೋಲ್ ಉಪಯೋಗವನ್ನು ಸಂಪೂರ್ಣವಾಗಿ ನಿಷೇಧಿಸಿದರೆ ಆಯುರ್ವೇದ ಔಷಧಗಳ ಗುಣಗಳು ಕಡಿಮೆಯಾಗುವುದೆಂದು ಕೆಲವರು ಅಭಿಪ್ರಾಯಪಟ್ಟರು. ಆಲ್ಕೋಹೋಲ್ ಉಪಯೋಗವನ್ನು ಸಂಪೂರ್ಣವಾಗಿ ನಿಷೇಧಿಸಿದರೆ ಆಯುರ್ವೇದ ಔಷಧಗಳ ಗುಣಗಳು ಕಡಿಮೆಯಾಗುವುದೆಂದು ಕೆಲವರು ಅಭಿಪ್ರಾಯಪಟ್ಟರು. ಆಲ್ಕೋಹೋಲ್ ಉಪಯೋಗವನ್ನು ಸಂಪೂರ್ಣವಾಗಿ ನಿಷೇಧಿಸಿದರೆ ಆಯುರ್ವೇದ ಔಷಧಗಳ ಗುಣಗಳು ಕಡಿಮೆಯಾಗುವುದೆಂದು ಕೆಲವರು ಅಭಿಪ್ರಾಯಪಟ್ಟರು.

ಮದ್ಯಪಾನ ನಿರೋಧ ಕಾನೂನು ಮತ್ತು ಆಯುರ್ವೇದ

ಶ್ರೀ ಪಿ. ಜನಾರ್ದನ ನಾಯ್ಕರು, ಮೆನೇಜಿಂಗ್ ಡೈರೆಕ್ಟರ್, ಭುವನೇಂದ್ರ ಪ್ರೊಡಕ್ಟ್ಸ್ ಲಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬೊಂಬಾಯಿ ಪ್ರಾಂತಿಕ ಸರಕಾರದವರು ಮದ್ಯ ನಿರೋಧಕಾನೂನಿನಿಸ್ಸಯ ಆಸವಾರಿಷ್ಟಗಳ ಪೈಕಿ ದ್ರಾಕ್ಷಾಸವವೊಂದನ್ನು ಮಾತ್ರ ಪೂರಾ ವೇ ಕ್ಯಾಸನ್ನು ಪಡಕೊಳ್ಳಬೇಕಾಗಿ ಮಾತ್ರವಲ್ಲದೆ ಇದನ್ನಾಗಲೀ ಬೇರೆ ಆಸವರಿಷ್ಟಗಳನ್ನಾಗಲೀ ಮಾಡುವರೇ ಯಾವರೀತಿಯ ನಿಬಂಧನೆಯನ್ನೂ ಮಾಡಿರುವುದಿಲ್ಲವಾಗಿಯೂ ಸದ್ರಿ ಸಭೆಯಲ್ಲಿ ನಿವೇದಿಸಲಾಗಿತ್ತು. ಆದರೆ ಆವೇ 26ನೇ ತಾರೀಕಿನ ದೈನಿಕ ಪತ್ರಿಕೆಗಳಲ್ಲಿ ಆಯುರ್ವೇದ ಔಷಧಗಳ ಬಗ್ಗೆ ಆಲ್ಕೋಹೋಲಿನ ಉಪಯೋಗ [use of alcohol in Ayurvedic medicines] ಎಂಬ ತಲೆಬರಹದಡಿಯಲ್ಲಿ ಆಸವಾರಿಷ್ಟಗಳ ತಯಾರಿಕೆಯಬಗ್ಗೆ ಆಲ್ಕೋಹೋಲನ್ನು ಉಪಯೋಗಿಸುವರೇ ಮಧ್ಯಪ್ರಾಂತ್ಯ ಮತ್ತು ಬೊಂಬಾಯಿ ಪ್ರಾಂತ್ಯಗಳ ರೀತಿಯಲ್ಲಿ ವಿನಾಯತಿ ಕೊಡಬೇಕಾಗಿ ಚರ್ಚಿಸಲಾಯಿತೆಂದೂ ಆ ಬಗ್ಗೆ ಮುಂತ್ರಿಗಳು ಸದ್ರಿ ಎರಡು ಸರಕಾರಗಳೊಂದಿಗೆ ವಿಚಾರ ವಿನಿಮಯಮಾಡಿ ಯೋಗ್ಯಕ್ರಮವ ಕೈಗೊಳ್ಳುವುದಾಗಿ ಆಶ್ವಾಸನವಿತ್ತರೆಂದೂ ಪ್ರಕಟಿಸಲಾಗಿತ್ತು. ಆದರೆ ಸದ್ರಿ ಸಭೆಯಲ್ಲಿ ಆಸವಾರಿಷ್ಟಗಳ ತಯಾರಿಕೆಯಲ್ಲಿ ಉತ್ಪನ್ನವಾಗಿ ಮಿಶ್ರಿತವಾಗಿರುವ ಆಲ್ಕೋಹೋಲ್ ಯಾವತರದ ದ್ರಾಕ್ಷಾಸವ ನ್ನೂಳಗೊಂಡಿರಬೇಕೆಂಬ ಮಿಶ್ರವಾಗಿರುವ ಔಷಧಗಳ ಗುಣಗಳನ್ನು ಮಾತ್ರ ಕೊಡುಪ್ರದಂಥ ಅವುಗಳನ್ನು ನುರ್ಮಾಣಿಸಿ ನಿರೋಧಕಾನೂನಿನಿಂದ ಹೊರ್ತುಗೊಳಿಸಬೇಕಾಗಿ ನಿವೇದಿಸಲಾಗಿತ್ತಲ್ಲದೆ ಔಷಧಗಳ ತಯಾರಿಕೆಯ ಬಗ್ಗೆ ಆಲ್ಕೋಹೋಲಿನ ಉಪಯೋಗವನ್ನು ನಿಷೇಧಿಸಬೇಕಾಗಿ ಚರ್ಚಿಸಲಾಯಿತೆಂಬ ವರದಿಯು ಸರಿಯಲ್ಲವಾಗಿಯೂ ಸದ್ರಿ ಪ್ರಕಟಣೆಯನ್ನು ಈ ರೀತಿಯಲ್ಲಿ ತಿದ್ದುಪಡಿಮಾಡಬೇಕಾಗಿಯೂ ಆಂಧ್ರಾಯ ಪತ್ರಿಕಾಕರ್ತರೊಡನೆಯೂ ಮಾನ್ಯ ಸರಕಾರದ ದೊರೆತನೆಯೂ ವಿನಂತಿಮಾಡಲಾಗಿತ್ತು ಆದರೆ ಇದಕ್ಕೆ ಮಾನ್ಯತೆ ಪೂರ್ತ್ಯದೊರಕದೆ ಇದ್ದುದು ತುಂಬಾ ವಿಷಾದಕರ ಸಂಗತಿಯಾಗಿದೆ. ಅಲ್ಲದೆ ಈರೀತಿ ವಿರುದ್ಧ ಅಭಿಪ್ರಾಯವನ್ನು ಪ್ರಚಿಸಿದುದರ ನರ್ಮವೇನೆಂಬುದೂ ತಿಳಿಯ ದ ವಿಷಯವಾಗಿದೆ. ಇದುಮಾತ್ರವಲ್ಲದೆ ಸದ್ರಿ ಸಭೆಯು ಜರುಗಿ ತಿಂಗಳುಗಳು ಉರುಳಿದರೂ ಈ ವಿಷಯವಾಗಿ ಯಾವ ಸುಧಾರಣೆಗಳು ಆದಂತೆ ಕಂಡುಬರುವುದಿಲ್ಲ. ಈ ನಿಷಯವಿಷಯದ ಕ್ರಮ ಕೈಕೊಳ್ಳಲಾಗಿದೆಯೆಂದು ಮಾನ್ಯ ಸರಕಾರದೊಡನೆ ಪತ್ರವ್ಯವಹಾರ ನಡೆಸಿದ್ದಕ್ಕೆ "The question of exempting asavas and arishtas from the operation of the Prohibition Act is still under consideration of the Govt." ಎಂದಿಷ್ಟೇ ಉತ್ತರವು ಸಿಗುತ್ತದಲ್ಲದೆ ಬೇರೆಯಾವ ವಿಧದ ಜವಾಬೂ ಸಿಗದಿರುವುದು ನೋಡಿದರೆ ಈ ಸಮ್ಬಂಧ ಸುಧಾರಣೆಗಳು ಆಗಬೇಕಾದ್ದಕ್ಕಿನ್ನೆಷ್ಟುಕಾಲವಿದೆಯೆಂಬುದು ನಮಗೆ ಹೊಳೆಯದ ವಿಷಯವಾಗಿದೆ. ಆದರೂ ಇನ್ನಾದರೂ ಕಾಲಹರಣಮಾಡದೆ ಯೋಗ್ಯ ಸುಧಾರಣೆಗಳ ಕಡೆಗೆ ಸರಕಾರವು ಮನಸ್ಸು ಗೊಟ್ಟೀತೇ? [ಮುಂದುವರಿಯುವುದು]

ಲಕ್ಕೋಟೆ ಪ್ರಶ್ನೆಗಳು

ಆಶ್ಚರ್ಯ! ಮಾಹಿತಿಯೆ!! ನಿಮ್ಮ ಮನಸ್ಸಿನಲ್ಲಿರುವ 5 ಪ್ರಶ್ನೆಗಳ ಉತ್ತರಗಳನ್ನು ಪೋಸ್ಟಿನ ಮೂಲಕ ನಿಮ್ಮ ಕವರಿನ ಸಹಿತ ವಿ. ಪಿ. ಮಾಡಲು ರೂ. 2-0-0.

ನಮ್ಮ ವಿಳಾಸ:-

ಶುಕ್ಲನಾಡಿ

ಜ್ಯೋತಿರ್ಮಂದಿರಂ,

ಬೆಂಗಳೂರು ಸಿಟಿ.

UDIPI MUNICIPALITY

Applications are invited up to 10-2-1949 for the post of Town Planning & Building Inspector- III Grade in the scale of pay of Rs 60-3-90 and the usual dearness allowance from- candidates possessing the qualifications prescribed in S. O. No. 2871, B. H. dated 14-10-1944. Retired persons below 60 years of age may also apply. For qualified candidates maximum pay of the scale will be paid.

Municipal Office, Udipi, Dated 21-1-1949

V. Balagangadharan, Commissioner.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. 40/1948

1 ರಿಂದ, 2. ದೇವಿ ಯಾನೆ ನಾಗಿ.

ಅರ್ಜಿದಾರರು.

ಮತ್ತು

ವೆಂಕಟ-ಕಲ್ಯಾಣಪುರ ಮಂಜನ ಮಗ, ಹಾಲಿ ಶಿವಮೊಗ್ಗಾ ಜಿಲ್ಲಾ-ತೀರ್ಥಹಳ್ಳಿ ತಾಲೂಕು ಮಂಡಗದ್ದೆ —ಎದ್ರಿ.

ಯವರೊಳಗೆ-

ಸದ್ರಿ ಎದ್ರಿಗೆ:—

ನೀವು ಅರ್ಜಿದಾರರಿಗೆ ತಾರೀಕು 30-8-1915ರಲ್ಲಿ ರಿಜಿಸ್ಟ್ರಿಸಿತಿ ಬರಕೊಟ್ಟ ಜೀವನಾಂಶ ಕರಾರು ಪ್ರಕಾರ ಬರತಕ್ಕ ಜೀವನಾಂಶದ ಬ್ಯಾಲೆನ್ಸು ಬರಮಾಡಿಕೊಳ್ಳುವರೆ ನೂಡಿದ ಮೇಲ್ಕಂಡ ನಾಲರಿ ದಾವೆಯು ತಾರೀಕು 15-2-1949ಕ್ಕೆ ಯಿಡೋರಣಾಗಿಯದೆ. ಅಕ್ಷೇಪವೇನಾದರೂ ಯಿದ್ದರೆ ಆ ದಿವಸ ಸ್ವಂತವಾಗಿಯ ಇಲ್ಲವೆ ಸದ್ರಿ ಕೋರ್ಟಿಗೆ ಮುಂದೆ ಸ್ವತಃ ಯಾ ವಕೀಲರ ದ್ವಾರಾ ಪಾಜ್ರಾಗಿ ಜ್ಞಾಪಿಸಿರಲು ನೂಡಿಕೊಳ್ಳಬಹುದು. ತಪ್ಪಿದ್ದಲ್ಲಿ ನಿಮಗೆ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದು.

K Ramakrishna Rao

ಅರ್ಜಿದಾರರ ಕಡೆಯ ವಕೀಲ.

ಉಡುಪಿ, ತಾರೀಕು 24-1-1949



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1945ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇದು ಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಸ್ ತೈಲವನ್ನು ಪ್ರತಿ ವರ್ಷ ಲಕ್ಷಗಟ್ಟಲೆಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖ ಪತ್ರಿಕೆಗಳಲ್ಲಿಯೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧ ವೆಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರಕೃತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಲ್ಲ ವನಸ್ಪತಿ ಗಿಡಮೂಲಿಕೆಗಳಿಂದಲೇ ರಾಸಾಯನಿಕ ರೀತಿಯಿಂದ ಸಿದ್ಧಪಡಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಜೀವಿಯ, ತೀಕ್ಷ್ಣಜ್ವರ ಮತ್ತು ಮಲೇರಿಯ ಜ್ವರ ನಿವಾರಣೆಗೆ ಒಸ್ಕೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮವಾದ ಔಷಧವು ಬೇರೆಯೆಂದಿಲ್ಲ. ಮೂತ್ರಕೋಶ, ಬಹುಮೂತ್ರ-ನೀ ಮೂತ್ರ, ಅನ್ನಕೋಶ, ಲಿಬಿಡಂರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂಡಲು ಕೃಮಿ, ನೇತ್ರವ್ಯಾಧಿ, ಅಜೀರ್ಣ, ಮಬ್ಬಿನ ಅಕ್ರಮಣಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಸಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೆರೆತ ಕೋರಸಲ್ಲನ ಸೀಕ್ಷ್ಣವಾದ ವೇದನೆಯು ಕಸ್ತ ಚಿಕಿತ್ಸೆ ಇಲ್ಲದೇನೆ ನಿವಾರಣವಾಗುವುದಲ್ಲದೆ ಮೂತ್ರಕೋಶದಲ್ಲಿ ಕಲ್ಲುಗಳು ಇದ್ದಲ್ಲಿ ಅವು ಕರಗಿ ಮೂತ್ರದ ಮೂಲಕ ಹೊರಬಿದ್ದು ಬಿಡುವುದು. ಆದ್ದರಿಂದ ಈ ವಾನಿಂಗ್ ಟಿಲ್ಲಿ ತೈಲವನ್ನು 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿಲ್ಲ! ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲವಿದ್ದರೆ ಮಾತ್ರಿಗುಣವಾಗುವುದು. ಸಲ್ಲಗೆನೋವು, ಮಕ್ಕಳಿಗೆ ಬೆನ್ನೋವು, ಕಿವಿಗಳ ಉಪದ್ರವ ಹೊಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೋ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಸೀಸೆ 1ಕ್ಕೆ ರೂ 2-8-0 ವಿ. ಪಿ. ಬೇರೆ. ದಡನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 3-0-0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಕೆಪ್ಸುಲ್ ಸೀಸೆ 1ಕ್ಕೆ 3-8-0 ವಿ. ಪಿ. ಬೇರೆ. ದಡನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 3-0-0 ವಿ. ಪಿ. ಬೇರೆ ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ದಡನ್ ಸೀಸೆಗಳಿಗೆ ರೂ. 18-ವಿ ಪಿ.ಮಷಿ.

ಪ್ರಶಂಸನಾ ಪತ್ರ-ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ ಗುಣವಾಗಿಲಾರದೆಂದು ವೈದ್ಯರು ಪರಿತಾಪಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ಗುಣಮಾಡಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನವಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟಸುಬ್ರಹ್ಮಣ್ಯಮ್ಮನವರು ಬರೆಯುತ್ತಾರೆ.

ಇಂಥ ಸೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ೩೦ಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ನಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B & C I Rly.

ಜೊಂಬಾಯಿ ಸ್ವಾಕೆತ್ತುರು:—ಲಕ್ಷ್ಮಾವಾಲಾ ಲಿಮಿಟೆಡ್, 25, ಹಿಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಹಿಡಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ಸಾನಾ ವಿಕಾರಗಳುಂಟಾಗುತ್ತವೆ. ಕನಪೀಳಿಕೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದಪ್ಪಲಾಪಸ್ಸು, ಮೂಲವಿರೋಧ, ಕೃಮಿಗಳ ಬೀಗು, ನಿಪ್ರಾಣತೆ, ವಾಂತಿ, ಆಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪ್ಯ ಖರ್ಚುಮಾಡಬೇಕಾಗುತ್ತದೆ. ಈ ನೋಟ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ನಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಬ್ಬಿ 'ಪ್ರಸೂತ ಕಲ್ಯಾಣ ಘಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇಶಕಲಾಪ, ಕಂಪು ಮೆದುಳು, ಪುಷ್ಟ, ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)
Kunjal P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯಿಂಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಜೀವ್ಯ ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರಿಗೆ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟ ಚಾರ್ಜು ೧೫ ಆಣೆ.

ಮಾಲಿಕರು:—ಶಾಲಪ್ಪಾ ಹಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ ಬಾಗಲಕೋಟೆ ಧಾರವಾಡ ವಿಜಾಪುರ— ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಶಮೀಉದ್ದಾ ಕೆಮಿಸ್ಟ್ರಿ, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳ್ಳಾಯವಾಗಿದ್ದರೆ,....ಜಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂತುಮಾಲಿ, ಕೈಕಾಲು ಶೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ. ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಜೇನುತುಪ್ಪದಲ್ಲಿ ತುಪ್ಪದಲ್ಲಿ, ಕೊಂಡ ಮಳೆ ಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳೆ, ಕಂಬಳಕಾಯಿ ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕಿಮ್ಮತ್ತು ರೂ ೨ ಪೋಸ್ಟ ಚಾರ್ಜು ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಮಂಗಳೂರು

ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ಬ. ಪಿ. ರಾಮಸ್ವಾಮಿ ರೆಡ್ಡಿಯಾರರು ಈ ತಿಂಗಳ ಎರಡನೆ ವಾರದಲ್ಲಿ ಬಿ. ಕಡಬಲ್ಲಿಗೆ ಬಿತ್ತಿಪತ್ರಿಯರಿದರೆಂದೂ ಆಗ ಅವರು ಜಿಲ್ಲೆಯ ಅಭಿವೃದ್ಧಿ ಕೇಂದ್ರವನ್ನೂ ವಿವಿಧ ಸಂಘ ಸಂಸ್ಥೆಗಳನ್ನೂ ಸಂದರ್ಶಿಸಲಿರುವರೆಂದೂ ತಿಳಿದುಬರುತ್ತದೆ. ಅವರಿಗೆ ಮಂತ್ರಿ ಶ್ರೀ ಎ. ಬಿ. ಸಬ್ಬರೂ ಬರಲಿರುವರು.

ವಾಯರ್‌ಲೆಸ್ ಸಂಪರ್ಕ ಮಂಗಳೂರು ಬೊಂಬಾಯಿ ನಡುವೆ ತಂತಿ ಕಳುಹಿಸುವುದರಲ್ಲಾಗುವ ವಿಳಂಬವನ್ನು ನಿವಾರಿಸುವುದಕ್ಕಾಗಿ ವಾಯರ್‌ಲೆಸ್‌ನ ಸ್ಥಾವರವೊಂದನ್ನು ಸ್ಥಾಪಿಸಿರುವುದಾಗಿ ಭಾರತ ಸರಕಾರದ ಸುದ್ದಿ ಶಾಖೆಯವರು ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ. ಮಂಗಳೂರು ಬಂದರು ಆಧುನಿಸಿದ ದಿನಾಲೂ ಹೊರಗೆಹೋಗುವ ತಂತಿಗಳಲ್ಲಿ ಎರಡನೆ ಮೂರಂಶದಷ್ಟು ಬೊಂಬಾಯಿಗೆ ಹೋಗುತ್ತವೆ. ಮಂಗಳೂರಿನಿಂದ ಬೊಂಬಾಯಿಗೆ ಕಲ್ಲಿಕೋಟೆ ಮುಖಾಂತರ ತಂತಿ ಕಳುಹಿಸಬೇಕಾಗುತ್ತದೆಯಾದುದರಿಂದ ಕಾಲ ವಿಳಂಬವಾಗುತ್ತದೆ ಈ ಹೊಸ ವ್ಯವಸ್ಥೆಯು ಹೆಚ್ಚಿನ ಪ್ರಯೋಜನಕಾರಿಯಾಗಿದೆ.

ಹುತಾತ್ಮರ ಸ್ಮಾರಕ ದಿನವು- ಕಳೆದ ತಾ 26ರಲ್ಲಿ ಸಂಜೆ ಕೆಂದ್ರ ಮೈದಾನದಲ್ಲಿ ಶ್ರೀ ಬಿ. ಡಾಮೋದರಬಾಳಿಗರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಸಭಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಿ.ಲಕ್ಷ್ಮಿನಾರಾಯಣ ನಾಯ್ಕರು ಸಾರ್. ತೇಜ್ ಬಹದೂರ್ ಸಪ್ರುಗಳ ನಿಧನದ ಕುರಿತು ಸಂತಾಪಸೂಚಿಸಿ ಮಾತನಾಡಿದರು. ಶ್ರೀ ಗಳಾದ ಎಚ್. ನಾರಾಯಣರಾವ್, ಎಚ್, ಆರ್. ಮಲ್ಯ, ಬಿ.ಜಗನ್ನಾಥಶೆಟ್ಟಿ, ಬೊನೆಫೆಸ್ ಶುತಿಳಿ ಮೊದಲಾದವರುಕಾಲೋಚಿತ ಮಾತುಗಳನಾಡಿದರು.

ಪುರಂದರದಾಸರ ದಿನವು- ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪ್ರಾಥಮಿಕ ಶಾಲೆಯಲ್ಲಿ ಕಳೆದ ತಾ 29ರಲ್ಲಿ ಶ್ರೀ ಎಮ್. ರಾಮಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಎಚ್. ಸದಾಶಿವರಾಯರು ಧನ್ಯವಾದಗಳನ್ನರ್ಪಿಸಿದರು.

ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ- ಈಚೆಗೆ ಪದವು ಹೈಸ್ಕೂಲಿನ ಕನ್ನಡ ಪಂಡಿತ ಶ್ರೀ ಕೆ. ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಭೆಯೊಂದು ಜರಗಿತು. ಶ್ರೀ ಕೆ. ನಾರಾಯಣ ಆಳ್ವರ ಕವಿತಾ ವಾಚನಾನಂತರ ಶ್ರೀ ಎ. ಶಂಕರ ಸೆಟ್ಟರ ಪ್ರಬಂಧದಾ ಜನಗಳಾದಮೇಲೆ ಅಧ್ಯಕ್ಷರು 'ಆಧ್ಯಾತ್ಮಿಕನ ಸ್ಥಾನ ಮಾನಗಳು' ಎಂಬ ವಿಷಯದಲ್ಲಿ ಭಾಷಣವಿತ್ತರು.

ವಿದಾಯ ಸತ್ಕಾರ ರುಜಾರಿಯೋ ಹೈಸ್ಕೂಲಿನ ಹಿಂದಿ ಪಂಡಿತರಾದ ಶ್ರೀ ವಿ. ಗೋಪಾಲಕೃಷ್ಣರಾಯರು ಮದ್ರಾಸಿನ ಕ್ವೀನ್ ಮೇರೀಸ್ ಕಾಲೇಜಿನ ಹಿಂದೀ ಪಂಡಿತರಾಗಿ ನೇಮಕಹೊಂದಿದುದರಿಂದ ಅವರಿಗೆ ವಿದಾಯವೀಯುವ ಸತ್ಕಾರ ಕೂಟವೊಂದು ಈಚೆಗೆ ಫಾದರ್ ಬ. ಎ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಜರಗಿತು.

ಭಾಷಣ 'ಕಾಳಿದಾಸನೂ ಜನಜೀವನವೂ' ಎಂಬೀ ವಿಷಯದಲ್ಲಿ ರುಜಾರಿಯೋ ಹೈಸ್ಕೂಲಿನ ಕನ್ನಡ ಸಂಘದಲ್ಲಿ ಶ್ರೀ ಅಮ್ಮೆಂಬಳ ಶಂಕರನಾರಾಯಣ ರಾಯರು ಕಳೆದ ಭಾಷಣವಿತ್ತರು. ಶ್ರೀ ಕಲ್ಯಾಡಿ ರಾಮರಾಯರು ಅಧ್ಯಕ್ಷತೆ ವಹಿಸಿದ್ದರು.

ಸೈಂಟ್ ಎಲೋಸಿಯಸ್ ಕಾಲೇಜಿನ ಸೆಕೆಂಡರಿ ಶಾಖೆಯ ತರಗತಿಗಳ ಬಹು ಮಾನ ವಿತರಣ ದಿನವು ಕಳೆದ ತಾ 20ರಲ್ಲಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಸಂಜೀವ ತಳವಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಸುತ ತಳವಾರರು ಬಹುಮಾನಗಳನ್ನು ವಿತರಣ ಮಾಡಿದರು.

ಸೈಗತಶೀಲ ಲೇಖಕರ ಸಮ್ಮೇಳ ಕನ್ನಡದ ಪುರೋಗಾಮಿ ಲೇಖಕರ ಸಂಘಟಿತ ಸಂಸ್ಥೆಯೊಂದನ್ನು ಕಟ್ಟಲೂ ಲೇಖಕರ ಹಿತಚಿಂತನೆಯ ಮಾರ್ಗವನ್ನು ವಿಚಾರಿಸಿ ಕಂಡು ಹಿಡಿಯಲೂ ಮಂಗಳೂರಲ್ಲಿ ಒಂದು ಬರಿಹಗಾರರ ಸಮ್ಮೇಳವನ್ನು ಜರಗಿಸುವ ಸಂಕಲ್ಪವಿದ್ದು ಆಸಕ್ತರಿಬ್ಬರವರು 'ಬಿ. ಶಂಕರಭಟ್ಟ, ಪ್ರಗತಿಶೀಲ ಲೇಖಕರ ಸಂಘ, ರಥಬೀದಿ ಮಂಗಳೂರು' ಇವರೊಡನೆ ಸಂಪರ್ಕ-ಪತ್ರವ್ಯವಹಾರ ನಡೆಸಬಹುದು.

ಹೊಸ ಕಲೆಕ್ಟರರು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್ ಅವರು ಒಂದು ತಿಂಗಳ ಬಿಡದೆ ಪಡೆದಿರುವುದರಿಂದ ಅವರ ಸ್ಥಾನದಲ್ಲಿ ನಿಯಮಿಸಲ್ಪಟ್ಟ ಶ್ರೀ ಎಸ್. ಸಿ. ಸೊಮಸುಸ್ ಅವರು ಸೇವಾಸಲ್ಲಪಟ್ಟು ಈಗಾಗಲೇ ಚಾರ್ಜು ವಹಿಸಿಕೊಂಡಿರುವರು.

ಶ್ರೀ. ಎಸ್. ನಿಜಲಿಂಗಪ್ಪನವರ ಜಿಲ್ಲಾ ಸಂಚಾರ ಕಾರ್ಯಕ್ರಮ- ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ ಅಖಿಲ ಭಾರತ ಕಾರ್ಯಕಾರಿ ಮಂಡಲಿಯ ಸದಸ್ಯರೂ ಆದ ಶ್ರೀ ಎಸ್. ನಿಜಲಿಂಗಪ್ಪನವರು ತಾ. 4-2-49ನೇ ಪೂರ್ವಾಹ್ನ ಸುಮಾರು 10 ಘಂಟೆಗೆ ಕಡೂರಿಂದ ಬೆಳ್ತಂಗಡಿಗೆಂದು ಅಲ್ಲಿಂದ ಬಂಟ್ವಾಳ, ಪಾಣೆಮಂಗ್ಳೂರಿನ ಕಾರ್ಯಕ್ರಮಗಳನ್ನು ತೀರಿಸಿ, ಸುಮಾರು ಘಂಟೆ 3ಕ್ಕೆ ಮಂಗ್ಳೂರಿಗೆ ಆಗಮಿಸಿ ಘಂಟೆ 4ಕ್ಕೆ ಹಂಪನಕಟ್ಟೆಯಲ್ಲಿ 'ಸರ್ವೋದಯ' ಪತ್ರಿಕೆಯ ಉದ್ಘಾಟನಾ ಸಮಾರಂಭ ನಡೆಸುವರು. ಅಮೇಲೆ ಕೆನರಾ ಚೇಂಬರ್ ಆಫ್ ಕಾಮರ್ಸ್‌ನವರು ಮಾನ ಪತ್ರವನ್ನು ಒಪ್ಪಿಸುವರು. ತಾ 5ನೇ ಬೆಳಿಗ್ಗೆ 8ಘಂಟೆಗೆ ಮಂಗಳೂರಿನಿಂದ ಹೊರಟು ಮೂಡಬಿದ್ರೆ ಮಾರ್ಗವಾಗಿ ಕಾರ್ಕಳಕ್ಕೆ ಹೋಗಿ ಅಲ್ಲಿಂದ ಕಾರ್ಯಕ್ರಮವನ್ನು ಮುಗಿಸಿ, ಮಧ್ಯಾಹ್ನ ಅಲ್ಲಿಂದ ಹೆಬ್ರಿ ಮಾರ್ಗವಾಗಿ ಕುಂದಾಪುರಕ್ಕೆ ಹೋಗುವರು. ಅಲ್ಲಿ ಸಾರ್ವಜನಿಕಸಭೆ ಮೊದಲಾದ ಕಾರ್ಯಕ್ರಮ ಗಳಾದಮೇಲೆ ಬ್ರಹ್ಮಾವರ ಮಾರ್ಗವಾಗಿ ರಾತ್ರಿ ಉಡುಪಿಗೆ ತೆಲುಪರು. ಮರುದಿನ ಬೆಳಿಗ್ಗೆ ಉಡುಪಿಯಿಂದ ಹೊರಟು, ಕಟಪಾಡಿ, ಪಡುಬಿದ್ರೆ, ಮತ್ತು ಮೂಲ್ಕಿ ಮಾರ್ಗವಾಗಿ ಮಂಗಳೂರಿಗೆ ಬಂತಿರಳುವರು. ಅಂದು ಸಂಜೆ 6-30ಕ್ಕೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಲಿರುವುದು. ಪ್ರಾ[illegible] ಧ್ಯಕ್ಷರೊಂದಿಗೆ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಪಿ. ಟಿ. ಮೊಗಡಿಯಪದು ಬರಲಿರುವರು.

ಸರ್ವೋದಯ ದಿನ ಕಳೆದ ತಾ 30 ರಲ್ಲು ಸಂಜೆ ಕೇಂದ್ರ ಮೈದಾನದಲ್ಲಿ ಮಹಾತ್ಮಾಜೀಯವರ ನಿಧನದ ಸ್ಮಾರಕ ದಿನಾಚರಣೆಯು ಜರಗಿತು. 'ವಂದೇಮಾತರಂ' ಬ್ಯಾಪ್ಟ್ ಗೀತೆ ಹಾಡಲ್ಪಟ್ಟನಂತರ ಭಗವದ್ಗೀತೆ, ಕುರಾನ್, ಬೈಬಲ್‌ಗಳಿಂದ ಉದ್ಧರಿಸಿದ ಪ್ರಾರ್ಥನೆಗಳಾದವು, ರಾಷ್ಟ್ರಗೀತ ಮೊದಲಾದ ಕವಿತೆಗಳ ಪಠನಾನಂತರ ಸರ್ವೋದಯ ದಿನದ ನಿರ್ಣಯವನ್ನು ಓದಲಾಯಿತು. 'ಜನಗಣಮನ' ದೊಂದಿಗೆ ಸಭೆಯು ಮುಕ್ತಾಯವಾಯಿತು.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು ವಿಚಾರಿಸಿರಿ.

ದ. ಕನ್ನಡ

ಕಾರ್ಕಳ-ಈದು–ಶ್ರೀ ಮುಜಿಲ್ನಾಯ ಪ್ರಾಥಮಿಕ ಪಾಠಶಾಲೆಯ ವರ್ಧಂತ್ಯುತ್ಸವವು ತಾ. 22-1-49ರಲ್ಲು ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಯಾ. ರಾಮಚಂದ್ರರವರ ಅಧ್ಯಕ್ಷತೆಯಲ್ಲಿ ಜರಗಿತು. ಬೀಳ್ಗೆ ಶ್ರೀ. ಯನ್. ಬಿ. ಆತಿಕಾರಿಗಳ ರಾಷ್ಟ್ರ ಧ್ವಜವಂದನೆಯೊಂದಿಗೆ ಪ್ರಾರಂಭವಾಯಿತು. ಮೊದಲೇ ನಿಶ್ಚಯಿಸಿದಂತೆ ಏದು ರಾಜ್ಯಗಳ ಮಕ್ಕಳ ಆಟ ವಿನೋದಾವಳಿಗಳ ಪ್ರದರ್ಶನವು ಪ್ರೇಕ್ಷಣೀಯವಾಗಿತ್ತು. ರಾತ್ರೆ ಶ್ರೀ ಮಾಧವಜೀಯವರ "ಶ್ರೀ ಕೃಷ್ಣಜನ್ಮಕ್ಕೆ ಕಥಾರೂಪಣವೂ" ಛಾಯಾಸ್ಪರ್ಧಾನ ಕಾರ್ಯಕ್ರಮಗಳೂ ನಡೆಯಿತು.

ಬ್ರಹ್ಮಾವರ– ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆ ಕಳದ ೨೦ರಂದು ಜರಗಿ, 'ಸಹೋದಯ' ದಿನವನ್ನು ಯಶಸ್ವಿಯಾಗಿ ಆಚರಿಸಬೇಕೆಂದೂ, ಕಾಂಗ್ರೆಸಿಗರು ಕಳ್ಳ ಸಂತೆಗೆ ಹೋಗದೆ ಇದ್ದುದರಲ್ಲಿ ತೃಪ್ತಿಹೊಂದಬೇಕೆಂಬ ಕೇಂದ್ರಸಂಸ್ಥೆಯ ಆದೇಶಮಾತ್ರವಿದ್ದರೂ ಆಕ್ಕಿಯ ಪ್ರಧಾನ ಆಹಾರವಾಗುಳ್ಳ ನಮ್ಮ ಜಿಲ್ಲೆಗೆ ಇದು ಆದರೂ ಅಕ್ಕಿಯ ರೇಶನ್ ನಿಕ್ಕಲ್ಲಿ ಕಡಿತ ಸಿರ್ಮೂಲವಾಗುವುದೆಂದೂ, ಪರದೇಶಾಯವರು ಭಿಕ್ಷಾಟನೆಗೈಯುವುದನ್ನು ನಿರ್ಬಂಧನದಮೂಲಕ ನಿಲ್ಲಿಸಿ ಅವರನ್ನು ಉತ್ಪಾದಕರಾಗಿ ಮಾಡಬೇಕೆಂದೂ, ಖಾದಿ ಉತ್ಪತ್ತಿಯನ್ನು ಹಳ್ಳಿ ಹಳ್ಳಿಗಳಲ್ಲಿಯೂ ಸಂಘಟನೆ ವ್ಯವಸ್ಥಿತವಾಗಿ ನಡೆಸಬೇಕೆಂದೂ ಸಲಹೆಗಳಾದುವು.

ಬಂಟ್ವಾಳ–ಸ್ಥಳೀಯ ಜೋರ್ಡಾನಿಲಾ ವರ್ಧಂತಿಯು ತಾ ೨೦ರಂದು ರೇಂಜ್ ಇನ್ಸ್‌ಪೆಕ್ಟರಾದ ಶ್ರೀ. ಎಚ್. ಮೈಕ್ ಬಿ ಎಲ್ ಟಿ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿ ಶಾಲಾ ವರ್ಧಂತಿ ನಡೆದಿದುದು ಇದೇ ಮೊದಲಸಲ. ಶ್ರೀ. ಜತ್ತಪ್ಪರೈಗಳು ಸ್ವಾಗತವನ್ನಿತ್ತರು.

ಫರಂಗಿಪೇಟೆ–ಕಳದ ತಾ ೧೮ರಂದು ಇಲ್ಲಿ ಶ್ರೀ ರಾಮಾ ಹಾ. ಎ. ಶಾಲಾ ವರ್ಷಾರಂಭದ ಮೀಲಿನಮಜ್ಜು, ನೀರಾವಿನಗಾರ, ಬೊಡಂತಿಲ, ಫರಂಗಿಪೇಟೆ ಶಾಲೆಗಳ ಬಾಲವೀರರ ಒಕ್ಕೂಟವು ಶ್ರೀ. ಕೆ. ಯಶವಂತರಾವ್ ಬಿ. ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದನ್ನು ನೋಡಲು ಅಸುಪಾಸಿನಿಂದ ಸುಮಾರು ೩೦೦ ಜನರು ನೆರೆದಿದ್ದರು. ಶ್ರೀ ಗಿರಿಧರರಾಯರೂ ಶ್ರೀ. ಹರಿಶ್ಚಂದ್ರರಾಯರೂ ಶ್ರೀ ಲ್ಲಿಫರ್ಡ್ ಕರಿಯವರೂ ಶ್ರೀ ಸುಂದರ್‌ರಾವರೂ ಸಂದರ್ಭೋಚಿತ ಭಾಷಣಗೈದರು.

ಕುಂದಾಪುರ–ಸ್ಥಳೀಯ ಜೋರ್ಡಾನ್ ಹೈಸ್ಕೂಲಿನ ಜನಪ್ರಿಯ ಉಪಾಧ್ಯಾಯರ ಲಿಬ್ಲ್ಯಾಂಡ ಶ್ರೀ ಟಿ. ಶಂಕರರಾಯರಿಗೆ ವೈದ್ಯರಿಗೆ ಮುಖ್ಯೋಪಾಧ್ಯಾಯರಾಗಿ ನೇಮಕಾತಿಯಾದ್ದರಿಂದ ಹಳೆ ವಿದ್ಯಾರ್ಥಿಗಳು ಅವರನ್ನು ಬೀಳ್ಕೊಳ್ಳುವಸಮಾರಂಭವೊಂದನ್ನು ಕಳದ ತಾ ೨೦ರಂದು ಜರಗಿಸಿದರು.

ಕುಂದಾಪುರ–ಇಲ್ಲಿಯೂ ಸ್ಥಾನಿಕ ದಿನಾಚರಣೆಯು ಶ್ರೀ ನಿ. ವಿ. ಎಸ್. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಕೊ. ಆ. ಕಾರಂತ ಶ್ರೀ ಎಂ. ಎಂ. ಹೆಗ್ಡೆ ಮೊದಲಾದವರು ಸಮಯೋಚಿತ ಭಾಷಣ ಮಾಡಿದರು.

ಕಲ್ಯಾಣಪುರ–ಸ್ಥಾನಿಕ ದಿನಾಚರಣೆಯು ಶ್ರೀ ನಿ. ರಂಗಜೋಯಿಸರ ಅಧ್ಯಕ್ಷತೆಯಲ್ಲಿ ಜರಗಿತು ಪುಷ್ಪಾತ್ತರ ತತ್ವಗಳನ್ನು ಅಚರಣೆಗೆ ತಂದುಕೊಳ್ಳಬೇಕೆಂದೂ ನೆಹರೂ ನಾಡಕ್ಕಾಳ್ಕೆ ಬೆಂಬಲ ಕೊಡಬೇಕೆಂದೂ ಅಧ್ಯಕ್ಷರು ಹೇಳಿದರು. ಕಾಂಗ್ರೆಸ್ ನೇತಾಜಿ ಲಬವು ನೇತೃತ್ವದಲ್ಲಿ ಕಳೆದ ತಾ 30ರಂದು ಇಲ್ಲಿ ಬಾಪೂಜಿ ಬಲಿದಾನದ ಪ್ರಥಮ ವಾರ್ಷಿಕದಿನ ಆಚರಿಸಲಾಯಿತು. ಸಂಜೆ ಸರ್ವೋದಯ ವಾಚನಾಲಯದ ಉದ್ಘಾಟನೆಯೂ ಸಂದೇಶ ಸಾಚನವೂ ನಡೆಯಿತು.

ವಿಟ್ಲ–ದ. ಕ. ಜಿಲ್ಲಾ ಕಾಂಗ್ರೆಸ್ ಹಿರಿಯರಾದ ಶ್ರೀಗಳಾದ ಎಚ್. ನಾರಾಯಣ ರಾವ್, ಬಿ. ನಾರಾಯಣ ರಾವ್, ಮುಕುಂದ ಪ್ರಭು, ಉನೀಂದ್ರನಾಯಕ್ ಇವರು ಇಲ್ಲಿಗೆ ಬಂದಾಗ ಶ್ರೀಗಳಾದ ವಿಠಲದಾಸ ಶೆಟ್ಟಿ ಮತ್ತು ಎ. ಜಿ ತಿರುಮಲೇಶ್ವರ ಭಟ್ಟ ಇವರು ಅಭ್ಯಾಗತರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಕುಬಣಿ–ಇಲ್ಲಿ ತಾ ೨೯ರಂದು ಜಾನುವಾರು ಪ್ರದರ್ಶನವೊಂದು ಜರುಗಿತು. ಉತ್ತಮ ಆಕಳುಗಳಿಗೆ ಬಹುಮಾನವನ್ನು ಹಂಚಲಾಯಿತು.

ಬ್ರಹ್ಮಾವರ ಕಾಂಗ್ರೆಸ್ ಸಮಿತಿಯವರ ಆಶ್ರಯದಲ್ಲಿ ಇಲ್ಲಿ ಸರ್ವೋದಯ ದಿನಾಚರಣೆ ಆಚರಿಸಲ್ಪಟ್ಟಿತು. ಸೂತ್ರಯಜ್ಞ ಸಂದೇಶ ಪರಂ- ಸ್ವಾರ್ಥನಿ- ಮುಂತಾದ ಕಾರ್ಯಕ್ರಮಗಳಿದ್ದುವು

ಎಣಿಪುರ–ಕಳೆದ ತಾ 23ರಂದು ನೇತಾಜಿ ಯುವಕ ಸಂಘದವರ ನೇತೃತ್ವದಲ್ಲಿ ನೇತಾಜಿಯವರ 53ನೇ ವರ್ಧಂತ್ಯುತ್ಸವವು ಶ್ರೀ. ಎ. ಎಸ್. ಕ್ಯಾರೆಟ್ ಬಿ. ಎ ಎಲ್. ಟಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ವಿವಿಧಪಾತ್ರೆಗಳು



ಯಾವತ್ತೂ ವಿಧವಿಧದ ಬೆಳ್ಳಿ, ತಾಮ್ರ ಹಿತ್ತಾಳೆ ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾನಾನುಗಳೂ ಕಿಮಿಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕುಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ESTD. 1926
CROWN RUBBER STAMP CO.
MFRS OF
RUBBER STAMPS
&
ENGRAVERS
BALMATTA ROAD MANGALORE S.K.

Approved firm by the Govt. of Mysore
Certified by the Agent of the Govt. of Cylone & Indian.

ಬೇಕು

ಯು. ಎಸ್. ಎ. ಫೌಂಟನ್ ಪೆನ್ನುಗಳು ಈಗ ತಾನೆ ಬಂದಿವೆ. ಅವನ್ನು ವಿಕ್ರಯಿಸಲು ಸ್ವಾವಿಕ್ಸರೂ ಉತ್ಸಾಹಿ ಏಜಂಟರೂ ಬೇಕಾಗಿದ್ದಾರೆ. ಏಜನ್ಸಿ ಶರತ್ತುಗಳಿಗೂ ಸ್ಯಾಂಪಲಿಗೂ ಕೂಡಲೇ ಬರೆಯಿರಿ. ಪತ್ರ ವ್ಯವಹಾರ ಮಾತ್ರ ಇಂಗ್ಲಿಷಿನಲ್ಲೆ ಮಾಡಬೇಕು.

House of Commerce
74 G. B. Road
(A/U) DELHI.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ನ್ಯಾಯಾವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್ಯ, ಶಯನ ಇವಲ್ಲೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding
ROYAL MAHAL,
UDIPI, S. Kanara.



ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾರ್ಮಶಾಲಿಗಳಿಗೂ ಸುಲಭವಾಗಿರುವುದು.



ಶ ಬ್ರಿನ್ನತಬಟ್ಟಿಗಳು ಹೆಚ್ಚು ಕಡಿಮೆ ಅರಿವಿಸಗಳಿಗೆ ಬಳುವವು. ಅಂದರೆ ಕೆಂಪಲ ೧ ರಷ್ಟಾಗಳ ಒಂಟು ಬಾಣಂತಿತನಕ್ಕೆ ಸಾಕಾಗುವವ ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಕಾಶ್ಯಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ. ಕ

ಸ್ವಾಕಿಸ್ವರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅವಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಧಿಕವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ ಬಂಗಾರ ಮಿಶ್ರಿತ,)

ಇದು ಆತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಕಾಲೇರಿಕ ಮತ್ತು ಮೆದೋಸಾರ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ.

—ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ. ಬಾಲಕ ಸಂಗ್ರಹ ಎಂಬತ್ತರ ರೋಗಕ್ಕೆ ತಕ್ಕಷ್ಟು ಔಷಧಿ ರವಾನಿಸಬಲ್ಲೆವು. (1) ಉಡುಪಿ ಏಜಂಟರು —ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು —ಪೊಪ್ಯುಲರ್ ಸ್ಟೋರ್ಸ್, ಕಮಿಸ್ಸ್ 183, ಖಾರಾವಿಜಾಗ್ ರೋಡ್ಸ್ ಜಿ. ಐ. ಪಿ. ರೈಲ್ವೆ ವರ್ಕ್ಸ್ ಕಾಲೋನಿ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕಮಿಸ್ಸ್, ಜಿ. ಐ. ಪಿ. ಮಾಟುಂಗಾ.

ಗಾಂಧಿಜೀ ಹೆಸರಿನಿಂದಾದರೂ- ——— ನಮ್ಮನ್ನು ನಾವು ನೋಡಿಕೊಳ್ಳೋಣ ———

(ನಿನ್ನೆ ಪುಟ್ಟದಿಂದ)

ತಮ್ಮ ಅಮೂಲ್ಯವಾದ ಹೆಸ್ರು ಹೆಸ್ರು ದಿನಗಳನ್ನು ನಿಜಕ್ಕೂ ಅದಕ್ಕೊಪ್ಪಿಸುತ್ತಿದ್ದರೆನ್ನಬಹುದು. ಆದರೂ ಅವರ ಈ ಸ್ವಾರಸ್ಯಕ ನಿಧಿಗೆ ಎಲ್ಲರೂ ತಮ್ಮ ಹತ್ತು ದಿನಗಳ ಆದಾಯವನ್ನು ನಿಜಕ್ಕೂ ಒಪ್ಪಿಸಿದ್ದಾರೆಯೇ? ಒಪ್ಪಿಸಲಿರುವರೆ? ನಿಧಿಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರ ಅಭಿಪ್ರಾಯದಂತೆ ಹಿಂಟನ ಪಕ್ಷಟಿ ವರೆಗಾದ ಸಂಗ್ರಹ ಸಮಾಧಾನಕರವಲ್ಲ.

ಇವೆಲ್ಲಾ ವಿದ್ಯಮಾನಗಳಿಂದ ನಾವು ಕಲಿಯಬೇಕಾದ ಪಾಠವೇನು? ಜನತೆ ಇನ್ನೂ ತಮ್ಮನ್ನು ತಾವು ಅರಿತುಕೊಂಡಿಲ್ಲ; ತಾವಾಗಿ ತಮ್ಮ ಮೇಲಿನ ಕರ್ತವ್ಯವನ್ನು ಮಾಡಲೀವರೆಗೂ ಕಲಿತಿಲ್ಲ. ಬಿಡಿಸುವವರು, ಒಡಿಸುವವರು ಮೇಲಾಗಿದ್ದರೆ ಮತ್ತೆಲ್ಲರೂ

Regd. No. M. 3018 ಎರಡಾನೆ 10-2-1949

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ

ಜಾಹೀರಾತಿಗೆ ಉತ್ತಮ ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೨೪

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29
No. 24

ರಾಷ್ಟ್ರ ಜೀವನ ಪುಷ್ಟಿಹೊಂದಬೇಕೆ? ಈ ರೋಗ ಪೂರ್ಣ ಗುಣವಾಗಬೇಕು.

ಧರ್ಮಾಂಧತೆ ಮತ್ತು ಜಾತೀಯತೆಗ
ಪುರಾತನ ಕಾಲದಿಂದಲೂ ಭಾರತದ
ಗಲ ಕಂಟಕಗಳಾಗಿದ್ದುವು; ಆ ಕಾಲದ
ಚಕ್ರವರ್ತಿಗಳಿಗೂ, ರಾಜ್ಯದ ಪರಾ
ಭವಕ್ಕೂ ಇದೊಂದೇ ಕಾರಣವೆಂಬುದು
ಚರಿತ್ರೆಯಿಂದ ಸ್ಪಷ್ಟವಾಗುತ್ತಿದೆ.

ಭಾರತೇಯರ ಜೀವನಾ ಧರ್ಮಿಕ
ಯೆಂಬುದನ್ನರಿತೇ ಬ್ರಿಟಿಷರು ತಮ್ಮಾ
ಳಿಗತ್ಯನುಕೂಲವಾದ ಧಾರ್ಮಿಕ ಭಾ
ವನೆಯನ್ನು ಎಳ್ಳಷ್ಟೂ ನೋಯಿಸದೆ, ಅ
ವಕಾಶವಿದ್ದಷ್ಟು ಬೆಳೆದು, ಅಲಸ್ಯಾಂಧಕಾರ
ವುಮುಕೊಳ್ಳುವಂತೆ ಮಾಡಿದ್ದರಲ್ಲದೆ, ಸಂ
ಧರ್ಷ ಬಂದಾಗ ಒಂದು ಧರ್ಮದವರನ್ನು
ಮತ್ತೊಂದು ಧರ್ಮದವರಿಂದ ಎತ್ತಿ ಕಟ್ಟಿ
ಮೂರನೆಯವರಾದ ತಾವು ತಮ್ಮ ಕೆಲಸ
ಸಾಧಿಸಿಕೊಳ್ಳುತ್ತಿದ್ದರು.

ದೇಶಬಾಂಧವರಲ್ಲಿ ಧಾರ್ಮಿಕ ಒಡ್ಡಿ
ಣ ಅತ್ಯಾವಶ್ಯಕ್ಕೂ ಬೇರೂರಿದ ಎಂಬುದ
ನ್ನರಿತವರಾದುದರಿಂದಲೇ ಮಹಾತ್ಮಾ
ಜೀ, ಅದನ್ನು ಕೆತ್ತಿಸೆಯುವ ಸಂಕಟದಾ
ಯೀ ಸಾಹಸಕ್ಕೆಳೆಯದೆ, ಆ ಮನೋವೃ
ತ್ತಿಯನ್ನೇ ಜನ ಸೇವಾ ಬುದ್ಧಿಯಾಗಿ ರು
ದ್ಧೀಕರಿಸಿ ರಾಷ್ಟ್ರದ ದಾಸ್ಯ ಮತ್ತು ಜನ
ತೆಯ ಪಾಪ ವಿಮೋಚನೆ ಮಾಡುವ ಪ್ರ
ಯತ್ನಕ್ಕಿಳಿದಿದ್ದರು.

ದೇವರು ಬಂಧ ವಿಮೋಚನೆಗೊಳ್ಳು
ವಾಗ, ಸ್ವತಂತ್ರ ರಾಷ್ಟ್ರದಲ್ಲಿ ಸಾಯಲೇ
ಬೇಕಾಗಿದ್ದ ಧರ್ಮಾಂಧತಾ ಹಾಲಾಹಲ
ವು ಅಮಾನ್ಯ ಕಾಲದ ಒಡ್ಡಾಟ ರೂಪ
ದಿಂದ ತನ್ನ ಶಕ್ತಿಯನ್ನೆಲ್ಲಾ ಜೋರಿ,
ಪರಮಾವಧಿ ಹಾನಿಯನ್ನು ಮಾಡಿಯೇ
ಸ್ವಾನಶಕ್ತವಾಗೊಂದಿದ. ಈಗ ಉಳಿದಿರು
ವುದು ಅದರ ಶೇಷಾಂಶಗಳು; ವಿಷ ತುಣು
ಕುಗಳು; ನಂಜು ಕುಳಿಗಳು ಮಾತ್ರ. ಹಿಂ
ದೂ ಮಹಾ ಸಭಾ, ಆರ್.ಯಸ್.ಯಸ್,
ಇಂತಹವು!

ಈ ವೈಕಿ 'ಹಿಂದೂ ಮಹಾ ಸಭೆ'ಯು
ಜಾತಿ ದ್ವೇಷ, ಸಂಕುಚಿತ ಧರ್ಮಾಂಧತೆ
ಮತ್ತು ಅಲ್ಪಬುದ್ಧಿ ಪ್ರಚಾರವೊಂದಕ್ಕೇ
ನೇ ಮೀಸಲಿದ್ದು, ಬೇರಾವ ಕಾ
ರ್ಯವನ್ನೂ ಮಾಡಲರಿಯದ ಅದು ಅಂ
ದಿನಿಂದಿದುವರೆಗೂ ಕಾಂಗ್ರೆಸನ್ನು ವೈ
ಯ್ಯುವದೊಂದನ್ನೇ ತನ್ನ ಕಾರ್ಯಕ್ರಮ
ವಾಗಿ ಇಟ್ಟುಕೊಂಡಿದೆ.

ಈ ಮತಾಂಧತೆಯೊಡನೆ ಗಾಂಧಿಜೀ
ಟ್ಟ ಜ ವ್ಯಕ್ತಿಯವರೆದೆಗೆ ಬಡಿದ ಗುಂಡಿನಂ
ತೆಯೇ ಆ ವಿಷಭರಿತ 'ಹಿಂದೂ ಮನೋವೃ
ತ್ತಿ'ಯ ಒಂದು ಉಪಕರಣಮಾತ್ರ. ತನ್ನ
ನೈಗಾವಲಿಗೆ ಸಶಸ್ತ್ರ ಪಕಟಿಯೊಗಲೀ,
ತನ್ನ ಪ್ರಾರ್ಥನಾ ಸಭೆಗೆ ಬರುವವರ ದೇ
ಹ ಪರೀಕ್ಷೆಯಾಗಲೀ ಇರಕೂಡದೆಂದು ವಿಧಿ
ಸಿ, ಕೈ ಜೋಡಿಸಿಕೊಂಡು ಒರುವ 79 ವ
ರುಷದ ಮುದುಕನೆನ್ನು ತೀರಿಸುವ ಕೆಲಸ
ಕ್ಕೆ ಈ ಧರ್ಮಾಂಧ ಮನೋವೃತ್ತಿಯವ
ರ ವೈಕಿ ಒಬ್ಬನೇ ಸಾಕಾದ ದರ್ಲ್ಲೆ ಅಕ್ಷ
ರ್ಯನೇನೂ ಇಲ್ಲ. ಗಾಂಧೀ ಗುಂಡುಗಳಿ
ರುತಿದ್ದಲ್ಲಿ ಈ ಧರ್ಮಾಂಧ ಗುಂಡೂ ಕೊ
ಲೆಗಾರ ಗುಂಡಾಗುತಿತ್ತೆಂದು ಊಹಿಸ
ಬೇಕು.

ಲೌಕಿಕವಾದಿ, ಸ್ವತಂತ್ರ ಭಾರತಕ್ಕೆ ಈ
ಧರ್ಮಾಂಧತೆಯಷ್ಟು ದೊಡ್ಡ ಅಪಾಯ
ಬೇರೊಂದಿರಲಾರದು. ಅತ್ಯಂತ ಕಳಪೆ
ರೂಪದ ಕಲ್ಮಷ ಮತ್ತು ದುರ್ಬಲ ಬುದ್ಧಿ
ಯಿರುವುದು ಈ ಹಿಂದೂಧರ್ಮಾಂಧರಲ್ಲಿ.
ರಾಷ್ಟ್ರದ ಪ್ರಗತಿ, ಮತ್ತು ಜನಜೀವನದ
ಸುಧಾರಣೆಗೆ ಪ್ರಯತ್ನಿಸುವಾಗ ಮುಂದಾ
ಗಿ ಈ ಮತಾಂಧ ವಿಷವನ್ನು ಸಂಯಾಗಿ
ತೊಳೆದುಕೊಳ್ಳಬೇಕಾದುದು ಅತ್ಯಗತ್ಯ.
ವಿಷ ಪಾತ್ರೆಯೇನೋ ಒಡೆದು ಹೋಗಿ
ರುವುದಾದರೂ ಸಿಡಿದು ಬಿದ್ದಿರುವ ಸಣ
ಗಳು ವಿಷದ ಬಿಂದುಗಳೆಂಬುವನ್ನು ಲಕ್ಷ್ಯ
ದಲ್ಲಿಟ್ಟುಕೊಂಡು ಜೋಕ್ಯವಾಗಿ ತೊಳೆದು
ಬಿಡಬೇಕು.

ಆ ದಿನಗಳಲ್ಲಿ ಹೈದರಾಬಾದಿನ ನಿಜಾ
ಮ್ ಸಂಸ್ಥಾನಕ್ಕೆ 'ಇತ್ತೆಹಾದ್-ಉಲ್-
ಮುಸ್ಲಿಮೀನ್' ಮತ್ತು ರಜಾಕಾರರು
ಹೇಗಿದ್ದರೋ, ಭಾರತ ಸರಕಾರಕ್ಕೆ ತಾ
ವು ಹಾಗಾಗಬೇಕೆಂದು ಹಿಂದೂ ಮಹಾ
ಸಭೆ ಮತ್ತು ಆರ್. ಯಸ್. ಯ.ಸ್.ನ
ಧೋರಣೆ. ಅಂದಿನ ನಿಜಾಮನ ಬುದ್ಧಿ ಭಾ
ರತದ ಕೇಂದ್ರ ಮತ್ತು ಪ್ರಾಂತೀಕ ಸರಕಾ
ರಗಳಿಗಿಲ್ಲದಿರುವುದೆಂದಲೂ, ರಜಾಕಾ
ರರಿಗೆ ಇಲ್ಲಿಯ ಈ ಜಾತೀಯ ಸಂಸ್ಥೆಗಳ
ಗಿಲ್ಲದಿರುವುದರಿಂದಲೂ ಆಗಿರಲಿಲ್ಲ,
ಇನ್ನು ಸಿದ್ಧಿಸುವಂತಿಲ್ಲ. ಆದರೆ ಧೈರ್ಯ,

'ಅಂತರಂಗ' ಪತ್ರಿಕೆಯ ಹೊಸ ಪುಸ್ತಕ

ಗಾಂಧಿಯ ಗಾಂಧಿ

ಭಾರತದ ಸರ್ವಸ್ವ ಮಹಾತ್ಮರ ಜೀವನದ ಅಂತರಾಂಶಗಳು
ಗಾಂಧಿಯ ಮಾತಾಗಿ ಶ್ರೀ. ಎಂ ವಿ. ಹೆಗ್ಡೆಯವರಿಂದ
ಪೋಣಿಸಲ್ಪಟ್ಟ ಚಿಕ್ಕ ಪುಸ್ತಕ.

ಮಹಾತ್ಮರ ಜೀವನ, ರೀತಿ, ಅವರ ಮನೋಗತಿ ಇವನ್ನು
ಸೂಕ್ಷ್ಮವಾಗಿ ವಿವರಿಸಿರುತ್ತದೆ.

ಪುಟಗಳು 32 ಬೆಲೆ 0-3-0

0-4 0 ಸ್ಟ್ಯಾಂಪು ಕಳಿಸಿದವರಿಗೆ ಒಂದು ಪ್ರತಿ ಕಳಿಸಲ್ಪಡುತ್ತದೆ.

ಇತರ ಪುಸ್ತಕಗಳು:-

ಗರ್ಜನೆ ಬಿರುದಾವಳಿ 0-2-0; ಆ ಸುದ್ದಿ 0-2-0;
ಹೈದರಾಬಾದ್ ವಿಜಯ ಅಥವಾ ರಜಾಕಾರರುರ ಸಂಹಾರ 0-3-0;
ಸೆರೆಯಾಳು 0-4-0.

ಮೆನೇಜರ್ ಅಂತರಂಗ ಕಾರ್ಯಾಲಯ, ಉಡುಪಿ.

ನಿಮ್ಮ ಮೆಚ್ಚಿನ
ಸುವಾಸನೆಯ ಸ್ವಾದವುಳ್ಳ
ಪ್ರಭಾತ ಚಾ ಮತ್ತು ಕಾಫಿ
ರಾಜಾ ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR (Niligiris)

ನಿಮ್ಮವಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED

ಥೋರನೆ ಮನೋವೃತ್ತಿಯ ಮಟ್ಟಿಗೆ ಆ ರಮ್ಯಕಾರರೂ ಈ ರಂಪಾಟಗಾರರೂ ಒಂದೇ.

ಈಗ ಆರ್. ಯಸ್. ಯಸ್- ತನ್ನ ಸತ್ಯಾಗ್ರಹ ನಾಮಧೇಯ ಆಟ ಪ್ರದರ್ಶಿಸಿ, ತನ್ನಂತೆ ಸೋತು ತಾನೇ ಬಾಲ ಮಡಚಿದೆ. ('ಆದರೊಡನೆನೆ ಸಂಧಾನವೆಂಬುದಿಲ್ಲ' ಎಂದು ಸರಕಾರೀ ನಾಯಕರು ಸ್ಪಷ್ಟ ಪಡಿಸಿರುವಂತಿರಲೂ ಈ ಭಾರತೀಯ ರಝಾಕಾರ ಪಡೆಯವರು ತಮ್ಮ ಗೊಂದಲಕ್ಕೆ 'ಸತ್ಯಾಗ್ರಹ' ಎಂದು ಹೆಸರಿಟ್ಟಂತೆಯೇ, ತಮ್ಮ ನೋ ಲಿಗೆ 'ರಿಂಚ್' 'ಸಂಧಾನ" ಇತ್ಯಾದಿ ಹೆಸರಿಡುವ್ಕರಿವದನ್ನು ತಾಣುವಾಗ ನೋ ದವೇಳುತ್ತಿದೆ.

ಕಾಂಗ್ರೆಸಿನ ಮೇಲೆ ಅಪಹ್ಯಾರ ಹೊರತು ಬೇರಾವುದನ್ನೂ ಅರಿಯದ ಹಿಂದೂ ಮಹಾಸಭೆಯು ಈ ಕೆಸರಾಟಕ್ಕೆ ಹೇಳಿಸದವನ್ನೇ-ಕಾರ್ಯ ಶಕ್ತಿ ಅಥವಾ ಬಲವಿಲ್ಲದ ಕಲ್ಪನಾ ಬುದ್ಧಿಯೋ ಗೃತೆಯವರನ್ನೇ-ನೇಮಿಸಿಕೊಂಡಿದ್ದುದರಿಂದ, ಗಾಂಧಿಜೀ ಕೊಲೆಯ ಬೆನ್ನಲ್ಲಿ ಈ ಆಳೆದೆಯವರು ವೇಷ ಮರೆಯಿಸಿಕೊಂಡು ದು ಸ್ವಾಭಾವಿಕ. ತಾವು ಹಿಂದೂ ಮಹಾಸಭೆಯವರೆಂದು ಸಂಸ್ಕಾರದ ಮತ್ತು ಜನತೆಯ ಕಣ್ಣು ತಮ್ಮ ಮೇಲೆ ಬೀಳಬಾರದೆಂಬ ಅಂಜಕೆ-ತಮ್ಮ ಹಿಂದೂ ಮಹಾಸಭಾ ನಂಜನ್ನು ಹೇಗಾದರೂ ಹಬ್ಬಿಸಬೇಕೆಂಬ ಆತುರ-ಇವೆರಡಕ್ಕೆ ಸಿಕ್ಕಿಕೊಂಡು ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು, ಹೇಗೆ ವಾಸಿಸಬೇಕೆಂಬುದೇ ತಿಳಿಯದೆ, ಸಿಕ್ಕಾಬಟ್ಟೆ ಕೆರಚುವ ಹವ್ಯಾಸಕ್ಕೆ ಇವ್ವಿಳಿಗಾಗಿವೆ. ದೌರ್ಬಲ್ಯ ಮತ್ತು ದುರ್ಬುದ್ಧಿ ಒಂದೆಡೆ ಕಲೆತರೆ ಆಗುವದು ಹೀಗೆಯೇ !

"ಸಾಮಾನ್ಯ ಮಟ್ಟದ ವಿಚಾರ ವಿವೇಕ ಕೂಡಾ ಇಲ್ಲದಂಧ್ರ, ಜಾತೀಯ ವಿಷವನ್ನಷ್ಟೇ ತುಂಬಿಸಿಕೊಂಡ ಯೋಗ್ಯತೆಯವರನ್ನೇ ಪ್ರಾಂತಿಕ ಕಾರ್ಯಕರ್ತರನ್ನಾಗಿ ನೇಮಿಸಿಕೊಳ್ಳುವಷ್ಟು ಹೀನ ಮಟ್ಟದ ಹಿಂದೂ ಮಹಾಸಭೆಯಂಥ ಪುಗಳ್ದುರಿಂದಲೇ, ಬಹುಸಂಖ್ಯಾಕ ಹಿಂದುಗಳಲ್ಲಿ ಇಂತಹ ಪಾತ್ಯಂಧರಿದ್ದಾರೆಂಬ ಜೆದರಿಕೆಯು ಅಲ್ಪ ಸಂಖ್ಯಾಕ ಮುಸ್ಲಿಮರಲ್ಲಿ ಹುಟ್ಟಿ ಅವರು ಪ್ರತ್ಯೇಕತೆ ಯಾಚಿಸಹತ್ತಿದಾಗ ಲೋಕದ ವಿಚಾರಿಗಳಿಗೂ ಅದು ಸರಿಯೆಂದೇ ತೋರಿತು; ಹೀಗಾಗಿ ಮುಸ್ಲಿಮ್ ಲೀಗಿಗೆ ಪಾಕಿಸ್ತಾನ ನಿರ್ಮಿಸಿಕೊಟ್ಟವರು ಹಿಂದೂಮಹಾಸಭೆಯವರು. (ಹಿಂದೂಮಹಾಸಭೆಯಂಥವರೇ ಮೂಲ ಕಾರಣರಾ... ನಿರ್ಮಾಣಗೊಂಡ ವಾತಾವರಣದ ಮೇಲಿಂದ) 1947ರಲ್ಲಿ ಇಂದಿನ ಪಾಕಿಸ್ತಾನ ಕೊಡವಿರುತಿದ್ದರೆ ಮುಸ್ಲಿಂ ಬಹುಸಂಖ್ಯೆಯಿರುವ ಆ ಭಾಗಗಳೆಂತೂ ಮುಸ್ಲಿಂ ರಾಜ್ಯವಾಗಿ ಪಾರ್ಪಡುತಿದ್ದುವಲ್ಲದೆ, ಅಖಿಲ ಭಾರತದವಲ್ಲಾ ಕಾರ್ಯಗಳನ್ನೂ ಆತಂಕಿಸಿಬಿಡಲು ಅವರು ಸಮರ್ಥರಾಗುತಿದ್ದರು. ಆದ್ದರಿಂದ (ಹಿಂದೂಮಹಾಸಭೆಯು ಪೆಸೆಯಿಂದಲೇ) ಪೂರ್ಣ ಹಾಳಾಗಿ ಜೀವಚ್ಛಕ್ತಿಯೇ ಉಪಾಯವಾಗುವಲ್ಲಿಗೆ ಬಂದ ಆ ಅಂಗವನ್ನು ಓಪರೇಶನ್ ಮಾಡಿಸಿಕೊಂಡು ಬದುಕಿ ಉಳಿದುದು ಹಿತವಾಯಿತು" ಎಂಬ ಅಭಿಪ್ರಾಯವು ನವಯುಗದ ಒಂದು ಲೇಖನದಲ್ಲಿ ಬಂದಿತ್ತು; ಗಾಂಧಿಜೀಯ ಕೊಲೆಯ ನಂತರ ಹಿಂದೂಮಹಾಸಭೆಯ ಅಂಗಾಂಗಗಳಲ್ಲಿ ತೋರಿಬಂದ ನಡುಕದ-ದೌರ್ಬಲ್ಯ ಮತ್ತು ದುರ್ಬುದ್ಧಿ ಮಿಶ್ರಣದ-ಸ್ಪಷ್ಟ ನಿದರ್ಶನನಾಗಿ ಅಂದಿನಿಂದಿದು ವರೆಗೂ ತನ್ನನ್ನು ತಾನೇ ಪ್ರದರ್ಶಿಸಿಕೊಳ್ಳುತ್ತಾ ಬಂದಿರುವ ಒಂದು ಪತ್ರಿಕೆಯು ಮೇಲಿನ ಅಭಿಪ್ರಾಯದ ಕುರಿತು ಏನೋ ಕಿರಚಿದಂತಿದೆ. (ಅದು ಖಂಡನೆಯೋ, ಸಮರ್ಥನೆಯೋ ಎಂಬುದು ಪಾಪ, ಅದಕ್ಕೇ ನೇ ತಿಳಿದಂತಿಲ್ಲ!) ಹಿಂದೂ ಮಹಾಸಭೆಯ ಹುಚ್ಚು ಮತ್ತು ಪರಿಸ್ಥಿತಿಯ ಭೀತಿ ಎರಡೂ ತಿಂಗಿಕೊಂಡ ಬುದ್ಧಿ ಎಷ್ಟು ಕೊಳೆತು ಹೋಗುತ್ತದೆಂಬುದಕ್ಕೆ ನಿದರ್ಶನವಾಗಿ ಮಾತ್ರ ಈ ಪ್ರಸ್ತಾಪ.

ಈ ಮತಾಂಧತೆಯು ಈ ರೀತಿ ದೌರ್ಬಲ್ಯ ಮತ್ತು ದುರ್ಬುದ್ಧಿಯ ಕತ್ತಲೆಯೊಳಗೆ ಹೋಗಿ ಬೀಳುವಂತೆ ಮೂಲೆಗೆ ತಳ್ಳಬಿಟ್ಟ ರಾಷ್ಟ್ರೀಯತಾ ಶಕ್ತಿಗಾಗಿ ಹೆಗ್ಗಳಿಕೆ ಪಡಬೇಕು. ಆದರೆ ಜನತಾ ರಾಜ್ಯದಲ್ಲಿ ಈ ಕೊಳಕು ಬುದ್ಧಿಯ ಸದ್ದು ಸಂಪೂರ್ಣಾಡಗಬೇಕೇ ಹೊರತು, ಆದರ ನರಳಾಟ ಕೂಡಾ ಕೇಳಿ ಬರಬಾರದೆಂಬುದನ್ನು ಮರೆಯಬಾರದು. ಅದಲ್ಲೇ ನಂಬಿಕಸ್ತೆತನವಿದೆಂದು ಕಡೆಗಣಿಸಿಬಿಟ್ಟರೆ, ಹಾವಿಗೂ ಹುಲಿರೆಯುವವರಿರುವ ನಮ್ಮ ದೇಶದಲ್ಲಿ ಇದರ ಗಂಟಲನ್ನೂ ತಣಿಸಿ, ಗಾಳಿ ಹಾಕುವವರಿರಬಹುದು.

ಇಂದು ಇಂತಹ ವಿಲಕ್ಷಣ ಪರಿಸ್ಥಿತಿ ನಿರ್ಮಾಣಗಿರುವ ಜಾತೀಯವಾದಿಗಳು, ಸ್ವತಃ ಸಂಕಟ ಪಡುತ್ತಿರುವಷ್ಟು ಬೇರೆಯವರಿಗೆ ಸಂಕಟಪಡ್ಡಿಲ್ಲಾರರೆಂಬುದೇ ನೋ ನಿದ; ಅವರಾರೋಗ ಸಾರ್ವಜನಿಕರಿಗವಾಯಕಾರಿ; ತಾಗುವ, ತಾಗಿದವ್ಲಿ ನಂಜೇರಿಸುವ ವಿಷವದು. (ಕಳದ ವಾರ ಉಡುಪಿ ನಗರದಲ್ಲಿ ಒಂದು ಹಾಚ್ಚು ನಾಯಿ ಯಾರೂ, ಏನೆಂದು ನೋ ಡಿದ ದೆ ಕೆಲವರಿಗೆ ಕಚ್ಚಿದ್ದುಂಟಷ್ಟೆ?) ಆದ್ದರಿಂದ ಇದನ್ನು ಕಡೆಗಣಿಸದೆ ಗುಣ ಪಡಿಸಲೇ ಕಾದುದು ಅಗತ್ಯ.

ಭಾರತವಿಂದು ಒಳ ದ್ವೇಷಾಗ್ನಿಯಿಂದ ಖಂತಾಗಿದೆ. ಇನ್ನು ಆರ್ಥಿಕ ಸಾಮಾಜಿಕ ಪುನರ್ರಚನೆಯ ಕಡೆಗೆ ತನ್ನ ಸರ್ವಶಕ್ತಿ ಮತ್ತು ಸಮಯವನ್ನು ಉಪಯೋಗಿಸಿ ಸಾಮಾನ್ಯ ಜನತೆಯ ಸಂಕಷ್ಟಗಳನ್ನು

ಈ ದೂರು ದೂಷಣೆ—

ಒಂದು ಮನೆಗೆ ಗೃಹವ್ಯವಸ್ಥೆ ಮತ್ತು ಊಟೋಳಗಿನ ಹೊಕ್ಕುಬಳಕೆಯಿರಬೇಕಾದಂತೆಯೇ ಒಂದು ಸ್ವತಂತ್ರ ರಾಷ್ಟ್ರಕ್ಕೂ ಗೃಹಾಧಿಕಾರ ಮತ್ತು ವಿದೇಶಗಳ ಸಂಬಂಧ, ಇವೆರಡರ್ಥೆಹೊಣೆಗಾರಿಕೆಯೂ ಬೇಳುತ್ತದೆ. ಭಾರತವು ಸ್ವತಂತ್ರವಾದಾಗ ಇವೆರಡು ಜವಾಬ್ದಾರಿಗಳೂ ಬಂದುವು. ಗೃಹಪಾತೆ ಸರ್ದಾರ್ ಪಟೇಲರ ಕೈಗೆ ಹೋದರೆ ವಿದೇಶ ಸಂಬಂಧ ಖಾತೆ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರ ಕೈಯಲ್ಲುಳಿಯಿತು. ಭಾರತ ಸರಕಾರ ರಥದ ಎರಡು ಶ್ವೇತಾಶ್ವಗಳ ಮೇಲೆಯೇ ಇವೆರಡು ಮುಖ್ಯ ಕಾರ್ಯಭಾರವೂ ಇದೆ. ರಾಷ್ಟ್ರದ ಒಳಾಡಳಿತೆಯಲ್ಲಿ ಈ ವರೆಗಿದ್ದಂತಹ ಗೊಂದಲ, ವಿದೇಶಗಳ ಸಂಬಂಧದ ಮುಟ್ಟಿಗಿರಲಿಲ್ಲ. ಸ್ವತಂತ್ರ ಭಾರತಕ್ಕೆ ಬೇರಾವ ರಾಷ್ಟ್ರದ ಮೇಲೂ ದುರಾಕಾಂಕ್ಷೆಯಿಲ್ಲ; ಪರರಾಷ್ಟ್ರಗಳಿಗೆ ಭಾರತದ ಮೇಲೆ ಕಣ್ಣಿಡಬೇಕಾದ ಕಾರಣ ಅಥವಾ ಧೈರ್ಯವಿಲ್ಲ. ಹೀಗಾಗಿ ಕೆಲವು ಸಮಾನ್ಯ ಭಿನ್ನಾಭಿಪ್ರಾಯ ಮತ್ತು ಘರ್ಷಣೆಗಳನ್ನು ಬಿಟ್ಟರೆ ಭಾರತದ ಲೋಕ ಸಂಬಂಧ ಸುಗಮವಾಗಿದೆ.

ರಾಯಭಾರಿಗಳು

ಸಂಬಂಧ ಜೋಡಣೆಗಾಗಿ 1947ನೇ ಆಗೋಸ್ತು 15ರ ನಂತರ 84 ರಾಷ್ಟ್ರಗಳಲ್ಲಿ 84 ರಾಯಭಾರಿ ಸ್ಥಾನಗಳನ್ನು ಆದಷ್ಟು ಬೇಗನೇ ವಿವಾದಿಸಬೇಕಾಗಿದೆ. ಜಾತೀಯತಾ ಅಗ್ನಿಯನ್ನು ನಂದಿಸಿ, ಜನತಾ ಉದರಾಗ್ನಿಯನ್ನು ನಂದಿಸಲೇಳುವ ಈ ಹೊತ್ತಿನಲ್ಲಿಬೂದಿಯೊಳಗಡಗಿಕೊಂಡ ಮೊದಲಳಿಯದರ ಕೆಡಿಗಳು ಮಿಣುಕ ಹತ್ತಿದರೆ ಮುಂದಾಗಿ ಆದಕ್ಕೆ ನೀರೆರೆದು ಮಸಿ ಮಾಡಿಕೊಳ್ಳಬೇಕು. ಅದಿನ್ನು ಹಬ್ಬುವ ದುರದೃಷ್ಟವಿಲ್ಲವೇ ಇಲ್ಲ—ಆಂದರೆ ಅದರ ಕೆಡಿಗಳನ್ನೆಲ್ಲಾ ನಂದಿಸಿಕೊಂಡಿರಲೇ ಮಾತ್ರ ತಾನೆ?

ECONOMICS	COMPANY & MERCANTILE LAWS
SHORTHAND	SECRETARIAL PRACTICE
TYPEWRITING	DRAWING, SKETCHING
SURVEYING	ETC. ETC.

POSTAL TUITION- A Speciality.
Further Particulars can be had in person or by post.

U. Srinivasa Rao, B.A.B.L., Correspondent.
Panoor Govindrao, CERTS. A.I.B., Manager & Headmaster.



THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

SEASON DEPOSITS.

For Rs. 2,000/- and over are now accepted at all Offices of the Bank at the following rates:-
3 & 4 Months ... @ 2½ % p. a.
5 & 6 Months .... @ 2¾ % p. a.

ನವಯುಗ
೨೪ ಗುರುವಾರ, ಉಡುಪಿ, - ೨-'೪೯

ಈ ಸ್ಥಿತಿ

ಭಾರತವು ಸ್ವತಂತ್ರವಾದಂದಿನಿಂದ ಇದುವರೆಗಿನ ಸ್ಥಿತಿಗತಿಗಳ ಕಡೆಗೊಮ್ಮೆ ದೃಷ್ಟಿಯೋಡಿಸಿದರೆ ಏಕಕಾಲದಲ್ಲಿ ಸಂತೋಷ-ದುಃಖ, ಹೆಗ್ಗಳಿಕೆ-ಲಜ್ಜೆ, ಅಶೆ-ನಿರಾಶೆಗಳು ಹುಟ್ಟಿಕೊಳ್ಳುತ್ತಿವೆ. ದೇಶ ಪ್ರೇಮಿಜನತೆಯ ಮತ್ತು ನಾಯಕರ ಸಹನೆ, ಶಕ್ತಿ, ಸಾಹಸ, ದೂರದೃಷ್ಟಿ ಮುಂತಾದ ಯೋಗ್ಯತೆಗಳ ಪರಿಣಾಮವಾಗಿ, ಅದಿಭಾಗದ ಮಹಾಪತ್ಸುಗಳೆಲ್ಲವೂ ಮಾಯವಾಗಿವೆ; ನಟ್ಟ ಸ್ವಾತಂತ್ರ್ಯ ಸಸಿ ಬೇರುಬಿಟ್ಟು ಬೆಳೆಯಹತ್ತಿದೆ. ವಾಮನ ರೂಪದಲ್ಲಿದ್ದ ರಾಷ್ಟ್ರದ ದುಸ್ಶಕ್ತಿಗಳೆಲ್ಲವೂ ಇದೇ ಕಾಲದಲ್ಲಿ ವಿರಾಟ್ರೂಪಧರಿಸಿ ತಮ್ಮ ಸರ್ವಶಕ್ತಿಯನ್ನೂ ಪ್ರದರ್ಶಿಸಿವೆ. ಬಿಟ್ಟನ ಮೇಲೆ ಪರಕೀಯರಾಡಳಿತೆಯ ಮುಸುಕು ಜಾರಿಬೊಡನೆ, ಆ ವರೆಗೆ ಮರೆಯಲ್ಲೇ ಇದ್ದ ಹಿಂದೀ ಸದ್ಗುಣ-ದುರ್ಗುಣ ನೆರಡರ ರೂಪಗಳೂ ಸರಿಯಾಗಿ ತೋರಿ ಬಂದಿವೆ. ಸ್ವತಂತ್ರ ಭಾರತದ ಈ ಅಯ-ವ್ಯಯ ಪಟ್ಟಿಯು "ಭಾರತೀಯರು ಅಳಬಲ್ಲರು!" ಎಂಬ ತಿಫಾರಸನ್ನು ಲೋಕದಿಂದ ಸಂಪಾದಿಸಿ ಕೊಟ್ಟಿದೆ. ಭಾರತವು ತನ್ನ ಮಿತ್ರ ಶತ್ರುಗಳ ಕನಿಕರ ಮತ್ತ ಅಪಹಾಸ್ಯಕ್ಕೀಡಾಗುವ ಬದಲಿಗೆ, ಗೌರವ ಮತ್ತು ಮಾರ್ಗದರ್ಶಕಕ್ಕೀಡಾಗಿದೆ. ಆದಕ್ಕಾಗಿ ಸತ್ಯಕ್ಕೂ ಭಾರತೀಯರು ಹೆಗ್ಗಳಿಕೆಪಡಬೇಕು.

ಆದರೆ ಪ್ರಗತಿ ಸಾಧಕ ವ್ಯಕ್ತಿ ಅಥವಾ ರಾಷ್ಟ್ರವು ತನ್ನಲ್ಲಿರುವ ದೋಷಗಳ ನಿವಾರಣೆಗೆ, ತನಗಾದ ಪರಾಭವಗಳ ಪರಿಹಾರಕ್ಕೆ ಒತ್ತಾಯಕೊಡಬೇಕಾದುದೇ ಮುಖ್ಯ; ಕಾರ್ಯ ಮುಗಿಸಿಕೊಳ್ಳದವನಿಗೆ ತನ್ನ ಗುಣ ಮತ್ತು ವಿಜಯಗಳಿಗಾಗಿ ಹೆವ್ವೆ; ಹೆಗ್ಗಳಿಕೆಪಡುವ ಸಂದರ್ಭವೇ ದೊರಕದು. ಈ ದೃಷ್ಟಿಯಿಂದ ಒಳಗಡೆ ನಡೆದಿರುವ ಅಂದೋಲನಗಳ ವೈವಿಧ್ಯ ಮತ್ತು ವೇಗಗಳ ಪರಿಣಾಮಗಳನ್ನು ನೋಡುವಾಗ, ಹೆಚ್ಚಿನ ಸಹನೆಯಿಲ್ಲದ ಹೃದಯದಿಂದ "ಕೊನೆಯ ಪಕ್ಷ ಇನ್ನೊಂದು ಐದು ವರ್ಷಗಳ ವರೆಗಾದರೂ ಹೈದರಾಬಾದ್ ಮಾದರಿಯ ಸೇನಾಡಳಿತೆಯೊಂದು ಅಖಿಲ ಭಾರತಕ್ಕೆ ಬೇಕಾದುದು ಅಗತ್ಯ" ಎಂಬ ಜ್ಞಾನ ಮೊಳೆಯುತ್ತಿದೆ. ಒಂದು ಬಿಕ್ಕಟ್ಟು ಎದ್ದೀತು! ಮುಂದೆ ಚಾಚಲೊಪ್ಪದ ಪರಕೀಯ ಹಸ್ತದಿಂದ ಸ್ವಾತಂತ್ರ್ಯವನ್ನು ಕಸಗೊಳ್ಳುವುದರಲ್ಲಿದ್ದುದಕ್ಕಿಂತ ಹೆಚ್ಚಿನ ಪ್ರಯಾಸವು, ಆ ಸ್ವಾತಂತ್ರ್ಯವನ್ನು ಎಳೆದು ಹಿಂದುಹಾಕಲು ಹತ್ತು ಹಲವೆಡೆಗಳಿಂದ ಜಾಚಿರುವ ಸ್ವಕೀಯ ಹಸ್ತಗಳಿಂದ ರಕ್ಷಿಸಿಕೊಳ್ಳುವುದರಲ್ಲಿದೆ, ಎಂಬ ಅನುಭವವು ಇಷ್ಟರಲ್ಲೇ ಆಗಿದೆ. ದೊರೆತ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವದಕ್ಕೆಂದು ಕಾಂಗ್ರೆಸ್ ಸರಕಾರವು ಜೈಲುಗಟ್ಟುವ ಬೇಕಾಗಿ ಬಂದವರ ಸಂಖ್ಯೆಯು ಆ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವದಕ್ಕಾಗಿ ಅದು ಆ ಕಾಲದಲ್ಲಿ ಜೈಲಿಗೆ ನುಗ್ಗಿಸಿದವರ ಸಂಖ್ಯೆಗಿಂತ ಬಹಳ ಕಡಿಮೆಯಾಗಿಲ್ಲವೆಂದು ಅನುಮಾನವಿದೆ. ಈ ವೈಕಿ ಅಗಿನದು ಹೆಗ್ಗಳಿಕೆಯ ವಿಷಯವಾಗಿದ್ದರೆ, ಈಗಿನದು ಲಜ್ಜೆಯ ಸಂಗತಿಯೆಂಬುದನ್ನೊಪ್ಪಬೇಕು. ಪಾಶ್ಚಾತ್ಯ ಪುಂಡರ ಪಾಳಿಯಿದು ಮುಗಿಯುತ್ತವೆನ್ನುವಾಗಲೇ ಕಮ್ಯೂನಿಸ್ಟ್ ಆಂದೋಲನ- ಅಂದೂಮ ಮತ್ತು ಕ್ಯಿಲಿಯತೆಗಳನ್ನು ಎತ್ತಿ ಆರ್. ಎಸ್. ಎಸ್. ಗೂಂಡಲ- ನಡೆದಿರುವ ಅಲ್ಲಲ್ಲಿ ರಾಜಕೀಯ, ಧಾರ್ಮಿಕ, ಕಾರ್ಮಿಕ ಉಗ್ರವಾದಿಗಳ ಘರ್ಷಣೆ- ಈಗ ಹೊಸತಾಗಿ ಅಕಾಲೀ ದುರಾಗ್ರಹ! ಬೂದಿಯೊಳಗಿನ ಕಿಡಿಯಾಗಿ, ಮಣ್ಣಡಿಯ ವಿಷ ಬೀಜವಾಗಿ ಎಲ್ಲೆಲ್ಲಿಯೂ ಹುದುಗಿಕೊಂಡಿರುವ ಸಣ್ಣ ದೊಡ್ಡ ಇತರ ಕಂಟಕಗಳು ಇನ್ನು ಯಾವ ಕಾಲದಲ್ಲಿ ಯಾವ ರೂಪದಿಂದ ತಲೆಯೆತ್ತುವವೋ ಹೇಳುವದಶಾಧ್ಯ! ದೀರ್ಘ ಕಾಲದ ಗುಲಾಮವೃತ್ತಿಯ ದೆಸೆಯಿಂದ, ಇದ್ದಲ್ಲೇ ಕೊಳೆತು 'ತನ್ನಷ್ಟಕ್ಕವನ್ನೇ ಕಳಕೊಂಡಿರುವ ಹಿಂದೀ ಮನೋವೃತ್ತಿಯು ಪರಿಣಾಮವಿದು! ಸ್ವಾತಂತ್ರ್ಯದೊರಗಡೆಯಲ್ಲೇ ಹುಟ್ಟಿಕೊಂಡಿರುವ ಈ ಉದರ ಶೂಲೆಗಳನ್ನು ಗುಣಪಡಿಸಿಕೊಳ್ಳದಿದ್ದರೆ ಅಪಾಯವಿದೆ, ಎಂಬುದರಿಂದ ವಿಶೇಷ ಶಾಸನಗಳನ್ನು ಹೊರಡಿಸಿ, ಉಗ್ರ ಕಾರ್ಯಕ್ರಮಗಳನ್ನು ಕೈಕೊಳ್ಳುವದು ಸರಕಾರಕ್ಕಿನ ವಾರ್ಯವಾಗಿದೆ; ಹೀಗಾಗಿ, ಶ್ರೀ: ಜೈ ಪ್ರಕಾಶರಂದಂತೆ ಒಂದು ರೀತಿಯ ಫೇನಿಸ್ಟ್ ಅಂಕುಶವೇ ಬಿದ್ದಿದೆ. ಆದರಲ್ಲಿ, ಭಾರತೀಯರ ಇದುವರೆಗಿನ ಮತ್ತು ಇಂದಿನ ಸ್ಥಿತಿಗತಿಗಳ ವೀಕ್ಷಣದಿಂದ ಈ ರೋಗಗಳು ಹುಟ್ಟಿಕೊಳ್ಳುವದು ಅಸ್ವಾಭಾವಿಕವಲ್ಲ- ಇವುಗಳಿಗೆ ತಕ್ಕ ಚಿಕಿತ್ಸೆ ಮತ್ತು ಕಠೋರ ಪಥ್ಯವನ್ನು ಸರಕಾರವು ಮಾಡಬೇಕಾದುದೊಂದೇ ಅಗತ್ಯ- ಎಂಬ ಜ್ಞಾನ ಮೊಳೆಯುತ್ತಿದೆ. ಒಂದು

ವಿಚಾರೋಚಿತ ಮಾತುಗಳು

"ಉದ್ದಿನೆಗಳನ್ನು ರಾಷ್ಟ್ರೀಕರಣಗೊಳಿಸುವ ಇಚ್ಛೆಯಾಗಲೀ ಅನುಕೂಲತೆಗಳಾಗಲೀ ಸದ್ಯ ಭಾರತಸರಕಾರಕ್ಕಿಲ್ಲ. ನಮ್ಮ ಆಡಳಿತೇ ಜಾಕಟ್ಟನ್ನು ಸಭ್ರಪ್ರಪಡಿಸಿಕೊಳ್ಳುವ ಕೆಲಸವೇ ಈ ತನಕ ಸಾಕಷ್ಟಾಗಿಲ್ಲವೆಂದ ಮೇಲೆ ನಾವು ಉದ್ದಿಮೇ ರಾಷ್ಟ್ರೀಕರಣದ ಹೊಸ ಹೊತ್ತು ಕೊಳ್ಳುವದಾದರೂ ಹೇಗೆ?"- ಇದೇ ತಾ. 22ರಲ್ಲಿ ಮದ್ರಾಸಿನಲ್ಲಿ ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲ್.

"ಭಾರತದ ಸಂಬಂಧವೇ ಪಾಕಿಸ್ತಾನದ ವಿದೇಶಿ ವ್ಯವಹಾರಗಳ ಕೈಲಿಕೈ. ಭಾರತ ಮತ್ತು ಪಾಕಿಸ್ತಾನಗಳು ಪರಸ್ಪರ ಭುಜಕ್ಕೆ ಭುಜಕೊಟ್ಟು ಮುಂದೊತ್ತಲು ಬದ್ಧವಿವೆ. ಕಾಶ್ಮೀರದ ದೆಸೆಯಿಂದ ಇವೆರಡು ರಾಷ್ಟ್ರಗಳಿಗಿನ ಸಂಬಂಧ ಕೆಟ್ಟು ಹೋಗಿತ್ತು. ಭಾರತ ಮತ್ತು ಪಾಕಿಸ್ತಾನ ನೆರಡೂ ಗೌರವಾರ್ಹ ರೀತಿಯಿಂದ ಜೊಂದಿಕೊಂಡು ತಂತಮ್ಮ ಕರ್ತವ್ಯಪಾಲನೆ ಮಾಡಿದಲ್ಲಿ ಕಾಶ್ಮೀರಂದ ಕುರಿತು ಒಂದು ನ್ಯಾಯೋಚಿತ ತೀರ್ಮಾನಹೊಂದಲು ಸಾಧ್ಯವಿದೆ. ನವ್ಯಿಟ್ಟರೊಳಗಿನ ಸಂಬಂಧವು ಸುಧಾರಿಸಬೇಕಾದುದು ಅತಿ ಮುಖ್ಯ. ನಮ್ಮ ಮಟ್ಟಿಗೆ ನಾವಂತೂ ಭಾರತದೊಂದಿಗೆ ನಮ್ಮ ಸಂಬಂಧವು ಬಲಗೊಳ್ಳುವಂತೆ ಮತ್ತು ಉತ್ತಮಗೊಳ್ಳುವಂತೆ ಸದಾ ಪ್ರಯತ್ನಿಸುತ್ತೇವೆ"- ತಾ. 20ರಲ್ಲಿ ಕರಾಚಿಯಲ್ಲಿ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯಲ್ಲಿ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲಿಖಾನ್.

"ಜಾತ್ಯತೀತ ಪ್ರಜಾಸತ್ತಾ ವಿಧಾನಗಳಲ್ಲೇ ತನ್ನ ರಾಜಕೀಯ ಸಾಮಾಜಿಕ ಜೀವನವನ್ನು ರೂಪಿಸಬೇಕೆಂದು ದೃಢ ನಿರ್ಧಾರ ಮಾಡಿರುವ ಸ್ವತಂತ್ರ ಭಾರತದ ನಾಗರಿಕರು ನೀವು. ವರ್ಗ, ಧರ್ಮ, ಜಾತಿ, ಮತವನ್ನು ನೋಡದೆ ವ್ಯಕ್ತಿಗೆ ಸಂವಿಧಾನ ಸ್ವಾತಂತ್ರ್ಯನಿರಪೇಕ್ಷಿಯಿಂದೇ ಲಾಕಿಕವಾದೀ ಪ್ರಜಾಸತ್ತಾರಾಜ್ಯದ ಕಿರುಳು. ಇಂತಹ ರಾಷ್ಟ್ರದ ಪ್ರಜೆಗಳಾದ ನಿಮಗೆ ನಿಮ್ಮ ಯೋಗ್ಯತೆ ಮತ್ತು ಗುಣನಡತೆಗಳ ಗಣನಾನಾರವಾಗಿ ರಾಜಕೀಯ, ವ್ಯಾಪಾರ, ಉದ್ದಿಮೆ, ನೌಕರಿ ಮತ್ತೆಲ್ಲಾ ಉದ್ಯೋಗಗಳ ಬಾಗಿಲುಗಳೂ ತೆರೆದಿಡಲ್ಪಡತಕ್ಕದ್ದೆಂದು ಪರೀಕ್ಷಿಸುವ ಹಕ್ಕು ನಿಮಗಿದೆ. 1947ನೇ ಆಗೋಸ್ಟು 15ರ ಮೊದಲಿದ್ದ ಜಾತೀಯತಾ ವಾತಾವರಣದಲ್ಲೇ ಇದ್ದರೆ, ಪಂತೆನೀವೀಗ ಬಂಧಿಸಿಕೊಳ್ಳುತ್ತೀರಾದರೆ, ಭಾರತೀಯ ಮನಸ್ಸಿಗಾಗಿ ಆ ಭವಿಷ್ಯದ ಭರವಸೆಯಿಲ್ಲವೆಂದು ನಾನು ನಿಸ್ಸಂಕೋಚವಾಗಿ ಹೇಳುತ್ತೇನೆ. ಅಂದಿನಿಂದ ನಿಮ್ಮಲ್ಲಿ ಸುಸ್ಪಷ್ಟ ಬದಲಾವಣೆಯಾಗುತ್ತಿರುವುದನ್ನು ಕಂಡು ನನಗಾದ ಸಂದಣಾಗುತ್ತಿದೆ"- ತಾ. 20ರಲ್ಲಿ ಅಲಿಘರ್ ವಿಶ್ವವಿದ್ಯಾಲಯದ ಪದವೀದಾನ ಭಾಷಣವೀಯುತ್ತಾ ಮುಸ್ಲಿಂ ವಿದ್ಯಾರ್ಥಿಗಳಿಗೆ ಭಾರತದ ವಿದ್ಯಾಮಂತ್ರಿ ಮೌಲಾನಾ ಆಜಾದ್.

"ಮುಷ್ಕರವು ಕೆಲಸಗಾರನ ನ್ಯಾಯಬದ್ಧ ಮತ್ತು ಕೊನೆಯ ಉಪಾಯವೆಂಬ ಕುರಿತು ವಿವಾದವೇ ಇಲ್ಲ- ಆದರೆ ಇದರ ತಾತ್ಪರ್ಯ ಕೆಲಸಗೇ ಮುಂದಿ ರಾಜಕಾರಣಿಗಳು ತಮ್ಮ ರಾಜಕೀಯೋದ್ದೇಶಕ್ಕಾಗಿ ಅದನ್ನು ಪ್ರಯೋಗಿಸುವಂತಾಗಬೇಕೆಂದಲ್ಲ. ಮಜೂರು ನಾಯಕರು ಮುಸುಕು ಹಾಕಿಕೊಂಡಿರುವ ತಮ್ಮ ವೈರಿಗಳನ್ನು ಮಜೂರರು ಗೊತ್ತುಹಚ್ಚಬೇಕಾದ ಅಂತ್ಯಾವಧಿಯಿದು. ನಾನು ಮಜೂರ ಮಂತ್ರಿಯಾಗಿರುವ ವರೆಗೆ ರಾಷ್ಟ್ರವು ಬಿಕ್ಕಟ್ಟಿನಲ್ಲಿದ್ದ ಸಂದರ್ಭದಲ್ಲೇ ಹಿಂದೀ ಮಜೂರ ವರ್ಗವು ಅದಕ್ಕೆ ದ್ರೋಹ ಬಗೆಯಿತು ಎಂಬ ದಾಖಲೆಯೂ ನವ್ಯ ಸಂತತಿ ಪರಂಪರೆಯ ವರೆಗೂ ಉಳಿಯುವಂತಾಗಲು ಬಿಡಲಾರೆ"-ಭಾರತ ಕೂಲಿಗಾರ ಮಂತ್ರಿ ಶ್ರೀ ಜಗಜ್ಜೀವನರಾಮರು ತಾ. 18ರಲ್ಲಿ ನಾಗಪುರದ ನಿವರ್ಸಜನಿಕ ಸಭೆಯಲ್ಲಿ.

"ಪೋಲಿಸನು ಎಲ್ಲಕ್ಕಿಂತ ಮುಂಬಾಲು ಮತ್ತು ಸರ್ವಶ್ರೇಷ್ಠವಾಗಿ ಜನತಾ ಸೇವಕನಿದ್ದಾನೆ. ಅವನಲ್ಲಿ 'ಯುದ್ಧ ಭೋರ್ಮ್' ಮತ್ತು ಲಂತಿಯಂತೆಯು ಯಥಾರ್ಥ ಕರುಣೆ ಮತ್ತು ಉತ್ತಮಗುಣ ನಡತೆಗಳು ಸೇರಿಕೊಂಡಿರಬೇಕು"- ತಾ. 19ರಲ್ಲಿ ಮದ್ರಾಸಿನ ಪೋಲೀಸ್ ಪೆರೇಡಿಗೆ ಸಂದೇಶವಿತ್ತ ಮದ್ರಾಸ್ ಗವರ್ನರ್.

ನೋಟೀಸು

ಕಾರ್ಕಳಗೋಡು ಡಿ. ಮುನ್ಸೀಫ್ ಕೋರ್ಟಿನಲ್ಲಿ

O. P. No. 23/1947
R. I. A. No. 365/1949

1 ವಿಲಾಸಿನಿ ಬ್ಯಾ, 2 ದೇವದಾಸ,
3 ಸುರೇಂದ್ರ, 4 ಸೀತಾರಾಮ,
5 ವಿಠಲರಾಯ.

/ನೇಯವಳು ಸ್ಯೆತಪಟ್ಟ ನರಸಿಂಹ ಕಮಿತ್ ವಿದ್ಯಯವರ ವಿಧವೆ. 2೦೦೫ 5ನೇ ಪುರಿಗನವರು ಸದ್ರಿ ನರಸಿಂಹ ಕಮಿತ್ ಯವರ ಮ್ಯಾನೆಜರ್ ಮಕ್ಕಳು. ಇವರ ಗಾರ್ಡಿಯನ್ 1ನೆ ವಿಲಾಸಿನಿಬ್ಯಾ, ಕಾರಕಗೋಡು ಕಸಬಯಲ್ಲಿರುವವರು ...ಅರ್ಜಿದಾರರು

ಮೃತಪಟ್ಟ ನರಸಿಂಹ ಕಮಿತ್ ಹೆಸರಲ್ಲಿ ಬಂಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೋನ್ ಇನ್ಸ್ಕ್ರಿಪ್ಷನ್ಸ್ ಕಂಪೆನಿಯ ನಂಬ್ರ 477142ನೇ ಪ್ರಾಮಿಸರಿ ನೋಟೀಸಿನ ಮೊತ್ತಕ್ಕೆ ಬಡ್ಡಿ ವೇಜನ್ನು ಅರ್ಜಿದಾರರು ಪಡೆಯುವರೆ ಸದ್ರಿ ಅರ್ಜಿದಾರರಿಗೆ ವಾರ್ಡಿ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಬರಕೊಂಡ ಮೇಲ್ಕಂಡ ಅರ್ಜಿಯು ತನ್ನ ಬಗ್ಗೆ ತಾರೀಕು 11-3-49ಕ್ಕೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಗುತ್ತದೆ.

K. Kamalaksha Kamath,
Advocate for Petitioners
ಕಾರಕಗೋಡು 18-2-1949

ಸ್ವತಂತ್ರ ಜನತಾಂಗದ ಹೊಣೆಗಾರಿಕೆ, ಕರ್ತವ್ಯಗಳೇನೆಂಬುದನ್ನು ಜನತೆ ಕಲಿಯಬೇಕು- ನಾಯಕರದನ್ನು ಕಲಿಸಬೇಕು. ಈ ವಿಶ್ಲೇಷಣೋದ್ದೇಶವೊಂದೇ ಇರುವ ಬಿಂಡನಗಳಲ್ಲಿವೂ ಪ್ರಮಾಣಿನೆ. ಸಹನೀಯವಿವೆ. ಭಾರತವನ್ನು 'ಜಾತ್ಯತೀತ ಸರ್ವಸಮಾನತಾ' ರಾಷ್ಟ್ರವಾಗಿ ನಿರ್ಮಿಸುವ ಇಂದಿನ ಮಂಥನವು ಸರಿಯಾದ ವಿಧಾನದಿಂದಲೇ ನಡೆಯಲಿ, ಕ್ಷೀರವದಲ್ಲೇ ಸಫಲ ಮುಕ್ತಾಯಗೊಳ್ಳಲಿ ಎಂದು ಹಾರೈಸುತ್ತೇವೆ.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. S. 500/1948

ಲಕ್ಷ್ಮಣಾಚಾರಿ–ವಾದಿ

ಮತ್ತು

ವಾಸುದೇವ– ಮ್ಯಾನೇಜರ–ಕೇಪಜಲ್ಲಾಶ್ರಿ ಮಂಗಾ, ಗಾರ್ಡಿಯನ್, ತಾಯಿ ಲಲಿತಂಮ. ಉಡ್ಪಿ ತಾಲ್ಲೂ ಪುತ್ತೂರು ಗ್ರಾಮದ ನಿವಾಸಿ–ಪ್ರತಿವಾದಿ.

ಇವರೊಳಗೆ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವದೇನಂದ್ರೆ–

ನೀವು ಸದ್ರಿ ಮ್ಯಾನೇಜರ ವಾಸುದೇವನ ಗಾರ್ಡಿಯನ್ಶಿಗಾಗಿ ಪಾದಿಗೆ ತಾ 29-11-1946 ರಲ್ಲಿ ರೂಪಾ 725-0-0 ಕ್ಕೆ ಬರಕೊಟ್ಟ ದಿವಾಂಶು ನೋಟಿನ ಅಸಲು ಬಡ್ಡಿ ಖರ್ಚಿಗಾಗಿ ಸ್ವಾ ಬರಮಾಡಿಕೊಳ್ಳುವರೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 2-3-1949 ಕ್ಕೆ ವಿಚಾರಣೆಗಾಗಿಯಿದೆ. ಆಕ್ಷೇಪನೇನಾದರೂ ಇದ್ದರೆ ಸದ್ರಿ ದಿವ್ಸ ಪೂರ್ವಾಹ್ನ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ವ್ಯಾಪ್ತಿರವು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಯಾಜರಿಯಿಂದ ಸದರಿ ದಾವೆಯು ಏಕಪಕ್ಷವಾಗಿ ವಿಚಾರಿಸಲ್ಪಡುವದು.

K. Ramakrishna Rao
Vakil for Plaintiff

Udipi, Dated 21--2--1949

ನೋಟೀಸು

ಉಡುಪಿ ತಾಲೂಕು ಮಣಿಪುರ ಗ್ರಾಮವಲ್ಲಿರುವ ಕೇಪಜೆಗಳ ಮಗ ಬಿಟ್ಟಲ ಪೈಯು ಈ ಮೂಲಕ ಸರ್ವರಿಗೂ ತಿಳಿಯ ಪಡಿಸುವುದೇನೆಂದ್ರೆ–

ನಮ್ಮ ಕುಟುಂಬದಲ್ಲಿ ನನ್ನ ಅಣ್ಣ ನಾಗಪ್ಪಯ್ಯ ಪೈ, ನಾನು, ನನ್ನ ತಮ್ಮ ಶ್ರೀನಿವಾಸ ಪೈ ಕೂಡಾ 3 ಜನರು ಮಂಬಂಧಿಯತ್ತೇವೆ. ನಮ್ಮ ಕುಟುಂಬಕ್ಕೆ ನಾನು ಮತ್ತು ನನ್ನ ಅಣ್ಣ ಕೂಡಾ ಮಣಿಪುರ ಶ್ರೀಕೃಷ್ಣಪ್ಪ ಪೈರೇಗೆ ಬಂಕೊಟ್ಟ ರೂ 200-0-0 ರ ಡಿಸ್ಕೋಟು ಪೈಕಿ ಸಂದಾಯವಾದ್ದು ಹೋಗಬಾಕ್ಕಾದ ರೂ 100-0-0 ಮಾತ್ರ ಸಾಲ ಇರುತ್ತದೆ. ಯೇ ವಿನಹಾ ಬೇರೇನೂ ಸಾಲವಿಲ್ಲವಾದುದಲ್ಲ. ನಾವು ಮೂರೂ ಜನರು ಮದ್ಯಾಸಿನಲ್ಲಿ ಸೌಕರಿಯಲ್ಲದ್ದು ಸಂಪಾದನೆ ಮಾಡಿ ನಾವು ಮತ್ತು ನಿನ್ನ ತಮ್ಮನ ಖಾಬ್ತು ಹಣ ಕೂಡಾ ನನ್ನ ಅಣ್ಣನ ಬಂಬಾಬ್ತಿಗೆ ಬಂಬಾಬ್ತಿಯಾಗಿ ಕೊಟ್ಟಿರುತ್ತೇವೆ. ನಮ್ಮ ಒಟ್ಟು ಸಂಪಾದನೆಯಿಂದ ನಮ್ಮ ಕುಟುಂಬದ ಮಿಕ್ಕ ಮಂಬರ ಜೀವನ ನಡ್ಕೆರೆ ಹೋಗಲಾಗಿ ಸುಮಾರು ರೂ. 1000-0-0 ಕ್ಕೂ ಮಿಕ್ಕೆ ಹಣಗಳು ನನ್ನ ಅಣ್ಣನ ಪಶಾ ಇರುತ್ತವೆ– ಇತ್ತಲಾಗಿ ನಮ್ಮೊಳಗಂಬಂಧ ಗೃಹ ಕಲಹದ ನಮ್ಮಂಧ ನಮ್ಮೊಳಗೆ ವೈಮನಸ್ಸಾಂಗಿ ನಗದಿ ಹಣಗಳಲ್ಲಿಯೂ ನನ್ನ ಕುಟುಂಬದ ಸ್ಥಿರಚಾಂ ಸೊತ್ತುಗಳಲ್ಲಿಯೂ ನನ್ನ ಪಾಲಿಗೆ ಬಂದ ಹಕ್ಕನ್ನು ನನಗೆ ಬಿಟ್ಟುಕೊಡದೇ ಕಾಗಿ ಅಣ್ಣನೊಡನೆ ತಿಳಿಸಿದ್ದಕ್ಕೆ ನನ್ನ ಅಣ್ಣನು ನನ್ನನ್ನದ್ವೇಷಿಸಿ ಕರ ದುರ್ಭೋಧನೆಯಿಂದಲೂ, ಯುಜ್ಜನರು ಉತ್ತೇಜನದಿಂದಲೂ ನ್ಯಾಯಕ್ಕೆ ಮನಸ್ಸು ಕೊಡದೆ ನನಗೆ ಮೋಸ ಕೊಡುವ ಇರಾಧೆಯಿಂದ ನಮ್ಮ ಕುಟುಂಬಕ್ಕೆ ಸಾಲ ವೆಂಟಿಂತ ಕಲ್ಪಿಸಿ ಅಸ್ತಿಯೊಡು ಮಾಡುವರೆ ಉದ್ಯುಕ್ತನಾಗಿರುವನಾಗಿ ವರ್ತಮಾನ ಕೇಳುತ್ತೇನೆ. ಆ ರೀತಿ ಅಸ್ತಿಯೊಡು ಮಾಡುವರೆ ನಮ್ಮ ಕುಟುಂಬಕ್ಕೆ ಯಾವ ತರದ ಅಗತ್ಯತೆಯೂ ಇರುವದಿಲ್ಲ. ಆತ ಮಾಡಬಹುದಾದ ಯಾವ್ದೇತರದ ಪಾಂಥಿನಗಳೂ ನನಗೆ ಸಮ್ಮತವಿಲ್ಲ. ಅಂತಾ ಯಾವಪರಾಧಿನಗಳೂ ನನ್ನವಕ್ಕನ ಮೇಲೂ, ನನ್ನ ಮೇಲೂ ಬಾಧಿಸತಕ್ಕದ್ದಲ್ಲಾ ಎಂಬ ನಿಸಯ ಯೀ ಮೂಲಕ ಸರ್ವರಿಗೂ ತಿಳಿಯತ್ತೇನೆ.

ಎಮ್. ವಿಠಲಪೈ.

ಸೊಕ್ಕಾಂ. ಮಣಿಪುರ, ತಾ. 14-2-1949

ಉಡುಪಿ

ಸಕಾಲದಲ್ಲಿ ಸ್ಪುತ್ಯ ಸಹಾಯ

ಕಳದ ವಾರದಲ್ಲಿ ಡಾ. ಕೆ. ಎಲ್. ಸತಾಳರ ಕೊಟ್ಟಿಗೆಯೊಂದಕ್ಕೆ ಬೆಂಕಿ ಬಿದ್ದಾಗ ಸಕಾಲದಲ್ಲಿ ಬಂದು ಅದನ್ನು ನೊಂದಿಸಿದ ಉಡುಪಿ ಫಯರ್ ಸ್ಟೇಶನಿನವರ ಕೆಲಸವು ಸ್ತುತ್ಯವಿದೆ.

ಬೋಯ್ಸ್ ಸ್ಕೌಟು ರ್ಯಾಲಿ ಉಡ್ಪಿ ತಾಲೂಕಿನ ಎಲ್ಲಾ ಸ್ಕೌಟು ದಳಗಳ ರ್ಯಾಲಿಯು ತಾ. 17-2-49 ರಲ್ಲಿ ಕ್ರಿಶ್ಚಿಯನ್ ಹೈ ಸ್ಕೂಲಿನಲ್ಲಿ ಮುನ್ಸಿಪಲ್ ಕಮಿಶನರು ಶ್ರೀ ಬಾಲಗಂಗಾಧರರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಯಶಸ್ವಾಗಿ ನೆರವೇರಿತು.

ಹುಚ್ಚು ನಾಯಿ ಕಚ್ಚಿದವರಿಗೆ ಚಿಕಿತ್ಸೆಯನ್ನು ಸರಕಾರಿ ಆಸ್ಪತ್ರೆಗಳಲ್ಲಿ ಕೂಡಾಂದ ಇಂಜಕ್ಷನ್ ತಂದಿಕೊಂಡು ಮಾಡುತ್ತಿರುವುದು ಎಲ್ಲರಿಗೂ ತಿಳಿದಿವೆ– ಅವರೆ ಈ ಚಿಕಿತ್ಸೆಯನ್ನು ಬಾಸಗಿ ಡಾಕ್ಟರರುಗಳಿಂದಲೂ ಈಗ ಅಲ್ಪ ಮೊಲ್ಕಕ್ಕೆ ಮಾಡಿಸಿಕೊಳ್ಳಬಹುದೆಂದು ಶ್ರೀ ಬಿ. ಕೆ. ಭಂಡಾರಿಗಳು ಸೂಚಿಸುತ್ತಾರೆ.

ಪಂಡ್ಯಾಟ ದಕ್ಷಿಣ ಕನ್ನಡ ಜಿಲ್ಲೆಯ

ನೋಟೀಸ್

R. E. P. 716/48.

O. S.' 368/54

ವಾದಿ: —ಸರಸಮ್ಮ

ಪ್ರತಿವಾದಿಯು: ವಿಶ್ವನಾಥಯ್ಯ (ಪೋತಿ) ಕೂಡಾ

ಕುಂದಾಪುರ ತಾಲ್ಲು ನಂಬ್ರ 18 ನೇ ಶೀರೂರು ಗ್ರಾಮದಲ್ಲಿರುವ 6 ನೇ ಪ್ರತಿವಾದಿ ಮೈನರ್ ಕೃಷ್ಣಪ್ಪಯ್ಯನ ಗಾರ್ಡಿಯನ್ ತಾಯಿ ನಾಗಮ್ಮ, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ವಾದಿಯು ಮೇಲಣ ದಿಕ್ಕ ಪ್ರಕಾರ ತನಗೆ ಬಹಾ ಅರ್ಥಾನ್ನವನ್ನು ಬರಮಾಡಿ ಕೊಳ್ಳುವ ಬಗ್ಗೆ ಜಂಗಿಸಿದ ಮೇಲಣ ಅಮ್ಲಜ್ಜಾರಿ ತಾ 8-3-49 ಕ್ಕೆ ತಮ್ಮಗೆ ಇಟ್ಟರುತ್ತದೆ. ಆ ಕುರಿತು ಸದ್ರಿ 6 ನೇ ಪ್ರತಿವಾದಿ ಕಡೆಯಿಂದೇ ನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಾ ಕೋರ್ಟು ಮುಂದೆ ಜಾಹೀರು ಮಾಡಿ ಕೊಳ್ಳತಕ್ಕದ್ದು.

(By order of the court)

(Sd) M. M. Ural.

Advocate for Pleff (D H)

Coondapoor, 22-2-49

ನೋಟೀಸ್

ಉಡ್ಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

R. E. P. No. 581/1948

in. S. C. 240/1948

ಲಕ್ಷ್ಮಿನಾರಾಯಣಶರಳಾಯ, ಆರ್ಜದಾರರು

ಮತ್ತು

ಲಕ್ಷ್ಮಿನಾರಾಯಣ ಉಪಾಧ್ಯ, ವೆಂಕಟಕೃಷ್ಣ ಉಪಾಧ್ಯರವರಿಗೆ, ಉಡ್ಪಿ ತಾಲ್ಲೂ ಶಿವಳ್ಳಿ ಗಾಮದ ಕುಂಜಿಬೆಟ್ಟು, ಕಡಿಯಾಳಿ, ಯಿವರೊಳಗೆ. —ಎದ್ರಿ.

ನೀಲ್ಕಂಡ ಅಮಲುಜ್ಜಾರಿಯಲ್ಲಿ ಜಪ್ತು ಮಾಡೋಣಾದ ಸ್ಥಿರಾಸ್ತಿ ವಿಕ್ರಯದ ಕುರಿತು ಆರ್ಜದಾರನ ಕಡೆಯಿಂದ ಹಾಜ್ರು ಮಾಡಿರುವ ಸಲಂ ಅಸ್ತಿಯ ಕ್ರಯದ ಶರ್ತಗಳನ್ನು ನಿರ್ಣಯಿಸತಕ್ಕ ಬಗ್ಗೆ ಸದ್ರಿ ಅಮಲುಜ್ಜಾರಿಯು ತಾರೀಕು: 10-3-1949 ಕ್ಕೆ ಎದ್ರಿಯ ನೋಟೀಸಿನ ಬಗ್ಗೆ ಇಜೋಣಾಗಿಯದೆ ಎಂಬ ಸಂಗತಿಯನ್ನು ಈ ಮೂಲಕ ತಿಳಿಸೋಣಾಗಿಯದೆ.

U. B. Krishna Rao,

Advocate for Petitioner

ಉಡುಪಿ, ತಾ. 22-2-49

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾ. 23–2–49 ರಿಂದ,

ಎಲ್ಲಾ ಪತ್ರಿಕೆಗಳೂ ಏಕ ಧ್ವನಿಯಿಂದ ವರುಷದ ಆಶ್ಚರ್ಯತಮ ಚಿತ್ರವೆಂದು ಟೀಕಿಸಿದ

ಮಿನರ್ವಾದವರ ಮನ್ಮಣಿಯ ಚಿತ್ರ.

"ಏಕ್ ದಿನ್‌ಕಾ ಸುಲ್ತಾನ್"

ಮೆಹಕಾಜ್, ನಸ್ತಿ ಸಾದಿಕ್ ಆಲಿ.

ಶೋರಾಬ್ ಮೋಡಿಯವರ ದಿಗ್ದರ್ಶನ.

ಬರುವ ಚಿತ್ರ:—

"ದರ್ಪಣ"

The Catholic Bank Ltd.,

KALLIANPUR.

ಏಲಂ ನೋಟೀಸು

ಉಡುಪಿ ತಾಲೂಕು ಮೂಡು ಕೋಸ್ಟೆ ಗ್ರಾಮದಲ್ಲಿರುವ ಜಪ್ತಿ ನಾಗಪ್ಪ ಶೆಟ್ಟರ ಆಳಿಯ ಶ್ರೀ. T. ಮುದ್ದಣ್ಣ ಶೆಟ್ಟರು ಚಿನ್ನಾಭರಣದ ಈಡಿನ ಮೇಲೆ ಈ ಬ್ಯಾಂಕಿನಿಂದ ಪಡೆದ ಸಾಲದ ರೂಪಾಯಿ 55/- (J. L. No. 22/281 ತಾ. 13-8-'46) ನ್ನು ವಾಯಿದೆಗೆ ಸರಿಯಾಗಿ ಬಿಡಿಸಲೇಯಿದ್ದುದರಿಂದಲೂ, 2 ರಿಜಿಸ್ಟ್ರಿ ನೋಟೀಸು ಕೊಟ್ಟರುವುದು ಹಿಂದೆ ಬಂದಿರುವುದರಿಂದಲೂ ಸದರೀ ಯವರೀಗೆ ಈ ಮೂಲಕ ತಿಳಿಸುವುದೇನೆಂದ್ರೆ ಸದರೀಯವರು ಈಡಿಟ್ಟಿರುವ ನಗ ಗಳನ್ನು ತಾ 12-3-1949 ನೇ ಶನಿವಾರ ಮಧ್ಯಾಹ್ನ ಘಂಟೆ 12 ಕ್ಕೆ ಯಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವುದು

Kallianpur, 16-2-1949. } **S. Rebello,** Agent.

ಇಂಟರ್ ಸ್ಕೂಲುಗಳ ಎತ್ಲೆಟಿಕ್ ಎಸೋಸಿಯೇಶನಿನ ಕಡೆಯಿಂದ ತಾ 18 ಮತ್ತು 19 ರಲ್ಲು ಕುಂದ್ಯಾಪುಗಳು ಗಾಂಧಿ ಮೈದಾನದಲ್ಲಿ ಜರಗಿದುವು. ಫಿಟಿಕಲ್ ಎಜ್ಯುಕೇಶನ್ ಚೀಫ್ ಇನ್ಸ್‌ಪೆಕ್ಟರ್ ಡಾ। ಆರ್ಮ್ಸ್‌ರವರು ಬಹು ಮೂನವಿತರಣೆ ಮಾಡಿದರು. ಇಂತಹ ಸ್ಪರ್ಧೆಗಳಲ್ಲಿ ಹೆಚ್ಚಿನ ಶಾಲೆಗಳು ಭಾಗವಹಿಸುವಂತಾಗಬೇಕೆಂದವರು ಹಿತಸೂಚನೆಯನ್ನಿತ್ತರು. ಶ್ರೀ ಕೆ. ಗೋಪಾಲ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಗ್ರಿಗ್ ಮೆಮೆರಿಯಲ್ ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿಗೆ ದೊರೆಯಿತು.

ಮಾನ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರಿಗೆ ಮನವಿ ತಾ 19 ರಲ್ಲು ಉಡುಪಿಗೆ ಆರೋಗ್ಯಮಂತ್ರಿ ಶ್ರೀ ಎ. ಬಿ ಶೆಟ್ಟರು ಬಂದಿದ್ದಾಗ ಈಗತಾನೆ ಪಾಸಾಗಿರುವ ಆಳ್ವಿಯಸಂತಾನ ಸುಧಾರಣಾ ಮಸೂದೆಯು ತೀರ ಆಶ್ಯಪ್ತಿಕರವೂ ಕೋರ್ಟಿಗೆ ವೈಪರೀತ್ಯಗಳಿಗೆ ಅಸ್ಪದವಾಯಕವೂ ಆಗಿರುವುದರಿಂದ ಅದನ್ನು ಮುಂದಿನಾರಾದೆ ಹಿಂದೂ ಕಾನೂನುಸಚ್ಚಿಕೆಯ ಮಸೂದೆಯನ್ನೇ (HinduCode Bill) ಸಮರ್ಥಿಸಬೇಕೆನ್ನುವ ಮನವಿಯೊಂದನ್ನು ಶ್ರೀಗಳಾದಿ. ಸದಾಶಿವ ಜೆಡ್ಡಿ, ಮೊದಲಾದವರು ಮಾನ್ಯ ಮಂತ್ರಿಗಳಿಗೆಕೊಟ್ಟರು.

ಶಿರ್ವದಲ್ಲಿ ಮಾನ್ಯ ಶ್ರೀ ಎ. ಬಿ. ಶೆಟ್ಟರು ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ತಾ 20 ರಲ್ಲು ಪೂರ್ವಾಹ್ನ ಆಗಮಿಸಿದರು. ಇಲ್ಲಿಯ ಕುಷ್ಠರೋಗ ನಿವಾರಣಾ ಸಮಿತಿಯ ಪರವಾಗಿ ಶ್ರೀ ಕೆ. ಮುದ್ದು ಶೆಟ್ಟರು ಸ್ವಾಗತ ಭಾಷಣಮಾಡಿದರು. ಬಳಿಕ ಮಾನ್ಯರು ಸರಕಾರದ ಪಬ್ಲಿಕ್ ಹೆಲ್ತ್ ಡಾಕ್ಟರೆಕ್ಟರರಾದ ಡಾ। ನೆಹ್ಕೂರ ನವರು ಕುಷ್ಠರೋಗದ ವಿಷಯದಲ್ಲಿ ಪಂಡಿತೋಯ ಭಾಷಣವಿತ್ತರು. ಡಾ। ಕೆ. ಕೆ. ರೈ ಮತ್ತು ಶ್ರೀ ಪಿ. ಲಕ್ಷ್ಮಿನಾರಾಯಣ ನಾಯ್ಡುರು ಕುಷ್ಠರೋಗದ ಹಾವಳಿ, ಅದನ್ನು ತಡೆಗಟ್ಟುವಲ್ಲಿ ಜನರು ಹೇಗೆ ಜಾಗರೂಕರಾಗಬೇಕೆಂಬ ವಿಷಯದಲ್ಲಿ ಮಾತನಾಡಿದರು. ಮಾನ್ಯ ಮಂತ್ರಿಗಳು ಭಾಷಣಮಾಡುತ್ತಾ ಕುಷ್ಠರೋಗದ ನಿವಾರಣೋಪಾಯಗಳನ್ನು ತಿಳಿಸಿ ಆರೋಗ್ಯ ಸಂಬಂಧವಾಗಿ ಜನತೆಯಲ್ಲಿರುವ ತಪ್ಪು ಭಾವನೆಗಳು, ನಂಬಿಕೆಗಳು ಕಾರಣಾಧಾರವಿದೆಯೆಂಬುದನ್ನು ಚರ್ಚಿಸಿ ಕುಷ್ಠರೋಗ ನಿವಾರಣಾ ಸಮಿತಿಯವರಿಗೆ ಜನತೆಯು ಸ್ವತಃಕಾರ್ಯವೀಯ ಬೇಕಾಗಿ ಏನಂತಿ ಮಾಡಿದರು. ಈ ರೋಗದ ಹಾವಳಿಯನ್ನು ತಡೆಗಟ್ಟುವರೆ ಆಗತ್ಯವುಳ್ಳ ಸರ್ವ, ಪ್ರಕಾರ ಕಾರ್ಯಗಳಿಗೆ ನೆರವನ್ನು ಸೂಚಿಸಿದರು– ಶ್ರೀ ಗೋಪಾಲ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂ. 813/48

ಕಟೀಲ ನಂಜುನಾಥ ಪೈ ...ವಾದಿ

ಲಕ್ಷ್ಮಣ ಪ್ರಭು ...ಪ್ರತಿವಾದಿ

ಕುಂದಾಪುರ ಕಸಬಾ ಗ್ರಾಮದಲ್ಲಿರುವ ಕೋಟ್ಯು ಕೃಷ್ಣ ಪ್ರಭು ಮಗ, ಪ್ರತಿವಾದಿ ಲಕ್ಷ್ಮಣ ಪ್ರಭುಗಳಿಗೆ.

ನಾವಿಗೆ ನೀವು ಬರಕೊಟ್ಟ ದಿನಾಂಕ ನೋಟಿನಅಸ್ಸು ಬಡ್ಡಿ ಕರ್ಚಿಗಾಗಿ ರೂ. 141-6-0 ಕ್ಕೆ ನಮ್ಮ ಮೇಲೆ ದಾಕ್ಕು ಮಾಡಿದ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾ ೧೬-೩-೪೯ 9-3-49 ಕ್ಕೆ ತಮ್ಮಗೆ ಇಟ್ಟರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಯಿದ್ದಲ್ಲಿ ತಪ್ಪ ದಿವಸ ಹಾಜರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮನ್ನು ಗೈರಹಾಜ್ರಿಯಲ್ಲಿ ಕೇಳಿ ಕೈಸಲು ಮೂನೋಣಾದೀತೆಂದು ನೀವು ತಿಳಿದಿರತಕ್ಕದ್ದು.

ಕೋರ್ಟ್ ಗುಮಾಸ್ತರ ಪ್ರಕಾರ

K. Narayana Kamath

ವಾದಿಯ ಕಡೆ ವಕ್ಕೀಲರ್

ಕುಂದಾಪುರ, 18-2-1949.

ಮಂಗಳೂರು

ಫರ್ನಿಚೇರ್ ಮತ್ತು ಕೌಶಲ ವಸ್ತುಗಳಿಗೆ ವಿರೋಧ ಮಂಗಳೂರು ನಗರ ಸಭೆಯವರು ನಿಧಿ ಸಂಗ್ರಹಕ್ಕಾಗಿ ಕೃಷಿ ಮತ್ತು ಕೈಗಾರಿಕೆ ಪ್ರದರ್ಶನವೊಂದಿಗೆ ಫರ್ನಿಚೇರ್ ಮತ್ತು ಕೌಶಲವಸ್ತುಗಳ ಏರ್ಪಾಡುಮಾಡಲು ಮಾಡಿದ ನಿರ್ಧಾರವನ್ನು ವಿರೋಧಿಸಿ ಮಂಗಳೂರುಸರ್ಕಲ್ ಕಾಂಗ್ರೆಸ್ ಕಮಿಟಿ ಮತ್ತು ಸಾರ್ವಜನಿಕ ಸಭೆಗಳ ನಿರ್ಣಯಗಳಾಗಿವೆ.

ಪೋಲೀಸ್ ಡಿ. ಐ ಜಿ. ಪಶ್ಚಿಮ ವಲಯದ ಪೋಲೀಸ್ ಡಿ. ಐ ಜಿ.ಗಳಾದ ಶ್ರೀ ವಿ. ಸುಬ್ಬರಾಯನ್‌ರವರು ಈಚೆಗೆ ಜಿಲ್ಲೆಯ ಪೋಲೀಸ್ ಠಾಣ್ಯಗಳನ್ನು ಸಂದರ್ಶಿಸಿದರು ಕಾಂಗ್ರೆಸ್ ಆಫೀಸಿನಲ್ಲಿ ಜಿಲ್ಲೆಯ ಪೋಲೀಸ್ ಆಡಳಿತ ವಿಚಾರವಾಗಿ ಚರ್ಚಿಸಲಾಯಿತ್ತು. ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ವೆಂಕಟೇಶ ಪೈ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಗವರ್ನಮೆಂಟ್ ಹಾಸ್ಟಲ್ ಎಜುಕೇಶನಲ್ ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವವು ತಾ. 12 ಮತ್ತು 13 ರಲ್ಲು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ವೆಂಕಟಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 6/49

1 ಶಾಂತಾ ಬ್ಯಾ, 2 ಪಸಂತಿ ಬ್ಯಾ, 3. ಜಯಾವತಿ ಬ್ಯಾ — ಮ್ಯಾನೇಜರು, ಗಾರ್ಡಿಯನ್ಸ್, ತಂದೆ ಕೆ. ನರಸಿಂಹ ಶ್ಯಾನುಭಾಗ್— ಆರ್ಜಿದಾರರು.

ಮೇಲ್ಕಂಡ ಆರ್ಜಿ ವಿಷಯದಲ್ಲಿ ಆರ್ಜಿದಾರರ ತಾಯಿ ಭವಾನಿ ಯಾನೆ ರುಗ್ಮಿಣಿ ದೇವಿಯು ನ್ಯಾಯಪಟ್ಟು ಸದ್ರಿಯವರು 'ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಮಂಗಳೂರಿನ' ಉಡ್ಪಿ ಬ್ರಾಂಚ್ ಆಫೀಸಿನಲ್ಲಿರುವಾಸುಬೂಕು ನಂಬ್ರ 1ಕ್ಕೆ ಸೇವಿಂಗ್ಸ್ ಬ್ಯಾಂಕಿನ ಎಕೌಂಟು ನಂಬ್ರ 6812-7-1-43 ರಲ್ಲಿ ಇಟ್ಟಿರುವ ರೂಪಾ 900-12-0ನ್ನು ಸದ್ರಿಯವರ ಮಕ್ಕಳಾದ ಆರ್ಜಿದಾರರು ವಸೂಲು ಪರಿಯಲಿಕ್ಕೆ ಹಕ್ಕುದಾರರಾಗಿ ಆ ಬಗ್ಗೆ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಅರ್ಜಿಯು ತಾ. 9-3-1949ಕ್ಕೆ ತನ್ನಿಗೆ ಇಟ್ಟರುವದರಿಂದ, ಆಕ್ಷೇಪಿಸುವವರು ಆದಿಪ್ಪ ಕೋರ್ಟಿಗೆ ಮುಂದೆ ಹಾಜ್ರಾಗಿ ಜಾಹೀರು ಮಾಡಬೇಕು.

P. Padmanabha Rao,
Vakil for Petitioners

ಉಡ್ಪಿ, 15-2-49

ಶಿರ್ವ ಪಂಚಾಯ್ತ್ ಬೋರ್ಡ್
ಪ್ರಸಿಡೆಂಟರಿಂದ.

ಪ್ರಕಟಣೆ

ಶಿರ್ವ ಪಂಚಾಯ್ತ್ ಬೋರ್ಡಿಗೆ ಒಳಪಟ್ಟ ಮುಂಜಕಲ್ಲು ಸಂತೆ ಮಾರ್ಕೆಟಿನಲ್ಲಿ ಮತ್ತು ದಿನಚರಿ ಮಾರ್ಕೆಟಿನಲ್ಲಿ 1949 ನೇ ಇಸ್ವಿ ಏಪ್ರಿಲ್ ತಿಂಗಳ ತಾರೀಕು 1 ರಿಂದ 1950ನೇ ಇಸ್ವಿ ಮಾರ್ಚ್ ತಿಂಗಳ 31ನೇ ತಾರೀಕಿನವರೆಗೆ ವರಿವಸೂಲಾಗುವ ಸ್ವತಂತ್ರವನ್ನು ಇದೇ ಬುರುವ ಮಾರ್ಚ್ ತಿಂಗಳತಾರೀಕು 17ನೇ ಗುರುವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ್ ಬೋರ್ಡ್ ಆಫೀಸಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬಹಿರಂಗವಾಗಿಸಲಂ ಮಾಡೋಸಾಗುವುದು. ಏಲ್ಲವನ ಕ್ರಯ ನಿಬಂಧನೆಗಳನ್ನು ಆಫೀಸಿನಲ್ಲಿರುವನೋಟಿಸುಬೋರ್ಡಿಗೆ ಅಂಟಿಸಿರುವ ಪ್ರಕಟಣಾದಿಗಳಿಂದ ತಿಳಿಯ ಬಹುದು. ಏಂಬದಾಗಿ ಉಮೇದ್ವಾರ ಹಾಗೂಸಮಸ್ತಜನರಿಗೆ ಈ ಮೂಲಕ ತಿಳಿಸೋಣಾವಮು.

(ಸಹಿ) ಯಸ್. ಅಣ್ಣಯ್ಯ ಹೆಗ್ಡೆ,
ಪ್ರಸಿಡೆಂಟ್, ಪಂಚಾಯ್ತ್ ಬೋರ್ಡ್, ಶಿರ್ವ.
ಪಂಚಾಯ್ತ್ ಬೋರ್ಡ್ ಆಫೀಸು 27-1-49.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ದರ್ಜೆಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kanjoor,
Manager.

THE CRESCENT INSURANCE CO., LTD.

(Estd. 1919.)

Head Office:- **Bombay,** Branch at:- **Mangalore.**

Offers every convenience for Life Assurance.

"Will your earnings continue after death ?"
"Yes, if you insure them"

"By means of life Assurance you can continue your income after retirement, or for the benefit of your dependents after your death".

"In case of death the Bank pays what you have saved, the Assurance company pays what you had hoped to save"

The safest and best life office of long standing fame.
Best terms for agents offered.

K. P. Bhavanishanker Shetty,
Branch Manager,
The Crescent Insurance Co., Ltd.,
Jayant Building, Maidan Road
MANGALORE

M. Sunderram Shetty,
Managing Director.

ಮುಖ್ಯೋಪಾಧ್ಯಾಯರಿಂದ ವರದಿವಾಚನ, ಶ್ರೀ ಕೆ. ಕಾಂತರ್ಪ ಗಳಿಂದ ಸ್ವಸ್ತಿವಾಚನ, ಸಂಭಾಷಣೆಯನ್ನು ಮೊದಲಾದ ಕಾರ್ಯಕ್ರಮಗಳು ನಡೆದುವು.

ದ. ಕ. ಒಟ್ಟೊ ನೋಬ್ಯಾಲ್ ಕೆಲಸಗಾರರ ಯೂನಿಯನ್ನಿನ ಸಾಮಾನ್ಯ ಸಭೆಯು ತಾ 13ರಲ್ಲು ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ ಜಿ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಮುಷ್ಕರಹೂಡುವ ಕುರಿತು ಮತ್ತಗಣನೆ ನಡಿಸಬೇಕು-ಮತ್ತು ಮಾಲಕರಿಗೆ ಮುಷ್ಕರದ ನೋಟೀಸು ಕೊಡಬೇಕು ಎಂಬ ನಿರ್ಣಯವಾಗಿ ಒಂದು ಕ್ರಿಯಾಸಮಿತಿಯು ರಚನೆಯಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳು ಮಾರ್ಚಿ ತಿಂಗಳಿಗೆ ನಡೆಯಲಿಸ್ತುದನ್ನು ಪುನಶ್ಚ ಮುಂದಿವರಿಸಲಾಗಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ-

---

ನೋಟೀಸ್

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 499/48

ಉಡ್ಪಿ ಶ್ರೀ ಕೃಷ್ಣದೇವರ ಮಠ, ಸದ್ರಿ ದೇವರ ಪರ್ಯಾಯ ನಡಿಸುವ, ಉಡ್ಪಿ ಶ್ರೀ ಸೋದೆ ಮಠದ ಇಂಟರೀಮ್ ಟ್ರಸ್ಟಿ, ವಿ. ಶ್ರೀಪತಿ ಆಚಾರ್ಯ —ವಾದಿರು.

ಮತ್ತು

ಬಾಬಸೆಟ್ಟಿ —ಪ್ರತಿವಾದಿ

ಇವರೊಳಗೆ

ವಾದಿಯು ಸದ್ರಿ ಪ್ರತಿವಾದಿಯ ಮೇಲೆ ಮೂಲ ಗೇಣ ಸೇಣಬಾಕಿ ಬಗ್ಗೆ ಮಾಡಿದ ಸದ್ರಿ ವ್ಯಾಜ್ಯವು ಪ್ರಕೃತಿನಾದಿ ನೋಟೀಸು ಬಗ್ಗೆ ತಾರೀಕು 7-3-49ಕ್ಕೆ ತನ್ನಿಗೆ ಇಟ್ಟುರುವದರಿಂದ ಆ ದಿವಸ ಪ್ರತಿವಾದಿಯು ಸದ್ರಿ ಕೋರ್ಟಿಗೆ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

ಉಡ್ಪಿ ತಾಲೂಕು, ತಾ- 15-2-49

ವಿವಾಹ! ಹಾ, ಹತ್ತಿರ ಬಂತೇ!! ವಿವಾಹ!!!

ಅದರ ಕುರಿತು ಚಿಂತಿಸುವಿರೇ?

ನಿಮ್ಮ ಸಮಯ ಅಮೂಲ್ಯವಾದುದು. ಮುಂತಿನ ವೇಗದಲ್ಲಿ ಕಾಲಚಕ್ರ ತಿರುಗುವ ಈ ಜಗತ್ತಿನಲ್ಲಿ ಸಮಯವೇ ಸರ್ವಸ್ವ.

ನಿಮಗೆ ಬೇಕಾದ ಅಚ್ಚುಮೆಚ್ಚಿನ ವಸ್ತು ಬೇಕಾದರೆ ಪ್ರತಿಯೊಂದು ಸಂದುಗೊಂದುಗಳಲ್ಲಿರುವ ಪ್ರತಿಯೊಂದು ಅಂಗಡಿಗೆ ಸಂದರ್ಶನವೀಯಲು ನಿಮಗೆ ಅವಕಾಶವಿಲ್ಲ.
ಹೀಗಾಗಿ ಅರೆಮನಸ್ಸಿನಿಂದ, ಅರ್ಧ ತೃಪ್ತಿಪಟ್ಟು ಕೊಂಡುಕೊಳ್ಳುವಿರಿ.
ಆದರೂ ಸಂಪೂರ್ಣ ಬೆಲೆ ತೆರಬೇಕಾಗುವುದು

ವಿವಾಹವು ಜೀವಮಾನದಲ್ಲಿ ಒಮ್ಮೆ ನಡೆಯುವ ಶುಭಕಾರ್ಯ

ಇಂತಹ ಪವಿತ್ರಕರ್ತವ್ಯವನ್ನು ಅಲಕ್ಷಿಸಬಲ್ಲಿರೇ?

ಅದಷ್ಟು ನಾಜೂಕಿನ ಬಟ್ಟೆಬರೆಗಳನ್ನು ಮತ್ತು ಇನ್ನಿತರ ಸಾಮಾಗ್ರಿಗಳನ್ನು ಹೆಚ್ಚಿಗೆ ಬೆಲೆ ತೆರದೆ ಕೊಂಡುಕೊಂಡು ಆ ಕಾರ್ಯವನ್ನು ಅದಷ್ಟು ನಾಜೂಕಿನಲ್ಲಿ ಸಾಂಗವಾಗಿ ಪೂರೈಸುವುದು ನಿಮ್ಮ ಕರ್ತವ್ಯವಲ್ಲವೇ?
ನಿಮಗೆ ಯಾವುದು ಯುಕ್ತವೋ ಅದರ ಕುರಿತು ಪೂರ್ಣ ತೃಪ್ತಿಕೊಡುವ ಆಶ್ವಾಸನೆ ಈಯಬಲ್ಲೆವು
ಯುಕ್ತವಲ್ಲದಕ್ಕೆ ಹಣ ವ್ಯಯಿಸಲು ನೀವು ಪ್ರೇರಿಸಲೇ ಬೇಕು.
ಕಾರಣ ನೀವು ಹೆಚ್ಚಿಗೆ ತೆರಲು ಬಯಸುವುದಿಲ್ಲ.

ಚಂದ್ರಾನಾ ಬ್ರದರ್ಸ್.

ನೀವು ಬಯಸಿದುದನ್ನೇ ಒದಗಿಸಿಕೊಡುವರಲ್ಲದೆ ಯಾವ ಕಾಲಕ್ಕೂ ಅದರ ಸ್ಥಾನದಲ್ಲಿ ಬೇರೊಂದನ್ನು ಕೊಡಲಾರರು.
ನೆನಪಿರಲಿ! **ಅಯುಕ್ತವಾದುದಕ್ಕೆ ಯಾವ ಕಾಲಕ್ಕೂ ಯುಕ್ತ ಬೆಲೆ ತೆರಬೇಡಿರಿ.**

ಚಂದ್ರಾನಾ ಬ್ರದರ್ಸ್.

ಪಾನನಿರೋಧ ಕಾನೂನು ಮತ್ತು ಆಯುರ್ವೇದ

(ಲೇಖಕರು: ಶ್ರೀ ಪಿ. ಜನಾರ್ದನ ನಾಯ್ಕರು, ಬೆಂ: ಸ್ವಿ: ಭುವನೇಂದ್ರ, ಪ್ರೊಡಕ್ಟ್ಸ್, ಲಿ.)

ಕಳದ ಸಂಚಿಕೆಯಲ್ಲಿ ವಿವರಿಸಿದ 18A ನಿಯಮದಂತೆ ಪ್ರಾಂತ್ಯದ ಹೊರಗಣ ಪ್ರದೇಶಗಳಿಂದ ಪ್ರಾಂತ್ಯದೊಳಗೆ ಅಮದಾಗುವ ಯಾ ಪ್ರಾಂತ್ಯದೊಳಗೆ ತಯಾರಿಸಲ್ಪಡುವ ಒಂದೇತರದ ಔಷಧಗಳ ಯಾ ವಸ್ತುಗಳ ಮೇಲೆ ತಾರತಮ್ಯವಿಲ್ಲದೆ ಒಂದೇರೀತಿಯ ತೆರಿಗೆಯನ್ನು ಪ್ರಾಂತಿಕ ಸರಕಾರದವರು ಹೊರಿಸಬಹುದಾಗಿದೆ. ಔಷಧಗಳಲ್ಲಿ ಯಾ ಇತರ ಕಯಾಂಕೆಗಳಲ್ಲಿ ವಿಶ್ರಿತವಾಗಿರುವ ಮದ್ಯಸಾರದಪ್ರಮಾಣದ ಮೇಲೆ ತೆರಿಗೆಯನ್ನು ವಸೂಲಿ ಮಾಡುವ ಪದ್ಧತಿಗೆ ಒಳಪಡಿಸಿ ಅವುಗಳನ್ನು ಪಾನನಿರೋಧ ಕಾನೂನಿನ ಇತರ ನಿಯಮಗಳಿಂದ ವಿನಾಯಿತಿಗೊಳಿಸಿ ಅವುಗಳಲ್ಲಿ ಯೂ ಸೇರಿಡಾ 20ಕ್ಕೆ ವಿೂರದಷ್ಟು ಆಲ್ಕೋಹೋಲ್ ವಿಶ್ರಿತವಾಗಿರುವ ಔಷಧ ಯಾ ತಯಾರಿಕೆಗಳು ಕರಭಾರದಿಂದ ಈವರೆಗೆ ವಿನಾಯಿತಿಗೊಳಿಸಲ್ಪಟ್ಟಿದ್ದವು ಆದರೆ ಈಗಿನ ಹೊಸನಿಯಮ ಪ್ರಕಾರ ಕರಭಾರಕ್ಕೆ ಒಳಪಡಿಸಲ್ಪಡುವ ಔಷಧಗಳನ್ನು ಇತರ ನಿಯಮಗಳಿಂದ ವಿನಾಯಿತಿಗೊಳಿಸುವ ವಿಷಯ ಮಾತ್ರ ಆದರಲ್ಲಿ ಕಂಡುಬರುವುದಿಲ್ಲ. ಆದ ಕಾರಣ ಈ ಹೊಸ ನಿಯಮದ ಉದ್ದಿಶ್ಯವೇನೆಂಬುದನ್ನೂ ಆಯುರ್ವೇದ ರೀತ್ಯಾ ತಯಾರಿಸಲ್ಪಡುವ ಆಸವಾರಿಷ್ಟಗಳು ಈ ನಿರ್ಬಂಧಕ್ಕೆ ಒಳಪಡಿಸಲ್ಪಡುವುವೋ ಎಂಬದನ್ನೂ ನೀಡಿಸಿದೇಕಾಗಿದೆ.

ಕಳದ ತಾರೀಕು 7ರಲ್ಲು ಮದ್ರಾಸ್ ಶಾಸನ ಸಭೆಯಲ್ಲಿ ಶ್ರೀ. ವಿ. ರಂಗಯ್ಯ ನವರ ಪ್ರಶ್ನೆಗೆ ಪಾನನಿರೋಧ ಮಂತ್ರಿಗಳಾದ ಡಾಕ್ಟರ್ ಎಸ್. ಗುರುಬಾತಮ್ ರವರು ಉತ್ತರಕೊಡುತ್ತ ಸೇರಿಡಾ 37-4, 37-8 ಮತ್ತು 37-9 ರಷ್ಟು ಮದ್ಯಸಾರಯುಕ್ತ 'ತ್ರಾಣರಾಜ್' 'ಪ್ರಸವರಾಜ್' ಮತ್ತು 'ಗರ್ಭರಾಜ್' ಎಂದು ಕರೆಯಲ್ಪಡುವ ತಯಾರಿಕೆಗಳು ನಮ್ಮ ಪ್ರಾಂತ್ಯದಲ್ಲಿ ಚಾಲ್ತಿಯಲ್ಲಿರುತ್ತವೆಂಗಿಯೂ ಪಾನನಿರೋಧ ಶಾಸನ ಕಮಿಶನರಿಂದ ಅವುಗಳು ಅಮಲುಕಾರಕ ಪದಾರ್ಥಗಳೆಂದು ಪರಿಗಣಿಸಲ್ಪಡದೆ ಮದ್ಯಸಾರಯುಕ್ತ ಔಷಧಗಳೆಂದು ಪರಿಗಣಿಸಲ್ಪಟ್ಟಿರುತ್ತವಾಗಿಯೂ ತಿಳಿಸಿರುವ ಸಂಗತಿ ತಾ 9-2-49 ರ ಪತ್ರಿಕೆಯೊಂದರಲ್ಲಿ ಪ್ರಕಟವಾದ ಸುದ್ದಿಯಿಂದ ತಿಳಿದುಬರುತ್ತದೆ. ಇದರಿಂದಾಗಿ ಸೇರಿಡಾ ಎಷ್ಟಪ್ರಮಾಣದವರೆಗೆ ಆಲ್ಕೋಹೋಲ್ ಮಿಶ್ರಿತವಾಗಿರುವ ಔಷಧಗಳನ್ನು ಅಮಲು ಪದಾರ್ಥಗಳೆಂದು ಪರಿಗಣಿಸಲಾಗುವುದಿಲ್ಲ? ಮತ್ತು ಬರೀ ಅಲ್ಪಪ್ರಮಾಣದಲ್ಲಿ ಆಲ್ಕೋಹೋಲ್ ಸೇರಿರುತ್ತದೆ ಎಂಬ ನೆವನದಿಂದ ಅಸವಾರಿಷ್ಟಗಳನ್ನು ಯಾವ ಆಧಾರದ ಮೇಲೆ ಔಷಧ ರೂಪದ ಮದ್ಯಗಳೆಂದು ಪರಿಗಣಿಸಲಾಗುತ್ತದೆ? ಹೆಚ್ಚಿನ ಪ್ರಮಾಣದಲ್ಲಿ ಮದ್ಯಸಾರವನ್ನು ಕೂಡಿಕೊಂಡಿರುವ ತಯಾರಿಕೆಗಳನ್ನು ಮದ್ಯಸಾರಯುಕ್ತ ಔಷಧಗಳೆಂದು ಪರಿಗಣಿಸಿ ಪಾನನಿರೋಧ ಕಾನೂನಿನಿಂದ ವಿನಾಯಿತಿಪಡಿಸಿ ಬರೀ ಅಲ್ಪಪ್ರಮಾಣದಲ್ಲಿ ಆಲ್ಕೋಹೋಲ್ ಇರುವ ಅಸವಾರಿಷ್ಟಗಳು ಯಾವದೇತರದ ಪಾನಿಯಿಲ್ಲದೆ ಬಹಳೇ ಗುಣಕಾರಿಯಾಗಿದ್ದು ಅವುಗಳನ್ನು ಎಲ್ಲ ತರದ ನಿರ್ಬಂಧಕ್ಕೆ ಒಳಪಡಿಸಿದುದರ ಉದ್ದಿಶ್ಯವೇನಿರಬಹುದು? ಇದು ನ್ಯಾಯವಾದ ಧೋರಣೆಯೆಂದು ಹೇಳಲಾದೀತೆ?

ನಮ್ಮ ಪ್ರಾಂತ್ಯದ ನರೆ ಪ್ರಾಂತ್ಯಗಳಲ್ಲಿ ಆಯುರ್ವೇದದ ಪ್ರಗತಿ ಬಗ್ಗೆ ಆ ಪ್ರಾಂತಿಕ ಸರಕಾರಗಳು ಪ್ರೋತ್ಸಾಹವನ್ನೀಯುವ ಈ ಕಾಲದಲ್ಲಿ ನಮ್ಮ ಪ್ರಾಂತಿಕ ಸರಕಾರದವರು ಆಯುರ್ವೇದದ ಕಡೆಗೆ ಈ ರೀತಿಯ ತಾತ್ಸಾರ ದೃಷ್ಟಿಯಿಂದ ನೋಡುತ್ತಿರುವುದು ಸರಿಯೆನ್ನಬಹುದೇ?

ನಮ್ಮ ಪ್ರಾಂತ್ಯದೊಳಗೆ ಅಮದಾಗುವ ಯಾ ಇಲ್ಲಿಯೇ ತಯಾರಾಗುವ ಔಷಧಗಳಿಗೆ ತಾರತಮ್ಯವಿಲ್ಲದ ರೀತಿಯಲ್ಲಿ ತೆರಿಗೆಯು ಹೊರಿಸಲ್ಪಡುವುದೆಂಬುದು ನ್ಯಾಯವೆಂದಾದರೂ ನೆರೆ ಪ್ರಾಂತ್ಯದವರು ಈ ರೀತಿಯ ತೆರಿಗೆಯ ಪ್ರಶ್ನಾಪದನ್ನೇ ಎತ್ತದ ಸಮಯದಲ್ಲಿ ನಮ್ಮಲ್ಲಿ ತಯಾರಾಗಿ ಇಲ್ಲಿತೆರಿಗೆಯನ್ನುತೆತ್ತು ಪರಪ್ರಾಂತ್ಯಗಳಿಗೆ ರಫ್ತುಮಾಡಿ ಅವುಗಳನ್ನು ಅಲ್ಲ ವಿಕ್ರಯಿಸುವರೆ ನಾಧ್ಯವಾದೀತೇ? ಬೊಂಬ್ಬಾಪ್ರಾಂತ್ಯದಲ್ಲಿ ಅಸವಾರಿಷ್ಟಗಳು ಪಾನನಿರೋಧ ಕಾನೂನಿನಿಂದ ವಿನಾಯಿತಿಗೊಂಡಿರುವಾಗ ನಮ್ಮಲ್ಲಿ ಅವು ನಿರ್ಬಂಧಿಸಲ್ಪಟ್ಟಿವೆ ಅವೇ ಪ್ರಾಂತ್ಯದಲ್ಲಿ ನ್ಥಾನಿಕ ವ್ಯಾಪಾರಕ್ಕಾರಿ ರೂ.30 ಪಾವಿರದವರೆಗಿನ ವ್ಯಾಪಾರದ ಮೇಲೆ ಮಾರಾಟಕರವನ್ನು ಹೇರದೆ ವಿನಾಯಿತಿಪಡಿಸಿ ಹೊರಗಣ ಪ್ರದೇಶಗಳಿಂದ ಅಮದುಮಾಡಿ ಮಾರಲ್ಪಡುವ ಸರಕುಗಳ ಮೇಲೆ 10ಸಾವಿರಕ್ಕೆ ಸೈಲ್ಪಟ್ಟ ಮಾರಾಟನಮೇಲೆ ಮಾರಾಟಕರವನ್ನು ತೆರಬೇಕಾಗಿರುತ್ತದೆ ಈ ಕಾರಣಗಳಿಂದ ಅದೇ ಪ್ರಾಂತ್ಯದಲ್ಲಿ ತಯಾರಾಗುವ ಔಷಧಿಗಳಿಗೆ ವಿನಾಯಿತಿಕೊಟ್ಟು ಅಲ್ಲಿಗೆ ಅಮದಾಗುವ ಔಷಧಗಳ ಮೇಲೆ ತೆರಿಗೆಯನ್ನು ವಸೂಲ್‌ಮಾಡುವ ಪದ್ಧತಿಯನ್ನು ಅವರು ಜ್ಯಾರಿಗೆ ತರಲಿಕ್ಕಿಲ್ಲವೆಂಬರೆನ್ನು ನಾವು ನಂಬುವದು ಹೇಗೆ?

ಇಲ್ಲಿ ಸ್ಪಷ್ಟವಾಗಿ ತಿಳಿಯಬೇಕಾದ ವಿಷಯವಿಷ್ಟೆ: ಮಿಕ್ಕೆಲ್ಲ ವ್ಯಾಪಾರ ವಹಿವಾಟುಗಳಂತೆ ಆಯುರ್ವೇದ ಔಷಧಗಳ ಅಮದು ರಫ್ತುಗಳಲ್ಲೂ ನೆರೆಯ ಪ್ರಾಂತ್ಯಗಳಾದ ಮದ್ರಾಸ್ ಮತ್ತು ಬೊಂಬ್ಬಾಗಳೊಳಗೆ ಹತ್ತಿರದ ಸಂಬಂಧವಿದೆ. ಈ ಎರಡು ಪ್ರಾಂತ್ಯಗಳಲ್ಲೂ ಕಾಂಗ್ರೆಸ್ ಸರಕಾರಗಳಿರುವಾಗ ಬೊಂಬಾಯಿ ಸರಕಾರವು ಸ್ವಂತ ಪ್ರಾಂತ್ಯದ ಹಿತರಕ್ಷಣೆಗಾಗಿ 'ಅಮಲು ನಿರೋಧ ಶಾಸನ' ಪ್ರಕಾರವೇ ತನ್ನಲ್ಲಿ ಆಸವಾರಿಷ್ಟಗಳ ಉತ್ಪಾದನೆ, ವಿತರಣೆಗಳಿಗೆ ನಿರ್ಬಂಧಗಳನ್ನು ಆದಾನ ತೆರಿಗೆಗಳನ್ನು ಹಾಕದೆ ಪರಪ್ರಾಂತ್ಯಗಳಿಂದ ಅಮದಾಗುವವುಗಳ ಮೇಲೆ ಮಾತ್ರ ಹೇರುವ ಸಂಭವ ತೋರಬರುವಾಗ ನಮ್ಮ ಪ್ರಾಂತ್ಯಕ್ಕೆ ಮಾತ್ರ ಅಂತಹ ಸ್ವಾಭಿಮಾನವಿಲ್ಲದಿರುವುದು ನ್ಯಾಯವೇ? ಇದರ ಪರಿಣಾಮವೆಂದರೆ ಮದ್ರಾಸಿನಿಂದ ಬೊಂಬಾಯಿಗೆ ರಫ್ತುಮಾಡಲ್ಪಡುವವುಗಳ ಮೇಲೆ ಇಲ್ಲಿಯ ಮತ್ತು ಅಲ್ಲಿಯ ದುಬಾರಿ ತೆರಿಗೆ ಬಿದ್ದು ಅಲ್ಲಿ ಅವುಗಳ ವ್ಯಾಪಾರ ವಹಿವಾಟೇ ಕಷ್ಟವಾಗುವುದು. ಅಲ್ಲದೆ ಬೊಂಬ್ಬಾಯಿಂದ ಮದ್ರಾಸ್ ಪ್ರಾಂತ್ಯಕ್ಕೆ ಬರುವವುಗಳ ಮೇಲೆ ಇಲ್ಲಿಯ ತೆರಿಗೆಯು ಮಾತ್ರ ಬಿದ್ದು ಅವು ಇಲ್ಲಿಯೂ ಮೇಲಾಟನಡಿಸಲು ಕೂಲವಾಗುವದು. ತನ್ನ ಈ ರೀತಿಯ ಧೋರಣೆಯಿಂದ ಪ್ರಾಂತ್ಯದವರಿಗೆ ಎಂತಹ ಹಾನಿಯುದೆಯೆಂಬುದನ್ನು ಮದ್ರಾಸ್ ಸರಕಾರವು ಯೋಚಿಸಿರುವುದೇ? ಇನ್ನಾದರೂ ಆದು ತನ್ನ ಧೋರಣೆಯನ್ನು ಬದಲಾಯಿಸುವುದೇ?

[ಮುಂದುವರಿಯುವದು]

ಲಕ್ಕೋಟೆ ಪ್ರಶ್ನೆಗಳು

ಆಶ್ಚರ್ಯ! ಮಹದಾಶ್ಚರ್ಯ!! ನಿಮ್ಮ ಮನಸ್ಸಿನಲ್ಲಿರುವ 5 ಪ್ರಶ್ನೆಗಳ ಉತ್ತರಗಳನ್ನು ಪೊಡೆಯದ ನಿಮ್ಮ ಕವನದ ಸಹಿತ ವಿ. ಪಿ. ಮಾಡಲು ರೂ. **2-0-0**.

ನಮ್ಮ ವಿಳಾಸ:-

ಶುಕ್ಯನಾಡಿ

ಜ್ಯೋತಿರ್ಮಂದಿರಂ,

ಬೆಂಗಳೂರು ೩ಟಿ

ಜಗತ್ತಿನಲ್ಲೆಲ್ಲಾ ಸುಮಾರು ನೂರು ಕತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



1945ನೇ ಡ್ರಗ್ ಆಕ್ಟ್ ಪ್ರಕಾರ ನಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿದೆ.

ನಮ್ಮ ವಾರ್ನಿಂಗ್ ಟಿಲ್ಲಿ ಹಾರ್ಲೆವರ್ ತೈಲವನ್ನು ಸ್ವತಃ ನಮ್ಮ ಸಿಬ್ಬಂದಿಯವರೇ ಉಪಯೋಗಿಸಿ ಅದರ ಅಶ್ಚರ್ಯಕರವಾದ ಗುಣಗಳನ್ನು ಕಂಡಿರುವುದರಿಂದ ಅತ್ಯಂತ ಆತ್ಮವಿಶ್ವಾಸದಿಂದ ಈ ತೈಲವು ಸರ್ವರೋಗಗಳಿಗೆ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಶೇಷಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾರ್ನಿಂಗ್ ಟಿಲ್ಲಿ ತೈಲವು ಮಾನವನ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಪಿಡುಪಂತೆ ಬುದ್ಧಿ ವನಸ್ಥೈತ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಂದ ಕೊಲ್ಲಾಂಡ ಡೇರದಲ್ಲಿ ಪ್ರಮುಖ ಕಂಪೆನಿಯಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ಧನೋನಾಯ, ಶಿತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾರ್ನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಹುಮೂತ್ರ-ಸೇಮೂತ್ರ, ಅನಿಯಂತ್ರ, ಕಲಿಜೆಯ ರೋಗಗಳಲ್ಲಿ ವಾರ್ನಿಂಗ್ ಟಿಲ್ಲಿ ತೈಲವು ಪರ್ಯಾಪ್ತ ಪ್ರಕ್ಕಿಂತ ಪ್ರವೇಶಿಸಿ, ಆ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೆದೋವ್ಯಾಧಿ, ಲಿಜೆರ್ಜ, ಮಬ್ಬಿನ ಅಕ್ಷಮಗಳಿಗೆ ವಾರ್ನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವವರೆಗೂ ಸಾರಿ ನೀರಂಗಿ ಮೂತ್ರಕೋಶದಲ್ಲಿನ ಕಿಕ್ಕಿಸುವಾಗ ಕಲ್ಲುಗಳೆಲ್ಲ ಸಣ್ಣಸಣ್ಣವಾದಂದಕ್ಕೆ ನಾವಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾರ್ನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವಿದೆಯೆ? ಕೆಮ್ಮುನೋವು ನೆಗಡಿಯಂದಲೇ ಆಗಿರಲಿ, ಜ್ವರದಂದಲೇ ಆಗಿರಲಿ ಅಥವಾ ನರಗಳ ಬಲಹೀನತೆಯಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾರ್ನಿಂಗ್ ಟಿಲ್ಲಿ ತೈಲದಿಂದ ಪಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವುಕವಿಗಳ ಉಪಯೋಗ ಜೆಂಗಸದ ನುಬ್ಬುನೋವು ಕಾಲದ ಆಕ್ಕುಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರ... ಬಾಟಿಯೊಳಗೆ ಸುತ್ತಿದೆ. ಕೆಮ್ಮುತ್ತು— ವಾರ್ನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಚೇರ್ಜ್. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾರ್ನಿಂಗ್ ಟಿಲ್ಲಿ ಕೆಪ್ಸುಲ್‌ಗಳಿಗೆ ರೂ. 49-0-0 ವಿ. ಪಿ. ಸಹಿತ ವಾರ್ನಿಂಗ್ ಟಿಲ್ಲಿ ಡ್ರಪ್ಸ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಚೇರ್ಜ್. ಒಂದುಡಜನ್ ಡ್ರಪ್ಸ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಸಿ. ಸಹಿತ ವಾರ್ನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8 0 ಡಜನ್ ಶೀಸೆಗಳಿಗೆ ರೂ. 18.ವಿ ಪಿ.ಮಾಫ್.

ಪ್ರಶಂಸನಾ ಪತ್ರ—ನಾನು ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ನೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನಸ್ಥಿತ್ಯುತ್ಪತ್ತಿಗಳಿಗೆ ಸಂಜೀವಿನಿಯಾಗಿದೆಂದು ರಾಮಾನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟೆಶನುಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳನ್ನೆಲ್ಲ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ ಐ. ರೈಲ್ವೇ

The Eclipse Distributing Agency,
Dahanu Road, B B & C. I Rly.

ಬೊಂಬಾಯಿ ಸ್ವಾಕಿಸ್ಟರು:—ಲಕ್ಷ್ಮಣಾಲಾ ಲಿಮಿಟೆಡ್, 20, ಫೆಲ್ಟ್ ಹನುಮಾನ್ ಲೇನ್, ಬೊಂಬಾಯಿ 2.

ಸೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ನಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದಪ್ಪಳಾಪಸ್ಸು, ಮೂಲವಿರೋಧ, ಸ್ತನಗಳ ಬೀಗು, ನಿಪ್ರಾಣಾಶ, ಖಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದರೆಡು ಯಾ ಹಲವು ವಿಕಾರಗಳು ತಲೆದೋರುತ್ತವೆ. ವೈದ್ಯ, ಡಾಕ್ಟರ, ಸರ್ಜನರೆ ಪರೆಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಈ ಮೇಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ

ಆದರೆ ಬಾಣಂತಿತನದಲ್ಲಿ ಸಂಭವಿಸಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ಮಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ಗುಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸರ್ಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇಶಕಲಾಪ, ತಂಪು ನಿಸುಳು, ಶುಭ್ರ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆನುಲಕೀ ತೈಲ ಯಾ ಹಿನುಸಾಗರ ತೈಲಗಳೆರ್ಡೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.
Kunjal P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳೆಗಳು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ ಚಾರ್ಜು ಗಿ ಆಸೆ.

ಮಾಲಕರು:—ಹಾಬಜ್ಜಾ ಭಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಡಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ್ ಬಾಗಲಕೋಟೆ ಧಾರವಾಡ ನಿಡಾಪುರ—ವಾಸ್ಪ ಸಿದ್ಧಲಿಂಗಸ್ವ ಧಾರವಾಡಕರ ವಿಶಾಪುರ ನಂಜುಡೇಸ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರಸ್ಸ್ ಅರ್ ಎಲ್ ಕಮಲಾಪುರ ಕೆಮಿಸ್ಟ್, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಳಿಕೆಂಪು ನೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ಕುಪ್ಪಲ್ದಲ್ಲಿ ತಕ್ಕೊಳ್ಳಬೇಕು ಮೊದಲ ದಿನವು ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಧಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಈಖಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಕೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Keliu Nambiar,
Vaidya

ಕಾರ್ಕಳದಲ್ಲಿ ದ. ಕ. ಜಿಲ್ಲಾ ಆರೋಗ್ಯ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯ ಪರಿಷತ್ತು ಇದೇ ತಾ. 19 ಮತ್ತು 20ರಲ್ಲಾ ವೆಂಕಟರಮಣ ಹಾ. ಎ. ಶಾಲಾ [ವರಾಂಡದಲ್ಲಿ ಡಾ. ಯು. ಪಿ. ಪಲ್ಲ, ಯೆಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಮೊದಲದಿನ ಬೆಳಿಗ್ಗೆ ಭಂಡಾರಕೇರಿಮಠದ ಸ್ವಾಮಿಗಳವರು ರಾಷ್ಟ್ರ ಧ್ವಜಾರೋಹಣ ಮಾಡಿದರು. ಬಳಿಕ ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಪರಿಷತ್ತಿನ ಉದ್ಘಾಟನಾ ಮಾಡಿದರು [ಆ ಸಮಯದಲ್ಲಿ ಅವರು ಮಾಡಿದ ಭಾಷಣ ಸಾರಾಂಶ ಪ್ರತ್ಯೇಕ ಕೊಡಲಾಗಿದೆ) ಸ್ವಾಗತ ಸಮಿತಿಯ ಅಧ್ಯಕ್ಷ ಜನಾಬ್ ಎಜ್. ಎಸ್. ಹುಸ್ಸೇನ್ ಸಾಹೇಬ್, ಎಂ-ಎಲ್-ಎ-ರವರು ಸ್ವಾಗತ ಭಾಷಣ ಓದುತ್ತಾ ಜಿಲ್ಲೆಯ ಸಲವಾರು ಆರೋಗ್ಯ ವಿಷಯಗಳ ನ್ಯೂನತೆ, ಅವುಗಳನ್ನು ಹೋಗಲಾಡಿಸುವರೆ ಸರಕಾರವು ಕೈಕೊಳ್ಳಬೇಕಾದ ಕಾರ್ಯಕ್ರಮ ಮೊದಲಾದವನ್ನು ತಿಳಿಸಿದರು- ಡಾ. ಮಲ್ಯರು ಅಧ್ಯಕ್ಷ ಭಾಷಣ ಮಾಡಿದರು- ಆರೋಗ್ಯಕ್ಕೆ ಸಂಬಂಧಿಸಿದ ಸಭೆ, ಭಾಷಣ, ಪ್ರಚಾರ ಕಾರ್ಯಗಳ ಅವಶ್ಯಕತೆ, ಆರೋಗ್ಯವನ್ನು ಕಾಪಾಡಿಕೊಳ್ಳುವರೆ ಮತ್ತು ರೋಗಗಳನ್ನು ತಡೆಗಟ್ಟುವರೆ ಜನರ ಮತ್ತು ಸರಕಾರದ ಕರ್ತವ್ಯ, ಜನರು ಆರೋಗ್ಯವನ್ನು ಪರಿಪಾಲಿಸುವ ಅವಶ್ಯಕತೆ ಮೊದಲಾದ ವಿಷಯಗಳು ಅಧ್ಯಕ್ಷ ಭಾಷಣದಲ್ಲಿ ಹೇಳಲಾಗಿದ್ದುವು- ಇವಾದ ಬಳಿಕ ಮದ್ರಾಸು ಸ್ಯಾನಿಟರಿ ಹೆಲ್ತ್ ಡೈರೆಕ್ಟರ್ ಡಾ- ಆರ್- ಎಮ್. ಮೆಥ್ಯೂ ಅವರು ಆರೋಗ್ಯಶಾಸ್ತ್ರಕ್ಕೆ ಸಂಬಂಧಿಸಿದ ಪ್ರದರ್ಶನವನ್ನು ತೆರೆದು ವಸ್ತು ಪ್ರದರ್ಶನಗಳ ಅವಶ್ಯಕತೆ, ಆರೋಗ್ಯ ಪ್ರಚಾರ ಕಾರ್ಯ, ಜನತೆಯ ಟೊಂಬಲ ಮೊದಲಾದ ಸ್ವಾಮುಖ್ಯ ವಿಷಯಗಳನ್ನೆತ್ತಿ ಮಾತನಾಡಿದರು- ಸಂಜಯಾನ್ಯಾಟೆಜ್ ಸ್ಟೇಷನ್ಸ್ ಇನ್‌ಫೋರ್ಮೇಶನ್ ಸರ್ವಿಸ್, ಮುಖ್ಯಾಸು ರಾಪೆಯವರಿಂದ ಆರೋಗ್ಯಕ್ಕೆ ಸಂಬಂಧಪಟ್ಟ ಸಿನೆಮಾ ಪ್ರದರ್ಶನ ಏರ್ಪಡಿಸಿತ್ತು-

ತಾ- 20ರಲ್ಲಾ ಮಧ್ಯಾಹ್ನ ಜಾಹೀರು ಅಧಿವೇಶನ ನಡೆದು ನಿರ್ಣಯಗಳು ಸ್ವೀಕಾರವಾದುವು.

ದ- ಕ- ಜಿಲ್ಲೆಯ ಆರೋಗ್ಯ ವಿಷಯಗಳ ಹಡಿಗೆ ನಿಗಾ ಕೊಡುವರೆ ಜಿಲ್ಲಾ ಆರೋಗ್ಯ ಸಮಿತಿಯನ್ನು ಬೇಗನೆ ಸ್ಥಾಪಿಸಬೇಕೆಂದಾಯಿತು- ಘೂಳಿನ ಹಾವಳಿಯನ್ನು ತಡೆಗಟ್ಟುವರೆ ಜಿಲ್ಲೆಯ ಪ್ರಮುಖ ಹೆದ್ದಾರಿಗಳಲ್ಲಿ ಧೂಳು ಹಾರದಂತಹ ವ್ಯವಸ್ಥೆ ಮಾಡಬೇಕಾಗಿ ಸರಕಾರವನ್ನು ಪ್ರಾರ್ಥಿಸಲಾಯಿತು- ಶಾಲೆಗಳಲ್ಲಿ Leech type ಪಾಯಿಖಾನೆಗಳನ್ನೂ ಕಟ್ಟುವಂತೆ ಶಾಲಾ ಮ್ಯಾನೆಜರರನ್ನು ಒತ್ತಾಯಿಸುವಂತೆ ಸರಕಾರಕ್ಕೆ ಶಿಫಾರಸು ಮಾಡಲಾಯಿತು. ಜಿಲ್ಲೆಯಲ್ಲಿ ಕ್ಷಯರೋಗ ನಿಯಂತ್ರಣವು ಜಾಸ್ತಿಯಾಗುತ್ತಿರುವುದರಿಂದ ಹೆಚ್ಚಿನ ಆಸ್ಪತ್ರೆಯನ್ನು ತೆರೆಯುವಂತೆ ಮುಖ್ಯಾಸು ಸರಕಾರವನ್ನು ವಿನಂತಿಸಲಾಯಿತು- ಹಳ್ಳಿಗಳಲ್ಲಿ ಡಾಕ್ಟರುಗಳ ಸಂಬಳವನ್ನು ವಿನಿಯೋಗಿಸಿ ನೇ ಹಳ್ಳಿಗಳಲ್ಲಿ ಕೆಲಸ ಮಾಡಲು ಡಾಕ್ಟರರು ಸಿಕ್ಕುವರೆಂಬುದನ್ನು ಸರಕಾರದ ಆಲೋಚನೆಗೆ ತಂದುದಲ್ಲದೆ ಆಂತೆಯೇ ಸಂಬಳ ಭತ್ತೆ ವಿಷಯದಲ್ಲಿ ನಿಗಾ ಕೊಡುವಂತೆ ಸರಕಾರಕ್ಕೆ ಸೂಚಿಸಲಾಯಿತು- ಸಾನ ನಿರೋಧ ಕಾನೂನು ಜಾರಿಗೆ ಬರುವ ಮುಂಚೆಯೇ ಆಸವ, ಅರಿಷ್ಟಗಳಲ್ಲಿ ವ್ಯವಸಾಯ ಮಾಡುತ್ತಿದ್ದವರಿಗೆ ಅವರ ವೃತ್ತಿಯನ್ನು ಮುಂದೆಯೂ ಸಾಗಿಸುವಂತೆ ಸವಲತ್ತು ಕೊಡಬೇಕಾಗಿ ಸರಕಾರವನ್ನು ವಿನಂತಿಸಲಾಯಿತು ಜಿಲ್ಲೆಯ ಐದು ಮೈಲು ವಿಸ್ತೀರ್ಣಕ್ಕೊಂದರಂತೆ ಹೆರಿಗೆ ಕೇಂದ್ರವನ್ನು ತೆರೆಯುವಂತೆ ಶಿಫಾರಸು ಮಾಡಲಾಯಿತು- ಕಾರ್ಕಳ ತಾಲೂಕು ಆಸ್ಪತ್ರೆಯನ್ನು ಸ್ತ್ರಾಂತಿಕ ಆಸ್ಪತ್ರೆಯ ಸಾಲಿಗೆ ಸೇರಿಸಿಕೊಳ್ಳುವಂತೆ ಸರಕಾರಕ್ಕೆ ವಿನಂತಿಸಲಾಯಿತು- ವಿಲೇರಿಯಾ, ಅನಕಾಲು ರೋಗಗಳನ್ನು ತಡೆಗಟ್ಟುವರೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆನ್ನುವ, ತಾಲೂಕಿಗೊಬ್ಬನಂತೆ ಹೆಲ್ತ್ ಇನ್ಸ್‌ಪೆಕ್ಟರ್ ಇರಬೇಕೆನ್ನುವ ಮದ್ರಾಸಿನಲ್ಲಿ ದಂತೆ ವೈದ್ಯ ಕಾಲೇಜು ಸ್ಥಾಪಿಸಬೇಕೆನ್ನುವ, ಮಂಡಿನಡ್ಡಿಸಲ್ಲಿ ಸ್ಥಾಪಿಸಲಿರುವ ಕ್ಷಯರೋಗ ಆಸ್ಪತ್ರೆಗೆ ದ.ಕ- ಜಿಲ್ಲಾ ಜನತೆಯು ಉದಾರ ಮನಸ್ಸಿನಿಂದ ಸಹಾಯವೀಯಬೇಕೆನ್ನುವ, ಜಿಲ್ಲೆಯ ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸಲು ಜನತೆಯು ಮುಂದಾಗಬೇಕೆಂದು ಕೇಳಿಕೊಳ್ಳುವ ನಿರ್ಣಯಗಳೂ ಆದುವು-

ಪರಿಷತ್ತು ಮುಕ್ತಾಯ ಕಾಲದಲ್ಲಿ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಪರಿಷತ್ತಿನ ಕಾರ್ಯಕ್ರಮಗಳನ್ನು ಪ್ರಸಂಶಿಸಿದರು, ಜಿಲೆ ಜನರು ಇಂಥ ಸಂಸ್ಥೆಯಲ್ಲಿ ಬಲಶಿಲ್ಲವೆಂದರು- ಮಂಗಳೂರಿಗೆ ನೀರಿನ ಸರಬರಾಯಿ ವಿಸಾರದು, ಉಡುಪಿ ಸರಕಾರಿ ಆಸ್ಪತ್ರೆಗೆ ಹೆಚ್ಚಿನ ಸೌಕರ್ಯಗಳ ವ್ಯವಸ್ಥೆ, ಪುಂಡಾಯಾ ನಿರೋಧ ಕಾರ್ಯಕ್ರಮಗಳ ಆನೆ ಇಂಜಿ, ರೋಗ ತಡೆಗಟ್ಟುವಿಕೆ, ಗ್ರಾಮಗಳ ಡಾಕ್ಟರರ ಸಂಬಳ ಭತ್ತೆ ಮೊದಲಾದ ವಿಷಯಗಳಲ್ಲಿ ಸರಕಾರವು ತಕ್ಕ ಕಾರ್ಯಕ್ರಮ ಕೈಕೊಂಡಿದೆ ಎಂದು ಹೇಳಿದರು- ದ- ಕ ಜಿಲ್ಲೆಯ ಆಕಾಂಕ್ಷೆಗಳಲ್ಲಿ ಹೆಚ್ಚಿನವು ಸರಕಾರದ ಆವಗಾಹನೆಗೆ ಬಂದಿದ್ದು ಆವಗ ಕಾರ್ಯರೂಪದಲ್ಲಿ ಬರಲಿವೆ ಎಂದೂ ಸೂಚಿಸಿದರು- ಆರೋಗ್ಯದ ವಿಷಯದಲ್ಲಿ ಜನತೆಯೂ ಹೆಚ್ಚಿನ ಆಸಕ್ತಿಯನ್ನು ತೋರಿಸಿ ಮುಂದಾಗಬೇಕೆಂದರು.

ಬಳಿಕ ಅಧ್ಯಕ್ಷ ಡಾ- ಮಲ್ಯರು, ಜಿಲ್ಲಾ ಹೆಲ್ತ್ ಆಫೀಸರ್, ಸ್ವಾಗತ ಸಮಿತಿ ಕಾರ್ಯದರ್ಶಿಯರೇ ಮೊದಲಾದವರು ಪದಸ್ಥರಾಗಿರುವಾದಗಳನ್ನಿತ್ತಿ ಕೊಂಡರು- ಪರಿಷತ್ತಿನ ನಿರಂತರ ಮಾರ್ಗದರ್ಶನಕ್ಕೆ ಸಲುವಾಗಿ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು- ಪರಿಷತ್ತಿನ ಕಾರ್ಯಕ್ರಮಗಳನ್ನು ಪ್ರಚಾರ ಪಡಿಸುವ ಬೋಡ್ಡಾ ಪಾ. ಎ ಶಾಲಾ ಸ್ವಯಂಸೇವಕರಿಂದ ಗಾನ ನಿರೋಧ ಪ ಕುರಿತು ಬೀದಿ ಗಾನ ಕಾಲಕ್ಷೇಪವೂ ನಡೆಯಿತು.

ಪರಿಷತ್ತಿನ ಎರಡುದಿವಸಗಳಲ್ಲೂ ಕ್ಷಯ, ವೀರೇರಿಯಾ, ಅನೆಕಾಲು ಮೊದಲಾದ ಮಹಾ ರೋಗಗಳ ಕುರಿತು ಅನುಭವೀ ಮುಂದಾಳು ಉದ್ಯೋಗಸ್ಥರ ಭಾಷಣಗಳಿದ್ದುವು ಆರೋಗ್ಯ ಪ್ರದರ್ಶನವು ಉತ್ತಮವಾಗಿದ್ದು ಸಾವಿರಾರು ಸ್ತ್ರೀ ಪುರುಷರ ಮನಸೆಳೆ ಕರ್ಷಿಸಿದ್ದಿತು- ಜಿಲ್ಲೆಯಲ್ಲೇ ಸ್ಪ್ರಥಮವಾಗಿ ಪ್ರಾಂತ್ಯದಲ್ಲೇ ಅದ್ವಿತೀಯವಾಗಿ ಈಗಿನ್ನೆಗೆ ನವು ಜರಗುವಂತೆ ಪ್ರಯತ್ನಿಸಿದ ಸ್ವಾಗತ ನುಂಡಳಿಯ ಸದಸ್ಯರೂ ಮುಖ್ಯತಃ ಉಡುಪಿ ತಾಲೂಕು ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ವೇಣು ಗೋಪಾಲರಾಯರೂ ಅಭಿನಂದನೀಯರು.

ವಿವಿಧ ಪಾತ್ರೆಗಳು

ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರುಜು ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ. ವ್ಯಾಸರಾಯರ್,
ರಥಬೀದಿ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದು ಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಂಟಪಕ್ಕೆ ದೂರವಿಲ್ಲ!

ನ್ಯಾಯವಾರ್ಯವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಂಡಿತನಸು, ಇವುಗಳ ರುಚಿಯುಜಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಲಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರರಸ್ವರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭೂಗ್ಯಕಾಲಿಗಳಿಗೂ ಸುಲಭವಾಗಿರುವುದು.

ನವಜೀವನವು ಎಂಬ ಸೂತಿಕಾ ರಸಾಯನ

೧ ದಿನ್ನ ಬಾಣಂತಿಗಳು ಕೆಮ್ಮು ಕಡಿದು ಆರಾಮದಿಂದ ಬದುಕುವರು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ದೀರ್ಘ ಮಹಿಮೆ ಇದ್ದಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು, ದ. ಕ

ಸಂ ಶಿಸ್ತು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ನರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ನ್ಯಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಜೀವನಪ್ರಕಾಶ ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಜಾಠರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತಶುದ್ಧಿಗೊಸ್ಕರ ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಸ್ತಿಯ ಔಷಧಿಗಳು ದೊರೆಯುತ್ತವೆ.

—ಎಂ. ಗಣಪಯ್ಯ ಎಂಡ್ ಸನ್ಸ್,—

ಆಯುರ್ವೇದಿಕ್ ಫಿಜಿಸಿಯನ್ಸ್, ರಕ್ಷಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಸ್ತಿಯ ಔಷಧಗಳೂ ದೊರೆಯುತ್ತವೆ. ಕ್ಯಾರಿ ಕಂಗ್ಡಿ ಬರದಲ್ಲಿ ನೋಗಳ್ಳೆ ಕಳ್ಳೆಕಾಯಿ ಔಷಧಿ ರವಾನಿಸಲಾಗುವುದು (1)ಉಡುಪಿ ವಿಜಯಬ್ಯಾಂಕು:—ನವಭಾರತ ಬುಕ್ ಡಿಪೋ, ಮೊಂಬಾಯಿ ವಿಜಯಬ್ಯಾಂಕು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್, 183, ಸುಬ್ರಾಣ್ಯ ರೆಟ್ಟಿಯಾರ್ ಟಿ. ಐ. ಪಿ. ರೈಲ್ವೆ ವರ್ಕ್ಸ್ ಕೋಡಿ ಎದುರುಗಡೆ, ಪರೇಲ್.(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ಕ. ಪಿ. ಟಿ. ಮಾಟುಂಗಾ.

ದಕ್ಷಿಣಕನ್ನಡಜಿಲ್ಲಾ ಆರೋಗ್ಯ ಸಮ್ಮೇಳನ

ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರ ಉದ್ಘಾಟನಾ ಭಾಷಣ.

ಇಂದು ತಮ್ಮೆಲ್ಲರೆದುರು ಈ ಸಮ್ಮೇಳನವನ್ನು ಸ್ವಾಗತಿಸಲು ಕುಂಬ ಸಂತೋಷವಾಗುತ್ತಿದೆ. ನನ್ನು ಜನಾಂಗದ ಏಳಿಗೆಗೆ ಜನತೆಯ ಆರೋಗ್ಯವೇ ಆಧಾರ. ಆರೋಗ್ಯವಿಲ್ಲದ ಜನತೆ ಏನನ್ನೂ ಸಾಧಿಸಲಾರದು. ಇಂತಹ ಅಧಿವೇಶನಗಳು ಆರೋಗ್ಯ ವಿಷಯದಲ್ಲಿ ಜನಸಾಮಾನ್ಯಕ್ಕೆ ತಿಳುವಳಿಕೆಯನ್ನುಂಟುಮಾಡಲು ಮುಖ್ಯ ಸಾಧನಗಳಾಗಿವೆ ಈ ಸಮ್ಮೇಳನದ ಕಾರ್ಯಸೂರ್ವಾಹಕರಿಗೆ ನಾವೆಲ್ಲಾ ಎಷ್ಟು ಕೃತಜ್ಞರಾಪಡೆದೂ ಸಾಲದು.

ನನ್ನು ಸಾಮಾನ್ಯ ರೋಗಗಳಲ್ಲಿ ಹೆಚ್ಚಿನವು ಆರೋಗ್ಯ ಸೂತ್ರಗಳ ತಿಳುವಳಿಕೆಯಿಲ್ಲದೆ ಬರುತ್ತಿವೆ. ನಮ್ಮ ಸ್ಥಾನತದ 87 % ಮಂದಿಯೂ ನಿರಕ್ಷರ ಕುಕ್ಷಿಗಳು. ಹೆಚ್ಚಿನವರು ಬಡವರು. ನಮ್ಮ ಆರೋಗ್ಯ ಪರಿಸ್ಥಿಯು ಇಷ್ಟು ಕೆಳಮಟ್ಟದಲ್ಲಿರಲು ಈ ಬಡತನವೇ ಮುಖ್ಯ ಕಾರಣ. ಬಡತನ, ರೋಗ, ಅಜ್ಞಾನಗಳು ಒಟ್ಟೊಟ್ಟಿಗೆ ಇರತಕ್ಕವು. ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಮಿತಿಮೀರಿದೆ, ಅತಿ ಬಹುಸಂಖ್ಯರಲ್ಲೂ ನಿರಕ್ಷರ ಕುಕ್ಷಿಗಳಲ್ಲೂ ರೋಗಗಳು ಮನೆ ಮಾಡಿಕೊಂಡಿವೆ. ನಾವು ವಾಸಿಸುವ ಮನೆ, ತಿನ್ನುವ ಆಹಾರ, ಕುಡಿಯುವ ನೀರು, ನೂಡುವ ಕೆಲಸ, ಆರೋಗ್ಯ ವಿಷಯದಲ್ಲಿರುವ ನಮ್ಮ ತಿಳುವಳಿಕೆ, ಇವುಗಳೇ ನನ್ನು ಆರೋಗ್ಯ ಪರಿಸ್ಥಿತಿಗೆ ಸಾಕ್ಷಿಗಳು. ನಾವು ವಾಸಿಸುವ ಅನೇಕ ಮನೆಗಳಲ್ಲಿ ಸಾಕಷ್ಟು ಬೆಳಕಿರುವುದಿಲ್ಲ. ಗಾಳಿ ಸುಳಿಯುವುದಿಲ್ಲ. ಸುತ್ತ ಮುತ್ತಲಲ್ಲಿ ಸಾಕಷ್ಟು ಶುಚಿತ್ವವಿಲ್ಲ ವಾಸಕ್ಕೆ ಬೇಕಾದಷ್ಟು ಸ್ಥಳವಿಲ್ಲ ನೀರು ಕೆಡದಂತೆ ಕಯಾಸಿಸಲ್ಪಟ್ಟ ಕೆಲ ಬಾವಿಗಳನ್ನು ಬಿಟ್ಟರೆ, ನನ್ನು ಕುಡಿಯುವ ಬಾವಿಗಳೆಲ್ಲಾ ನಿರ್ಮಲವಾಗಿಲ್ಲ. ಬಡವರಿಗೆ ಅವೆ ಹೊಟ್ಟೆಯುಂಡೇ ಜೀವನ. ಮಧ್ಯಾನ ತರಗತಿಯವರಿಗೂ ಸಾಕಷ್ಟು ಉತ್ತಮ ಆಹಾರವಿಲ್ಲ. ಆಹಾರವು ಕಡಿಮೆಯಾಗಿ ದೇಹಪೋಷಣೆಗೆ ಯೋಗ್ಯವಾಗಿಲ್ಲದಿದ್ದರೆ ದೇಹವು ಸರಿಯಾಗಿ ಬೆಳೆಯದು. ಮನಸ್ಸೂ ವಿಕಾಸವಾಗದು ದೇಹದಲ್ಲಿ ರೋಗ ನಿರೋಧಕ ಶಕ್ತಿಯು ಕುಂದುವುದು. ಶರೀರ ಒಲಪೂ ತಗ್ಗುವದು. ಅನೇಕ ಮನೆಗಳಲ್ಲಿ ಸುಲಮೂತ್ರಗಳನ್ನು ವಿಸರ್ಜಿಸಲು ಸರಿಯಾದ ಪಾಯಿಖಾನೆಗಳಿಲ್ಲ. ಇದರೂ ಅವುಗಳನ್ನು ಸರಿಯಾಗಿ ಕಟ್ಟುರುವುದಿಲ್ಲ ಕಟ್ಟಿದ್ದರೂ ಶುಚಿಯಾಗಿಟ್ಟುಕೊಳ್ಳುವುದಿಲ್ಲ. ಅನಾರೋಗ್ಯಕರವಾದ ಅನೇಕ ದುರಭ್ಯಾಸಗಳು ನಮ್ಮ ಜನರನ್ನು ಆಂಟಿಕೊಂಡಿವೆ. ಗಲ್ಲಿಗಳಲ್ಲೂ, ರಸ್ತೆಗಳ ಬದಿಗಳಲ್ಲೂ ಮಲಮೂತ್ರ ವಿಸರ್ಜಿಸಲು ನಾವು ಹಿಂದುಮುಂದು ನೋಡುವುದಿಲ್ಲ. ನದೀತೀರ, ಕೆರೆಕಟ್ಟೆ, ಗದ್ದೆ, ತೋಟ ಇವೇ ಹೆಚ್ಚಿನವರ ಪಾಯಿಖಾನೆಗಳು. ಇದರಿಂದ ಭೂಮಿಯ ಕೊಳಕಾಗುವುದು ಮಾತ್ರವಲ್ಲ; ನೀರೂ ಕೆಟ್ಟುಹೋಗುವದು ನಂಡಿ ತಿನಸುಗಳನ್ನೂ, ಪಾತ್ರೆಯಗಳನ್ನೂ ಬೀದಿಯ ಬದಿಗಳಲ್ಲಿ ತೆರೆದಿಟ್ಟು ಮಾರುವುದು ಸಂಪ್ರದಾಯವಾಗಿದೆ. ಧೂಳು ಹಾರಿ ನೊಣಗಳು ಮುತ್ತಿ ಆರೋಗ್ಯಕ್ಕೆ ಇದರಿಂದ ಎಷ್ಟು ಹಾನಿಕರ ನೆಂದು ನಮ್ಮಲ್ಲಿ ಅನೇಕರಿಗೆ ಇನ್ನೂ ತಿಳಿದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಜನರು ಚಿರಕಾಲ ಬಾಳಿ ಸಂತೋಷದಿಂದ ಹಾದಿಕುಣಿಯುತ್ತಿದ್ದರೆ, ನಮ್ಮ ದೇಶದಲ್ಲಿ ಅನಾರೋಗ್ಯ, ಅಕಾಲ ಮರಣ, ಇವೇ ನನ್ಮುದಿನ ದಿನದ ಹಾಡಾಗಿವೆ.

ನಮ್ಮ ದೇಶದಲ್ಲಿ ತಲೆಯಬಹುದಾದ ಅನೇಕ ದೊಡ್ಡ ರೋಗಗಳಿಗೆ- ಸುಲೇರಿಯ ವಂತೂ ನಮಗೆ ಒಂದು ದೊಡ್ಡ ಸಮಸ್ಯೆಯೇ ಆಗಿದೆ. ಪ್ರತಿ ವರ್ಷವೂ ನಾಲ್ಕುರಲ್ಲೆ ಒಬ್ಬರಿಗೆ ಇದು ಅಂಟುತ್ತಿದೆ ಇದನ್ನು ತಡೆಯಬೇಕಾದರೆ ಸೊಳ್ಳೆಗಳ ಹಾವಳಿಯನ್ನು ನಿಲ್ಲಿಸಬೇಕು. ಸೊಳ್ಳೆಗಳು ಹೆಚ್ಚದಂತೆ ತಡೆ ಮಾಡುವುದರಿಂದಲೂ, ಗುಣಪಡಿಸುವ ಮತ್ತು ತಗಲದಂತೆ ಮಾಡುವ ಔಷಧಗಳನ್ನು ಉಪಯೋಗಿಸುವುದರಿಂದಲೂ ಮಲೇರಿಯವನ್ನು ಹತೋಟಿಗೆ ತರಬಹುದು. ಡಿ. ಡಿ. ಟಿ. ಯನ್ನು ಮನೆಗಳಿಗೆಲ್ಲಾ ಚಿಮುಸಿಸುವುದರಿಂದ ಮಲೇರಿಯಾ ಸೊಳ್ಳೆಗಳು ನಾಶವಾಗುವುವು. ಈಗ ಮೆಪಾಕ್ರಿನ್ (Mepacrine), ಪಾಲುಡ್ರಿನ್(Paludrine) ಮೊದಲಾದ ಹೊಸ ಔಷಧಗಳು ಹಚ್ಚಿನ ಪರಿಣಾಮಕಾರಿಗಳಾಗಿವೆ. ಪುತ್ತೂರು ತಾಲೂಕಿನ ಅನೇಕ ಪ್ರದೇಶಗಳಲ್ಲಿ ಈಗಾಗಲೇ ಮಲೇರಿಯಾವನ್ನು ತಡೆಯಲು ಸರಕಾರದ ಪ್ರಯತ್ನ ನಡೆಯುತ್ತಿದೆ ಹಾನಿಯೇ ಮಲೇರಿಯದ ಹಾವಳಿಯಿಂದ ಪೀಡಿತವಲ್ಲದುವ ಕಾರ್ಕಳ ಮತ್ತು ಮಲೆನಾಡಿನ ಇತರ ತಾಲೂಕುಗಳಲ್ಲೂ ಇಂತಹ ಪ್ರತಿರೋಧಕ ಕಾರ್ಯವನ್ನು ಕೈಕೊಳ್ಳಬೇಕಾಗಿದೆ.

ಇನ್ನೊಂದು ಭಯಂಕರ ೧೭ ತಿಯ ಸ್ಥಿತಿಯಬ್ಬುತ್ತಿರುವ ಮಹಾ ರೋಗವೆಂದರೆ

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. No 381/1948

ಪರಮೇಶ್ವರಯ್ಯ—ಪಾದಿ.

ಮತ್ತು

ಅಶ್ವ. ಗುರುರಾಜ್ ಭಟ್, ರಂಜಾಳ ವೆಂಕಟ್ರಮಣ ಭಟ್ಟರ ಮಗ. 11 ಕ್ವಾಸ್ ವೆಕ್ಟ್ಸನೇಟರ್ಸ್,ಬಂಟ್ವಾಳ ರೇಂಜ್. ಮಂಗಳೂರು ತಾಲ್ಲೂ ಬಂಟ್ವಾಳದಲ್ಲಿರವರು.

—ಪ್ರತಿವಾದಿ.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ,

ಪ್ರತಿನಾದಿಯು ತಾ 8-7-1943ರಲ್ಲು ವಾದಿಗೆ ರೂ 100-0-0ಕ್ಕೆ ಬರಕೊಟ್ಟ ಡಿ. ಪ್ರೊನೋಟಿನ ಪ್ರಕಾರ ಬರತಕ್ಕ ಅಸಲು ಬಡ್ಡಿ ಲೈವೆಜುಗಳ ವಸೂಲಾತಿ ಕುರಿತು ವಾದಿಯು ಸದ್ರಿ ಬಾಬ್ತು ವಾಜ್ಬು ಮಾಡಿರುವುದರಿಂದ ಸದ್ರಿ ಸ್ಯಾಜ್ಞತ ತಾರೀಕು 1-3-1949 ಕ್ಕೆ ತನ್ನಿಗೆ ಇಟ್ಟುರುತ್ತಾರೆ. ಆ ಕುರಿತು ನಮ ನೇಮಾದ್ದೂ ಅಕ್ಷೇಪವಿದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಞಾಪಿಸಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ಸ್ಯಾಜ್ಞವು ಶೀಘ್ರವಾಗಿಸಲ್ಪಡುವುದು ಎಂತ ಕೋರ್ಟು ಹುಕ್ಕುಂ ನೋಲೆಗೆ ತಿಳಿಸೋಣಂಗಿಯನೆ.

K Shankar Rao

Advocate for Plaintiff.

ಕಾಸರಗೋಡು ತಾ. 16-2-1949

ಕ್ಷಯ. ಇದರೊಡನೆ ಹೋರಾಟವೆಂದರೆ ಸಾಮಾನ್ಯವಲ್ಲ. ರೋಗವನ್ನು ಆರಂಭದಲ್ಲೇ ಕಂಡು ಹಿಡಿದು, ರೋಗ ತಗಲಿದವರನ್ನು ಪ್ರತ್ಯೇಕವಿಡಿಸುವುದೂ, ಅವರಿಗೆ ಆಸ್ಪತ್ರೆಗಳಲ್ಲಿ ಇಲ್ಲವೇ ಆರೋಗ್ಯ ಕೇಂದ್ರಗಳಲ್ಲಿ ತಕ್ಕ ಚಿಕಿತ್ಸೆ ದೊರೆಯುವಂತೆ ಮಾಡುವುದೂ ಇದಕ್ಕೆ ಪರಿಹಾರವಾಗಿದೆ. ಬ್ರಾಂತೀಯ ಹಿತ ರಕ್ಷಣಾ ನಿಧಿಯ ಸಮಿತಿಯಾ (Committee of Provincial Welfare Fund) ಮಂಗಳೂರಿಂದ 6 ಮೈಲು ದೂರದ ಮೂಡುಶೆಡ್ಡೆಯಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ನಿಧಿ ಸಂಗ್ರಹ ಮಾಡುತ್ತಿದೆಯಲ್ಲವೆ ಸರಕಾರದ ಸಹಾಯವನ್ನೂ ಕೇಳಿದೆ. ಬಿ. ಸಿ. ಜಿ ಲಸಿಕೆ ಹಾಕುವುದರಿಂದ ರೋಗ ತಡೆಯುವ ಶಕ್ತಿ ಉಂಟಾಗುವುದಲ್ಲದೆ ಕ್ಷಯ ರೋಗವು ಪಬ್ಲಿಕೊಂಡಿರುವ ಪ್ರದೇಶಗಳಲ್ಲಿ ಮಕ್ಕಳಿಗೆ ತಗಲದಂತೆ ಮಾಡಲು ಈ ಲಸಿಕೆ ಅತ್ಯಗತ್ಯವಾಗಿದೆ. ಮದ್ರಾಸು ನಗರದಲ್ಲಿ ಈ ತಿಂಗಳ ಪದಿನೈದನೇ ತಾರೀಕಿನಿಂದ ಅಮೇರಿಕಾ ಯೂರೋಪುಗಳಂತೆ ಬಿ. ಸಿ. ಜಿ. ಲಸಿಕೆ ಹಾಕುವ ಕಾರ್ಯವು ಆರಂಭವಾಗಿದೆ,

ಕುಷ್ಠ ರೋಗವು ನಮ್ಮನ್ನು ಪ್ರಾಂತೆಪಲ್ಲಿ ಹಬ್ಬುತ್ತಿರುವ ಇನ್ನೊಂದು ಮಹಾವ್ಯಾಧಿ. ನಮ್ಮ ಜಿಲ್ಲೆಯ ಕೆಲವು ಹಳ್ಳಿಗಳು ಕುಷ್ಠ ರೋಗದ ತವರು ಮನೆಗಳಾಗಿವೆ. ಮಕ್ಕಳನ್ನು ರೋಗ ತಗಲಿದವರಿಂದ ದೂರವಾಗಿರಿಸುವುದೇ ಅದನ್ನ ಹುಟ್ಟುವಿಕೆಯನ್ನು ತಡೆಯುವ ಮುಖ್ಯ ಉಪಾಯವಾಗಿದೆ. ಕುಷ್ಠವು ಹೆಚ್ಚಾಗಿ ಮನೆಯಲ್ಲೇ ಅಂಟಿಕೊಳ್ಳುವುದು. ರೋಗ ತಗಲಿದವರ ಸಾಮಿಪ್ಯ, ಸಂಬಂಧಗಳೇ ಇದಕ್ಕೆ ಮುಖ್ಯ ಕಾರಣ. ದೊಡ್ಡವರಿಗಿಂತಲೂ ಚಿಕ್ಕ ಮಕ್ಕಳೇ ಈ ರೋಗಕ್ಕೆ ತುತ್ತಾಗುವುದು ಹೆಚ್ಚು. ಕುಷ್ಠ ರೋಗದ ಲಕ್ಷಣದ ವಿಷಯದಲ್ಲಿ ಸರಿಯಾದ ಅಭಿಪ್ರಾಯ ಮೂಡಿಸಬೇಕು. ಇದರ ಹುಟ್ಟು ವಿಕೆಯನ್ನು ತಡೆಯುವ ಯುಕ್ತ ಉಪಾಯವನ್ನು ಜನರಿಗೆ ತಿಳಿಸಬೇಕು–

ಗನೋರಿಯಾ (Gonorrhoea), ಸಿಫಿಲಿಸ್ (Syphilis) ಇತ್ಯಾದಿ ಗುಹ್ಯ ರೋಗಗಳು ನಮ್ಮ ಹಳ್ಳಿ, ಪಟ್ಟಣಗಳಲ್ಲಿ ಸಾಮಾನ್ಯವಾಗಿವೆ. ಇವುಗಳಿಂದ ರೋಗಿಗಳು ಮಾತ್ರ ನಾಶವಾಗುವುದಲ್ಲ; ಅವರ ವಂಶಪಾರಂಪರ್ಯವೂ ವಿಪತ್ತಿಗೆ ಗುರಿಯಾಗುವುದೆಂಬುದನ್ನು ಯಾರೂ ಮರೆಯಬಾರದು. ಹೊಸತಾಗಿ ಕಂಡುಹಿಡಿದ ಕೆಲವು ಸಲ್ಫಡ್ರಗ್ಸ್ (Sulphe-drugs) ಪೆನ್ಸಿಲಿ(Penicillin) ಸ್ಟೆಪ್ಟೋಮೈಸಿನ್ (Streptomycin) ಇವುಗಳಂತಹ ಪರಿಪಾರಕ ಔಷಧಗಳಿಂದ ಈ ರೋಗಿಗಳನ್ನು ಯಶಸ್ವಿಯಾಗಿ ಚಿಕಿತ್ಸಿಸಬಹುದು. ಈ ರೋಗದಿಂದ ನರಳುತ್ತಿರುವವರು ಒಡನೆ ಯೋಗ್ಯ ಡಾಕ್ಟರರಿಂದ ಸರಿಯಾದ ಚಿಕಿತ್ಸೆ ಪಡೆಯಬೇಕು. ಹೀಗೆ ಮಾಡುವುದರಿಂದ ಗಂಡ ಹೆಂಡರು ಈ ರೋಗಕ್ಕೆ ತುತ್ತಾಗದೆ ಮಕ್ಕಳೂ ಈ ಪೀಡೆಯಿಂದ ದೂರವಾಗಿರಬಹುದು.

ಅನಿಕಾಲು (Filariasis) ವಿರೂಪಗೊಳಿಸುವ ಇನ್ನೊಂದು ರೋಗ. ಇದು ತಗಲಿದರೆ ಮನುಷ್ಯನು ನರಪಯೋಗಿಯಾಗುವುದು ಮಾತ್ರವಲ್ಲ, ಹೆಚ್ಚಿನ ಕಷ್ಟವನ್ನೂ ತಂದೊಡ್ಡುವುದು. ನಮ್ಮ ಜಿಲ್ಲೆಯ ಕೆಲವು ಭಾಗಗಳಲ್ಲಿ ಅದರಲ್ಲೂ ಮಂಗಳೂರು, ಕಾಸರಗೋಡುಗಳಲ್ಲಿ ಇದರ ಪ್ರಭಾವವು ಹೆಚ್ಚಿದೆ. ಇದಕ್ಕೆ ಪರಿಣಾಮಕಾರಿಯಾದ ಯಾವ ಔಷಧವನ್ನೂ ಈ ವರೆಗೆ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಒಬ್ಬರಿಂದೊಬ್ಬರಿಗೆ ರೋಗವನ್ನು ಹಬ್ಬಿಸುವ ಸೊಳ್ಳೆಗಳನ್ನು ನಾಶಮಾಡುವುದರಿಂದ ಈ ರೋಗದಿಂದ ದೂರವಾಗಿರಬಹುದು. ಡಿ. ಡಿ ಟಿ.ಯನ್ನು ಬಿಸಿಸುವುದರಿಂದ ಇದನ್ನು ತಡೆಯಬಹುದು.

ಮಾನವ ಕೋಟಿಯನ್ನು ನಾಶಮಾಡುವ ಇನ್ನೊಂದು ಮಹಾವ್ಯಾಧಿಯೆಂದರೆ ಕೇನ್ಸರ್ (Cancer)- 35 ವರುಷ ಪ್ರಾಯವಾದ ಮೇಲೆ ಈ ರೋಗವು ಬರುವುದು. ಇದು ದೇಹದ ಯಾವ ಭಾಗದಲ್ಲೂ ತಲೆದೋರಬಹುದು. ಸಾಮಾನ್ಯವಾಗಿ ಸ್ತ್ರೀಯರ ಮಟ್ಟಿಗೆ, ಗರ್ಭಕೋಶ, ಸ್ತನಗಳಲ್ಲಿ ಈ ರೋಗ ಉಂಟಾಗುವುದು. ಪ್ರಾರಂಭದಲ್ಲಿ ಇದರಿಂದ ವಿಪರೀತ ನೋವಾಗುವುದಿಲ್ಲ. ರೋಗವು ಬಲವಂತವಾದ ಮೇಲೆ ತಡೆಯಲಾರದ ನೋವಾಗುವುದು. ಆರಂಭ ಸ್ಥಿತಿಯಲ್ಲೇ ಉತ್ತಮ ಡಾಕ್ಟರರಿಂದ ಪರೀಕ್ಷೆ ಮಾಡಿಸಿ ಆಧುನಿಕ ಪದ್ಧತಿಗಳಾದ ಎಕ್ಸ್‌ರೇ, ರೇಡಿಯಂ ಮತ್ತು ಶಸ್ತ್ರಪ್ರಯೋಗಗಳಿಂದ ಚಿಕಿತ್ಸೆ ನಡೆಸಿದರೆ ರೋಗಿಗಳಲ್ಲಿ ನೂರಕ್ಕೆ ಬಹುಮಂದಿ ಗುಣಹೊಂದಬಹುದು. ಸರಕಾರವು ರೋಗದ ಪರೀಕ್ಷೆ ಮತ್ತು ಚಿಕಿತ್ಸೆಗಳಿಗೆ ಸ್ಥತಿಯೊಂದು ಜಿಲ್ಲೆಯ ಮುಖ್ಯ ಆಸ್ಪತ್ರೆಗಳಲ್ಲಿ ಉತ್ತಮ ಸೌಕರ್ಯಗಳನ್ನು ಒದಗಿಸಬೇಕಾಗಿದೆ.

ಜನಸಾಂದ್ರತೆ ಆರೋಗ್ಯವು ಸುಧಾರಿಸಬೇಕಾದರೆ ತಾಯಿತನದ ರಕ್ಷಣೆ ಮತ್ತು ಶಿಶುಪೋಷಣೆ ಇವುಗಳಲ್ಲಿ ಸುಧಾರಣೆ ಮಾಡುವುದೇ ನೊದಲ ಹೆಜ್ಜೆಯಾಗಿದೆ. ಮಕ್ಕಳನ್ನು ಹೊತ್ತು ಪೋಷಿಸುವುದೆಂದರೆ ಸ್ತ್ರೀಯರ ಧರ್ಮವೇ ಆಗಿದೆ. ಜೀವನದ ಮೂಸ್ಥಿತಿಗಳಿಂದ ಬಡತನ, ಪೌಷ್ಟಿಕವಾದ ಆಹಾರದ ಕೊರತೆ ಇವುಗಳಿಂದ ಉಂಟಾದ ಅಶಕ್ತತೆಯು ಗರ್ಭಣಿಯರಿಗೆ ತಿಂಗಳಾದೆಂತೆ ಹೆಚ್ಚುತ್ತಾ ಬಂದು ಗರ್ಭಧಾರಣೆಯೇ ಅಪಾಯಕರವಾಗುವುದು. ಹೆರಿಗೆಯ ಕಾರಣದಿಂದ ಸಾಯುವವರ ಸಂಖ್ಯೆಯು ಇತರ ದೇಶಗಳಿಗಿಂತ ನಮ್ಮಲ್ಲಿ ಎಷ್ಟೋ ಹೆಚ್ಚು. ಹೆರಿಗೆಯ ಬಳಿಕ ಅನೇಕ ರೋಗದ ಬಾಧೆಗೆ ಒಳಗಾಗುವ ಸ್ತ್ರೀಯರ ಸಂಖ್ಯೆಯು ಇನ್ನೂ ಹೆಚ್ಚು. ಇದರಿಂದಲೂ ಯೋಗ್ಯ ಸಲಹೆ, ಜಾಗ್ರತೆ ಇವುಗಳಿಂದ ಹೆರಿಗೆಯನ್ನು ಅಪಾಯವಿಲ್ಲದಂತೆ ಮಾಡಬೇಕಲ್ಲದೆ ಗರ್ಭಣಿಯಾದ ಮೇಲೆ ಶಿಶು ಹುಟ್ಟುವವರೆಗೆ ಉತ್ತಮವಾದ ವೈದ್ಯಕೀಯ ಸಹಾಯದನ್ನು ಒದಗಿಸಬೇಕು. ಗರ್ಭಿಣಿ ಸ್ತ್ರೀ, ಮೊಲೆಯೂಡುವ ತಾಯಿ, ಬೆಳೆಯುವ ಮಗು ಇವರಿಗೆ ಇತರರಿಗಿಂತ ಹೆಚ್ಚಾದ ಪೌಷ್ಟಿಕ ಆಹಾರವು ದೊರೆಯಬೇಕು. ಈಗ ಇವಕ್ಕಾಗಿ ಹೆರಿಗೆ ಮತ್ತು ಶಿಶುಸಂರಕ್ಷಣಾ ಕೇಂದ್ರಗಳಲ್ಲಿ ಹಾಲು, ಕಾಡ್‌ಲಿವರ್ ಆಯಿಲ್ ನೊದಲಾದುಗಳನ್ನು ಆಹಾರರೂಪದಲ್ಲಿ ಕೊಡುತ್ತಿದ್ದಾರೆ. ತಾಯಿಯ ಆರೋಗ್ಯ ಚೆನ್ನಾಗಿದ್ದರೇನೇ ಮಗುವಿನ ಆರೋಗ್ಯವೂ ಚೆನ್ನಾಗಿದ್ದೀತು. ಆದುದರಿಂದ ಆರೋಗ್ಯ ವಿಷಯದಲ್ಲಿ ಎಚ್ಚರತಕ್ಕೊಳ್ಳುವುದು ಹೇಗೆ? ಮಕ್ಕಳನ್ನು ಸಾಕುವ ರೀತಿ ಯಾವುದು? ಇತ್ಯಾದಿ ತಾಯಂದಿರಿಗೆ ಚೆನ್ನಾಗಿ ತಿಳಿದಿರಬೇಕು. ಮರಣ ಸಂಖ್ಯೆಯಲ್ಲಿ ಅಧಿಕಾಂಶದಷ್ಟೂ ನಮ್ಮ ದೇಶದಲ್ಲಿ ಹತ್ತು ವರ್ಷಕ್ಕಿಂತ ಚಿಕ್ಕ ಮಕ್ಕಳಿಗೆ ಆಗಿರುವುದು ಶೋಚನೀಯವಾಗಿದೆ. ನಮ್ಮ ಮುಂದಿನ ಜನಾಂಗದ ಆಸ್ತಿವಾರಸುದಾರರಾದ ಈ ಮಕ್ಕಳ ಆರೋಗ್ಯ ರಕ್ಷಣೆಗಾಗಿ ವಿಶೇಷ ಗಮನ ಕೊಡಲೇಬೇಕಾಗಿದೆ. ಪೌಷ್ಟಿಕಯುಕ್ತ ಆಹಾರವನ್ನು ಒದಗಿಸುವುದರಿಂದ ಅವುಗಳ ವೈದ್ಯರ್ಧಲ್ಲಿಯೂ ತಲೆದೋರುತ್ತಿರುವ ಅನೇಕ ರೋಗಗಳನ್ನು ತಡೆದು, ಅವರ ಆರೋಗ್ಯವನ್ನೂ ಸುಧಾರಿಸಬಹುದು ಜನರು ಪ್ರತಿನಿತ್ಯವೂ ಆಹಾರವನ್ನು ಉಪಯೋಗಿಸಲು ತಿಳಿಯಬೇಕು. ಹಾಲು, ತುಪ್ಪ, ಬೆಣ್ಣೆ, ಮೊಟ್ಟೆ, ಮೀನು, ತರಕಾರಿ, ಹಣ್ಣುಹಂಪಲನ್ನು ಹೆಚ್ಚಾಗಿ ಉಪಯೋಗಿಸಲು ತೊಡಗಬೇಕು. ಆಹಾರ ವಿಷಯವಲ್ಲಿ ಸಾರ್ವಜನಿಕರಿಗೆ ಅರಿವನ್ನು ಶಾಲೆಯಲ್ಲಿ ಮಕ್ಕಳಿಗೂ, ಮನೆಯಲ್ಲಿ ಹೆಂಗಸರಿಗೂ ಸರಿಯಾದ ಶಿಕ್ಷಣದೊರೆಯಬೇಕು. ಪೌಷ್ಟಿಕವಾದ ಆಹಾರ ಸಾಮಗ್ರಿಗಳನ್ನು ಅರಿಸಿಕೊಳ್ಳುವುದು, ಅವುಗಳನ್ನು ಸರಿಯಾಗಿ ತಯಾರಿಸುವುದು, ಹಾಗಾಗದಂತೆ ರೋಗಾಣುಗಳಿಗೆ ತುತ್ತಾಗದಂತೆ ಭದ್ರವಾಗಿ ಇಡುವುದು, ಇವೆಲ್ಲ ಸ್ತ್ರೀಯರಿಗೆ ತಿಳಿಯತಕ್ಕ ವಿಷಯಗಳಾಗಿವೆ. ಕೈಗಾರಿಕಾ ಕೇಂದ್ರಗಳಲ್ಲಿ ದುಡಿಯುತ್ತಿರುವ ಮಜೂರರಿಗೆ ಕಡಿಮೆ ಕ್ರಯಕ್ಕೆ ಒಳ್ಳೆಯ ಆಹಾರವನ್ನು ಒದಗಿಸುವಂತೆ ಪಾಪ ಮಂದಿರಗಳನ್ನು ಸ್ಥಾಪಿಸುವುದೂ, ಹೊಟೇಲುಗಳಲ್ಲಿ ಸಮತೂಕವಾದ ಆಹಾರವನ್ನು ಸುಲಭ ಬೆಲೆಗೆ ದೊರೆಯುವಂತೆ ಮಾಡುವುದೂ ಜನತೆಯ ಆರೋಗ್ಯ ಸುಧಾರಣೆಗೆ ಅವಶ್ಯಕವಾಗಿದೆ.

ನಿರೋಧಕ ಔಷಧಗಳ ವಿಷಯದಲ್ಲಿ, ಹಾಗೂ ಇತರ ಆರೋಗ್ಯ ವಿಷಯದಲ್ಲಿ ಅಗಾಧವಾದ ಸುಧಾರಿತ ವಿದ್ಯಾಭ್ಯಾಸವು ಅತ್ಯವಶ್ಯಕ. ಈ ಬಗೆಯ ಆರೋಗ್ಯ ಶಿಕ್ಷಣವು ಶಾಲೆಗಳಲ್ಲಿ ಮಕ್ಕಳಿಗೆ ಮಾತ್ರ ಕೊಡಿಸಿಕ್ಕುವಲ್ಲ. ಪತ್ರಿಕೆ, ಆಕಾಶವಾಣಿ, ಚಲಚ್ಚಿತ್ರ ಮೊದಲಾದುವುಗಳ ಮೂಲಕ ಜನಸಾಮಾನ್ಯಕ್ಕೂ ತಿಳಿಯುವಂತೆ ಮಾಡಬೇಕು. ಆರೋಗ್ಯ ಪಾಠಗಳನ್ನು ಅಳವಿಸುವುದೂ, ಸರಸ್ತ ಪ್ರದರ್ಶನಗಳನ್ನು ವಿಪರ್ದಿಸುವುದೂ ಪ್ರಚಾರ ದೃಷ್ಟಿಯಿಂದ ಹೆಚ್ಚಿನ ಉಪಕಾರಿಗಳಾಗುವುದು. ಆರೋಗ್ಯ ಶಿಕ್ಷಣವನ್ನು ಕೃತಿಯಲ್ಲಿ ತರಲು ಯತ್ನಿಸಲೇಬೇಕು. ವೈದ್ಯಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಉಪಾಧ್ಯಾಯರೂ ತಂದೆತಾಯಿಗಳೂ ಉತ್ತಮ ಮಾದರಿಪರಿಕ್ಕ ಹಾಕಬೇಕು. ಮಕ್ಕಳಿಗೆ ಚಿಕ್ಕಂದಿನಿಂದಲೇ ಸರಿಯಾಗಿ ಸ್ನೆ ತೊಳೆಯುವುದು, ಹಲ್ಲು ಉಜ್ಜುವುದು, ಇತ್ಯಾದಿ ಆರೋಗ್ಯ ಸಂಬಂಧವಾದ ಉತ್ತಮ ಅಭ್ಯಾಸಗಳನ್ನು ಬೆಳೆಸಿಗೆ ತರಲು ಸರಿಯಾದ ಶಿಕ್ಷಣ ಕೊಡಬೇಕು. ಜನಜೀವನದ ಮಟ್ಟವು ಒಳ್ಳೆಯ ಮನೆ, ಉತ್ತಮ ಆಹಾರ, ಶಿಕ್ಷಣ ಇವು ದೊರೆಯದಿದ್ದರೆ ಆರೋಗ್ಯ ಸ್ಥಿತಿಯಲ್ಲಿ ಯಾವ ಸುಧಾರಣೆಯೂ ಫಲಪ್ರದವಾಗದು. ಈ ಆಧುನಿಕ ಜನತೆಯಲ್ಲಿ ವಿಪರ್ದಿಸಿದ ಅನೇಕ ಪ್ರದರ್ಶನಗಳು, ಪ್ರತ್ಯಕ್ಷ ಪ್ರಯೋಗಗಳು, ಭಾಷಣ ಇತ್ಯಾದಿಗಳು ಇಲ್ಲಿಯ ಜನರಿಗೆ ಹೆಚ್ಚಿನ ಪ್ರಯೋಜನವುಳ್ಳವುಗಳೆಂದು ನನಗೆ ಸಂಪೂರ್ಣ ನಂಬಿಕೆ ಇದೆ.

—ಎ. ಬಿ. ಶೆಟ್ಟಿ
ಮದರಾಸು ಸರಕಾರದ ಆರೋಗ್ಯ ಮಂತ್ರಿ

ಮೂಲ್ಕಿ ಬೇಂಕ್,
ಲಿಮಿಟೆಡ್
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.
Moolky, S. K.

ಹೊಸ ವರ್ಷದ ಶುಭಾಶಯ
ಠೇವಣಾತಿದಾರರಿಗೆ ಅತ್ಯಾಕರ್ಷಕ ದರದ ಬಡ್ಡಿ ಮತ್ತು ಭದ್ರತೆ
ಹದಿನೇಳು ವರ್ಷಗಳ ಪರಿಸಕ್ವ ಅನುಭವ
ನಿರಖು ಠೇವಣಾತಿ
ಮೂರು ತಿಂಗಳಿಗೆ 3%
ಆರು ,, ... 3½%
ಹನ್ನೆರಡು ,, ... 3¾%
ಇಪ್ಪತ್ತ ನಾಲ್ಕು ,, ... 4%
ವಾವತಿಯಾಗಿರುವ ಭಂಡವಾಳ .... ರೂ. 4,91,000.
ಕ್ಷೇಮ ನಿಧಿ .... ,, 98,000.
ಒಟ್ಟು ವಹಿವಾಟು ಭಂಡವಾಳ .... ,, 40,65,000.
(ಸಾರವಿಕ್ಕೆ ಸರಿಯಾಗಿ)
ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ.
ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ
ನಮ್ಮ ಶಾಖೆಗಳಿವೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುದು.
ದಿ
ವಿಜಯ ಬೇಂಕ್ ಲಿಮಿಟೆಡ್
THE VIJAYA BANK, LIMITED.
H. O. MANGALORE.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಏರಡಾಣೆ 3-3-1949

ಅಂತರಂಗ
ಜೊಸ ಮೂದರಿಯ
ವಾರ ಪತ್ರಿಕೆ
ಬಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ ೨-೪-೦
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೨೭

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29 No. 27

ಈಗಿನ ಕರ್ತವ್ಯ

ವಿದ್ಯಾಸಿನಲ್ಲಿ ಆಂಧ್ರ-ತಮಿಳು ವಿವಾದ; ಕಾಂಗ್ರೆಸ್ ಪಕ್ಷದಲ್ಲಿಯೇ ಒಮ್ಮಂದೊಮ್ಮೆ ಪ್ರಕಾಶಂ ಪಂಗಡಗಳು; ಬ್ರಾಹ್ಮಣ-ಬ್ರಾಹ್ಮಣೇತರ ಭಿನ್ನತೆಗಳು; ಇವೆಲ್ಲಾ ನೋವಗಳನ್ನು ನಿವಾರಿಸಿ, ಅಧನಾ ಇವೆಲ್ಲಾ ಪಕ್ಷ ಪಂಗಡಗಳನ್ನು ಒಂದುಗೂಡಿಸಿ, ಭಾಷಾವಾರು ಪ್ರಾಂತ್ಯಗಳ ರಚನೆ, ಇವೆಲ್ಲವೇ ಕಾಂಗ್ರೆಸಿಗರಲ್ಲಿ ಒಮ್ಮತ ನಿರ್ಮಿಸಲು ಯಾರಿಗಾದರೂ ಸುಲಭಸಾಧ್ಯವೆ?

ಕೊಚ್ಚಿ, ತಿರುವಾಂಕೂರುಗಳಂತಹ ಸಂಸ್ಥಾನಗಳಲ್ಲಿ ಹೊಸತಾಗಿ ಹೊರತೆ ಪ್ರಜಾಧಿಕಾರ ನಿರ್ಮಹಣದ ಮಟ್ಟಿಗೂ ಕಾಂಗ್ರೆಸಿಗರೊಳಗೇನೇ ಪಕ್ಷ ಪಂಗಡಗಳು, ವೈಷಮ್ಯಗಳು ಹುಟ್ಟಿಕೊಂಡಿವೆ. ಮೈಸೂರಿನ ಕಾಂಗ್ರೆಸ್ ಮಂತ್ರಿಮಂಡಲ ಕೂಡಾ ಟೀಕೆಗಳಿಗೆ ಹೊರಗಿಲ್ಲ. ಹೈದರಾಬಾದಿನ ರಜಕಾರ್‌ಸತ್ತೆಯು ನಿರ್ಮೂಲವು ಹಿಂದೀ ಸೇನೆಯಿಂದಲೇ ಆಗಬೇಕಿದ್ದರೂ, ಆದರ ನಂತರವಾವಾಗಿ ನಾಳೆ ಕಮ್ಯೂ ಕೈಗೆ ಒಲಿಯುವ ಅಧಿಕಾರದ ದೃಷ್ಟಿಯಿಂದ ಹೃದಯಿಬಂದ್ ಕಾಂಗ್ರೆಸಿಗರೊಳಗೆ ಇಂದೇ ವೈಷಮ್ಯ ಹುಟ್ಟಿಕೊಂಡಿದೆ. ರಮಾನಂದ ತೀರ್ಥರಂ ಕಾಂಗ್ರೆಸ್-ಜನಾರ್ಧನರಾಯರ ಕಾಂಗ್ರೆಸಿಗರಾಗಿ ಬಾದು ಕಾಂಗ್ರೆಸು ದ್ವಿದಳ ಧಾನ್ಯವಾಗಿ ದೌರ್ಬಲ್ಯ ಪ್ರದೇಶಕ್ಕೆ ಬಲಿಬೇಳುವಲ್ಲಿಗೆ ಬಂದಿತ್ತು. ದುರ್ಬುದ್ಧಿಯವರ ಸ್ವಾರ್ಥವನ್ನು ವಿರೋಧಿಸುವದಕ್ಕಿಂತಲೂ ಸೇವಾಬುದ್ಧಿಯವರ ನ್ಯಾಸ್ವಾರ್ಥವನ್ನು ಶ್ರುತಿಭಟಿಸ ವದು ಕಷ್ಟವೆಂಬದನ್ನೂ ಕಾಂಗ್ರೆಸಿಗರ ಅಧಿಕಾರಮೋಹವು, ಒಳಜಗಳಗಳು ಈೀಗ ಚಿಕಿತ್ಸಾತೀತ ರೋಗಗಳಾಗಿ ಹೋಗಿರುವದು ತೀರ ತೋಚಿನೀಯವೆಂಬುದನ್ನೂ ಮರೆಯಲಾಗುವದೆ?

ಇನ್ನು ಜಾತೀಯತೆಯನ್ನಾಧರಿಸಿ ಆರ್. ಯಸ್. ಯಸ್, ಹಿಂದೂ ಮಹಾಸಭೆಯಂಥವುಗಳು-ಅವುಗಳ ಮೂಲದರಿಯಲ್ಲೇ ಅಪಾಯಕರ ಸಿಮ್ಬರಿಸಿ ಬಡತನವನ್ನಾಧರಿಸಿ ಶಮ್ಯೂನಿಸ್ಟರಂಥವರು-ಅವರ ಕೈಯಲ್ಲಿ ಸಿಕ್ಕಿಕೊಂಡು ರೈಲ್ವೇಸ್, ಆಂಚೇ ಕಲಸಗಾರರಂಥವರು; ಸ್ವಂತಜ್ಯ ಒಂದರ ತಮಗ ಸಾಕಷ್ಟು ಅನ್ನ ಒಟ್ಟೆಯನ್ನೂ ದೊರೆತಿಲ್ಲವೆಂದು ಸಾಮಾನ್ಯ ಬಡ ಜನವರ್ಗ; ಎಲ್ಲರೂ ಅತೃಪ್ತಿ, ದ್ವೇಷಾಸೂಯೆ ಕಟ್ಟಿಕೊಂಡು ಅಸಹ್ಯಚಾರ, ಮುಷ್ಕರಗಳನ್ನು ಸಡೆಯಿಸುತ್ತಾ ಹೋದರೆ ಇವಿಷ್ಟೂ ಪ್ರತಿಭಟನೆಗಳಿದಿರಲ್ಲಿ ತೂಕ ತಪ್ಪದೆ ರಾಜ್ಯಸೂತ್ರ ಹಿಡಿದುಕೊಂಡಿರಲು ಜನ ಪ್ರತಿನಿಧಿ ಸರಕಾರಗಳಿಗೆಷ್ಟು ಕಷ್ಟವೆಂಬುದು ಗೊತ್ತೆ?

ತಮ್ಮ ಗುರಿ, ಧೋರಣೆ ಮತ್ತು ನೀತಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಲು ಯಾವಪಕ್ಷಕ್ಕೂ, ಯಾರೊಬ್ಬನಿಗೂ ಸಾಧ್ಯವಿಲ್ಲವೆಂಬುದನ್ನು ನೆನಸಿಡಬೇಕು ಆಂದಮೇಲೆ ಈಗ ಜನತೆಯಿಂದಿರೀಕ್ಷಿಸಬೇಕಾದುದಿಷ್ಟೆ. ಪಕ್ಷದ ಯಥಾರ್ಥ ಗುರಿ ಮತ್ತು ಉದ್ದೇಶವಾವುದು? ಅವುಗಳಿಂದ ನಿಜಕ್ಕೂ ರಾಷ್ಟ್ರೋದ್ಧಾರ ಮತ್ತು ಜನತಾಹಿತವಾದೀತೆ? ತನ್ನೀ ಗುರಿಸಾಧನೆಯಲ್ಲಿ ಆ ಪಕ್ಷವು ಈ ಕಾಲಕ್ಕೆ ಸಾಧ್ಯವಿರುವಷ್ಟನ್ನು ಸಾಧಿಸಿಕೊಂಡಿದೆಯೆ? ಇಂದಿನ ಪರಿಸ್ಥಿತಿ ಅತ್ಯಪ್ತಿಕರವೆಂದಾದರೆ, ಇದರ ಬದಲಿಗೆ, ಇದರ ಸ್ಥಾನದಲ್ಲಿ ಇದಕ್ಕಿಂತ ಉತ್ತಮವಾದ ಬೇರೊಂದನ್ನು ಇಡುವ ಸಾಧ್ಯತೆ ಮತ್ತು ಅನುಕೂಲತೆಯಿದೆಯೆ? ಈ ನಾಲ್ಕು ಪ್ರಶ್ನೆಗಳನ್ನು ಉತ್ತರಿಸಿಯೇ ಜನರು ಇಂದಿನ ಪರೀಕ್ಷೆಯಲ್ಲಿ ಪಕ್ಷಗಳು ಪಾಸಾಗಬೇಕು.

ಈರೀತಿಯ ಪರೀಕ್ಷೆಯಲ್ಲಿ ಇಂದಿನ ಕಾಂಗ್ರೆಸ್ ಆಡಳಿತೆಯು ಗೆದ್ದು ಬರಲಾರದೆ? ಸ್ವರಾಜ್ಯಾಧಿಕಾರದ ಹೊಸ ಜನ್ಮಭವ; ರಾಷ್ಟ್ರ ವಿಭಜನೆಯ ಜತೆಯಲ್ಲಿದ್ದಿದ್ದ ಅತ್ಯಂತ ವಿಷಮ ರೂಪದ ಹಲವು ಬಿಕ್ಕಟ್ಟುಗಳು; ಲಕ್ಷಗಟ್ಟಲೆ ನಿರಾಶ್ರಿತರ ಆಮದು ರಫ್ತು ಮತ್ತು ಜನರ ಜೀವನ ವ್ಯವಸ್ಥೆ; ಸಂಸ್ಥಾನಗಳ ಜೋಡಣೆಯ ಅಗಾಧ ಹಾಗೂ ವಿವಿಧ ರೂಪೀ ಸಮಸ್ಯೆಗಳು; ಅಧಿಕಾರದ ಆಯಕಟ್ಟಿನ ಸ್ಥಾನಗಳಲ್ಲಿದ್ದ ಬ್ರಿಟಿಷರೆಲ್ಲಾ ಬಿಟ್ಟು ಹೋದುದರಿಂದೆದ್ದ ಅಭಾವ; ಇವುಗಳಲ್ಲಿ ಪ್ರತಿಯೊಂದೂ ಆ ಸಂಬಂಧದ ಹೊಣೆ ಹೊತ್ತವರ ಸರ್ವ ಲಕ್ಷ್ಯವನ್ನೂ ಎಳೆಯುವಷ್ಟು ದೊಡ್ಡ ಪ್ರಶ್ನೆಯಿರುವಾಗ, ಇವೆಲ್ಲವೂ ಏಕ ಕಾಲದಲ್ಲಿ ಒಟ್ಟಾಗಿ ತಲೆಯ ಮೇಲೆ ಬಿದ್ದರೂ ಏದೆಗುಂದದೆ ಎಲ್ಲವನ್ನೂ ಬಹು ಮಟ್ಟಿಗೆ ನಿವಾರಿಸಿಕೊಂಡು ವಿಜಯಿಯಾಗಿರುವ ಭಾರತ ಸರಕಾರವು ವಿಶ್ವಾಸಾರ್ಹವಲ್ಲವೆ? ಅದರ ಕೈಯಲ್ಲಿ ರಾಷ್ಟ್ರದ ಭದ್ರತೆ ಮತ್ತು ಭವಿಷ್ಯವು ಸುರಕ್ಷಿತವಿದೆ ಎಂಬ ಸಮಾಧಾನ ಮೂಡದವದಿಲ್ಲವೆ?

ಇಷ್ಟವಾದರೆ ಅದರ ಸ್ಥಾನದಲ್ಲಿ ಈ ಕಾಲದಲ್ಲಿ ಬೇರಾವ ಪಕ್ಷವನ್ನು ವಿರಿಸಬಹುದು? ಹಿಂದೂ ಮಹಾಸಭೆ, ಕಮ್ಯೂನಿಸ್ಟ್, ಸೋಶಿಯಾಲಿಸ್ಟ್- ಮುಂತಾದ ಒಂದೊಂದನ್ನೇ ಊಹಿಸಿನೋಡೋಣ; ಯಾವುದು ಅಧಿಕಾರಕ್ಕೆ ಬಂದರೂ, ಮಿಕ್ಕ ಮಾತು ಹಾಗಿರಲಿ, ತಮ್ಮಾಯಾ ಪಕ್ಷಗಳ ಗುರಿ ಮತ್ತು ಧೋರಣೆಯ ಮಟ್ಟಿಗಾದರೂ ಅವು ಈಗಿನದಕ್ಕಿಂತ ಹೆಚ್ಚಿನ ಪ್ರಗತಿ ಸಾಧಿಸಿಯಾವೆಂಬ ಆಶೆ ಮೂಡತ್ತದೆಯೆ? ಇಲ್ಲ; ವಿಚಾರದೃಷ್ಟಿಗೆ ಆ ಚಹೆ ತೋರುವದಿಲ್ಲ.

ಈಗಿನದಂತೂ ಜನಸೇವಾವಧಿಗಾಗಿ, ನಿರ್ಮಾಣಗೊಂಡಿರುವ ಸರಕಾರ. ಮುಂದಿನ ಚುನಾವಣೆಯಾಗಿ ಜನವಿರತವನ್ನಾಧರಿಸಿ ನಿಜವಾದ ಪ್ರಜಾಸಂಸ್ಕಾರ ರಚನೆಗೆಳ್ಳುವ ವರೆಗಾದರೂ ಯಾವ ಗೊಂದಲ, ಏಜ್ಞರ, ಅತ್ಯಪ್ತಿ ಪ್ರದರ್ಶನವನ್ನೂ ಮಾಡದಿರುವುದು ಜನತೆಯ ಕರ್ತವ್ಯವಲ್ಲವೆ?

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನಂಬಿಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ವಿರೋಧಿ ಸಂವತ್ಸರದ (1949 - 1950)

ನವಯುಗ ಪಂಚಾಂಗ

ನಿತ್ಯ ಪಂಚಾಂಗವಲ್ಲದೆ ಸರ್ವರಿಗೂ ಉಪಯುಕ್ತವಾದ ಹಲವು ವಿಷಯ ಸಂಗ್ರಹಗಳಿವೆ.

ಮೇಷಾದಿ ದ್ವಾದಶ ರಾಶಿಯವರ ಧರ್ಮ ಭವಿಷ್ಯವಿದೆ.

ಪ್ರತಿ 1ಕ್ಕೆ 0-5 0- 25 ಪ್ರತಿಗಳಿಗೆ 6 4 0. 50 ಪ್ರತಿಗಳಿಗೆ 11 0-0- 100 ಪ್ರತಿಗಳಿಗೆ 20 0 0. ಒಂದು ಪ್ರತಿ ಬೇಕಾದವರು 0-6-0 ಸ್ಟಾಂಪು ಕಳಿಸಬೇಕು.

ಮೆನೇಜರ್, ನವಯುಗ ಪ್ರೆಸ್, ಉಡುಪಿ.

ನಿಮ್ಮ ಮೆಚ್ಚಿನ
ಸುವಾಸನೆಯ ಸ್ವಾದವುಳ್ಳ
ಪ್ರಭಾತ ಚಾ ಮತ್ತು ಕಾಫಿ
ತಾಜಾ ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR (Nilgiris)

ವಿಮೆಮಾಡಲಿಕ್ಕೆ ಯಾ ಪ್ರತಿನಿಧಿ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ

ಸ್ಥಾಪನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

"ನಿಮ್ಮ ಮನೆಯ ಸ್ಥಿತಿ, ಮನೋಗತಿ ಸರಿಪಡಿಸಿಕೊಳ್ಳಿ"

ಮದ್ರಾಸಿಗರಿಗೆ ಸರ್ದಾರರ ಉಪದೇಶ

ಪ್ರಧಾನಮಂತ್ರಿ 'ವೈದ್ಯಕೀಯ' ವಿಭಾಗದ ವೆಚ್ಚಕ್ಕಾಗಿ ರೂ. ೭, ೮೫, ೭೫, ೨೦೦ ರ ಗ್ರಾಂಟು ಬೇಡಿಕೆಯಕೂಟನೆ ಮಂಡಿಸುತ್ತಾ ಆರೋಗ್ಯಮಂತ್ರಿ ಶ್ರೀ. ಎ ಬಿ. ಸೆಟ್ಟರು ಸಂಬಂಧಪಟ್ಟ ವಿಷಯಗಳನ್ನೆಲ್ಲಾ ವಿವರಿಸಿ ಸುದೀರ್ಘ ಭಾಷಣವಿತ್ತರು. "ಮಂತ್ರಿತ್ವ ರಾಷ್ಟ್ರಗಳ ಸ್ಥಿತಿಗತಿಗಳೊಡನೆ ಹೋಲಿಸಿದರೆ ನಮ್ಮ ಪ್ರಾಂತ್ಯದಲ್ಲಿರುವ ಪಾಶ್ಚಾತ್ಯರ ಮತ್ತು ವೈದ್ಯಕೀಯ ಅನುಕೂಲತೆಗಳ ಸಂಖ್ಯೆ ಮತ್ತು ಪರಿಮಾಣವು ಅಗತ್ಯವಿರುವದಕ್ಕಿಂತ ಎಷ್ಟೋ ಕಡಿಮೆಯಿದೆ. ಬಹುತೇಕವಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ನಿಯಮಿತ್ರಂಖ್ಯೆಗಿಂತ ಹೆಚ್ಚಿಗೆ ರೋಗಿಗಳು ತುಂಬಿದ್ದಾರೆ. ಆಸ್ಪತ್ರೆಗಳ ಮಂಚಗಳ ಮತ್ತು ಚಿಕಿತ್ಸಕ ವರ್ಗದ ಸಂಖ್ಯೆ ಹೆಚ್ಚಿಸುವ ವಿಧಾನಗಳನ್ನು ಈ ಆಯವ್ಯಯ ಪಟ್ಟಿಯು ಒಳಗೊಂಡಿದೆ. ನಮ್ಮ ಕೆಲವು ವೈದ್ಯಕೀಯ ಸಂಸ್ಥೆಗಳು ಅಖಿಲ ಭಾರತದಲ್ಲೇ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟಿರುವುದು ಹೆಗ್ಗಳಿಕೆಯ ವಿಷಯ. ಮೆಡಿಕಲ್ ಕಾಲೇಜಿಗೆ ಪ್ರವೇಶಯಾಚಿಸುವ ವಿದ್ಯಾರ್ಥಿಗಳ ಅರ್ಜಿಗಳು ಅಲ್ಲಿಯವ ಸ್ಥಳನುಕೂಲತೆಗಿಷ್ಟೋ ಮಿಕ್ಕಿವೆ. ಸದ್ಯಸ್ಥಿತಿಯಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಅನುಕೂಲತೆಯಿಲ್ಲವಾದ್ದರಿಂದ ಇದ್ದ ಕಾಲೇಜುಗಳ ಅನುಕೂಲತೆ ವಿಸ್ತರಿಸುವ ಕೆಲಸಗಳು ನಡೆದಿವೆ. ಪ್ರಾಂತ್ಯದಲ್ಲಿ ಈಗಲೇ 13 'ರಕ್ತಬೇಂಕು'ಗಳಿದ್ದು, ಹೆಚ್ಚಿಗೆ 8ನ್ನು ತೆರೆಯುವ ಸೂಚನೆಗಳು ಪರ್ಯಾಲೋಚನೆಯಲ್ಲಿವೆ. ಕ್ಷಯರೋಗ ಚಿಕಿತ್ಸೆಗಾಗಿ ತಂಬಾರಂ ನಲ್ಲಿ ಹೊಸಕಟ್ಟಡಗಳನ್ನು ಕಟ್ಟಿಸಿ, ಹೆಚ್ಚಿನ 450 ರೋಗಿಗಳಿಗೆ ಪ್ರವೇಶ ಕೊಡಲಾಗುವಂತೆ ಮಾಡಲಾಗುವದು. ಅಲ್ಲದೆ ಕ್ಷಯ ಪೀಡಿತರಿಂದಿದವರ ಪುನರ್ವಸತಿಗಾಗಿ ಒಂದನ್ನು ಈ ವರುಷ ಹೊತಾಗಿ ಆಲ್ಲಿತೆರೆಯಲಾಗಿದೆ. ಪೆರುಂದಾಯ ಸೆನಿಟೋರಿಯಮಿನಲ್ಲಿ ಹೆಚ್ಚಿಗೆ 62 ಮಂಚಗಳನ್ನು ಸೇರಿಸಲಾಗುವದಲ್ಲದೆ ತಂಜಾವೂರಿನಲ್ಲಿ ಒಂದು ಸೆನಿಟೋರಿಯಮ್ ತೆರೆಯಲು ನಿರ್ಣಯವಾಗಿದೆ. ಸಾರ್ವಜನಿಕ ಸಹಾಯದಿಂದ ದಕ್ಷಿಣ ಕನ್ನಡ, ಮಧುರಾ, ರಾಮನ್ನಾಡು, ನೆಲ್ಲೂರುಗಳಲ್ಲು ಕ್ಷಯ ಚಿಕಿತ್ಸಾಲಯಗಳನ್ನು ತೆರೆಯುವ ಸೂಚನೆಗಳಿವೆ" ಎಂದು ವಿವರಿಸಿದರು. ಅಂತೆಯೇ ಬಿ.ಪಿ.ಜಿ. ದಾಕ್ಯು, ಮತ್ತು ಕುಷ್ಠರೋಗ ಚಿಕಿತ್ಸಾಲಯಗಳ ಪರಿಚಯವನ್ನು ಅಂಕೆ ಸಂಖ್ಯೆಗಳೊಡನೆ ಮಾಡಿಕೊಟ್ಟರು. ಬೇಗಮ್ ಅಮೀರುದ್ದೀನ್, ಡಾ. ಯಸ್. ಸುಬ್ರಹ್ಮಣ್ಯ ಅಯ್ಯರ್, ಅಬ್ದುಲ್ ಹಮೀದ್ ಖಾನ್, ಶ್ರೀಮತಿ ಲಕ್ಷ್ಮಿ ಭಾರತಿ, ರಾಮಲಿಂಗಾಸ್ವಾಮಿ, ಡಿ ವಿ ರಾಮಸ್ವಾಮಿ, ಹಾಜಿ ಹುಸ್ಸೇನ್, ಮೊದಿನ್ ಕುಟ್ಟಿ, ಜಿ. ರಾಜಮನ್ನಾರ್ ಮೊದಲಾದವರ ಟೀಕೆ, ಸೂಚನೆಗಳು ಇದ್ದುವು. ಆರೋಗ್ಯ ಮಂತ್ರಿಗಳು ಉತ್ತರವಿತ್ತ ಮೇಲೆ ಗ್ರಾಂಟು ಮಂಜೂರಾಯಿತು.

'ಸಾರ್ವಜನಿಕ ಆರೋಗ್ಯ' ಖಾತೆಯ ವೆಚ್ಚಕ್ಕಾಗಿ ರೂಪಾಯಿ 1,00,17,900 ಗ್ರಾಂಟು ಬೇಡಿಕೆಯನ್ನು ಆ ಖಾತೆಯ ಮಂತ್ರಿ ಶ್ರೀ. ಎ. ಬಿ ಸೆಟ್ಟರು ಮುಂದಿಟ್ಟರು. ಮಿಕ್ಕೆ ಪ್ರಾಂತ್ಯಗಳಿಗಿಂತ ಮದ್ರಾಸ್ ಪ್ರಾಂತ್ಯದ ಆರೋಗ್ಯ ಸ್ಥಿತಿ ಉತ್ತಮವಿದೆಯಾದರೂ ಇ.ಪ್ರಾ ಕಾಮದಕ್ಕಿಂತ ಎಷ್ಟೋ ಕೆಳಸ್ಥಿತಿಯಲ್ಲಿದೆಯೆಂದೂ ಆರೋಗ್ಯ ಖಾತೆಯ ಸಾಧನೆ ರ ಹೆಚ್ಚಿನ ಲಕ್ಷ್ಯವು ಮಲೇರಿಯಾ ಮೊದಲಾದ ಅಂಟುರೋಗಗಳ ನಿವಾರಣೆಯ ಕಡೆಗೆನೇ ಬೀಳಬೇಕಾಗಿದೆಯೆಂದೂ ವಿವರಿಸಿದರು. ಪ್ರಾಂತ್ಯದಲ್ಲಿ ನಾವು ಪರಮಾಣ ಹೆಚ್ಚುತ್ತಿರುವುದು:— ಹಳ್ಳಿಗಾಡುಗಳಲ್ಲಿ ನೀರಿನ ಸಂಬಂಧವು ಕೊರತೆಯುಳಿದಿರುವುದೇ ಮುಂತಾದ ಹಲವು ಸಂಗತಿಗಳ ಕಡೆಗೆ ಸರಕಾರದ ಲಕ್ಷ್ಯವನ್ನೆಳೆದು ಹಾಗೂ ಜವಲಾಯ್ಯ, ಆರ್. ಸುಬ್ಬಯ್ಯ, ಆರ್. ಎ. ಅನ್ಸಾರಿ, ಎ. ಕೃಷ್ಣಸ್ವಾಮಿ ರಾವ್, ಮಹಮ್ಮದ್ ಶಮ್ಸುದ್ದೀನ್, ಯಾ ನಾಗಪ್ಪ, ಕೆ. ಎ ಮ್. ಶೇಕ್ ಸಾಹೇಬ್, ಎ. ವಿ. ಕುಟ್ಟಿಮಾಲು ಅಮ್ಮು, ಡಾ! ಸುಬ್ರಹ್ಮಣ್ಯಮ್ ಡಾ! ಡಿ ಯಸ್ ರಾಮಚಂದ್ರನ್ ಕೆ. ಪೊಣ್ಣಯ್ಯ ಗೌಂಡರ್, ಎನ್ ವೆಂಕಟ ಸುಬ್ಬಯ್ಯ ಮೊದಲಾದವರು ಟೀಕೆಗಳನ್ನಾಡಿದ್ದರು. ಆರೋಗ್ಯ ಮಂತ್ರಿಗಳು ಸವಿವರವಾದ ಉತ್ತರವಿತ್ತ ಮೇಲೆ ಗ್ರಾಂಟು ಮಂಜೂರಾಯಿತು.

ಚಿಕಿತ್ಸಾಯ ವಿಭಾಗ

ಚಿಕಿತ್ಸಾಯ ಖಾತೆಯ ವೆಚ್ಚವಾಗಿ ರೂ 1,36,22,600ರ ಗ್ರಾಂಟು ಬೇಡಿಕೆಯ ಸೂಚನೆ ಮುಂದಿಡುತ್ತಾ ಚಿಕಿತ್ಸಾಯ ಖಾತೆಯ ಮಂತ್ರಿ ಶ್ರೀ. ಕೆ. ಮಾಧವ ಮೆನನ್‌ರವರು, ದೊಡ್ಡ ಪ್ರಮಾಣದ ಸೇವಾ ವರ ಯೋಜನೆಗಳನ್ನು ಕೈಕೊಳ್ಳಬೇಕಿದ್ದ ಪ್ರಾಂತ್ಯವನ್ನು ಆಡಂಬಿಮಂಬಲ್ಲಿ ಸ್ವಾವಲಂಬಿ ಪ್ರಾಂತ್ಯವಾಗಿ ಮಾರ್ಪಡಿಸಿದ್ದು ದುಸ್ಸಾಧ್ಯವೆಂಬುದನ್ನು ಒಪ್ಪಿ ಹೇಳಿದರು. ಅಂತ್ಯಾಂಗದಲ್ಲಿ 5.5 ಲಕ್ಷ ಟನ್ನುಗಳಷ್ಟು ಅಕ್ಕಿಗೆ ಅಕ್ಕಿ ಬೆಳೆಯುವಂತೆ ಮಾಡುವ 16 ಹೊಚಿಕೆಗಳನ್ನೊಳಗೊಂಡ ಸಂಘ ಸಾ ಯೋಜನೆಯೊಂದನ್ನು 1947-48ರಿಂದ

ಅಮೃತಾಂಜನ

ತಲೆವೇದನೆ, ಶರೀರವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ ಎಜೆನೇವ್ಸ್,ಫಾಯಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಪಕ್ಷವಾತ,ಪೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REDG

ಪುಳುಕಡ್ಡಿ ಮದ್ದುಸಪ್ಲೈಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಟೀಪರಿಜಾಯ ಮತ್ತು ಕಲ್ಕತ್ತ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: ೧೯೦೬

[ಹೊಳ್ಳಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು.]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ದ ಗುಣಕಗಳಲ್ಲಿ ೭೦ನೇ ಸಪ್ತೆಂಬರ್ ೧೯೪೯ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ.

೨ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ರಿಂದ ೫ ತಿಂಗಳು ,, ,, ೨॥
೬ರಿಂದ ೯ ತಿಂಗಳು ,, ,, ೩॥

ರೂ. ೧೦೦೦ಕ್ಕಿಂತ ಕದಮೆಯಲ್ಲದ ರೂ. ೧೦,೦೦೦ಗಿಂತ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಮಗೆ ಸಮಿಪವರಿಯ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

ಮೆನೆಜರ್ಸ್: ಬಾವಟಿ ಗುಡ್ಡೆ, ಮಂಗಳೂರು.

ಇತರ ಶಾಖೆಗಳು:—

ಮಂಗಳೂರು ಸಿಟಿ, ಮಂಗಳೂರು ಬಂದರ, ಕುಂದಾಪುರ, ಗಂಗೊಳ್ಳಿ, ಉಡುಪಿ, ಮುಲ್ಕಿ, ಕಾರ್ಕಳ, ಬಂಟವಾಳ, ಪುತ್ತೂರು, ಕಾಸರಗೋಡು, ಇತ್ಯಾದಿ, ಇತ್ಯಾದಿ.

The Canara Bank Limited.

ESTD: 1906.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ನಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Padananda Rao, Kanjoor,
Manager.

—ಆಡಳಿತ ಸ್ಥಿತಿಗತಿ

ಪ್ರತಿ ಇಲಾಖೆಯ ಗತಿ ನಿರೂಪಣೆ.

1951-52ರ ವರೆಗಿನ ಅವಧಿಗಾಗಿ ಕೈಕೊಳ್ಳಲಾಗಿದೆಯೆಂಬುದನ್ನು ವಿವರಿಸಿದರು. ವೆಂಕಟರಾಮ ಅಯ್ಯರ್, ಹಾಜಿ ಹುಸ್ಸೇನ್, ವೆಂಕಟ ರತ್ನಮ್, ಅಬ್ದುಲ್ ಪುಟೇದ್, ಚಿದಂಬರಮ್ ಅಯ್ಯರ್, ಕೆ. ಭಾಷ್ಯಮ್, ಯಸ್. ಇಸ್ಮಾಯಿಲ್, ಪರಮಾನಂದ ನಾಯರ್, ರಾಘವೇಂದ್ರ ಜನ್ನಾರಿ, ಸುಬ್ಬಣ್ಣ ಗೌಂಡರ್, ಕುಮಾರ ಸ್ವಾಮಿ, ಪಳನಿ ಸ್ವಾಮಿ ಗೌಂಡರ್, ಸ್ವಾಮಿ ಸಹಜಾನಂದ ಮುಂತಾದವರ ಟೀಕೆ, ಸೂಚನೆಗಳಾದುವು. ಬೇನಾಯ ಮಂತ್ರಿಗಳು ಉತ್ತರವಿತ್ತರು. ಗ್ರ್ಯಾಂಟು ಬೇಡಿಕೆ ಮಂಜೂರಾಯಿತು.

ವಿದ್ಯಾವಿಭಾಗ

"ಶಿಕ್ಷಣ" ಖಾತೆಯ ವೆಚ್ಚಕ್ಕಾಗಿ ರೂ. 9,45,29,800ರ ಗ್ರ್ಯಾಂಟು ಯಾಚನಾ ಸೂಚನೆ ಮುಂದಿಡುತ್ತಾ ವಿದ್ಯಾಮಂತ್ರಿ ಶ್ರೀ ಟಿ. ಯಸ್. ಅವಿನಾಶಲಿಂಗಮ್ ಗವರ್ ಜೆಟ್ಟಿಯಾರರು ಶಿಕ್ಷಣ ಧೋರಣೆ ಮತ್ತು ಆ ಸಂಬಂಧದ ವಿದ್ಯಮಾನಗಳನ್ನು ವಿವರಿಸಿದರು: "ಸ್ಪೃಹಣೀಯ ಶಿಕ್ಷಣ ಕ್ರಮವೆದ್ದೂರುವ ಮೋಸಗಳು ನಮಗೆ ಸುಪರಿಚಿತವಿವೆ. ಅದು ಪುಸ್ತಕಜ್ಞಾನವನ್ನಷ್ಟೆ ಕೊಡುವಂತಹದು; ಕಾರಕೂನ ಯಂತ್ರಗಳನ್ನು ನಿರ್ಮಿಸಿ ಹಾಕುವಂತಹದು-ಜನತೆಯ ಜೀವನೋಪಯೋಗಿ ಸಲಕರಣೆಗಳನ್ನು ಅದು ಒಗಿದು ಕೊಡವದಿಲ್ಲ- ನಾಗರಿಕ ಕರ್ತವ್ಯಕ್ಕೆ ಅದು ಅಲ್ಲಲ್ಲು- ಮುಂತಾದ ದೂರುಗಳು ಸರ್ವಸಾಮಾನ್ಯ. ನಮ್ಮ ಜನತೆಯ ಹುಟ್ಟುಸ್ವಭಾವಕ್ಕೆ ಗನುಕೂಲವಾಗಿ ಈ ಶಿಕ್ಷಣ ಕ್ರಮವಿಲ್ಲವೆಂಬ ಕೂಗಿಗೆ ಹಲವು ಶಿಕ್ಷಣತಜ್ಞರು ನಮ್ಮ ಗವರ್ನಮೆಂಟನ್ನೆ ಗುರಿಮಾಡಿದ್ದಾರೆ. ರಾಷ್ಟ್ರೀಯ ಕರ್ತವ್ಯಗಳಿಗೆ ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾ ಬಂದಿದ್ದರು; ಹಲವು ವಿದ್ಯಾಸಮಿತಿ, ಕಮಿಶನುಗಳೂ ಇದಕ್ಕಾಗಿ ನೇಮಕಗೊಂಡಿದ್ದುವು. ಶಿಕ್ಷಣ ವಿಧಾನದ ಮುಖ್ಯವಿಷಯಗಳ ಸಂಧಾನೆಯು ಸಂಬಂಧವಾಗಿ ಜನಾಭಿಪ್ರಾಯ ತಿಳಿಯಲು ನಮ್ಮ ಸರಕಾರ ಕೂಡಾ ಒಂದು ಪ್ರಶ್ನಾವಳಿಯನ್ನು ಪ್ರಕಟಿಸಿದ್ದಿತು. ಸರಕಾರದ ಪ್ರೇರಣೆಯಂತೆ 'ಸೆಕೆಂಡರಿ ಎಜ್ಯುಕೇಶನ್ ಬೋರ್ಡ್' ಈ ವಿಷಯಗಳನ್ನು ಪರ್ಯಾಲೋಚಿಸಿ 'ತಜ್ಞರ ಸಮಿತಿ' ಯೊಂದನ್ನು ನೇಮಿಸಿತು. ಈ ಸಮಿತಿಯು ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ ತನ್ನ ಶಿಫಾರಸುಗಳನ್ನು ಇತ್ತಿತು. ಆ ಶಿಫಾರಸುಗಳು 'ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನಲ್ಲೂ ಆನಂತರ ಪ್ರಾಂತೀಯ ಎಜ್ಯುಕೇಶನ್ ಎಡ್ವೈಸರಿ ಬೋರ್ಡಿನಲ್ಲೂ ಮಂಜೂರಾಗಿ, ವಿವಿಧ ವಿಷಯಗಳ 'ಸಿಲೆಬಸ್'ಗಳನ್ನು ತಯಾರಿಸಲಾಗಿ ಕವಿಟಗಳು ಕಲಸ ಮಾಡಿ, ಅವುಗಳ ತಯಾರಿಕೆಗಳೂ ಸೆಕೆಂಡರಿ ಎಜ್ಯುಕೇಶನ್ ಬೋರ್ಡ್ ಮತ್ತು ಎಡ್ವೈಸರಿ ಬೋರ್ಡ್‌ಗಳಲ್ಲಿ ಮಂಜೂರಾಗಿವೆ" ಎಂದು ವಿದ್ಯಾಮಂತ್ರಿಗಳು ಶಿಕ್ಷಣ ಪದ್ಧತಿಯ ಸುಧಾರಣಾ ಹಂಚಿಕೆಗಳನ್ನು ವಿವರಿಸಿದರು. ಸಮಾಜದ, ರಾಷ್ಟ್ರದ ಯೋಗ್ಯ ಸದಸ್ಯನಾಗುವಂತೆ ಮಾಡಿ ವ ನಾಗರಿಕ ಶಿಕ್ಷಣ-ನಿಶ್ಚಿತ ಧೋರಣೆಯಾಗಿ ಸರಕಾರ ಕೈಕೊಂಡಿರುವ ಮೂಲಭೂತ ಶಿಕ್ಷಣ (Basic Education) ಕೈಗಾರಿಕ ಶಿಕ್ಷಣ-ಇತ್ಯಾದಿಗಳ ರೂಪರೇಷೆಗಳನ್ನೂ ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿರುವ ಕೊರತೆಗಳ ನಿವಾರಣೆ ಮತ್ತು ಕಾಲೇಜುಗಳಲ್ಲಿ ಬರಬೇಕಾದ ಶಾಸ್ತ್ರೀಯ ಸಂಶೋಧನಾ ವಿಧಾನಗಳ ವ್ಯವಸ್ಥೆಯನ್ನೂ ತಿಳಿಸಿದರು. ವಿದ್ಯಾದಾನ ಕ್ಷೇತ್ರದಲ್ಲಿ ಕಳದ ಐದು ವರುಷಗಳಲ್ಲಿ ಕ್ರಮಶಃ ಆಗುತ್ತಾ ಬಂದಿರುವ ವೃದ್ಧಿಯ ಅಂಕೆ ಸಂಖ್ಯೆಗಳನ್ನು ಮುಂದಿಟ್ಟರು. ಹೀಗೆ ಪುನರ್ಧರ್ಮಾನವಾಗುತ್ತಾ ಬಂದ ಮದ್ರಾಸ್ ಪ್ರಾಂತ್ಯದ ವಿದ್ಯಾದಾನ ಮಂದಿರಗಳ 1948-49ರ ಸಂಖ್ಯೆ ಹೀಗಿದೆ:-

ಎಲಿಮೆಂಟರಿ ಶಾಲೆಗಳ ಸಂಖ್ಯೆ 36, 668. ವಿದ್ಯಾರ್ಥಿಗಳ ಸಂಖ್ಯೆ. 3, 820, 000; ವೆಚ್ಚ ರೂ. 5,87, 60, 800. ಸೆಕಂಡರಿ ಶಾಲೆಗಳು 1,041; ವಿದ್ಯಾರ್ಥಿಗಳು 493,729. ವೆಚ್ಚ 91,42,800. ಟ್ರೇನ್ಡ್ ಮತ್ತು ಟ್ರೈನಿಂಗ್ ಕಾಲೇಜುಗಳು 68; ವಿದ್ಯಾರ್ಥಿಗಳು 38,000; ವೆಚ್ಚ ರೂಪಾಯಿ 38, 28,800. ಇಂಜಿನೀಯರಿಂಗ್ ಕಾಲೇಜುಗಳು 4; ವಿದ್ಯಾರ್ಥಿಗಳು 1656; ವೆಚ್ಚ 37,37,300. ಪ್ರಾಥಮಿಕ ವಿದ್ಯಾರ್ಥಿನಿಲಯಗಳ ಸಂಖ್ಯೆಯು 1944-45ರಿಂದ 1948-49ಕ್ಕೆ ಸುಮಾರು ಸೇಕಡಾ 25ರಷ್ಟು ಹೆಚ್ಚಿರುವುದನ್ನು ಎತ್ತಿ ಹೇಳಿ ಸರಕಾರವು ಪ್ರಾದೇಶಿಕ ಭಾಷೆಗಳ ಪ್ರಗತಿಗೆ ಕೊಟ್ಟಿರುವ ಬೆಂಬಲ ಮತ್ತು ಅವಕಾಶಗಳನ್ನು ವಿದ್ಯಾಮಂತ್ರಿಗಳು ವಿವರಿಸಿದ್ದರು. ಬೇಗವ್. ಅಮಿರುದ್ದೀನ್, ಹಮೀದ್ ಖಾನ್, ತಂಗಸ್ವಾಮಿ ನಾಡರ್, ರಾಮಸ್ವಾಮಿ ನಾಯ್ಡು, ಕುಮಾರನ್, ಡಬ್ಲ್ಯು. ಜೆ. ಫೆರ್ನಾಂಡಿಸ್, ಅನ್ವರ್, ಗೋವಿಂದ ಮೆನನ್, ಆರ್. ಪಿ. ಅಣಸ್ವಾಮಿ, ಎಮ್. ಜೆ. ಸಾಮುವೇಲ್, ಎಮ್ ಯಸ್. ಎ. ಮಜೀದ್. ಮುನಿಸ್ವಾಮಿ ಪಿಳ್ಳೈ, ಮಜಬೂರ್ ಅಲಿ, ಎಲ್. ಸಿ. ಗಾಯಸ್, ಎಮ್. ಯಸ್. ಅಲಾವುಲ್ಲಾ, ಕಾವೇಶ್ವರರಾಮ್, ಪೈದಿನ್ ಕುಟ್ಟಿ, ದೇವನಾಯಕಯ್ಯ, ಮಹಿಮ್ ಶಮ್ಮಾಡ್, ಹಾಜಿ ಅಬ್ದುಲ್ ಖಾದರ್ ಇವರುಳಿ, ಇನ್ನಾಯಿಲ್ ಖಾನ್ ಮೊದಲಾದವರಿಂದ ಸರಕಾರದ ವಿದ್ಯಾಧೋರಣೆ ಮತ್ತು ವಿಧಾನಗಳ ಕುರಿತು ಖಂಡನೆ, ಏವರ್ಸ್‌ಹೂಜನೆಗಳಾದುವು. ವಿದ್ಯಾಮಂತ್ರಿಗಳು ಸಮರ್ಪಕ ಉತ್ತರವಿತ್ತಮೇಲೆ 'ಗ್ರ್ಯಾಂಟು' ಮಂಜೂರಾಯಿತು.

ಮೂಲಾಧಿಕಾರಿಗಳ ವೆಚ್ಚ

"ಪ್ರಾಂತ್ಯದ ಆಗ್ಯಾಧಿಪತಿಗಳ, ಮಂತ್ರಿಗಳ ಮತ್ತು ಮುಖ್ಯ ಕಾರ್ಯಾಲಯ ನಿರ್ವಾಹಕರ" ಸಂಬಳ ಇತ್ಯಾದಿಗಳಿಗಾಗಿ ರೂ. 49,95,600 ರ ಗ್ರ್ಯಾಂಟು ಬೇಡಿಕೆಯ ಸೂಚನೆಯನ್ನು ಆರ್ಥಿಕ ಮಂತ್ರಿ ಮತ್ತು ಸಭಾ ನಾಯಕ ಶ್ರೀ ಬಿ. ಗೋಪಾಲರೆಡ್ಡಿಗಳು ಮುಂತಂದರು. '1948ನೇ ಸೆಪ್ಟೆಂಬರ್ 7ರಲ್ಲಿ ಪ್ರಾಂತ್ಯದ ಗವರ್ನರ್ ಹುದ್ದೆಗೇರಿದ್ದ ಭವನಗರದ ಮಹಾರಾಜರು ಇಪ್ಪತ್ತರಲ್ಲೇ ಅತ್ಯಂತ ಜನಪ್ರೀತರಾಗಿದ್ದಾರೆ. ಸರಕಾರದಿಂದ ಅವ್ಯಕ್ತ ಪ್ರೇರಣೆ ಕೂಡಾ ಹೋಗದಿದ್ದರೂ ಅವರು ತಾವಾಗಿ ತಮ್ಮ ಮತ್ತು ತನ್ನ ಸಿಬ್ಬಂದಿ ಸಂಬಳ ಹಾಗೂ ವೆಚ್ಚಗಳನ್ನು ತಗ್ಗಿಸಿಕೊಂಡಿದ್ದಾರೆ. ಪದ್ಧತಿ ಪ್ರಕಾರ ಗವರ್ನರರ ಸಂಬಳ ತಿಂಗಳಿಗೆ ರೂ. 10000 ವಿದ್ದುದು ಈಗ 5500 ಅಥವಾ ವರುಷಕ್ಕೆ 66000 ಮಾತ್ರವಿದೆ. ಗವರ್ನರ್ ಕಾರ್ಯಾಲಯದ ವೆಚ್ಚವು ವರುಷಕ್ಕೆ ರೂ. 1,12,000 ಇದ್ದುದು ಈಗ ಕೇವಲ ರೂಪಾಯಿ 56,000 ಮಾತ್ರವಿದೆ. ಗವರ್ನರರ ಮುನೇ ನಾಕರ್ ವರ್ಗ, ವೈದ್ಯಕೀಯ ವೆಚ್ಚ ಮೊದಲಾದುವುಗಳಿಗೆ ವರ್ಷಾವಧಿ ರೂ. 6,58 ಲಕ್ಷ ತಗಲುತಿತ್ತು; ಈಗ ಅದು 2.58 ಲಕ್ಷಕ್ಕೆ ಇಳಿದಿದೆ. ಮೂ 1,94 ಲಕ್ಷವಿದ್ದ ಗವರ್ನರರ ಸಂಚಾರ ವೆಚ್ಚವೀಗ ರೂ. 1.75 ಲಕ್ಷವಾಗಿದೆ. 'ಗವರ್ನರ್, ಅವಂ ನೌಕರ ಮಂಡಲಿ ಮತ್ತು ವೆಚ್ಚಗಳಿಗಾಗಿ ಪ್ರಾಂತ್ಯದ ವೇಲೆ ಈ ತನಕ ರೂ. 12.6ರ ಲಕ್ಷಗಳ ವಾರ್ಷಿಕ ವ್ಯಯ ಬೀಳುತಿತ್ತು. 1949-50ನೇ ವರುಷದ ಈ ಆಯವ್ಯಯ ಪಟ್ಟಿಯಲ್ಲಿ ಅವಕ್ಕಾಗಿ ವೀಸಲಿಟ್ಟಿರುವುದು ರೂ. 7.07 ಲಕ್ಷ ಮಾತ್ರ. ಹೀಗಾಗಿ ಈ ಮೂಲಕ ಪ್ರಾಂತ್ಯಕ್ಕೆ 5.31 ಲಕ್ಷ ರೂಗಳು ಉಳಿದವು" ಎಂದು ಶ್ರೀ ಗೋಪಾಲರೆಡ್ಡಿಗಳು ಸ್ಥಿತಿ ನಿರೂಪಣೆಮಾಡಿದರು. ವಿರುದ್ಧ ಪಕ್ಷದ ನಾಯಕ ಶ್ರೀ. ಉಸ್ಮಾನ್, ಗೋಪಾಲ ಸ್ವಾಮಿ, ರಾಜಾ ಖಾನ್, ಅನ್ವರ್, ರುಕ್ಮಿಣಿ ಲಕ್ಷ್ಮೀಪತಿ, ತಾತಾಚಾರಿ, ಎಂ. ಎ. ಸಲಾಮ್, ಅಬ್ದುಲ್ ಮುಹಮದ್, ವೈದಾ ವೆಂಕಟನಾರಾಯಣ, ಜೆ. ಫರ್ನಾಂಡಿಸ್ ಅಲ್ಲೂರಿ ಸತ್ಯನಾರಾಯಣ ರಾಜು, ಕೋಸಲ್ಯಮ್ಮ, ವೆಂಕಟೆಮ್ಮಣಯ್ಯ ರೆಡ್ಡಿ, ರಾಘವ ಮೆನನ್, ಮೊದಲಾದವರು ಮದ್ರಾಸಿನ ಇಂದಿನ ಮಂತ್ರಿಗಳ ಆಡಳಿತೆಯ ದೌರ್ಬಲ್ಯಗಳನ್ನು ಕರಿಣವಾಗಿ ಟೀಕಿಸಲು ಈ ಸಂದರ್ಭವನ್ನು ಉಪಯೋಗಿಸಿಕೊಂಡರು. ಪ್ರತ್ಯೇಯತೆ, ಪಕ್ಷವಾತತೆ ಮತ್ತು ದೌರ್ಬಲ್ಯದ ಆರೋಪಗಳು ಮಂತ್ರಿಗಳಿಗೆ ಅನ್ವಯವಾಗಿದ್ದುವು. ಸಭಾನಾಯಕ ಶ್ರೀ. ಗೋಪಾಲರೆಡ್ಡಿಗಳು ಸ್ಪೂರ್ತಿಯುತ್ತವಾಗಿ ಸವಿವರವಾಗಿ ಉತ್ತರವಿತ್ತಮೇಲೆ ಗ್ರ್ಯಾಂಟುಬೇಡಿಕೆ ಮನ್ನಣೆ ಪಡೆಯಿತು.

ಉದಾತ್ತ ಲಾಭದಾಯಕ ಮಾರಾಟ

ನಮ್ಮ ಕಂಪೆನಿಯ ಮ್ಯಾಲುಗಳನ್ನು ಜನಸಾಮಾನ್ಯರಲ್ಲೂ ಪ್ರಚಾರಗೊಳಿಸುವ ನಿಮಿತ್ತವಾಗಿ ಹೊಸ ಬಗೆಯಾದ ಒಡವೆಗಳನ್ನು (ತಾಜಾ ಬಂಗಾರಕ್ಕೆ ಸರಿ ಹೋಲುವ) ಮಾರಾಟ ಮಾಡಲು ನಿರ್ಧರಿಸಿರುವೆವು. 1 ಕೊರಳಸರ, 4 ಬಳೆಗಳು, ಒಂದು ಜೊತೆ ಕಿವಿ ಒಂಟಿ ಮತ್ತು 2 ಉಂಗುರಗಳಿರುವ ಸ್ಯಾಂಪಲ್ ಸೆಟ್ಟಿಗೆ ಬೆಲೆ ರೂಪಾಯಿ 27/ ಇದ್ದಾಗ್ಯೂ ಖಾಲಿ ರೂಪಾಯಿ 6-8-0ಕ್ಕೆ ಇಳಿಸಲಾಗಿದೆ. ಸಮಾಧಾನವೆಂದರೆ ಕೊಟ್ಟ ಹಣ ವಾಪಾಸು ಕೊಡಲಾಗುವುದು.

ಇಂದೇ ಆರ್ಡರು ಕೊಡಿರಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲೆ.

House of Commerce 74, G. B. Road. (3082)
DELHI.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಆತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ಜೀವಾ ಸಂಸ್ಥೆಗಳಲ್ಲೊಂದು.

ಸ್ಥಾಪಕರು ನಿರ್ವಾಹಕರು:

ಕೊಂಪ್ಟೋಇರ್ ಬ್ರದರ್ಸ್ ಲಿಮಿಟೆಡ್. ಉಡುಪಿ

ಇವರ ಶಾಖಾ ಕಛೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು

ಕಳದ ಮೂವತ್ತೈದು ವರುಷಗಳಿಂದ ಜೀವಾ ಕ್ಷೇತ್ರದಲ್ಲಿ ಸತತ ಕ್ರಿಯಾಶೀಲವಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸುತ್ತಿದ್ದೇವೆಂಬುದೇ ನಮ್ಮ ಹೆಗ್ಗಳಿಕೆಯು ಮಾತು.

ವಿಮಾ ಮಾಡಲಿತ್ಯಾಗಲೀ, ಪ್ರತಿನಿಧಿ ಪದವಿ ಯಲಿತ್ಯಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಪ್ರೌಢಮತದಾರರ ಪಟ್ಟಿ

'ಶಾಸನ ಸಭಾಂಗಗಳ ವೆಚ್ಚ ಬಾಬ್ತಿಗಾಗಿ ರೂ. 28,63,600ಕ್ಕೆ ಮಿಕ್ಕಿದ್ದ ಬೇಡಿಕೆ ಮುಂದಿಡುತ್ತಾ ಅರ್ಥ ಮಂತ್ರಿ ಶ್ರೀ. ಬಿ. ಗೋಪಾಲರೆಡ್ಡಿಗಳ' ಪ್ರಾಯಸ್ಥರೆಲ್ಲರ ಮತದಾರರಪಟ್ಟಿ ತಯಾರಿಯ ಮಟ್ಟಿಗೆನಡೆದಕಾರ್ಯಗಳನ್ನು ವಿವರಿಸಿದರು. ಈ ವರೆಸಾಂತ್ಯದೊಳಗೆ ಪೂರ್ಣ ಪಟ್ಟಿತಯಾರಾಗುವದೆಂದು ತಿಳಿಸಿದರು. 'ಇಡೀ ಪ್ರಾಂತ್ಯದಲ್ಲಿ 2,57,49,856 ಮಂದಿ ಮತದಾರ ಪಟ್ಟಿಗೆ ಸೇರಿಸಲ್ಪಟ್ಟಿದ್ದಾರೆ. ಅಂದರೆ ಪ್ರಾಂತ್ಯದ ಒಟ್ಟು ಅಂದಾಜುಸಂಖ್ಯೆಯ ಶೇಕಡಾ 48 ರಷ್ಟು ಜನ ಮತದಾರರಾದಂತಾಯಿತು. ಪ್ರತಿಯೊಂದು ಜಿಲ್ಲೆಯ ಜನಸಂಖ್ಯೆ ಮತ್ತು ಅಲ್ಲಿಮತದಾರರಾದವರ ಬಗ್ಗೆವಾರು ಶಯವು ಮದ್ರಾಸ್‌ನಗರದ ಸೇಕಡಾ41.7 ರಿಂದಾರಂಭಿಸಿ ನೆಲ್ಲೂರು ಮತ್ತು ಕೃಷ್ಣಾಜಿಲ್ಲೆಗಳಸೇ. 51ರ ವರೆಗಿದೆ.'(ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯನ್ನೂರರಲ್ಲಿ 43.2ರಷ್ಟು ಮಂದಿ ಮತದಾರರಾಗಿದ್ದಾರೆ.) ಈ ಗಿನ ಮತದಾರ ಪಟ್ಟಿಯು ಕೊನೆಯದಲ್ಲ, ಈ ಪ್ರಥಮ ಪಟ್ಟಿಯನ್ನು ಸಕಾಲದಲ್ಲಿ ಪ್ರಕಟಿಸಿ, ಆಕ್ಷೇಪಗಳನ್ನೂ ಬಿಟ್ಟು ಹೋದ್ದಹೆಸರುಗಳನ್ನೂ ಪಡಕೊಳ್ಳುವರೆ ಒಂದು ಅವಧಿ ನಿಶ್ಚಯಿಸಲಾಗುವದು. ಪ್ರೌಢ ಮತದಾರ ಪಟ್ಟಿ ತಯಾರಿಗೇನೇ ಸುಮಾರು ರೂ. 57 ಲಕ್ಷ ಖರ್ಚುತಗಲಬಹುದೆಂದು ಅಂದಾಜಾಗಿದೆ" ಎಂದು ಶ್ರೀ ಬಿ. ಗೋಪಾಲರೆಡ್ಡಿಗಳು ವಿವರಿಸಿದರು. ವಿರುದ್ಧ ಪಕ್ಷದ ನ್ಯಾಯಕ ಮನಮ್ಮದ್ ಇಸ್ಮಾಯಿಲ್ ಕಡಿತ ಸೂಚನೆ ಬಂತು. ಬೇಗಮ್ ಅಮಿರುದ್ದೀನ್, ಹಮೀದ್‌ಖಾನ್, ರಾಮಸ್ವಾಮಿ, ಅಬ್ದುಲ್‌ಮಜೀದ್, ಎಲ್. ಸಿ. ಪಾಯಸ್, ಹಾಜಿ ಹುಸ್ಸೇನ್, ರಾಘೂಖಾನ್, ಮುನಿಸ್ವಾಮಿ ಪಿಳ್ಳೈ, ಅನ್ನಾದೊರೈ, ಕೋಸಲ್ರಾಮ್; ಜೆನ್ನಿ ಕಾಯ್ಕಿಯಾರ್, ಮೊದಲಾದವರು ಈ ಯೋಜನೆಯ ರೀತಿನೀತಿಗಳನ್ನು ವಿಮರ್ಶಿಸಿ ಭಾಷಣಮಾಡಿದ್ದರು. ಮಂತ್ರಿ ಶ್ರೀ ಗೋಪಾಲರೆಡ್ಡಿಗಳು ಸಮರ್ಪಕ ಉತ್ತರ ಕೊಟ್ಟ ಮೇಲೆ ಅವರ ಬೇಡಿಕೆ ಮಾನ್ಯವಾಯಿತು.

ಇತರ ಗ್ರಾಂಟುಗಳು

ಜೈಲಾಡಳಿತೆಗಾಗಿ ರೂ. 81,46,600ರ ಗ್ರಾಂಟು ಬೇಡಿಕೆಯನ್ನು ಕಾನೂನು ಮಂತ್ರಿ ಶ್ರೀ ಮಾಧವ ಮೆನನರು ಮುಂದಿಟ್ಟಿದ್ದರು; 'ಆಡಳಿತ ಖರ್ಚು'ಗಳ ಸಂಬಂಧದ ವೆಚ್ಚಕ್ಕಾಗಿ ರೂ. 84,25,100ರ ಬೇಡಿಕೆಯನ್ನು ಆಪತ್ತಿಯ ಮಂತ್ರಿಯೂ ಆಗಿರುವ ಶ್ರೀ ಮಾಧವ ಮೆನನರು ಇಟ್ಟಿದ್ದರು 'ಜಿಲ್ಲಾ ಆಡಳಿತೆಗಳು ಮತ್ತಿತರ ಸರ್ವಸಾಮಾನ್ಯ' ವೆಚ್ಚಗಳಿಗಾಗಿ ರೂ. 5,37,77,000ರ ಬೇಡಿಕೆಯು ಉದ್ದಿಮೇಮಂತ್ರಿ ಶ್ರೀ. ಯು. ಕೀರಾವಾಮ ರೆಡ್ಡಿಗಳಿಂದ ಬಂತು. 'ಸಪ್ಲಿಮೆಂಟರಿ ಗ್ರಾಂಟುಗಳಾಗಿ ಒಟ್ಟಿಗೆ ರೂ. 4,94,29,600ರ ಮಂಜೂರಾತಿಯನ್ನು ಅರ್ಥಮಂತ್ರಿ ಶ್ರೀ. ಬಿ. ಗೋಪಾಲ ರೆಡ್ಡಿಗಳು ಅಪೇಕ್ಷಿಸಿದರು. 'ಪೋಲೀಸ್' ವೆಚ್ಚದ ಬಾಬ್ತು ರೂ. 6,04,54000ರ ಬೇಡಿಕೆಯನ್ನು 'ಪ್ರಧಾನ ಮಂತ್ರಿಗಳ ಪರವಾಗಿ ಶ್ರೀ. ಬಿ. ಗೋಪಾಲ ರೆಡ್ಡಿಗಳೇ ಮುಂದಿಟ್ಟರು, ಕಳೆದವರುಷ ಪೋಲೀಸು ಕಾರ್ಯಗಳಲ್ಲಿ ಅಸಾಮಾನ್ಯಕಷ್ಟಗಳಿದ್ದುವೆಂದೂ, ಅದರೂ ಪೋಲೀಸ್‌ಪಡೆಯು ಪರಿಣಾಮಕಾರಿ ಕಾರ್ಯ ಸಾಧಿಸಿದೆಯೆಂದೂ ಶ್ಲಾಘಿಸಿದರು. ಮಾರ್ಪಟ್ಟ ಪರಿಸ್ಥಿತಿಗನುಸಾರವಾಗಿ ತಮ್ಮ ರೀತಿನೀತಿಗಳನ್ನು ಬದಲಾಯಿಸಿಕೊಂಡು ಸಾರ್ವಜನಿಕರೊಡನೆ ಸಹಕರಿಸಿ ವರ್ತಿಸುವ ಸಂದರ್ಭಗಳನ್ನು ಪೋಲೀಸರಿಗೊದಗಿಸಲಾಗಿದೆಯೆಂದೂ ಮಂತ್ರಿಗಳಂದರು ಎಲ್ಲಾ ಬೇಡಿಕೆಗಳ ಸಂಬಂಧವಾಗಿಯೂ, ಪದ್ಧತಿಪ್ರಕಾರ ಕಡಿತಸೂಚನೆಗಳು ಮುಂದಬಂದಿದ್ದವು. ಅವುಗಳ ಉದ್ದೇಶವು ಸ್ಥಿತಿ ವಿಮರ್ಶೆಮಾತ್ರವಾದ್ದರಿಂದ ಸಂಗತಿಯು ಸವಿವರ ಸರ್ಕಾರಿ ಲೋಚನಾ ನಂತರ ಅವು ಹಿಂದೆಗೆಯಲ್ಪಟ್ಟವು. ಗ್ರಾಂಟುಬೇಡಿಕೆಗಳುಮಂಜೂರಾದುವು. ಎಸೆಂಬ್ಲಿಯ 'ಬಜೆಟ್ ಅಧಿವೇಶನ'ನಡೆದಿದೆ

ರಶ್ಯಕ್ಕೆದಿರಾಗಿ ಅಟ್ಲಾಂಟಿಕ್ ಕೂಟ!

ಭಾವೀ ಯುದ್ಧಕ್ಕೆ ತಯಾರಾಗುವ ಹೊರತು, ಯುದ್ಧಹೇತುಗಳನ್ನು ನಿವಾರಿಸುವ ಪ್ರಯತ್ನವಿಲ್ಲ- ಎಂಬುದೇ ಕಳೆದ ದಿನಗಳ ಸ್ಪಷ್ಟ ಸಂದೇಶ. ಲೋಕ ಶಾಂತಿಗಪಾಯಕರವಾಗಿ ಹೋರುವ ತಂಟೆ ತಕರಾರುಗಳನ್ನು ಇತ್ಯರ್ಥಿಸುವ ಹೊಣೆ ಹೊತ್ತಿರುವ 'ಸಂಯುಕ್ತ ರಾಷ್ಟ್ರ ಸಂಘ' ಕೂಡಾ ಕ್ರುದ್ಧಮಹಾಯುದ್ಧಾನಂತರ ಸ್ಥಾಪನೆಗೊಂಡಿದ್ದು, ಕಳದ ಮಹಾಯುದ್ಧದ ಮೊದಲು ಸನೆದು ಮಾಯವಾಗಿದ್ದ 'ಲೀಗ್ ಓಫ್ ನೇಶನ್ಸ್'ನ ಹಾದಿಯನ್ನೇನೇ ಈಗ ಇಳಿಯುತ್ತಿದೆ. ಈಗ ಸಂಯುಕ್ತ ರಾಷ್ಟ್ರಸಂಘದಲ್ಲಿ ಅಂಗ್ಲೋ ಅಮೇರಿಕನರಿಗೇನೇ ಪ್ರಚಂಡ ಬಹುಮತವಿದ್ದು, ಭದ್ರತಾ ಕೌನ್ಸಿಲಿನ ಮುಂದೆ ಬರುವ ತನಗೆ ಸಂಬಂಧಿಸಿದ ವಿಷಯಗಳ ಕುರಿತು ತನಗೆ 'ವಿಶೇಷ ಮತ'ವನ್ನು ಬೇಕಾದಂತೆ ಉಪಯೋಗಿಸುವ ಅಧಿಕಾರವು ರಶ್ಯಕ್ಕೆರುವ ಒಂದೇ ಕಾರಣದಿಂದ ರಶ್ಯವೀವರೆಗೆ ಆ ಸಂಘವ ಸಂಬಂಧ ಕಡಿದುಕೊಂಡಿಲ್ಲ ವೆನ್ನಬಹುದು. ಸಂಯುಕ್ತ ರಾಷ್ಟ್ರ ಸಂಘದೆಲ್ಲಿ ಬಹುಮತವಿರುವ ಅಂಗ್ಲೋ ಅಮೆರಿಕನರೇ ಆದರ ನಿರರ್ಥಕತೆಯನ್ನು ಮನಗಂಡು, ಅಪಾಯ ನಿರೀಕ್ಷೆ ಅಥವಾ ಸ್ವರಕ್ಷಣ ಗುಂಪುಗಳನ್ನು ಕಟ್ಟಿಕೊಳ್ಳಲು ರಂಭಿಸಿರುವುದು ಭದ್ರತಾ ಕೌನ್ಸಿಲಿನ ನಿರರ್ಥಕತೆಯನ್ನು ಜಗಜ್ಜಾಹೀರುಗೊಳಿಸುವ ಸಂಗತಿ. ಅಂತೂ ಈಗ ಸ್ಪಷ್ಟವಾಗಿರುವ ವಿಷಯವಿಷ್ಟೇ: ರಶ್ಯ ಮತ್ತು ಅಂಗ್ಲೋ ಅಮೆರಿಕಾ ಪಕ್ಷಗಳ ನೇಲುಟ್ಟವು ಇನ್ನೊಂದೆ. ಮುಂಬಾಯಿದ್ದಣ ದಿಕ್ಕಿಗೇನೇ ಹೊರಳುತ್ತಿದೆ; ಭಾರತ ಸನೇತ ಲೋಕದ ಎಲ್ಲಾ ರಾಷ್ಟ್ರಗಳೂ ಈ ಹೋರಾಟ ರಂಗದ ಗಡಿಯೊಳಗಾಗುವ ಅಪಾಯ ಒಡೆದು ಕಾಣುತ್ತಿದೆ.

ಪ್ರಪಂಚವು ಈಗ ಇದ್ದ ಸ್ಥಿತಿಯಲ್ಲಿ ಶಾಶ್ವತ ಶಾಂತಿಯನ್ನು ಹೊಂದೀತೆಂಬ ಆಶೆ ಪೂರ್ತಿ ಕಳೆದುಹೋಗುತ್ತಿದೆ. ಮಹಾಯುದ್ಧ ಎರಡಾದೆದು ಮೂರನೇದೀತೆಂಬ ಭೀತಿ ಆಂಟಿಕೊಳ್ಳುತ್ತಿದೆ!

ಲೋಕಸ್ಥಿತಿ

ಕಳದ ಎಂಟು ತಿಂಗಳುಗಳಲ್ಲಿಂದ, ಒಳಗಿಂದೊಳಗೆ ಮಾತುಕತೆ ನಡೆಯುತ್ತಿದ್ದ 'ಉತ್ತರ ಅಟ್ಲಾಂಟಿಕ್' ಮೈತ್ರೀಕರಣಂಧ್ಯ ಏಳು ರಾಷ್ಟ್ರಗಳು ಒಪ್ಪಿ ಅ ರಾಜಧಾನಿಗಳಿಂದ ಪ್ರಕಟಣೆ ಹೊರಟಿದೆ. ಹೀಗೆ ಸೂಡಿಕಟ್ಟಿದ ರಾಷ್ಟ್ರಗಳೆಂದರೆ ಬ್ರಿಟನ್ನು, ಅಮೆರಿಕ, ಫ್ರಾನ್ಸ್ಸು, ಬೆಲ್ಜಿಯಮ್, ಕೆನಡಾ, ಲಕ್ಸೆಂಬರ್ಗ್, ಹಾಲ್ಲೆಂಡ್. ಈ ಸಂಬಂಧದ ಕರಾರುಪತ್ರಕ್ಕೆ ಏಪ್ರಿಲ್ 4ರಲ್ಲಿ ವಾಷಿಂಗ್ಟನ್ನಿನಲ್ಲಿ ಸಹಿ ಹಾಕಾವದೆಂದು. ನಿಶ್ಚಯಿಸಲಾಗಿದೆ. ಉಳಿದ ಏದು ರಾಷ್ಟ್ರಗಳಿಗೆ— ನೋರ್ವೆ, ಡೆನ್ಮಾರ್ಕ್, ಐಸ್‌ಲೇಂಡ್, ಪೋರ್ಚುಗಲ್, ಇಟಲಿಗೆ— ಈ ಕೂಟದೊಳಗೆ ಸೇರಿಕೊಳ್ಳುವ ಆಮಂತ್ರಣ ಹೋಗಿದ್ದು, ಅವೂ ಜತೆಗೂಡುವದೇ ನಿರೀಕ್ಷಿಸಲಾಗಿದೆ. ಯುರೋಪು ಅಥವಾ ಉತ್ತರ ಅಮೇರಿಕದ ಎಲ್ಲಿಯೇ ಅದೂ ಆಕ್ರಮಣ ನಡೆದರೆ ಈ ರಾಷ್ಟ್ರಗಳು ಒಟ್ಟಾಗಿ ಹೋರಾಡುವವು- ಈ ಪೈಕಿ ಯಾವುದೇ ಒಂದರ ಮೇಲೆ ಧಾಳಿ ಅದರೆ ಪ್ರತಿಯೊಂದರ ಮೇಲೂ ಅದಂತೆ- ಪ್ರತಿಯೊಂದೂ ಪ್ರಾದೇಶಿಕ ಸ್ಥಿರತೆ, ರಾಜಕೀಯ ಸ್ವಾತಂತ್ರ್ಯ, ಮತ್ತು ಒಳಭದ್ರತೆಯ ಮಟ್ಟಗೂ ಇವು ಒಟ್ಟಿಗೆ ಸಯಾರಿಲೋಚಿಸುವವು- ಈ ಮೈತ್ರೀ ಕರಾರು 20 ವರುಷಗಳ ವರೆಗೆ ಅಸ್ತಿತ್ವದಲ್ಲಿರುವುದು. ಯುರೋಪಿನ ಯಾವ ರಾಷ್ಟ್ರವೇ ರೂ ಈ ಮೈತ್ರಿಗುಂಪಿನಲ್ಲಿ ಸೇರಿಕೊಳ್ಳಬಹುದೆಂದೂ, ಇದು ರಕ್ಷಣೋದ್ದೇಶದ ಕಾರ್ಯ ಹೊರತು ಆಕ್ರಮಣೇಚ್ಛೆಯದಲ್ಲವೆಂದೂ ಇದರ ನಿರ್ಮಾಣಕರು ಲೋಕಕ್ಕೆ ಮಂದಟ್ಟು ಮಾಡಿಕೊಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ರಶ್ಯದ ಸಕ್ಷಪಾತಿಗಳೆಲ್ಲರೂ ಈ ಕೂಟ ಹೆಂಟಕೆಯಿಂದ ಉರಿದು ಬಿದ್ದಿದ್ದಾರೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all; keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಸೌಂದರ್ಯದೊಡನೆ— ಸೌಲಭ್ಯವೂ ಬೇಕು!

ಇದಲ್ಲವೇ ನಿಮ್ಮ ಆಕಾಂಕ್ಷೆ?

ಹಾಗಾದರೆ ನೆನಪಿನಲ್ಲಿಟ್ಟುಕೊಳ್ಳಿರಿ—

ಸಕಾಲದಲ್ಲಿ— ಸುಲಭ ದರದಲ್ಲಿ— ಕಲಾಪೂರ್ಣವಾಗಿ ಮುದ್ರಿಸಿ ಕೊಡಬಲ್ಲ ಹೆಸರಾಂತ ಮಂದಿರವೆಂದರೆ

ಭಾರತ್ ಪ್ರಿಂಟರ್ಸ್

ಕೋಳದ ಪೇಟೆ, ಉಡುಪಿ.

ತಮ್ಮ ಮನಸೆಚ್ಚುವಂತೆ ಎಲ್ಲಾ ತರದ ಪ್ರಿಂಟಿಂಗ್- ಬೈಂಡಿಂಗ್ ಕೆಲಸಗಳನ್ನು ಮಾಡಿಕೊಡುತ್ತೇವೆ.

BHARAT PRINTERS

KOLADAPET, UDIPI.

ವಿನಂತಿ

ವಯಸ್ಸಾಗದ ಚಂದಾಹಣ ಬಾಕಿಯಾಗಿರುವವರು ದಯವಾಡಿ ಅದನ್ನು ಕೂಡಲೇ ಕಳುಹಿಸಿಕೊಡುವೇ ಕಾಗಿಯೂ ಸಕಾಲದಲ್ಲಿ ಹಣಬಾರದಿದ್ದಲ್ಲಿ ನಾವು ಕಳುಹಿಸುವ ವಿ. ಪಿ. ಪಿ. ಯನ್ನು ಸ್ವೀಕರಿಸಿ ಪ್ರೋತ್ಸಾಹಿಸುವೇ ಕಾಗಿಯೂ ಈ ವಿನಂತಿಸುತ್ತೇವೆ.

ಮೆನೇಜರ್.

ಭಾರತ ಪಾಕಿಸ್ತಾನ್ ಸ್ನೇಹ ಸಂಬಂಧ.

ಇದೇ ರೀತಿ ಭೂಮಧ್ಯ ಸಮುದ್ರ ವಲಯ ಮತ್ತು ಶಾಂತಸಮುದ್ರ ವಲಯಗಳ ರಾಷ್ಟ್ರಗಳನ್ನೂ ರಕ್ಷಣಾ ಸಂಘಟನೆಗಳಾಗಿ ಕಟ್ಟಿ ಹಾಕಲು ಬ್ರಿಟಿಷ್ ಮುತ್ಸದ್ದಿಗಳ ಮೂಲಕ ಬ್ರಿಟನ್ ಅಮೆರಿಕೆಗಳು ಪ್ರಯತ್ನಿಸುತ್ತಿವೆ. ಈ ಭಾಗದ ಅಂತಹ ರಾಜ್ಯಗಳ ಭಾರತವು ಆಮಂತ್ರಿಸಲ್ಪಡುವುದೂ ಭಾರತಕ್ಕೆದು ಪ್ರತ್ಯಕ್ಷ ಸಂಬಂಧವಿಲ್ಲದಿರುವುದೂ ಖಂಡಿತ. ಇಷ್ಟಲ್ಲೇ ಬ್ರಿಟಿಷ್ ರಾಜಕಾರಣಿಗಳು ಹೊತಾತ ಹತ್ತಿದ್ದಾರೆ. ಭಾರತದ ಸಂಕಾರೀ ನಾಯಕರು, ಅಂತಹ ಹಂಚಿಕೆಯೊಳಗೆ ಸೇರಿಕೊಳ್ಳುವಂತಿಲ್ಲ ವೆಂದು ದೇಶದ ಜನತೆಗೆ ಆಶ್ವಾಸನೆ ಕೊಡುತ್ತಿರುವಂದಂತೆಯೂ ಸ್ವತಂತ್ರ ಭಾರತಕ್ಕೆ ಸಂಬಂಧಿಸಿದಂತೆ ಜ್ಞೇತ್ರಗಳ ವ್ಯಾಮೋಹ್ಯ ಆಗಹೋಗುಗಳ ಕುರಿತು ಅವು ಅನಾಸಕ್ತಿಯಿಂದಿರಲು ಸಾಧ್ಯವಿಲ್ಲ. ಭೂಮಧ್ಯ ಸಮುದ್ರ, ಮತ್ತ ಶಾಂತ ಸಮುದ್ರ ಪ್ರದೇಶಗಳಲ್ಲೂ ಅಟ್ಲಾಂಟಿಕ್ ಸಂಬಂಧವಿರುವ ರಾಜ್ಯಗಳೊಂದಿಗೆ ರಾಜ್ಯ ಮತ್ತ ಆದು ಹಂಬಾಲಕ ರಾಷ್ಟ್ರಗಳಿದಿಂದಾಗಿ ಭೂಲೋಕದ ಇಕ್ಕಡೆಗಳಲ್ಲೂ ಕೋಟೆಗಳೆದ್ದಂತಾಗುವದು. ರಾಜ್ಯವು ಯಾವುದೇ ಒಂದು ರಾಷ್ಟ್ರವನ್ನು ಇದಿರಿಸಿವ ಬದಲಿಗೆ, ಮಾಡಿ ಮಾಡಿದರೆ ರಾಷ್ಟ್ರಗಳಂತಾಗುತ್ತಿವೆ ಎಂದೂ ಹೇಳಬೇಕಾಗುವದು!

ಕಳದ ಮಹಾಯುದ್ಧದಂತೆ, ಬ್ರಿಟನು ಫ್ರಾನ್ಸು, ಅಮೆರಿಕ ಮುಂತಾದ ವಿತ್ತ ರಾಷ್ಟ್ರಗಳು, ರಷ್ಯಾವನ್ನು ಸಂತಾಪ್ತಿ ಮೃ ನುಲೆ ಒದಾಗಲೇ ಅನುಶ್ಚಯವಾಗಿ ಸ್ವೈಷ್ಟ ಣಾಣಾಕೈಳಿಯುವ ಸಾವಕಾಶವು ತಿಪ್ಪು, ಸುತ್ತ ಸುತ್ತಿನ ಯಾವ ಕಡೆ ತಾ ಡಾ ಬದ್ಧರೂ ಸ್ವತಃ ಕವಗ ಬದ್ಧಂತೆಂದು ಭಾವಿಸಿ ತ್ವರಿತ ಕಾರ್ಯಕೈಳಿಯುವ ಸಂಭವಗಳನ್ನು ನಿರೀಕ್ಷಿಸಿಯೇ ಇದವ ರಾಜ್ಯ ಮತ್ತು ಅದರ ಪಕ್ಷಪಾತಿ ರಾಷ್ಟ್ರಗಳು ಸ್ವಕ್ರಿಯೆಗಳನ್ನು, ಎಂಬುದನ್ನು ತಿಳಿಸಬೇಕಾಗಿದೆ. ತನ್ನ ಹಿಂಬಾಲಕ ರಾಷ್ಟ್ರಗಳಿಂದ ಒಲ್ಲದೀಯ, ಹಂಗಿಲ್ಲದೆ ಸ್ವತಂತ್ರ ಭಾರತವು ಸಾಧ್ಯವಾದಷ್ಟು ಸಮತೋಲನವನ್ನು ಕಾಪಾಡಿಕೊಂಡು ಹೋಗಬೇಕಾಗಿದೆ. ಇಸ್ಲೀನಿನ ಕಡೆಯವರಿಂದ ಅವಧಿ ಮುಗಿಯುವ ವರೆಗೆ ಉತ್ತರವೇ ಬಾರದ್ದರಿಂದ ಸರಕಾರವು ದೊಡ್ಡ ಸರಮಾಣದ ಧಾಕಯಾರಂಭಿಸಿದೆ.

ಮಿಕ್ಕ ಜಾಗತಿಕ ತಂಟೆ ತಕರಾರುಗಳಲ್ಲಿ ಬದಲಾವಣೆಗೇನೂ ಆಗಿಲ್ಲ.

ಭಾರತ-ಪಾಕಿಸ್ತಾನ

ಇಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವು ಇತ್ತೀಚೆಗೆ ಸುಧಾರಿಸುತ್ತಾ ಬಂದಿದೆ. ಎಡು ರಾಷ್ಟ್ರಗಳ ನಾಯಕರೂ ಪರಸ್ಪರ ಮೈತ್ರಿಗೆ ವಿಶೇಷ ಪ್ರಾಮುಖ್ಯತೆಕೊಟ್ಟು ದೋಷ-ದೋಷಣೆಗಳನ್ನು ಬಹುಮಟ್ಟಿಗೆ ತಗ್ಗಿಸಿಕೊಂಡಿದ್ದಾರೆ. ಕಾಶ್ಮೀರದಲ್ಲಿ ಜನಮತ ಸಂಗ್ರಹಾಧಿಕಾರಿಯ ನೇಮಕ ಮತ್ತು ಮುಂದಿನ ಕಾರ್ಯಕ್ರಮಗಳಲ್ಲಿ ಭಿನ್ನಾಭಿಪ್ರಾಯ ಕಾಶ್ಮೀರ ಸಮಿತಿ ಕೈಗೊಂಡಿದೆ. ಇಂಡೋನೇಶಿಯದ ಹೋರಾಟ, ಬರ್ಮಾದ ಅಂತರ್ಯುದ್ಧ ಮೊದಲಾದ ಸಮಸ್ಯೆಗಳಲ್ಲೂ ಇವೆರಡು ರಾಷ್ಟ್ರಗಳಿಗೆ ಸಮಾನಾಸಕ್ತಿಯಿದೆ. ಹೀಗೆ ಸಂಬಂಧ ಸುಗಮಗೊಳ್ಳುತ್ತಿರುವಾಗಲೂ ಪಾಕಿಸ್ತಾನವು ತನ್ನ ಮನೆಗೆ ವೃತ್ತಿಯನ್ನು ಪೂರ್ಣ ಬದಲಾಯಿಸಿಕೊಂಡಿಲ್ಲವೆಂಬುದಕ್ಕೆ ಕಳದವಾರ ಪಾಕಿಸ್ತಾನದ ಗಡಿನಾಡು ಪ್ರಾಂತೀಯ ಸರಕಾರವು ಹೊರಡಿಸಿರುವ ಒಂದು ಹೇಳಿಕೆಯಂತಹ ನಿದರ್ಶನಗಳು ದೊರೆತಿವೆ. 'ಗಡಿನಾಡು ಪ್ರಾಂತ್ಯದ ಪ್ರಧಾನಿ ಅಬ್ದುಲ್ ಕ್ವಯಾಮರನ್ನು ಕೊಲೆ ಮಾಡುವ ಪಾಕಿಸ್ತಾನ ಒಳಸಂಚಿನಲ್ಲಿ ಭಾಗವಹಿಸಿದೆ; ಅದರಲ್ಲಿ ಭಾರತ ಸರಕಾರದ ಕೈಯಿದೆ. ಗತಿಸಿದ ನಾಡಿನ ಕೆಂಪಂಗಿ ದಳದವರು ಭಾರತದೊಳಗೆ ಅವಿರತವಾಗಿ ಸುದ್ದಿ ಕಳುಹುತಿದ್ದಾರೆ' ಎಂಬುದೇ ಗಡಿನಾಡು ಸರಕಾರದ ಆರೋಪ. ಈ ಪ್ರಕಟಣೆಯಲ್ಲಿ ಭಾರತ ಸರಕಾರದ ಹೆಸರೆತ್ತಿಲ್ಲವಾದರೂ ಅರ್ಥ ಸ್ಪಷ್ಟವಿದೆ. ಪಾಕಿಸ್ತಾನವು ಮಾಡಿರುವ ಈ ಅಸತ್ಯಾರೋಪಕ್ಕಾಗಿ ಭಾರತವು ನಿಷೇಧ ಸೂಚಿಸಿದೆ. ಹಿಂದೀ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರುಗಳು ಈ ಸಂಬಂಧದ ಹೇಳಿಕೆ ಕೊಡುತ್ತಾ, ದೇಶ ವಿಭಜನೆಯಾದಂದಿನಿಂದ ಗಡಿನಾಡಿನ ಕೆಂಪಂಗಿ ದಳ, ಅಧವಾ ಅದರ ನಾಯಕರೊಡನೆ ತಮಾಷ ಸಂಬಂಧವನ್ನೂ ಇಟ್ಟುಕೊಂಡಿಲ್ಲವೆಂದೂ, ಪಾಕಿಸ್ತಾನದ ಆಂತರಿಕ ವಿಷಯಗಳಲ್ಲಿ ಯಾವುದೇ ರೀತಿಯಿಂದ ಕೈ ಹಾಕಿದ್ದಿಲ್ಲವೆಂದೂ, ಅದರ ಭಾರತ ಸ್ವಾತಂತ್ರ್ಯದ ಧೀರ ಯೋಧರಾಗಿದ್ದ ಅಹಿಂಸಾಸಿದ್ಧೆಯ ಮಾನ್ಯ ಸಹೋದರರು ಮತ್ತವರ ಅನುಯಾಯಿಗಳನ್ನೇಲೆ ಇಂದು ಆಪ್ತನಡೆದಿರುವ ಅತಿರೇಕ ದಬ್ಬಾಳಿಕೆಯು ಕಮ್ಮಿಲ್ಲ ಅತುರವನ್ನು ಸ್ಮಂಟಮಾಡಿದೆಯೆಂದೂ ಸ್ಪಷ್ಟಪಡಿಸಿದ್ದಾರೆ. "ಬ್ರಿಟಿಷರ ಆಧ್ಯಯದಲ್ಲಿ ಭಾರತ ಪಾಕಿಸ್ತಾನಗಳೊಳಗೆ ಜತೆರಕ್ಷಣಾ ವ್ಯವಸ್ಥೆಮಾಡಿಕೊಳ್ಳುವ ಮಾಪುಕತಗಳೂ ನಡೆದಿಲ್ಲ; ಅಂತೆಯೇ ಭಾರತ, ಪಾಕಿಸ್ತಾನ್, ಸಿಲೋನ್, ಮಲಯ, ಬ್ರಿಟನುಗಳ ಸಂಯುಕ್ತ ರಕ್ಷಣಾವ್ಯವಸ್ಥೆಯ ಹಂಚಿಕೆಯೂ ನಡೆದಿಲ್ಲ" ಎಂದು ಭಾರತ ಸರಕಾರದ ಅಭಿಪ್ರಾಯ ತಿಳಿದುಬಂದಿದೆ.

ಭಾರತದ ಪಶ್ಚಿಮ ಕರಾವಳಿ-ಕರಾಚಿ-ಬ್ರಿಟನುಗಳ ವಲಯದ ಸಂಚಾರ ಮಹಾ ಟುಮ್ಮಾರ್‌ದಲ್ಲಿ ಡಜ್ ಹಡಗುಗಳಿಗೂ ಈ ಭಾಗಗಳವರ ಹಡಗ ಕಂಪೆನಿಯೆಂದಕ್ಕೂ ಸಂಚಾರ ಧಾರಣೆಯಲ್ಲಿ ತೀವ್ರ ಸ್ಪರ್ಧೆಯಿದೆ; ಇಕ್ಕಡೆಯವರೂ ನೆಲುಂಡುತ್ತಾ ಸಾಮಾನುಗಳ ಮೇಲಿನ 'ಚಾರ್ಜ್'ನ್ನು ತಗ್ಗಿಸುತಿದ್ದಾರೆ.

ದಕ್ಷಿಣ ಭಾರತದಲ್ಲಿ ಈಗಲೂ ಫ್ರೆಂಚಾಡಳಿತೆಯಲ್ಲೇ ಇರುವ ಪಾಂಡಿಚೆರಿ ಮೊದಲಾದ ನಾಲ್ಕು ಭಾಗಗಳು ಭಾರತದೊಂದಿಗೆ ಸೇರಿಕೊಳ್ಳಬೇಕೋ, ಫ್ರೆಂಚರ ಕೈಕೆಳಗೇನೇ ಇರಬೇಕೋ ಎಂಬ ವಿಷಯವನ್ನು ಕೊನೆಯದಾಗಿ ನಿರ್ಣಯಿಸುವ ಜನವರಿ ಸಂಗ್ರಹ ವ್ಯವಸ್ಥೆಗಾಗಿ ಫ್ರೆಂಚ್ ವಸಾಹತುಗಳ ಮಂತ್ರಿ ಕಾರ್ಯಾಲಯ ಪಾಂಡಿಚೆರಿಯಲ್ಲಿ ಆ ವಸಾಹತುಗಳ ಮೂಸ್ಸಿಸಾಲಿಟಿ ಸದಸ್ಯರ ಸಭೆ ಜರಗಿದೆ. ಆ ಪ್ರಶ್ನೆಯನ್ನೇ ಕಣ್ಣಿ ಮುಂದಿಟ್ಟುಕೊಂಡು ಕಳದ ಒಕ್ಟೋಬರಿನಲ್ಲಿ ಪಾಂಡಿಚೆರಿ, ಕರೈಕಲ್ ಮತ್ತು ಯೆಮನ್‌ಗಳಲ್ಲಿ ಈಗಿನ ಮುನ್ಸಿಪಾಲಿಟಿ ಚುನಾವಣೆಗಳು ನಡೆದಿದ್ದುವು. ಆ ಚುನಾವಣೆಯು ಆಸಮಾಧಾನಕರವಿತ್ತಲ್ಲದೆ ಸರಿಸುಮಾರು ಭಾರತಕ್ಕೆ ಪ್ರತಿಕೂಲವಾಗಿತ್ತು. ತನ್ನ ಕಲವು ಭೂತುಂಡುಗಳು ಇನ್ನೂ ವಿದೇಶದ ಕೈಯಲ್ಲಿರುವುದನ್ನು ಸ್ವತಂತ್ರ ಭಾರತವು ಸಹಿಸಲಾರದೆಂದು ಸ್ಪಷ್ಟವಾಗಿರುವುದರಿಂದ ಮುಂದಿನ ಜನಮತ ಸಂಗ್ರಹದ ಪರಿಣಾಮವೇನಾಗುವದೆಂಬುದನ್ನು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. 1949ನೇ ದಶಂಬರ 11ರಷ್ಟಿ ಈ ಜನಮತ ಸಂಗ್ರಹ ಪೂರಾಯಿಸುವ ನಿರ್ಧಾರವಾಗಿದೆ.

ನಿಮ್ಮತೃಪ್ತಿ ನಮ್ಮಗೌರವ

ಶ್ರೇಷ್ಠ

ಪ್ರಭಾತ ಚಾ ಮತ್ತು ಕಾಫಿ

PRABHAT

TEA & COFFEE (INDIA) Ltd.

COONOOR (Niligiris)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಡಿ.

ತಾರೀಕು 23—3—1949 ರಿಂದ

2 ನೇ ವಾರ—

ಸುರಭಿಯವರ

ಕನ್ನಡ ಚಿತ್ರ.

ಭಕ್ತ ಕುಂಬಾರ

ಹೊಸ್ಮಪ್ಪಭಾಗವತರ್, ಲಕ್ಷ್ಮೀಬಾಯಿ, ರಾಘವೇಂದ್ರರಾವ್, ಪಂಡರೀಬಾಯಿ, ಮತ್ತಿನ್ನಿತರರು.

Notice

ಕುಂದಾಪುರ ಡಿವಿಜನ್ ಕೋರ್ಟಿನಲ್ಲಿ.

O. S. 93/82 R E P. 15/1949.

ಅರ್ಜಿದಾರರು ಸೂರ್ಯನಾರಾಯಣ ಅಡಿಗ ಎದ್ರಿನು-ನಾಗಪ್ಪ ಉಪಾಧ್ಯ ಪರ ವಕೀಲರು.

ಉಡುಪಿ ತಾಲ್ಲೂ ಕಾರ್ಕಳ ಗ್ರಾಮಪಂಚಾಯತ ನಾಗಪ್ಪ ಉಪಾಧ್ಯರ ಮಗ ಎದ್ರಿಗಣಪಯ್ಯ ಉಪಾಧ್ಯರಿಗೆ, ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಮೇಲಿನ ಡಿಕ್ರಿಯ ಅಮಲ್ದಾರಿ ಬಗ್ಗೆ ಅರ್ಜಿದಾರನು ಮೇಲಿನ ಆರ್ಡರ್ ಮಾಡಿಸಿಕೊಂಡಿದ್ದಾನೆ ಆದುದರಿಂದ ಆವಲ್ದಾರಿ ಯಾಕೆ ನಡಿಸಕೂಡದು ಎಂಬ ಸಬಬು ತೋರಿಸಲಿಕ್ಕೆ ತಾ. 28-3-1949ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪದೆ ಇಚ್ಛಿರುತ್ತದೆ. ಆ ಕಾರಣ ಯೀ ನಾವರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿವಸ ಕೋರ್ಟಿಗೆಮಂದೆ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು ಎಂದಪಣಂಗಿ ಈ ಮೂಲಕ ತಿಳಿಯಪಡ್ಸಿರುತ್ತದೆ.

N. S. Parameshwarah.

Advocate for Petitioner.

Date 19-3-49 Coondapoor.

THE
Canara Banking Corporation Ltd.
(Incorporated in India)
Estd: 1906.
HEAD OFFICE UDIPI, S. I.

SEASON DEPOSITS

For Rs. 2,000/- and over are now accepted at all Offices of the Bank at the following rates:-
3 & 4 Months ... @ 2½ % p. a.
5 & 6 Months .... @ 2¾ % p. a.

ನವಯುಗ
ಗುರುವಾರ, ಉಡುಪಿ, ೩೦-೫-'೫೧

ಆಹಾರ ಸ್ವಾವಲಂಬನೆ

"ನಮ್ಮ ಜನರು ಆಹಾರವಿಲ್ಲದೆ ಸಾಯುವಂತಾದರೂ ಸರಿಯೇ–ಇನ್ನೆರಡು ವರುಷಗಳ ನಂತರವೂ ಈಗಿನಂತೆ ಹೊರಗಿನಿಂದ ಆಹಾರ ಧಾನ್ಯಗಳನ್ನು ಅಮದು ಮಾಡಿಸಿಕೊಳ್ಳುವಂತಿಲ್ಲ"–ಎಂದು ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಇತ್ತೀಚೆಗೆ ಹೇಳಿದ್ದರು. ಇದೇ ತಾ. 19ರಲ್ಲಿ ಭಾರತ ಪಾರ್ಲಿಮೆಂಟಿನಲ್ಲಿ ಆಹಾರ ಮತ್ತು ಬೇಸಾಯ ಸಂಬಂಧದ ಗ್ರಾಂಟು ಬೇಡಿಕೆ ಮಂಡಿಸುತ್ತಾ ಭಾರತದ ಆಹಾರ ಮಂತ್ರಿ ಶ್ರೀ ಜೈರಾಮ್‌ದಾಸ್ ದೌಲತರಾಮರೂ ಅದು ಸರಕಾರೀ ಧೋರಣೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಎರಡು ವರುಷಗಳೊಳಗಾಗಿ ಆಹಾರದ ಮಟ್ಟಿಗೆ ಭಾರತವು ಸ್ವಾವಲಂಬಿಯಾಗಬೇಕೆಂದು ಭಾರತ ಸರಕಾರ ನಿರ್ಧರಿಸಿದೆ. ಬೆಳಗಿಲ್ಲಾ ಪೂ ಸಾರ್ವತ್ರಿಕ ನಾಶಗೊಂಡು ಮಹತ್ತಾದ ದ್ವಂದಾಂತರವುಂಟಾಗಬೇಕು– ಇಲ್ಲವೇ 'ಆಹಾರ ಧಾನ್ಯಗಳ ಘೋರಣಾ ಸಮಿತಿ'ಯ ಶಿಫಾರಸಿನಂತೆ ಕೇಂದ್ರ ಸಂಗ್ರಹವೊಂದನ್ನು ಜವಾಯಿಸಿಡುವಷ್ಟಾದರೂ ಕೈಬೀಳಬೇಕು–ಆ ವಿನಹ 1951ರ ನಂತರ ಯಾವುದೇ ಆಹಾರ ಧಾನ್ಯವನ್ನಾದರೂ ಪರದೇಶಗಳಿಂದ ತರಿಸಿಕೊಳ್ಳುವಂತಿಲ್ಲ"– ಎಂದು ಆಹಾರ ಮಂತ್ರಿಗಳ ಕಂಠೋಕ್ತ ನುಡಿಯಾತು. 'ಭಾರತೀಯ ಬೇಸಾಯ ಸಂಶೋಧನಾ ಸಂಸ್ಥೆ'ಯ ವಿದ್ಯಾರ್ಥಿಗಳಿಗೆ ಇದೇ ತಾ. 20ರಲ್ಲಿ ಭಾಷಣವೀಯುತ್ತಾ ಪಂಡಿತ ನೆಹರುಗಳು ಪುನಃ ಹೇಳಿದ್ದಾರೆ. "ಇಂದಿನ ತೀವ್ರ ಆಹಾರ-ಭಾವವೆಂಬುದು ನಮಗಿರುವ ಮಾಮಾನುಕೂಲತೆಗಳಿರುಮತ್ತು ಸ್ವಶಕ್ತಿ ನಮ್ಮ ಅಸ್ತಿತ್ವಕ್ಕೇನೇ ಬಂದಿರುವ ಧಕ್ಕೆಯೆಂಬ್ಯ. ನಾವು ವಿದೇಶಗಳ ಆಹಾರ ಸಂಚಯಾಯನ್ನೇ ತವಲಂಬಿಸಿಕೊಂಡಿದ್ದೇನೆ. ಮತ್ತು ಅವುಗಳಿಗಾಗಿ ಪ್ರತಿ ವರುಷವೂ ಕೋಟಿಗಟ್ಟಲೆ ಹಣ ಸುರಿಯುತ್ತಿದ್ದೇವೆ;ನಮ್ಮ ಅರ್ಥಿಕ ಭಂಡಾರಕ್ಕೆ ಬಿದ್ದಿರುವದೊಡ್ಡ ತೂತೆಂದರೆ ಇದು. ಇದನ್ನು ಇನ್ನೂ ಮುಂದುವರಿಸಲು ಸಾಧ್ಯವಿಲ್ಲ. ಬುದ್ಧಿವಂತಿಕೆಯಿಂದ ಯೋಚಿಸಿದಾಗ ಯಾವುದೇ ಕಡೆಯಲ್ಲಿ ಯುದ್ಧ ಸ್ಫೋಟಿಗೊಂಡರೆ, ಆಗ ಆಹಾರಕ್ಕಾಗಿ ಅನ್ಯ ದೇಶಗಳನ್ನು ಅವಲಂಬಿಸಿರುವ ನಮ್ಮ ಪಾಡೇ ನಾಗಬೇಕು!ಆಹಾರಾಭಾವವುಪಂಡಿತಜೀಯ ಅಂತಃಕರಣಾಗ್ನಿಯನ್ನೂ ಸ್ಪರ್ಶಿಸಿರುವಂತಿದೆ. 1948ನೇ ಇಸವಿಯೊಂದರಲ್ಲೇ ಸುಮಾರು 130 ಕೋಟಿ ರೂಪಾಯಿಗಳನ್ನು ಕೊಟ್ಟು ಧಾರಣವು 28 4 ಮಿಲಿಯ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಿಕೊಂಡಿದ್ದಿತು. ಅದಕ್ಕಾಗಿ 8 ಒಪ್ಪಂದಗಳನ್ನು ಪರದೇಶಗಳೊಡನೆ ಮಾಡಿಕೊಳ್ಳಬೇಕಾಗಿದ್ದಿತು. ಬ್ರಿಟಿಷ್ ಆಡಳಿತೆಯ ದ್ದ ಕಾಲದಿಂದಾರಂಭಿಸಿ ಈ ವರೆಗೂ "ನಮ್ಮ ರಾಷ್ಟ್ರದ ಭಂಡಾರ ಬರಿದಾಗುತ್ತಿದೆ" ಎಂದು ನಾವು ತೋರಿಸುತ್ತಾ ಬಂದಿದ್ದು ಪಿ.ಕೈಲ್ಲಾ ಅಂಶಗಳಂತೆ ಇದು ಮೊಡ್ಡದು. ಇನ್ನೆರಡು ವರ್ಷಗಳೊಳಗೆ ದೇಶಕ್ಕೆ ಬೇಕಾದಷ್ಟು ಆಹಾರ ದೇಶದಲ್ಲೇ ಬೆಳೆಯುವಂತೆ ಮಾಡಿ ಈ ದುಸ್ಥಿತಿಯನ್ನು ನಿವಾರಿಸಬೇಕೆಂಬ ಇಚ್ಛೆಯಿಂದ ಅಲ್ಲಲ್ಲಿ ಅನೇಕಟ್ಟುಗಳನ್ನು– ಇತರ ನೀರಾವರಿ ಪೌಕರ್ಯಗಳನ್ನು– ಬಂಜರುಸ್ಥಳಗಳನ್ನೂ ಕೃಷಿವಲಯಗಳಾಗಿ ಮಾರ್ಪಡಿಸುವ ಪ್ರಯತ್ನಗಳನ್ನು ಸರಕಾರವು ಕೈಕೊಂಡಿದೆ. ಆದರೆ ದೊಡ್ಡದೊಡ್ಡ ಯೋಜನೆಗಳು ರಾಷ್ಟ್ರದ ಕೆಲವೇ ಭಾಗಗಳ ಮಟ್ಟಿಗೆ ಅನ್ವಯಿಸಬಲ್ಲವು ಹೊರತು ನ್ಯಾಯಯೊಂದು ಹಳ್ಳಿಯ ಸ್ಥಿತಿಯೊಟ್ಟು ರೈತನನ್ನೂ ಅಧಿಕ ಧಾನ್ಯೋತ್ಪತ್ತಿಗೆ ಪ್ರೇರೇಪಿಸಲಾರವು. ಸಾಗುವಳಿ ಸಾಧ್ಯವಿರುವ ಇಂಚು ನೆಲವೂ ಖಾಲಿಬೀಳದೆ ಕೃಷಿಯಾಗಬೇಕು–ಬೇಸಾಯಗಾರನ ಸರ್ವ ಲಕ್ಷ್ಯವೂ ಬೇಸಾಯದ ಕಡೆಗೇನೇ ಬೀಳುವಂತೆ ಅವನ ಸ್ಥಿತಿಗತಿಗಳನ್ನು ಸುಧಾರಿಸಬೇಕು. ಸಾಗುವಳಿದಾರನಿಗೇನೇ ಸಾಗುವಳಿ ಭೂಮಿಯ ಮಾಲುಕತ್ವ ದೊರೆಯುವಷ್ಟು ದೊಡ್ಡ ಪ್ರೇರಣೆ ಮತ್ತು ಸಹಾಯ ಈ ಮಟ್ಟಿಗೆ ಬೇರೊಂದಿರಲಾರದು. ಆದರೆ ಅಂತಹ ಪುನರ್ನಿರ್ಮಾವಸ್ಥಾ ಕಾರ್ಯವಲ್ಲ ಈ ಸ್ಥಿತಿಗತಿಗಳಲ್ಲಿ ಬಗೆಹರಿಸಲಾಗದಷ್ಟು ಕಂಟಕಗಳೇಳಬಹುದು; ಆದ್ದರಿಂದ ರೈತರ ಇಂದಿನ ಜೀವನಾವಶ್ಯಕತೆಗಳನ್ನಾದರೂ ಪೂರೈಸಿಕೊಡುವದು–ಅವುಗಳ ಸದುಪಯೋಗಿಸಿಕೊಳ್ಳುವಂತೆಯೂ, ಅಧಿಕೋತ್ಪತ್ತಿಗೆ ಕಾರ್ಯವು ಸಾರ್ವತ್ರಿಕವಾಗಿ ಸಮಾನಪ್ರಗತಿ ಹೊಂದುವಂತೆಯೂ ಪ್ರತಿಯೊಂದೆಡೆಯ ಸಾಗುವಳಿದಾರರ ಸಂಘಟನೆಯಾಗುವುದು ಮೊದಲ ಕರ್ತವ್ಯ. ಸಾಗುವಳಿ ಧಾನ್ಯ ಶಕ್ಯಶಕ್ತಿಪ್ರಗಳ ಇಳಿತ ಭಂತವನ್ನಾಧರಿಸಿಯೇ, ಅವನ ಸಾಗುವಳಿ ಉತ್ಪನ್ನದ ಕೊರತೆ ಹೆಚ್ಚಳಗಳನೆಯೆಂಬುದನ್ನು ತಳಿದಿರಬೇಕು. ಪ್ರತೀ ಹಳ್ಳಿಯಲ್ಲಿ ಸಾಗುವಳಿಗೆ ಯೋಗ್ಯ ಅಂಜರುಭೂಮಿ ಯೆಷ್ಟಿದೆ? ಇರುವ ಸಾಗುವಳಿಯಿಂದಲೂ ಅಧಿಕ ಉತ್ಪನ್ನ ಪಡೆಯುವ ವಿಧಾನಗಳಾವುವು? ಎಂಬುದನ್ನು ಆ ಗ್ರಾಮದ ರೈತರಿಂದಷ್ಟು ಸರಕಾರದ ಬೇಸಾಯ ತಜ್ಞರಿಂದಲಾರರು. ಅದ್ದರಿಂದ ಸಾಗುವಳಿಗೆ ಮತ್ತು ಸಾಗುವಳಿದಾರನಿಗೆ ಬೇಕಾದುದೇನು, ಎಂಬುದನ್ನು ತಿಳಿಸುವ ಸಾಗುವಳಿದಾರ ಸಂಘಟನೆಯು ಪ್ರತಿ ಗ್ರಾಮದಲ್ಲೂ ನಡೆಯಲಿ; ಆ ಮಾಗ ಪರಿಶೀಲನೆಗೂ, ಆಗತ್ಯವಿದ್ದುದನ್ನೊದಗಿಸಿಕೊಡುವದಕ್ಕೂ ಸರಕಾರೀ ಇಲಾಖೆಗಳಿರಲಿ. ಹಾಗಾದರೆನೇ ಈ ಆಹಾರ ಸ್ವಾವಲಂಬೀ ಯೋಜನೆ ನಿಸ್ಸಂದೇಹವಾಗಿ ಜಯಶೀಲವಾದೀತು.

ಎಸೆಂಬ್ಲಿ ಸ್ವಾರಸ್ಯಗಳು!

ಮದ್ರಾಸ್ ಎಸೆಂಬ್ಲಿಯಲ್ಲಿ ಆಹಾರ ಸಂಬಂಧದ ಚರ್ಚೆ ನಡೆದಿದ್ದಾಗ ಶ್ರೀ. ವಿ. ರಾಘವಯ್ಯ "ಸ್ವತಃ ನಾನೇ ಬ್ಲೇಕ್ ಮಾರ್ಕೆಟ್ ಒಕ್ಕಿಯಿಂದ ಜೀವಿಸುತ್ತಿದ್ದೇನೆ. ಕಳ್ಳ ಸಂತೆ ಒಕ್ಕಿಯಲ್ಲದೆ ಹಳ್ಳುಗೇ ಧಾನ್ಯದಿಂದಲೇ ಬದುಕೆಕೊಂಡಿರುವವರು ವಾಸ್ತವ್ಯದಲ್ಲಾರೂ ಇವಲಿಕ್ಕಿಲ್ಲ" ಎಂದು ಕಂಠೋಕ್ತ ಹೇಳಿ, "ಎಂತ್ರಿಗಳಾದರೂ ತಾವು ಹಾಗೆ ಮಾಡುತ್ತಿಲ್ಲವೆಂದು ಪುನಃ ಪೂರ್ವಕವಾಗಿ ಹೇಳಬಲ್ಲರೆ?" ಎಂದು ಪ್ರಶ್ನಿಸಿ ಎಸೆಂಬ್ಲಿಯಲ್ಲೊಂದು ರೀತಿಯ ಭಾವಾಂದೋಲನವನೆಬ್ಬಿಸಿದ್ದರು. ಆಹಾರ ಮಂತ್ರಿ ಡಾ| ಟಿ. ಯಸ್. ಯಸ್. ರಾಜನರು ಈ ಉದ್ಗಾರನನ್ನು ಆಕ್ಷೇಪಿಸಿ, "ಆ ಸದಸ್ಯರು ಎಸೆಂಬ್ಲಿಯ ಹೊರಗೆ ಈ ಮಾತುಗಳನ್ನು ಆಡುತ್ತಿದ್ದರೆ ಅವರು 'ನೇತ್ಯಾತ್ಮಕವಿಸಲ್ಪಡುತಿದ್ದರು" ಎಂದು ವಾಗ್ಬಾಣ ಹೊಡೆದರು. ಈ ಕಾರಿತು 'ವಿಧಿ ಬಂದು'ಗಳಿದ್ದಿದ್ದುವಲ್ಲದೆ ತರ್ಕ ವಿತರ್ಕಗಳೂ ನಡೆದವು.

ಂಂ ಂಂ

"ಗವರ್ನರರ ಸಂಬಳವೇ ಮೊದಲಾದ ಸರಕಾರೀವೆಚ್ಚಗಳ ಬೇಡಿಕೆಯನ್ನು ಎಸೆಂಬ್ಲಿಯಲ್ಲಿ ಮಂಡಿಡುತ್ತಾ ಸಭಾನಾಯಕ ಶ್ರೀ. ಬಿ. ಗೋಪಾಲರೆಡ್ಡಿಗಳು "ಭಾರತಶಾಸನದ ಸೆಕ್ಷನ್ 79 (1)ರಕ್ಕಾಗಿ ಗವರ್ನರರ ಸಂಬಳ ಮುಂತಾದುವುಗಳು ಸಭಾಚರ್ಚೆಗೆ ಒಳಪಡುವ ವಿಷಯಗಳಲ್ಲ ವೆಂಬುದನ್ನು ತಿಳಿದಿರಬೇಕು" ಎಂದು ಎಚ್ಚರಿಕೆಕೊಟ್ಟಾಗ ಹಲವು ಸದಸ್ಯರು ಎದ್ದುನಿಂತು "ಈ ಸೂಚನೆಯ ಸದಸ್ಯರ ಬುದ್ಧಿಮತ್ತೆಗೆ ಮಾಡಿದ ಅಪಮಾನ" ವೆಂದು ಆಕ್ಷೇಪಿಸಿದ್ದರು. "ಅಧ್ಯಕ್ಷರು ಹುಳಾಂಕೊಟ್ಟರೂ ಕೇಳದೆ ಕಳದ ವರುಷ ಕಮ್ಯೂನಿಸ್ಟ್ ಸದಸ್ಯನು ಈ ವಿಷಯದ ಕುರಿತು ಟೀಕೆ ಮುಂದುವರಿಸಿದ್ದರು" ಎಂದು ಶ್ರೀ ಗೋಪಾಲ ರೆಡ್ಡಿಗಳು ಹೇಳಿಕೊಂಡರೂ ಸದಸ್ಯರು ಅದಕ್ಕೆ ತಕ್ಕ ಉತ್ತರ ಕೊಟ್ಟು ಪ್ರತಿಭಟಿಸಿದರು.

ಂಂ ಂಂ

"ಒಂದು ಘೋರಣೆಯೆಂಬುದಿರುವ ವಿಷಯಕ್ಕೆ ಮದ್ರಾಸ್ ಮಂತ್ರಿಯೆಂಬುದು ವಿದ್ಯಾಮಂತ್ರಿಗಳು. ಆದರೆ ಅವರಲ್ಲಿರುವ ದೋಷವೆಂದರೆ ಅವರು ಗಡಿಬಿಡಿಮಾಡಲು"–ಎಂದು ಗ್ರಾಂಟು ಬೇಡಿಕೆಯ ಚರ್ಚೆಯ ವೇಳೆ ಮುಸ್ಲಿಂ ಪಕ್ಷದ ನಾಯಕ ಮಿ. ಮಹಮ್ಮದ್ ಇಸ್ಮಾಯಿಲ್ ಟೀಕೆ. ಆದಕ್ಕೆ ವ್ಯಂಗ್ಯ ಉತ್ತರವೀಯುತ್ತಾ ಶ್ರೀ. ಬಿ. ಗೋಪಾಲ ರೆಡ್ಡಿಗಳಂದಿದ್ದರು. "ಘೋರಣೆ ಮಾತ್ರ ಗಡಿಬಿಡಿಯಿಂದಾಯಿತು ಕ್ಕಿಂತ, ಘೋರಣೆಯಲ್ಲಿದ ಕಡಿಮೆ ಅನಂ ಧಾನ್ಯ ಮಂತ್ರಿಮಂಡಲ ಅದಿಸಿಕೊಂಡರೆ, ನಾನದನ್ನು ಆಕ್ಷೇಪಿಸಲಾರೆ".

ಂಂ ಂಂ

ಮದ್ರಾಸಿನಲ್ಲಿ ಮೊದಲಿನಿಂದಲೂ ಜಂಟಿ ಯಲ್ಲಿರುವ, ಜಿಲ್ಲಾತೀಯಹರಿಮಾಣಾನುಸಾರವಾಗಿ ನೌಕರಿ ಹಾಗೂ ಕಾಲೇಜುಗಳಲ್ಲಿ ಸ್ಥಾನೀಕರಿಸುವ ಕ್ರಮವನ್ನಾಗಿ ಇಂದಿನ ಮದ್ರಾಸ್ ಸರಕಾರವು ಹೊರಗೂ ಎಸೆಂಬ್ಲಿಯೊಳಗೂ ತೀವ್ರ ಟೀಕೆಗೊಳಗಾಗಿದ್ದು. ಇದಕ್ಕಾಗಿ ಎಸೆಂಬ್ಲಿಯಲ್ಲಿ ಹಲವು ಸದಸ್ಯರ ತೀಕ್ಷ್ಣ ವಾಗ್ಬಾಣಗಳಾದುವು. ಶ್ರೀ ಬಿ. ಗೋಪಾಲರೆಡ್ಡಿಗಳು ಈ ಆರೋಪಗಳಿಗೆ ಉತ್ತರ ಕೊಡುತ್ತಾ ಹೇಳಿದ್ದರು. "ಜಾರಿಯಲ್ಲಿರುವ ಜಿಲ್ಲಾತೀಯ ಜಿ ಬಂದು ನಮ್ಮ ದಕ್ಷಿಣ ಭಾರತ ಸಮಾಜದಲ್ಲಿ ಅಕ್ಕೆ ಬೇರೂರಿರುವ ಜಾತೀಯತೆಯ ಕಡಿಗೆ ಬಿದ್ದ ಲಕ್ಷ್ಮಣ ರೇಖೆಯೆಂದನ್ನರಿಯದೆ ಉತ್ತರ ಭಾಗಗಳ ಜನರು ಪ್ರಾಮುಖ್ಯ ಮಂಡಿಕೊಡಾಲಿ ಕಾರಿತು ಭಾವನಾವಂಚನೆ ಗೀಡಾಗಿದ್ದಾರೆ. ಜಾತೀಯತೆಯೆಂಬುದು ಸಮಾಜದಲ್ಲೇ ಇದೆ. ಪರಕಾರವು ಅದರ ಕಡೆಗೆ ದೃಷ್ಟಿ ಹಾಕಿದರಲು ಸಾಧ್ಯವಿಲ್ಲ."

ಂಂ ಂಂ

ಮದ್ರಾಸ್ ಎಸೆಂಬ್ಲಿ ಸಭೆಯು ವಿವಿಧ ರೀತಿಯ ಪೋಷಾಕುಗಳ 'ಬಗೆ ಬಣ್ಣದ ಉದ್ಯಾನ'ವೆಂಬಂತಿದೆ. ಚಲ್ಲಾಣ, ಪಲಾವಂಗ, ಉದ್ದ ಟೋಪಿಗಳ ಮುಸ್ಲಿಂ ಸದಸ್ಯರಿಂದಾರಂಭಿಸಿ, ಸೊಂಟದ ಕೆಳಗೂಂದು ಬೈರಾಸನ್ನಷ್ಟೇ ಸುತ್ತಿಕೊಂಡಿರುವ ಸನಾತನೀ ಬ್ರಾಹ್ಮಣ ಸದಸ್ಯರ ವರೆಗೂ ಅಷ್ಟೆ ಇದ್ದಾರೆ. "ಶಾಸನ ಸಭಾ ಸದಸ್ಯರಿಗೆ 'ಸಮ ಪೋಷಾಕು' ಕ್ರಮವನ್ನು ತಂದರಾಗದೇಗೆ" ಎಂಬ ಪ್ರಶ್ನೆಗಳು ಎಸೆಂಬ್ಲಿಯ ಮುಂದೆ ಬಂದಿದ್ದವು. ದೇಶದ ಹೆಚ್ಚಿನ ಭಾಗವನ್ನು ತೆರೆದೇ ಪ್ರದರ್ಶಿಸುವ ಶ್ರೀ ಎ. ವೈದ್ಯನಾಥ ಅಯ್ಯರರನ್ನು ತೋರಿಸಿ, ಸಭೆಲು ನಡೆದಾಗ "ನನ್ನ ಶರ್ಟುಗಾಗುವಷ್ಟು ನೂಲನ್ನು ಸ್ಪರ್ಶಿಸುವ ಸದಸ್ಯರು ಚರಿಕದಿಂದ ತೆಗೆದುಕೊಡುತ್ತಾನಂದರೆ ನಾನು ಶರ್ಟುಹಾಕಿಕೊಳ್ಳಲು ತಯಾರು" ಎಂದು ಶ್ರೀ. ಅಯ್ಯರಂದರು. ಎಸೆಂಬ್ಲಿ ಅಧ್ಯಕ್ಷರು ಈ ವೊದಲೇ 'ಸದಸ್ಯರ ವಸ್ತ್ರನಿರ್ಬಂಧದ'ಕುರಿತು ಹಾರ್ಲಿಸೆಂಟ್ ಅಧ್ಯಕ್ಷರ ಅಭಿಪ್ರಾಯಕೇಳಿದ್ದರಂತೆ. ಆ ತಹ ಸಮಾನತಾನಿಯಮವು ಜಾರಿಗೆ ಕ್ಕೆ

ಕನ್ನಡಿಗರು ತಮ್ಮನ್ನು ತಾವೇ ಆಳಿಕೊಳ್ಳಲು ಅಸಮರ್ಥರೆಂದೂ, ಶುದ್ಧಬಾಂಧವ್ಯ ನೀಡುವ ಯಾವ ಪ್ರೋತ್ಸಾಹನೆಯಿಂದಲಾದರೂ ಸದಸ್ಯರು ಸಭೆಗೆ ಬರಬಹುದೆಂದೂ, ಸಭಾನಾಯಕ ಶ್ರೀ ಬಿ. ಗೋಪಾಲರೆಡ್ಡಿಗಳು ಬೇಳಬ್ದಾಗಿ.

೦೦ ೦೦

ಮದ್ರಾಸ್‌ಎಸೆಂಬ್ಲಿಯ 'ಜೀರೋ ಅವರ್'ನದು ಚರ್ಚೆಗಳಲ್ಲಿ ಶ್ರೀಯುತ ಟೇಕಗೊಳಗಾಗಿದ ಮಂತ್ರಿಗಳಿಂದರೆ ಆರ್ಥ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿ ಮತ್ತು ವಿದ್ಯಾಮಂತ್ರಿ ಶ್ರೀ ಟಿ. ಎ. ಅವಿನಾಶಲಿಂಗಂ ಚೆಟ್ಟಿಯಾರ್ ರು. ಪ್ರಧಾನ ಮಂತ್ರಿಗಳ ಕಾರ್ಯಭಾರವೇನೂ ಅಲ್ಲ ಕಂಡು ಬಂದಿಲ್ಲ; ಸಭಾನಾಯಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದ ಶ್ರೀ ಬಿ. ಗೋಪಾಲರೆಡ್ಡಿಗಳು ಅತಿರೇಕ ಉತ್ಸಾಹ ಮತ್ತು ಹೆಗ್ಗಳಿಕೆಯವರೆಂಬ ಭಾವನೆ ಮೂಡುವಂತೆ ಬಾಯಿ ಹಾಕುತ್ತಿದ್ದರು. ವಿದ್ಯಾ ಮಂತ್ರಿ ಶ್ರೀ ಅವಿನಾಶಲಿಂಗಂ ಚೆಟ್ಟಿಯಾರ್‌ರು ಅವಿವೇಕಿತನ; "ಮದುವೆಯಾಗದ ಮಂತ್ರಿಗೆ ಮಕ್ಕಳ ಸ್ಥಿತಿಗತಿ ಹೇಗೆ ಗೊತ್ತಾಗಬೇಕು?" ಎಂಬಂತಹ ಮಾತುಗಳು ಕೂಡಾ ಚರ್ಚೆಯ ವೇಳೆ ಕೇಳಿ ಬಂದಿದ್ದವು.

೦೦ ೦೦

ಮದ್ರಾಸ್ ಶಾಸನ ಸಭೆಗೆ ಕಾಂಗ್ರೆಸ್ಸಿನ ಪ್ರತಿನಿಧಿಯ ಸದಸ್ಯರ ವಾರ್ಷಿಕ ಮಹಾಸಭೆಯು ಇದೇ ಮಾರ್ಚ್ ತಾ. 31ಕ್ಕೆ ಮದ್ರಾಸಿನಲ್ಲಿ ನೆಡೆಯುವುದೆಂದು ತಿಳಿದುಬಂದಿದೆ. ಬರುವ ಪದಾಧಿಕಾರಿಗಳ ಚುನಾವಣೆಯು ಆ ಸಭೆಯಲ್ಲೇ ನಡೆಯಲಿದೆ. ಈ ಬಾರಿ ಶ್ರೀ ಪಿ. ರಾಮಸ್ವಾಮಿ ರೆಡ್ಡಿಯಾರ್ರು ಬದಲಿಗೆ ಡಾ| ಸುಬ್ಬರಾಯನ್ ನಾಯಕನಾಗಿ ಆಯ್ಕೆಮಾಡಿದೆಂದೂ, ಶ್ರೀ ರಾಮದಾಸ ನಾಯರ್ ಮತ್ತು ಡಾ| ಸುಬ್ಬರಾಯನ್ ವಿರುದ್ಧವಿದ್ದು ಶ್ರೀ ಓಮಂದೂರನ್ನ ಸ್ಪರ್ಧಿಸಲಿರುವರೆಂದೂ ಸುದ್ದಿ. ಡಾ| ಸುಬ್ಬರಾಯನ್ ಆಯ್ಕೆಯಾದ್ದಲ್ಲಿ ಮಂದಿನ ಮಂತ್ರಿಮಂಡಲದಲ್ಲಿ ಶ್ರೀ. ಟಿ. ಪ್ರಕಾಶಂ, ಶ್ರೀ ಕೆ. ಆರ್. ಕಾರಂತರೇ ಮೊದಲಾದವರು ಸೇರಿಕೊಳ್ಳಬಹುದೆಂದೂ ವಾರ್ತೆಯಿದೆ. ಆದರೆ ಇವೆಲ್ಲವೂ ಶಾಹಾಪೋಶಿಗಳು ಮಾತ್ರ!

(Notice under order 21, rule 66 of C. P. C.)

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ.

R. E. P. 382/1948

O. S 383/1936

ಕೆ ರಾಮಕೃಷ್ಣ ಕೆದ್ಲಾಯ — ಅರ್ಜಿದಾರ.

ಮತ್ತು

ಶ್ರೀನಿವಾಸ ಭಟ್ಟ, ಕುರುಗುಂಜ ರಾಮಭಟ್ಟ, ಸಂಗ, ಉಡುಪಿ ತಾಲ್ಲೂ ಆರೂರು ಗ್ರಾಮ — ಎದ್ರಿ.

ನೋಟಿಸ್:—

ನೀಲ್ಬುಂಡ ನ್ಯಾಯಾಧಿಪತಿಯವರ ಮೇಲೆ ಆ ಋಣವನ್ನು ನಡೆಸಿದ ಮೇಲಿನ ಆಬ್ಲಿಜ್ಜಾರಿಯಲ್ಲಿ ಜಾಸ್ತಾದ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಯಿಸ್ತಿಹಾರು ಹಾಜರು ಮಾಡಿರುತ್ತಾನೆ. ಆಮೇಲಿಂದ ವಿಕ್ರಯಪಾಯಿಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕೆ 1949ನೇ ಯಿಸ್ವಿ ಎಪ್ರಿಲ್ 7ನೇ ತಾರೀಖು ನಿಶ್ಚಯಿಸಲಾಗಿರುತ್ತದೆ.

B. Vasudeva Rao

Council for Petitioner.

ಉಡುಪಿ, 22-3-49.

"ಮಹಿಳೆ ಮದುವೆಯಾದ ನೇಲೂ ಸಮಾಜ ಸೇವೆ ಬಿಡಬಾರದು" — ನೆಹರು

ನವದೆಹಲಿಯಲ್ಲಿ 'ಲೇಡಿ ಇರ್ವಿನ್ ಕಾಲೇಜಿ'ನ ಸ್ಥಾಪಕರ ದಿನದ ಸಮಾರಂಭದಲ್ಲಿ ಇದೇ ತಾ. 20ರಲ್ಲಿ 'ಪದವೀದಾನ' ಭಾಷಣವೀಯುತ್ತಾ ಪಂಡಿತ ನೆಹರುಗಳು ವಿದ್ಯಾರ್ಥಿನಿಗಳಿಗೆ ಉಪದೇಶಿಸಿದರು: "ಒಬ್ಬಳೆ ಮದುವೆಯಾದ ಮಾತ್ರಕ್ಕೆ ಸಮಾಜಕ್ಕಾಗಿ ತಾನು ಮಾಡಬೇಕಾದ ಕರ್ತವ್ಯಗಳನ್ನು ಮರೆಯಬೇಕೆಂದೇನು; ಅಧಿಕಾರ ಕೆಡೆಗಣಿಸಬೇಕೇಕೆ, ಎಂಬುದೇ ನನಗೆ ಮಂದಟ್ಟಾಗುವದಿಲ್ಲ. ಮದುವೆ ಮತ್ತು ಸಮಾಜ ಸೇವೆ, ಇವೆರಡೂ ಕಾರ್ಯಭಾರಗಳು ಜತೆಯಲ್ಲಿ ಸಾಗಲು ಸಂಪೂರ್ಣ ಸಾಧ್ಯವಿದೆ. ಮದುವೆಯೊಂದಿಗೆ ತಮ್ಮ ಸಾಮಾಜಿಕ ಜೀವನವು ಮುಕ್ತಾಯಗೊಂಡಿತೆಂದು ಹುಡುಗಿದುರು ಭಾವಿಸಿಕೊಳ್ಳಲಾರರೆಂದು ನೆನಸುತ್ತೇನೆ. ನಾವೆಲ್ಲರೂ ವಿಶೇಷ ಶ್ರಮಿಸಬೇಕಾದ ಕಾಲವಿದು. ನಿಮ್ಮ ಈ ತಲೆಯೆಂಬುದು ಕರೋ೧ ಕಾರ್ಯಗಳಿಗೆ ದೂಡಲ್ಪಟ್ಟರುವ ಜನಾಂಗ. ಆದರಿಂದ ಅರೋಪಿಸಿದ್ದವಾದ ತೆಪ್ಪಗೊಂಡಿರುವಂತಹ ರಣಿ ಶ್ರಮವೇನೂ ಬೇಡ; ಒಬಲಿಗೆ ನಮ್ಮ ಮನಸ್ಸಿಗೆ ಮೆಚ್ಚುಗೆಯಾಗುವ ಮತ್ತು ಪರಿಣಾಮ ಕೊಡುವ ಬಿಗು ಶ್ರಮ. ಅದೊಂದು ಅತ್ಯಂತ ಮನಮೋಹಕ ಅನುಭವ. ಭಾರತವಿಂದು ಬಡಲಾವಣೆಯ ಹಾಗೂ ಕೇವೆ ಹಚ್ಚುವ ಅವಧಿಯನ್ನು ದಾಟುವುದರಲ್ಲಿದೆ. ಈ ಮಾರ್ಪಟ್ಟಿತ ಸ್ಥಿತಿನಾ-ಗಿ-ಾ-ಗಿ ತನ್ನನು ಹೊಂದಿಸಿಕೊಳ್ಳಲು ಕಲವೇ ಮಂದಿ ಮಾತ್ರ ಸಾಧ್ಯವಾಗಿದೆ. ಇಂಗಾಗಿ ಈಗ ನಡೆದಿರುವ ಸಂಗತಿಗಳ ಮತ್ತು ಈಗಿನ ಜನತೆಯ ಮನೋವೃತ್ತಿಗಳ ನಡುವೆ ಅತಿ ವಿಸ್ತಾರವಾದ ಬಿರುಕು ಉಳಿದಿದೆ. ಇಂತಹ ಬಿರುಕಿನಿಂದ ಆಂತರಿಕ ಹಾಗೂ ಬಹಿರಂಗ ಅಡಿಮೇಲು ಳಾಗಬಹುದು. ಆದ್ದರಿಂದ ಮೂಲಭೂತ ಮುಖ್ಯ ವಿಷಯಗಳ ಅನುಭವಪೂರ್ಣ ಕೊಳ್ಳಲು ಪ್ರಯತ್ನಿಸಬೇಕಾದುದು ಅಗತ್ಯ. ಈ ಕಾಲದಲ್ಲಿ ಅತಿ ಮುಖ್ಯವಾದುದು ಮತ್ತು ಅತ್ಯವಸರದ್ದೆಂದರೆ ಕಲಸ-ಮತ್ತೂ ಮತ್ತೂ ಕಲಸ. ನಾನು ಹೆಚ್ಚಿಗೆ ಕಲಸಮಾತಾಡಿ ಹೆಚ್ಚೆಚ್ಚು ಪಶ್ಚಾತ್ತಾಪ ಪಡಬೇಕಾಯಿತು. ನಿನ್ನ ಹಲವು ಮಿತ್ರರು ಎಷ್ಟೊಗಳೆಗೆ ಉಪದೇಶಿಸುವವಿದೆ. ಆದರೆ ನನಗಿಂತ ಹೆಚ್ಚಿನ ವಿಶ್ರಾಂತಿ ಮತ್ತು ರಜೆಗಳನ್ನು ಪಡಕೊಳ್ಳಬಲ್ಲರು ನನ್ನ ಶಾಲಕಾಲೇಜುಗಳ ಹಳೆಮಿತ್ರರ ಹೃದಯೊಡನೆ ನನ್ನನ್ನು ಹೋಲಿಸಿನೋಡುವಾಗ, ನಾನು ಪೃಹಿಕವಾಗಿಯೂ, ಜೀವನವಶ್ಯ ಅನುಭೋಗಿಸುವ ಮಟ್ಟಿಗೂ ಅವರಿಂತ ಎಷ್ಟೋ ಉತ್ತಮಸ್ಥಿತಿಯಲ್ಲಿದ್ದೇನೆ ಎಂದು ನನಗನ್ನಿಸುತ್ತದ. ಆದರಿಂದಕೆಲಸವೆಂದರೆ ಹೆದರಬೇಡಿ; ರಾತ್ರಿಪಗಲು ದುಡಿಯಿರಿ. ಆದರೆ ಅಂತಹ ಕೆಲಸಮಾತ್ರ ಸರಿಸಕ್ತಬುದ್ಧಿ ಮತ್ತು ದೇಶದ ಮೂಲಕವೇ ಆಗಲಿ"

ಮುಂಬಯಿ

ಶ್ರೀ ಭಗವತೀ ನೃತ್ಯಕಲಾ ಮಂದಿರ-ಇದರ 3ನೇ ವಾರ್ಷಿಕೋತ್ಸವವು ತಾ 15-3-49ರಲ್ಲಿ ಶ್ರೀ ಆರ್. ಡಿ. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭದಲ್ಲಿ ಶ್ರೀ. ಬಿ. ಯಸ್. ನ್ಯಾಕ್ ಮೊದಲಾದವರು ಮಂದಿರದ ವಿಷಯದಲ್ಲಿ ಪ್ರೋತ್ಸಾಹಪೂರ್ಣ ಸಲಹೆಗಳನ್ನು ಕೊಟ್ಟರು. ಅಧ್ಯಕ್ಷರ ಭಾಷಣದ ಮೇಲೆ ಸಂಗೀತ ನೆಡೆಯಿತು. ಶ್ರೀ. ಎ ಐತಪ್ಪ ಭಂಡಾರಮನೆಯವರು ಕೂಡಿದ ಸಭಿಕರಿಗೆ ಉಪಕಾರಸ್ಮರಣೆ ನಾಡಿ ಸಭೆಯು ಕೊನೆಗೊಂಡಿತು

ಶ್ರೀ ರಜಕ ಸಂಘದ- 12ನೇ ವಾರ್ಷಿಕ ಮಹಾಸಭೆಯು ತಾ 6-3-49ರಲ್ಲಿ ಸಂಘದ ಅಧ್ಯಕ್ಷ ಶ್ರೀವಮೂಡಬಿದ್ರಿ ಡಿ ಈಶ್ವರಯ್ಯ ಸಭಾ ನೇತೃತ್ವದಲ್ಲಿ ಜರಗಲಾಯಿತು ಸಂಘದ ಹಾಗೂ ಸಮಾಜದ ಉನ್ನತಿಯನ್ನು ಬಯಸಿ ಶ್ರೀಯುತರುಗಳಾದ ಪೂವಪ್ಪ ಕೆ. ಕುಂದರ್, ರಾಮು ಎ ಶಲಪಾಡಿ, ದೇವು ಯನ್. ಸಾಲ್ಯಾನ್ ಮತ್ತು ಸಾಗಪ್ಪ ಯಸ್. ಕುಂದರ್ ಇವರ ಭಾಷಣಗಳಾದುವು. ಅಧ್ಯಕ್ಷರು ಹಲವು ಹಿತ ಸೂಚನೆಗಳನ್ನಿತ್ತು ರಜಕ ಸಮಾಜದ ಉಜ್ಜಾರಕ್ಕಾಗಿ ದುಡಿಯುತ್ತಿರುವ ಈ ಸಂಸ್ಥೆಗೆ ಪ್ರತಿಯೊಬ್ಬ ಜಾತಿ ಬಾಂಧವರು ತಮ್ಮ ಸಹಕಾರ ಸಹಾನುಭೂತಿಯನ್ನಿತ್ತು ಸಮಾಜ ಸುಧಾರಣೆಯ ಮಹತ್ತಾದ ಕಾರ್ಯದಲ್ಲಿ ನಿರತರಾಗಬೇಕೆಂದು ವಿನಂತಿಸಿ ತನ್ನ ಸರಸವಾದ ಭಾಷಣವನ್ನಿತ್ತರು.

ಉಡುಪಿ

ಆನೆಕಾಲು ರೋಗ ನಿವಾರಣಾ ಸಭೆಯು ತಾ 20ರಲ್ಲು ಮುನಿಸಿಪಲ್ ಮೈನ್ ಶಾಲೆಯಲ್ಲಿ ಡಾ। ಟಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಆನೆಕಾಲು ರೋಗದ ಚಿಹ್ನೆಗಳು, ಕಾರಣಗಳು, ಮತ್ತು ಅದನ್ನು ತಡೆಗಟ್ಟುವ ಉಪಾಯಗಳಳಕುರಿತು ಅಧ್ಯಕ್ಷರು ಸೂತಾನಾಡಿದರು. ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಆರ್. ವೇಣುಗೋಪಾಲ ದಾಯರು ನುಸಿಗಳನ್ನು ನಾಶಪಡಿಸುವ ವಿಧಾನಗಳಳಕುರಿತು ಮಾತನಾಡಿ ಡಿ. ಡಿ. ಟಿ. ಮತ್ತು 'Pyrethrum' ಪ್ರಯೋಗ ಪ್ರದರ್ಶನವನಾಡಿದರು. ಮುನಿಸಿಪಲ್ ಕಮಿಷನರ್ ಶ್ರೀ ಬಾಲಗಂಗಾಧರಪ್ಪ ಆವರು ಬರುವ ಎಪ್ರಿಲ್ ತಿಂಗಳಾರಂಭದಿಂದ ನುಸಿಗಳ ಉತ್ಪತ್ತಿಸ್ಥಾನಗಳನ್ನು ಡಿ. ಡಿ. ಟಿ. ಪ್ರಯೋಗದಿಂದ ನಾಶಮಾಡುವ ನಿರ್ಣಾಯ ಮಾಡಲಾಗುವುದೆಂದು ತಿಳಿಸಿದರು. ಮನೆಗಳಿಗೆ ಡಿ. ಡಿ. ಟಿ. ಪ್ರಯೋಗ ನೂಡುವ ಬಗ್ಗೆ ಒಂದು ಸಮಿತಿಯ ನಿರ್ಮಾಣವಾಯಿತು.

ಶ್ರೀ ಗುರುರಾಜರ ಪುಣ್ಯ ದಿನಾಚರಣೆಯು ತಾ 17ರಲ್ಲು ಶ್ರೀ ಕೃಷ್ಣಮಠದಲ್ಲಿ ಪರ್ಯಾಯ ಶ್ರೀ ಸೋದೆ ಸ್ವಾಮಿಗಳವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಿತು.

ಜೋಳಿಗೆ ಉತ್ಸವ ಜನತೆಯು ಆಶೀರ್ವಚನದಿಂದ ಸೆಪೊಲನಾ ವಿತರಣೆಯು ಬದಲಾಗಿ ಜನರು ಪ್ರೀತಿಸಿನ ಕಡಿಮೆ ಬೆಲೆಯ ಜೋಳವು ಸೀದಾ ಅಂಗಡಿಗಳಲ್ಲಿ ದೊರೆಯುವಂತಾದರೆ ಬಡವರಿಗೂ ಸಾಮಾನ್ಯ ಕರಗತಿಯವರಿಗೂ ತುಂಬಾ ಉಪಕಾರವಾದೀತು.

ಮಂಗಳೂರು

ಕರ್ನಾಟಕ ಪೊಲಿಟೆಕ್ನಿಕ್ ಕಾಲೇಜು ದಿನಾಚರಣೆಯು-ತಾ 19ರಲ್ಲಿ ಜಿಲ್ಲಾ ಕಲೆಕ್ಟರ್ ರಾವ್ ಸಾಹೆಬ್ ಎನ್.ಸಿ-ತೋಮರ ಅಧ್ಯಕ್ಷತೆಯಲ್ಲಿ ಜರಗಿತು. ಸಂಸ್ಥೆಯ ಪ್ರಧಾನಾಧಿಕಾರಿ ಪಿ. ಸಕ್ಕರಿ ಸ್ವಾಗತ, ವಂದಿನಾಚನೆನಾದ ಮೇಲೆ ಅಧ್ಯಕ್ಷರು ಭಾಷಣವಾಗಲು ಶ್ರೀ ಎನ್. ಎಂ ಅತ್ಯಂತಾಯರು ಧನ್ಯವಾದಗಳನ್ನಿತ್ತರು.

ವಿದ್ಯಾರ್ಥಿನಿಯರಿಗೆ ಗೌ। ಕಾಲೇಜಿನಲ್ಲಿ ಪ್ರವೇಶಕೊಡುವ ಕುರಿತ ಸಾರ್ವಜ ಸಭೆಯೊಂದು- ತಾ 18ರಲ್ಲಿ ಗಣಪತಿ ಹೈಸ್ಕೂಲಲ್ಲಿ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿ ಗೌ। ಕಾಲೇಜಿಗೆ ವಿದ್ಯಾರ್ಥಿನಿಯರ ಪ್ರವೇಶಕ್ಕೆ ಕೆಲವು ನಿರ್ಬಂಧಗಳನ್ನು ಕಲ್ಪಿಸುವ ಸರಕಾರಿ ಹುಕುಮನ್ನು ಪರ್ಯಾಲೋಚಿಸಲಾಯಿತು. ಇದರ ಭಾಷಣಗಳಾಗಿ ಈ ಅಪ್ಪಣೆಯಿಂದ ನಮ್ಮ ಜಿಲ್ಲೆಗೆ ಕಷ್ಟನಷ್ಟಗಳುಂಟಾಗುವುದೆಂದು ಅದನ್ನು ಇದ್ದಿಗೆ ಅತ್ಯಾವಶ್ಯಕವಾದುದಾಗಿದೆಯೆಂದು ನಿರ್ಣಯಿಸಿ ಅಂಡೋಲನದ ಬಗ್ಗೆ ಒಂದು ಕಮಿಟಿ ನಿರ್ಮಿಸಲಾಯಿತು.

ಸರಕಾರಿ ಸಂಸ್ಥೆಗಳಿಗೆ ಮುನ್ಸಿಫ್ ಕೋರ್ಟುಗಳಿಗೆ— ವಕೀಲರಾರಿಗೆ- ಶಿ. ಲೆಗಳಿಗೆ- ಬೇಕಾಗುವ ರಿಜಿಸ್ಟ್ರಿ ಗಳು, ರಶೀದಿಪುಸ್ತಕಗಳು, ಫಾರ್ಮುಗಳೂ, ಎಕೌಂಟ್ ಪುಸ್ತಕ, ಕಾರಿಫಂಡು ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಪ್ರಕಟಣೆ

'ನವಯುಗ' ಮತ್ತು 'ಅಂತರಂಗ' ಪತ್ರಿಕೆಗಳಿಗೆ ಚಂದಾದಾರರನ್ನು ಸೇರಿಸಲಿಕ್ಕೂ ಜಾಹೀರಾತುಗಳನ್ನು ಸಂಗ್ರಹಿಸಲಿಕ್ಕೂ ಶ್ರೀ. ಕೆ. ಆನಂದ ಶೆಟ್ಟರು ಅಧಿಕಾರ ಕೊಡಲಿರುತ್ತೇವೆ. ಇವರಿಗೆ ಸರ್ವರೂ ಸಹಕಾರವೀಯಬೇಕಾಗಿ ವಿನಂತಿಸುತ್ತೇವೆ.

ಮೆನೇಜರ್,
'ನವಯುಗ'

'ಅಂತರಂಗ' ದಲ್ಲಿ ಜಾಹಿರಾದ ಪುಸ್ತಕಗಳು

ಗರ್ಭಿಣಿಯರ ಬಿರುದಾವಳಿ (ಎಂ. ವಿ. ಹೆಗ್ಡೆ)	0	2	0
ಆ ಸುದ್ದಿ (ಕತೆ) (,,)	0	2	0
ಹೈದರಾಬಾದ್ ವಿಜಯ ಅಥವಾ ರಘುವೀರಸುರಸಂಹಾರ	0	3	0
ಸರೆಯಾಳು (ನೀಳ್ಗತೆ, ಕುಲಕರ್ಣಿ ಬಿಂದುಮಾಧವ	0	4	0
ಗಾಂಧಿಯ ಗಾಂಧಿ (ಸೂಕ್ಷ್ಮಪರಿಚಯ)ಎಂ. ವಿ ಹೆಗ್ಡೆ	0	3	0
ಶಾಂತಿಯ ಮಡಿಲಿನಲ್ಲಿ (ನೀಳ್ಗತೆ) ಪ. ಸು. ಭಟ್ಟ	0	3	0
ಬಲಿಪೀಠದಲ್ಲಿ (ನಾಟಿಕ) ಆರ್. ಕಲ್ಯಾಣಮ್ಮ	0	3	0
ಅಗಲಿದ ಅಕ್ಕ ಸರೋಜಿನಿ (ಎಂ ವಿ. ಹೆಗ್ಡೆ)	0	3	0
ನನ್ನ ಹೊಡತ (ಕತೆಗಳು) ಮಾಳಗೋಡ್ ನಾರಾಯಣ ಹೆಗಡೆ	0	೨	0
ಪುಣ್ಯಸ್ಥಲ (ಕತೆ) ಗರಿಬಾಲೆ	0	3	0

ಪ್ರತಿಗಳಿಗೆ ಬರೆಯಿರಿ:-

ಅಂತರಂಗ ಕಾರ್ಯಾಲಯ, ಉಡುಪಿ

ದ. ಕನ್ನಡ
ಕುರ್ಕಾಲಿನ ಗ್ರಾಮಾಭಿವೃದ್ಧಿ ಕಾರ್ಯ.

ಇದೇ ತಾ. 20ನೇ ಆದರಾಪ್ತ ಕುರ್ಕಾಲು ಗಿರಿಜಾ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಕುರ್ಕಾಲು ಸೊಸ್ಯಾಟಿ, ಪಂಚಾಯತ್ ಬೋರ್ಡು ಮತ್ತು ಗ್ರಾಮಸಂಘದ ಸಭೆಗಳು, ಗ್ರಾಮದಲ್ಲಿ ನಿವಿಧ ಯೋಜನಾ ಕಾರ್ಯಕ್ರಮಗಳನ್ನು ಸಹಕಾರ ಸಂಘದ ಮೂಲಕ ಜಾರಿಗೆ ತರುವರೆ ಅವುಗಳ ಅಧ್ಯಕ್ಷರಾದ ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ಜರಗಿದವು. ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ಗ್ರಾಮ ಸಂಘದ ಸಭೆಯಲ್ಲಿ ಶ್ರೀ ಕೆ. ಗಣಪಯ್ಯ ಸೆಟ್ಟರ ಮುಮ್ಮಾತು ಮತ್ತು ನಿವೇದನೆಗಳಾದುವು. ಶ್ರೀ. ಕೆ. ಗಣಪಯ್ಯ ಸೆಟ್ಟರ ಕಾಲೋಚಿತವಾದ, ಮಿತ್ಯವರಿಗೂ ನೀಲ್ಪಂಗಿತ್ತಿಯಾಗಬಲ್ಲ ಗ್ರಾಮಸಂಘಟನಾ ಕಾರ್ಯವನ್ನು ಲಕ್ಷಿಸಿ ಮತ್ತು ರೈತರ ಸ್ಥಾನಮಾನ, ಆವಶ್ಯಕತೆ ಹಾಗೂ ಧವ್ಯಗಳ ಸನ್ನಿವೇಶಕ್ಕೆ ಸಲುಹೆಗಳೊಡನೆ ಬೆಲ್ಲಾ ಬಿಲ್ ಆಸ್ಸೆಂಟ್ ಅಫೀಸರ್ ಶ್ರೀ ಎಮ್. ಕೃಷ್ಣಯ್ಯ ಸೆಟ್ಟಿ, ಶ್ರೀ ಎಂ. ವಿ ಹೆಗ್ಡೆ, ಶ್ರೀ ಬಿ. ಗೋಪಾಲ ಕೃಷ್ಣ ಬಲ್ಲಾಳ ಮೊದಲಾದವರ ಭಾಷಣಗಳಾದುವು. ಸಂಘದ ಕಾರ್ಯಾಲಯಕ್ಕಾಗಿ ಆತ್ಮಗತ್ಯವಿರುವ ಭವನವನ್ನು ಕಟ್ಟಬೇಕೆನ್ನುವುದಕ್ಕೆ ಪುಷ್ಟಿಯನ್ನು ಒದಗಿಸಿದ ಅಲೆಯೊಂದನ್ನು ಪಡಕೊಳ್ಳುವ-ಬೇಸಾಯಾಭಿವೃದ್ಧಿಗಾಗಿ ಬೀಜ, ಗೊಬ್ಬರ ಮತ್ತು ಅಗತ್ಯ ಪಳ್ಳ ಉಪಕರಣಗಳನ್ನು ತರಿಸುವ-ಸಹಕಾರದಿಂದ ಸಹಾಯವಾಗಿದೊರೆತ ರೂ 75 ರೊಂದಿಗೆ ಸಂಘದ ಧನವನ್ನೂ ಸೇರಿಸಿ ಗ್ರಾಮ ಟೈಪ್ರಿರಿ ತೆರೆಯುವ-ಮತ್ತಿತರ ನಿರ್ಣಯಗಳಾದುವು. ಈ ಮಹಾಸಭೆಗೆ ಬೆಲ್ಲಾ ಸಹಕಾರ ಸಂಸ್ಥೆಗಳ ಡಿಪ್ಯುಟಿ ರಿಜಿಸ್ಟ್ರಾರ್, ಬೆಲ್ಲಾ ಸೆಂಟ್ರಲ್ ಬ್ಯಾಂಕಿನ ಲಕ್ಷ್ಮಿಸೇರೆ ಮೊದಲಾದವರಿಂದ ಸಂದೇಶ ಗಳು ಬಂದಿದ್ದುವು. ಕೊನೆಯಲ್ಲಿ ಶ್ರೀ. ಕೆ. ಗಣಪಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹೆಗ್ಗುಂಜೆ ಇದೇ ತಾ. 16ರಲ್ಲಿ ಹೆಗ್ಗುಂಜೆ ಗ್ರಾಮದ ಮಂದಾರ್ತಿಯಲ್ಲಿ ಬಂದು ಹೊಸ ಪೋಸ್ಟಾಫೀಸು ತೆರೆಯಲ್ಪಟ್ಟಿದೆ

ಹೇರೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಶ್ರೀ ರಾಮಭಜನಾ ಮಂಡಳಿಯವರಿಂದ ಇದೇ ತಾ 11ರಲ್ಲಿ ಭಜನ ಸಪ್ತಾಹವು ಅತ್ಯಂತ ವಿಜೃಂಭಣೆಯಿಂದ ಜರಗಿತು.

ಮೂಡಬಿದ್ರೆ ಇಲ್ಲಿಯ ಬಾಲಿಕಾ ಮಾಧ್ಯಮಿಕಾಲಯ ಪ್ರತಿಷ್ಠಾ ವಾರ್ಷಿಕೋತ್ಸವವು ತಾ 13ರಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನ ಉಪಾಧ್ಯಾಯನಿಯರಾದ ಶ್ರೀಮತಿ ಮಾಯಾರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಾ ಮುಮ್ಮೇಳಾದ್ಯಂತವು ಶ್ರೀಮತಿ ಶಶಿಕಲಾ ಕಾಮತರಿಂದ ಸ್ವಾಗತ ಭಾಷಣ, ಶ್ರೀಮತಿ ವಿಮಲಾ ಕುಡ್ವರಿಂದ ವರದಿವಾಚನ, ಶ್ರೀಗಳಾದ ನಾಸುದೇವ ಪೈ, ನರಸಿಂಹಯ್ಯ, ಕೊಗ್ಗಣ್ಣ ಮಲ್ಯ, ಕೃಷ್ಣ ಗೋಪಾಲ್, ಭುಜಬಲಿ ಶಾಸ್ತ್ರಿ ಮತ್ತು ಶ್ರೀಮತಿ ಲಲಿತ, ಎಚ್. ದೇವರಾಯ ಪೈ ಮೊದಲಾದವರ ಭಾಷಣಕಾರ್ಯಕ್ರಮಗಳಾದುವು, ಅಧ್ಯಕ್ಷೆಯರು ಮುಕ್ತಾಯ ಭಾಷಣದಲ್ಲಿ ಶ್ರೀ ವಿದ್ಯಾಭ್ಯಾಸದ ಮುಖ್ಯತ್ವವನ್ನು ವಿವರಿಸಿ ಪರರ ಏಳಿಗೆಗಾಗಿ ಜನತೆಯು ನೀಡಬೇಕಾದ ಸಹಕಾರವನ್ನು ಸೂಚಿಸಿದರು. ವಿವಿಧ ವಿನೋದಾವಳಿ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಕುಂಬಳೆ ಈ ಕ್ಷೇತ್ರಕ್ಕೆ ಸೇರಿದ ೧೧ ಪ್ರಾಥಮಿಕ ಶಾಲೆಗಳಲ್ಲಿ ಬರುವ ತಾಲೂಕುವರೆಸಿ ಬಾಸಿಕ್ ಶಿಕ್ಷಣವನ್ನು ಜಾರಿಗೆ ತರುವುದಾಗಿ ತಿಳಿದುಬರುತ್ತದೆ.

ಮಾಯಿಪ್ಪಾಡಿ ಎಂಬಲ್ಲಿ ಸುರುವಾಗಲಿರುವ ಬೇಸಿಕ್ ತರಬೇತಿ ಶಾಲೆಯು ಕಟ್ಟಡದ ಕೆಲಸವು ಈಗ ಪ್ರಾರಂಭವಾಗಿರುತ್ತದೆ.

ಬೈಂದೂರು ತಾ. 8ರಲ್ಲಿ ಉಪ್ಪುಂದ ಅಮ್ಮನವರ ಕಪ್ಪಲಲ್ಲಿ ಶ್ರೀ ಬಿ. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಇಲ್ಲಯ ಕರ್ನಾಟಕ ಹರಿಕಾಂತ ಸಮಾಜದ ಮಹಾಸಭೆ ಜರಗಿತು. ಈ ಸಮಾಜದ ಬಂಧುತ್ವ, ವಿದ್ಯಾರ್ಥಿಗಳು ಹ್ಯಾಸ್ಕೂಲು ಶಿಕ್ಷಣ ಪಡೆಯುವರೆಗೆ ಸಂಗ್ರಹಿಸಿದ ಧನವನ್ನು ಶ್ರೀ ಸುಬ್ಬಣ್ಣ ಸೆಟ್ಟರು ಸಮಾಜದ ಕಾರ್ಯದರ್ಶಿಯರ ವರ ಕೊಟ್ಟರು.

ಬನ್ನಾಡಿ ಬನ್ನಾಡಿ ಸರಮಪಂಸ ಪ್ರಾಥಮಿಕ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ತಾ 13ರಲ್ಲು ಕುಂದಾಪುರ ಸಬ್ ಕಲೆಕ್ಟರ್ ರಾವ್‌ಸಾಹೇಬ್ ಚಾರ್ಲ್ಸ್ ಜೋನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಬಹುಮಾನ ವಿತರಣೆಗಳಾದ ನಂತರ ಅಧ್ಯಕ್ಷರು ಈ ಶಾಲೆಯು ಚಟುವಟಿಕೆಗಳನ್ನು ಕೊಂಡಾಡಿ ಶಾಲಾ ಮೆನೆಜರ್ ಶ್ರೀ ಸುಬ್ಬಣ ಹೆಗ್ಡೆಯವರ ಮತ್ತು ಅವರ ಸಹಸಾಹಿಗಳ ಆದರ್ಶಪ್ರಾಂತ ವಿದ್ಯಾಸೇವೆಯನ್ನು ಪ್ರಶಂಸಿಸಿದರು. ಬಳಿಕ ಶಾಲಾಮಕ್ಕಳ ವಿವಿಧ ವಿನೋದಾವಳಿಗಳಾದುವು.

ಮಲ್ಪೆ ಫಲೀರೀಸ್ ಹಾಗೂ ಎ ಶಾಲೆಯು ನರಂಜನ ಸ್ಕೌಟ್‌ದಳದವರ ಕೇಂಪ್‌ಸ್ಥಳದಲ್ಲಿ ತಾ 9ರಲ್ಲಿ ಸ್ಥಳೀಯ ಪೋಸ್ಟ್ ಮಾಸ್ತರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಇದು ಬಲ್ಲಾಳರು ಸ್ಕೌಟುದಳದ ಮಹತ್ವಿಕೆಯನ್ನೂ ಕಿದಿಯೂರು ಜಾಮೂಜ ರೋವರ್ಸ್ ದಳದ ನಾಯಕ ಶ್ರೀ. ಕೆ. ಆನಂದ ಶೆಟ್ಟರು ಸ್ಕೌಟುದಳದ ಪ್ರಯೋಜನ, ಕರ್ತವ್ಯ, ಹೆತ್ತವರ ಸಹಕಾರಗಳ ಕುರಿತೂ ಭಾಷಣಿಸಿದರು.



Approved firm by the Govt. of Mysore
Certified by the Agent of the Govt of
Cylone & Indian.

ಮಂಗಳೂರು

ಮೊಲ್ಯರ ಯಾನೆ ಕುಲಾಲರ ಶ್ರೀ ರಾಮ ಸೇವಾ ಚಾರ್ಮಾಭ್ಯುದಯಸಂಘದ ವಾರ್ಷಿಕ ಮಹಾಸಭೆಯು ತಾ 7-7-49 ರಲ್ಲು ಸೋರ್ವಾಹ್ನ 9 ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಬಳಿಯಲ್ಲಿರುವ ಶ್ರೀ ನೇಮಿಯ ದೇವಸ್ಥಾನದಲ್ಲಿ ಜರಗಲಿರುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಡಿಪ್ರೆಸ್ಡ್ ಕ್ಲಾಸಿನ ಕರ್ನಾಟಕ ಶಾಖೆಯನ್ನು ತಾ. 11ರಲ್ಲು ಕೂಡಿದ ದಲಿತ ನಗರದ ಕಾರ್ಯಕರ್ತರ ಸಭೆಯಲ್ಲಿ ತೆರೆಯಲಾಯಿತು. ಶ್ರೀ-ಎಸ್.ಜಿ.ಸಾಲಿನ್ಸ್‌ರು ಅಧ್ಯಕ್ಷತೆ ವಹಿಸಿದ್ದು ಅಬಿಲ ಭಾರತ ಡಿಪ್ರೆಸ್ಡ್ ಕ್ಲಾಸ್ ಲೀಗಿನ ಜತೆಕಾರ್ಯದರ್ಶಿಯಾಗಿರುವ ಶ್ರೀ ಇ. ಕಣ್ಣನ್ ಅವರು ಬಲಿತ ವರ್ಗದವರ ಸಂಘಟನೆಯ ಕುರಿತು ಮಾತನಾಡಿದರು.

ಶ್ರೀ ಹೊಸಬೆಟ್ಟು ರಾಮರಾಯರು ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಧಿಕಾರಿಯಾಗಿ ನೇಮಕ ಹೊಂದಿದ್ದಾರೆ.

ಜಿಲ್ಲಾ ಕಲೆಕ್ಟರ್ ರಜೆಯ ಮೇಲಿರುವ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರಂ ಎಪ್ರಿಲ್ ತಿಂಗಳ ಪ್ರಾರಂಭದಲ್ಲಿ ತಮ್ಮ ಕೆಲಸಕ್ಕೆ ಹಾಜರಾಗುವರು. ಆರ್ಜಾಮು ಕಲೆಕ್ಟರ್ ಆಗಿರುವ ವಿ ಎನ್. ಸ್ಟೀ ಥೋಮಸರು ರಜೆಯನ್ನು ಮೋಡಿನ ಜತೆ ಕಾರ್ಯದರ್ಶಿಗಳಾಗಿ ಮದ್ರಾಸಿಗೆ ತೆರಳುವರು.

ಮುನಿಸಿಪಲ್ ಸಭೆಯು ಈಚೆಗೆ ಚೆಯರ್‌ಮೆನ್ ಶ್ರೀ ಎಚ್. ಸಿ. ಸಾಯಿಸರ ಅಧ್ಯಕ್ಷತೆಯಲ್ಲಿ ಜರಗಿ ದಿವಂಗತ ಶ್ರೀಮತಿ ಸರೋಜಿನಿ ನಾಯುಡು ಅವರ್ಕುರಿತು ಸಂತಾಪಸೂಚಕ ನಿರ್ಣಯವಾವಯಿತು. ಸಭಾ ಕಾರ್ಯವನ್ನು ಐದು ನಿಮಿಷ ಮುಂದುವರಿಸಲಾಯಿತು. ನಗರದೊಳಗೆ ನೀರಿನ ಸರಬರಾಯಿ ಮತ್ತು ಚರಂಡಿ ವ್ಯವಸ್ಥೆಗಳ ಸಂಬಂಧವಾದ ಎರಡು ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಲೇ ಸರಕಾರಕ್ಕೆ ಒಪ್ಪಿಸಲು ಕೌನ್ಸಿಲು ಸಿದ್ಧವಿದೆಯಾಗಿಯೂ ನೀರಿನ ಸರಬರಾಯಿ ಸಾಬಂ ಅಗತ್ಯವುಳ್ಳ ಪೈಪ್ಸ್ ಇತ್ಯಾದಿ ಸಲಕರಣಗಳನ್ನು ಸರಕಾರ ಕೂಡಲೇ ಒದಗಿಸಕಾರ್ಯದ್ದಿಂದೂ ಸಂಕಾರಕ್ಕೆ ತಿಳಿಸುವ ನಿರ್ಣಯವಾಯಿತು.

ಶ್ರೀ ಭೀಮಸೇನ ಜೋಶಿ ಯವರ ಸಂಗೀತ ಕಚೇರಿಯು ತಾ. 12-೩೩- ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆಯಲ್ಲಿ ಜರಗಿತು. ತಾ. 16ರಲ್ಲು ಬಿ. ಇ. ಎಮ್. ಹ್ಯಾಸ್ಕೂಲಿನಲ್ಲಿಯೂ ಜೋಶಿಯವರ ಸಂಗೀತ ಕಚೇರಿಯು ನಡೆಯಿತು.

ಮಲ್ಲಿಕಾರ್ಜುನ ಮನ್ಸೂರ್- ಅವರ ಎಂಡನೆ ಸಂಗೀತ ಕಚೇರಿಯು ಕೆನರಾ ಹ್ಯಾಸ್ಕೂಲಿನ ಶ್ರೀ ಅನ್ಯಂಬಳ ಸುಬ್ರಾಯಯ್ಯ ಸ್ಮಾರಕ ಸಭಾಭವನದಲ್ಲಿ ತಾ. 13ರಲ್ಲು ಸಂಗೀತು. ಅವರಿಗೆ ಆಸ್ಥಾನ ವಿದ್ವಾಂಸ ಬಹದೂರ್ ಎಸ್. ಎಮ್. ಅಳ್ಳಂತಾಯರು ವಿರಾಮಕಾಲದಲ್ಲಿ ಗಾಯಕರ ಹಾಗೂ ವಯ್ಲಿನ್ ವಾದಕರ ಕೌಶಲ್ಯವನ್ನು ಪ್ರದರ್ಶಿಸಿ, ಸಂಗೀತದ ಪ್ರಾಮುಖ್ಯವನ್ನು ವಿವರಿಸಿ ಭಾಷಣ ವಿತ್ತರು.

ಅಸ್ಥಾನ ಕವಿ ಸದಸ್ಯ ಡಿ. ಕೆ. ಜಿಲ್ಲೆಯ ಪ್ರಸಿದ್ಧ ಇತಿಹಾಸ ಸಂಶೋಧಕರು, ಕನ್ನಡ ಮಹೋಪಕಾರಿಗಳಾ ಉತ್ತಮ ಸಾಹಿತ್ಯಗಳೂ ಆಗಿರುವ ಶ್ರೀ ಮಂಜೇಶ್ವರ ಗೋವಿಂದ ಪೈ ಗಳವರಿಗೆ ಮದ್ರಾಸು ಸರಕಾರವು ಕನ್ನಡ ಆಸ್ಥಾನ ಕವಿ ಪದವಿಯನ್ನು ಕೊಟ್ಟು ಗೌರವಿಸಿರುವುದು. ಶ್ರೇಯಸ್ಕರಕ್ಕೆ ನಮ್ಮ ಅಭಿನಂದನೆಗಳು.

ದಸ್ತಗಿರಿ:- ಎಂ. ಕೆ. ನಾರಾಯಣ್ ಎಂಬ ಕಮ್ಯೂನಿಸ್ಟನ ವಸ್ತಗಿರಿಯಾಗಿದೆ. ರೈಲ್ವೆ ಮುಷ್ಕರ ಸಂಬಂಧವಾದ ಅಕ್ರಮ ಕೃತ್ಯ ಸಾಂತ್ಯವಲುಗಳು ದೊರೆತುವೆಂಬುದೇ ಕಾರಣ.

ತನ್ನಿಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಎಂಬ ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1-8-0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ ವಿಧಾನವನ್ನು ವಿವರಿಸುವ

ಮನೆ ಮದ್ದು

ಎಂಬ ಗೃಹವೈದ್ಯ

ಬೆಲೆ ರೂ. 2-0-0 ಟಪ್ಪಾಲು ದ್ವಾರಾ ರೂ. 2-6-0

ಶಾಲೆ, ಕಾಲೇಜುಗಳ,
ಪಂಚಾಯತ ಬೋರ್ಡು, ಗ್ರಾಮ ಸಂಘಗಳ,
ಲೈಬ್ರರಿಗಳಿಗೆ
ಬೇಕಾಗುವ ಕರ್ನಾಟಕದ ಬೇರೆ ಬೇರೆ ಭಾಗಗಳ

ಕನ್ನಡ ಪುಸ್ತಕಗಳು

ಆಕರ್ಷಕ ದರದಲ್ಲಿ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ.

1949—50ರಲ್ಲಿ ನಿಮ್ಮ ಅದೃಷ್ಟ ಪರೀಕ್ಷೆ

ನಿಮ್ಮ ಸ್ನೇಹಿತರ ಬಾಷ್ಪಪಾದದೊಂದು ಹೊಸಿನ ಹೆಸರನ್ನೂ ಜತೆಯಲ್ಲಿ ನಿಮ್ಮ ಹೆಸರನ್ನೂ ಬರೆದು ನಿಖರವನ್ನೂ ಒಂದು ಕಾರ್ಡಿನಲ್ಲಿ ಬರೆದು ರೂಪಾಯಿ 1 4 0 ಕಳುಹಿಸಿರಿ ಮುಂದಿನ ಹನ್ನೆರಡು ತಿಂಗಳುಗಳಲ್ಲಿ ನೀವು ಅನುಭವಿಸುವ ಸುಖದುಃಖಗಳು-ಲಾಭ ನಷ್ಟಗಳು, ಮದುವೆ, ಮುಂಜಿ, ಸಂತತಿ, ಪ್ರೇಜ ಮಂದಿ, ಸಮಯೋಚಿತಗಳನ್ನು ಸೂಚಿಸುವೆವು ಅಲ್ಲದೆ ದುಸ್ಥಗ್ರಹಗಳ ಪೀಡಾ ಪರಿಹಾರಾರ್ಥವಾಗಿ ಯೋಗ್ಯ ಸಲಹೆಗಳನ್ನೂ ಕೂಡಾ ಕೊಡುವೆವು ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು. ಟಪ್ಪಾಲು ವೆಚ್ಚ ಪ್ರತ್ಯೇಕ ಸತ್ಯವ್ಯವಹಾರ ಇಂಗ್ಲಿಷಿನಲ್ಲಿ.

Pt. Dev Dutt Shastri,
Raj Jyotshi
(N. Y. U.) Jullundur City.

ಮುಂಬಯಿ ಕನ್ನಡಿಗರಲ್ಲಿ ವಿನಂತಿ

"ಅಂತರಂಗ"ದ ಸಂಚಾಲಕರಾದ ಶ್ರೀ ಕೆ. ಜೆ ಸೆಟ್ಟು "ಅಂತರಂಗ" ಮತ್ತು 'ನವಯುಗ' ಪತ್ರಿಕೆಗಳ ಪ್ರಚಾರಾರ್ಥವಾಗಿ ಮುಂಬಯಿಗೆ ಬಂದಿರುವರು. ಅವರಿಗೆ ಮುಂಬಯಿಯ ಕನ್ನಡಿಗರು ಎಂದಿನಂತೆ ತಕ್ಕ ಸಹಕಾರವನ್ನೆತ್ತು ಪ್ರೋತ್ಸಾಹಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ — ಮೆನೇಜರ್, ನವಯುಗ

(ಗಂಡೇ ಪುಟದಿಂದ)

ಪತ್ನಿಯಂತೆ ನಿಂತುಹೋಗಿ ವಿಷೇಶದಿಂದಲೇ ತೀರ್ಮಾನವಾಗಿ ಶಾಂತಿಯುಂಟಾಗಲು ತುಂಬಾ ಅವಕಾಶವಿರುತ್ತದೆ.

5 ಆಳಿಯಸಂತಾನ ಬೀಲನ್ನು ತಂದವರ ಮುಖ್ಯ ಅಭಿಪ್ರಾಯವು ಕಾಲಾನ್ತರಿಗೆ ಸರಿಯಾಗಿ ಆಳಿಯಕಟ್ಟನ್ನು ಜಾರಿಸ್ತುಪಡಿಸಿ ಆಳಿಯಕಟ್ಟನ್ನಾಚರಿಸುವವರೆಲ್ಲರಿಗೂ ನ್ಯಾಯಕ್ಕೂ ನೀತಿಗೂ ಸರಿಯಾಗಿ ಹಕ್ಕುಗಳನ್ನು ಸ್ಥಾಪಿಸಿ ಕಾಟುಂಬಗಳಲ್ಲಿ ತಾಂತ್ರಿಮುನ್ನುಂಟು ಮಾಡುವುದಾಗಿರುತ್ತದೆ. ಆದರೆ (a) ಈಗ ಕುಟುಂಬದ ಆಸ್ತಿಗಳಲ್ಲಿ ಗಂಡಸರಿಗೂ ಹೆಂಗಸರಿಗೂ ಸರಿಸಮಾನವಾದ ಹಕ್ಕಿರುವದಾದ ರೂ ಗಂಡಸರಿಗೆ ಮಾತ್ರ ಚೀವನಾನಂದ ವರೆಗೂ ಹಕ್ಕು ಸ್ಥಾಪಿಸಿರುವದರಿಂದ ಸಂಪೂರ್ಣವಾದ ಇಚ್ಛಾನುಸಾರ ಹಕ್ಕು ಹೊಂದಲಿಕ್ಕೆ ಅರ್ಹರಾದ ಗಂಡಸರಿಗೆ ಶಾಶ್ವತವಾಗಿ ಚೀವನಾನಂದ ಹಕ್ಕು ಮಾತ್ರ ಸ್ಥಾಪಿಸುವದನ್ನು ಸುಧಾರಣೆಯೆನ್ನಲು ಸಾಧ್ಯನಿಲ್ಲ. (b) ಇದೀ ಭೂಲೋಕದಲ್ಲಿ ಗಂಡಸರಿಗಿರುವ ಪ್ರಾಮುಖ್ಯತೆಯನ್ನು ಕಡಿಮೆಯಾಗಿಸಲು ಹೆಂಗಸರಿಗಿಂತ ಕಡಿಮೆಯಸ್ಥಾನವನ್ನು ಗಂಡಸರಿಗೆ ಕೊಡುವದು ಯಾವನೀತಿ? ಇದು ನನ್ನು ಜಿಲ್ಲೆಯ ಕೇವಲ 5 ಲಕ್ಷ ಜನರ ವೈಕ ಅಲ್ಪಸಂಖ್ಯಾಕರಿಗೆ ಪೂರತು ಮಿಕ್ಕ ಎಲ್ಲಾ ಹಿಂದುಗಳಿಗೆ

ಹಿಂದೂ ಕೋಡು ಮತ್ತು ಆಳಿಯಸಂತಾನ ಬೀಲು

ಪಾಸ್ಯಾಸ್ಪದವಾಗಿತೋರುವ ವಿಷಯವಾಗಿದೆ ಇದರ ಬದಲಿಗೆ ಗಂಡಸರಿಗೂ ಹೆಂಗಸರಿಗೂ ಏಕಸ್ಥಾನವನ್ನು ಕೊಟ್ಟು ಅವರನ್ನು ಸರಿಸಮಾನರೆಂದು ವಿಧಿಸುವುದು ಯೋಗ್ಯವಾದ ನೀತಿಯಲ್ಲವೇ?

6 ಆಳಿಯಸಂತಾನ ಬೀಲಿನಲ್ಲಿ ವಿಧಿಸಿರುವ ಹಿಲಿಮಿಕ್ಕ ಮಗಳನ್ನು ಚಿಕ್ಕ ಪ್ರಾಯದಲ್ಲಿ ಅಸ್ತಿಗಳನ್ನು ವಿಭಾಗಿಸುವಲ್ಲಿ ಜ್ಞಾನಿಗೆ ತರಲಿಕ್ಕೆ ಸಾಧ್ಯವೇ ಇರುವದಿಲ್ಲ. 50 ಜನ ಮೊಂಬರು ಇರುವ ಕುಟುಂಬವೊಂದಲ್ಲಿ ಒಬ್ಬನಿಗೆ 1/10 ನೇ, ಇನ್ನೊಬ್ಬನಿಗೆ 1/33 ನೆ, ಮತ್ತೊಬ್ಬನಿಗೆ 7/25 ನೆ ಹೀಗೆ ನಾನಾ ತರಹ ಹಿಕೆಗಳನ್ನು ಯಾವ ರೀತಿಯಲ್ಲಿ ವಿಭಾಗಿಸಬೇಕು? ಯಾವ ರೀತಿಯಲ್ಲಿ ಪಟ್ಟು ತಯಾರಿಸಬೇಕು? ಕೋರ್ಟಿಗೆ ಹೋಗದೆ ಇದನ್ನು ತೀರ್ಮಾನಿಸಲು ಸಾಧ್ಯವಿದೆಯೆ? ಈ ಬೀಲು ಜಾರಿಗೆ ಬಂದಲ್ಲಿ ವ್ಯವಹಾರಿಯು ಕಡಿಮೆಯಾಗಿ ಶಾಂತಿ ಬಂದು ಹೋಗುವ ಬದಲಿಗೆ ಪ್ರತಿ ಕುಟುಂಬವು ಕೋರ್ಟು ಬಾಗಿಲಲ್ಲಿ ಕಾಯಬೇಕಾದ ಪ್ರಸಂಗ ಹೆಚ್ಚಿಗೀತೆಂಬುದು ಖಂಡಿತ.

7. ಆಳಿಯಸಂತಾನ ಬೀಲಿನ ಪ್ರಕಾರ ಈಗ ಜ್ಞಾರಿಯಲ್ಲಿರುವಂತಹ ಕರಾರುಗಳು, ಎನಾರ್ಜಗಳು ಮಗ್ಗೆರೆ ವಿಭಾಗ ಪತ್ರಗಳೋ ಅಥವಾ ಜೀವನಾಂಶದ ಕರಾರೋ ಯೆಂಬುದನ್ನು ತೀರ್ಮಾನಿಸುವದು ಬಹಳ ಕಷ್ಟ ಸಾಧ್ಯವಾಗಿದೆ. ಈ ವಿಷಯವನ್ನೆಲ್ಲಾ ಅದು ಕಂಡೆಕ್ಟರ್ಕ್ ಮತ್ತು ಸುಲಭ ರೀತಿಯಿಂದ ಸೈಸಿ ಮಾಡಿದೆ ಇರುವದರಿಂದ ಕೋರ್ಟಿಗೆ ಹೋಗುವ ಸಂದರ್ಭ ಉಂಟಾಗುತ್ತದೆಂಬುದು ನಿಜ.

8. ಹಿರೇ ಹೆಂಗಸು ತನ್ನ ಸ್ವಂತ ಇಚ್ಛೆಯಿಂದಾಗಲಿ ಬೀಲಿನ ಕರ್ತಗಳಿಗನುಸರಿಸಿ ಇತರ ಮೊಂಬರರ ಪಾಲಿನ ಮ್ಯಾಜ್ಯದಿಂದಾಗಲೆ ಅವಳಿಗೆ 50 ವರ್ಷ ಪ್ರಾಯವಾಗುವ ಪೂರ್ವದೇ ಪಾಲು ಪಡೆದಲ್ಲಿ ಆ ಪಾಲಿನ ಆಸ್ತಿಗೆ ಮುಂದಿನ ವಾರಿಸ್ತಾರರು ಯಾರು? ಅದು ಅವಳಿಗೆ ಇಚ್ಛಾನುಸಾರವೋ? ಪಾಲು ಪಡೆದ ನಂತರ ಮಕ್ಕಳು ಹುಟ್ಟಿದರೆ ಆ ಮಕ್ಕಳಿಗೆ ಯಾವ ಆಸ್ತಿಯಿಂದ ಹಿತೆ ನಿಶ್ಚತಕ್ಕದ್ದು? ಈ ಎಲ್ಲಾ ವಿಚಾರಗಳಿಗೆ ಬೀಲಿನಲ್ಲಿ ಉತ್ತರವೇ ಇಲ್ಲ.

9. ಈಗ ಮುಂಜೂರಾಗಿರುವ ಆಳಿಯಸಂತಾನ ಬೀಲಿನ ಮುಖ್ಯ ಸಾರಾಂಶಗಳನ್ನು ನೋಡಿದರೆ ಇದು ಒಂದು ರಾಜಿ ಪರಿಚ್ಯತಿ ಕಲಿಯಿಂದ ತಯ್ಯಾರಿಲದ ತೀರ್ಮಾನವೆಂತಲೇ ಕಂಡುಬಱಕ್ಕಿದೆ; ಪೂರತು ಶಾಶ್ವತವಾಗಿ ಜಾರಿಯಲ್ಲಿರತಕ್ಕ ಕಾನೂನೆಂದು ತೋರಿ ಬರುವದಿಲ್ಲ.

ಈ ಸಂದರ್ಭದಲ್ಲಿ ಇಡೀ ಹಿಂದೂಸ್ಥಾನಕ್ಕಾಗಿ ಜಾರಿಗೆ ಬರಲಿಕ್ಕಿರುವ ಹಿಂದೂ ಕೋಡು ಆಳಿಯಕಟ್ಟನ್ನಾಚರಿಸುವವರಿಗೆ ಅನ್ವಯಿಸಬೇಕೋ ಅಥವಾ ಆಳಿಯ ಸಂತಾನ ಬೀಲೇ ಜ್ಯಾರಿಗೆ ಬರಬೇಕೋ ಎಂಬ ವಿಷಯವನ್ನು ಪರಿಕೋಧಿಸಿ ಆಳಿಯಕಟ್ಟನ್ನಾಚರಿಸುವವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಲೇ ಸೂಚಿಸುವಂತಾದ್ದು ಅತೀ ಅವಶ್ಯವಿರುತ್ತದೆ. ಒಮ್ಮೆಗೆ ಜಾರಿಗೆ ಬಂದ ಕಾನೂನನ್ನು ದುರಸ್ತುಪಡಿಸುವುದಕ್ಕಿಂತ ಹೆಚ್ಚಿನ ಮಟ್ಟಿಗೆ ಅಸಾಧ್ಯವೆಂದು ಎಲ್ಲರಿಗೂ ತಿಳಿದ ವಿಷಯವೇ. ಈಗ ಹಿಂದೂ ಕೋಡಿನಿಂದ ನಮ್ಮನ್ನು ವಿಮೋಚಿಸದಿದ್ದರೆ ಅದು ನಮಗೆ ಅನ್ಯಾಯವೆಸುವಂತೆ ಇನ್ನು ಮುಂದೆ ಜಾರಿಗೆ ತರುವದು ಅಸಾಧ್ಯವಾಗಿಯದೆ. ಅಥವಾ ಆಳಿಯಸಂತಾನ ಬೀಲು ಒಮ್ಮೆಗೆ ಜಾರಿಗೆ ಬಂದು ನಂತರ ನಮಗೆ ಹಿಂದೂ ಕೋಡು ಅನ್ವಯಿಸುವುದೆಂದಾದರೆ ಅದರಿಂದಲೂ ತುಂಬಾ ವ್ಯವಹಾರಗಳುಂಟಾಗಿ ಬಹಳ ಕಷ್ಟ ನಷ್ಟಗಳಾಗಲಿವೆ. ಆದುದರಿಂದ ಹಿಂದೂ ಕೋಡೇ ನಮಗೆ ಅನ್ವಯಿಸಬೇಕೆಂದು ಅಭಿಪ್ರಾಯಪಡುವವರೆಲ್ಲರೂ ಆಳಿಯಸಂತಾನ ಬೀಲು ಜಾರಿಗೆ ಬಾರದಂತೆಯೂ ಹಿಂದೂ ಕೋಡಿನಿಂದ ನಾವು ವಿಮೋಚನೆಗಳಾಗುವಂತೆಯೂ ಸಾಧಿಸುವುದು ಅವಶ್ಯವಿದೆ.

FOR PROTECTION AND PROVISION, CONSULT
The most progressive life office;
THE NEW GUARDIAN OF INDIA
LIFE INSURANCE CO; LTD.
(United India Building) Post Box No 142, Esplanade,
Head Office, MADRAS
CHAIRMAN:
The Hon'ble Mr. M. Ct M. Chidambaram Chettiar Avl.
Moderate Premium Rates;
Prompt Claim Discharges, and efficiency of Management,
Branches & Representatives all over India.
Application for representation from influential persons invited.
The Organising Secretary,
MANGLORE BRANCH K. S. Rao, Road, HUMPANKATTA.

ವಿವಿಧ ಪಾತ್ರೆಗಳು

ಯಾವತ್ತೂ ವಿಷದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವು ವಿವಿಧ ಪಾತ್ರೆಗಳೂ ಸಾಮಾನುಗಳೂ ರಾಜಂ ರಾಗಿ ಯೂಚಿಲ್ಲರೆಯಾಗಿಯೂಸೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

1915ನೇ ಡ್ರಗ್ ಅಕ್ಟ್ ಪ್ರಕಾರ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟ್ರಿ ಮಡಲ್ಪಟ್ಟಿದೆ.



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಬಾ ತೈಲವನ್ನು ಸ್ವತಃ ಮನೆ ಮದ್ದಿಗಳಲ್ಲಿಯೂ ಉಪಯೋಗಿಸಲ್ಪಟ್ಟು ಅತ್ಯುತ್ತಮವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ಪ್ರಸಿದ್ಧವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರಯೋಗಿಸಿ ಅವುಗಳ ಮೂಲವನ್ನೇ ಕಿತ್ತು [illegible] ಕ್ರಾಂತಿಕಾರಿ ಗುಣಮಟ್ಟ ಪಡೆಯಲೇಗೆಂದೇ ಶಾಸ್ತ್ರೀಕೃತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ನೂಕ್ಕಿಕೋರ್ಮ, ಬಾಯಿಮುಕ್ಕು, ಮೀಮುಕ್ಕು, ಅನಕೋಕ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ಪಿಡಿಕಾಶ್ಚರ್ಯಕರ ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಸಮೂಲವನ್ನೇ ಕಿತ್ತುಹಾಕುವುದು. ಪಾಶ್ಚವಾಯು, ವಾತರೋಗ, ಪಕ್ಷವಾತ, ಗೂರಲು ಕೈಯ, ಮೇಪಮ್ಮಾಧಿ, ಉಬ್ಬರ್ಸ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರರೋಗದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ಸೀರಾಗಿ ಹೊರಬ್ಬರೋಶದಲ್ಲನ ತೀಕ್ಷ್ಣವಾದ ಬೇನೆಯು ಕ್ಷಣ ಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಲಿ, ಜ್ವರದಿಂದಲೇ ಆಗಲಿ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲವಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಕಜ್ಜಿಪುಣ್ಣುನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಿನವರ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳಿಗೂ ಈ ತೈಲದ ಸೇವನೆಯಿಂದ ಪರಿಹಾರವಾಗುವದು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಿಸಿ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವ